BROWEN BOOK ONLY

TEXT CUT WITHIN
THE BOOK ONLY

TEXT FLY WITHIN
THE BOOK ONLY

TEXT PROBLEM
WITHIN THE
BOOK ONLY

UNIVERSAL LIBRARY
OU_200072
UNIVERSAL LIBRARY

ಗೋಕರ್ಣ ಕರ್ನಾಟಕ ಸಂಘದ ಪ್ರಕಟಣೆ.

# ಕಾಂಚನಮೃಗ

(ಸಾಮಾಜಿಕ ಕಾದಂಬರಿ)

ಭಾಗ ೧.

ಅನುವಾದಕರು:
ಪಾಂ. ದಾ. ಶಹಾಣೆ.

ಪರ್ಣಕುಟಿ ಗ್ರಂಥಮಾಲೆ
ಗೋಕರ್ಣ.

ಸಂಪಾದಕ ಮಂಡಲ:

ಎನ್. ಡಿ. ಕುಲಕರ್ಣಿ, ಎಂ. ಏ,
ವಿ. ಜಿ. ಭಟ್ಟ, ಬಿ. ಏ.,
ಕೇ. ಜಿ. ಶಾಸ್ತ್ರಿ, ಬಿ. ಏ,
ಗೌರೀಶಂಕರ ಕಾಯಕಿಣಿ.
ಸು. ರಂ. ಯಕ್ಕುಂಡಿ, ಬಿ. ಏ, ಬಿ. ಟಿ.

ಪ್ರಕಾಶಕರು:
ಮ. ಗ. ಶೆಟ್ಟಿ,
ಗೌರವ ಕಾರ್ಯದರ್ಶಿ, ಕರ್ನಾಟಕ ಸಂಘ, ಗೋಕರ್ಣ.

ಇದು ಶ್ರೀ|| ಗಣಪತ ರಾಮರಾವ ಮಾಸೂರ ಇವರಿಂದ
ಕುಮಟಾ ಶ್ರೀ ರಾಮಕೃಷ್ಣ ಪ್ರಿಂಟಿಂಗ್ ವರ್ಕ್ಸ, ಲಿಮಿಟೆಡ್‌ದಲ್ಲಿ ಮುದ್ರಿತವಾಗಿ
ಮ. ಗ. ಶೆಟ್ಟಿ, ಗೌರವ ಕಾರ್ಯದರ್ಶಿ, ಕರ್ನಾಟಕ ಸಂಘ, ಇವರಿಂದ
ಗೋಕರ್ಣದಲ್ಲಿ ಪ್ರಕಾಶಿಸಲ್ಪಟ್ಟಿತು.

# ಪ್ರಕಾಶಕರ ಮಾತು.

ಪರ್ಣಕುಟಿ ಗ್ರಂಥಮಾಲೆಯ ೩-ಳನೆಯ ಪ್ರಕಟಣೆಯಾಗಿ ಕಾಂಚನಮೃಗದ ಮೊದಲ ಭಾಗ ಪ್ರಕಟವಾಗುತ್ತಲಿದೆ. ಮುಂದಿನ ಭಾಗವೂ ಸಕಾಲದಲ್ಲಿ ವಾಚಕರ ಕೈಸೇರುವದೆಂದು ಆಶ್ವಾಸನವನ್ನು ಕೊಡಲು ಸಂತೋಷಿಸುತ್ತೇವೆ.

ಕಾಂಚನಮೃಗ ಮರಾಠಿಯ ಸುಪ್ರಸಿದ್ಧ ಬರಹಗಾರರೂ ಕಲೆಗೆ ಧ್ಯೇಯವಿದೆಯೆಂದು ತಿಳಿದು ಆಚರಿಸುವ ಧ್ಯೇಯವಾದಿಗಳೂ ಆದ ಖಾಂಡೇಕರರ ಮಹಾಕೃತಿ. 'ನುಂಗಿದರೆ ಗಂಟಲು ಸುಡುತ್ತಿದೆ; ಬಿಟ್ಟರೆ ಪ್ರಸಾದ ಉಗುಳಿದಂತಾಗುತ್ತಿದೆ' ಎಂಬಂತೆ ಅನುವಾದಕನನ್ನು ಕಷ್ಟದಲ್ಲಿ ನೂಕುವಂತಹ ಶೈಲಿ ಅದರದು. ಅನುವಾದಿಸೋಣ ಎಂದರೆ ಮನಸ್ಸಿಗೆ ತಿಳಿದ ಅರ್ಥ ಶಬ್ದಗಳಿಗೆ ಸಿಕ್ಕಿಯೂ ಸಿಕ್ಕದಂತಾಗುತ್ತದೆ. ಕಥೆಗೆ ಸಂಬಂಧಿಸಿಲ್ಲವಲ್ಲ ಎಂದು ಏನಾದರೊಂದು ಪ್ರಸಂಗವನ್ನು ಬಿಟ್ಟುಬಿಡೋಣವೆಂದು ಬಗೆದಾಗ ಬೋಧಕ ಉಪಮೆಗಳು ಸಾಲು ಸಾಲಾಗಿ ಬಂದು ಕಣ್ಣುಕಟ್ಟುತ್ತಿವೆ. ಇಂಥ ಕೃತಿಯನ್ನು ಕನ್ನಡಿಗರಿಗೆ ಕೊಡುವ ಪ್ರಯತ್ನದಲ್ಲಿ ಅನುವಾದಕರಾದ ಎಳೆಯ ಪಾಂಡುರಂಗ ಶಹಾಣೆಯವರು ಸಾಕಷ್ಟು ಸಫಲರಾಗಿದ್ದಾರೆಂದು ಅನಿಸುತ್ತಿದೆ. ಅನುವಾದವೆಷ್ಟಾದರೂ ಪ್ರತಿಬಿಂಬ. ಇದರಿಂದ ಪ್ರೇರಿತರಾಗಿ ಅವರ ಮೂಲಕೃತಿಗಳನ್ನೋದಿ ಕನ್ನಡ ಜನ ಜೀವನದಲ್ಲಿ ಕಾವ್ಯಗಂಗೆಯನ್ನು ತರುವ ಭಗೀರಥರಾಗಲೆಂದು ಬಯಸುತ್ತೇವೆ.

ಅನುವಾದದ ಅನುಮತಿಗೆ ನೆರವಾದ ಹಿರಿಯರು ಇನ್ನಿಬ್ಬರು ಮಹನೀಯರು. ಎಳೆಯ ಮಕ್ಕಳನ್ನು ಕೈಹಿಡಿದು ಕಾರ್ಯರಂಗಕ್ಕಿಳಿಸುವ ಸ. ಪ. ಗಾಂವಕರರು. ನಾಡಿನ ಹಿತಸಾಧಿಸುವ ಯಾವ ಯೋಜನೆಯಿದ್ದರೂ ಉದಾರ ಮನಸ್ಸಿನಿಂದ ನೆರವಾಗುವ ಕೊಡುಗೈದೊರೆಗಳಾದ ಕುಲಕರ್ಣಿ ಮಂಗೇಶರಾಯರು. ಇವರಿಬ್ಬರಿಗೂ ಆಭಾರಿಯಾಗಿದ್ದೇವೆ.

ಇನ್ನೂ ಕೆಲವು ಗೆಳೆಯರ ನೆರವಿಲ್ಲದಿದ್ದರೆ ಈ ಕಾಂಚನಮೃಗ ಕಾಂಚನಮೃಗವೇ ಆಗುತ್ತಿತ್ತು. ಮುಖಚಿತ್ರ ತೆಗೆದ ಕುಮಾರ ಗಜಾನನ ಪ್ರಭು, ಮುದ್ರಣಕ್ಕಾಗಿ ಹಸ್ತಪ್ರತಿ ಬರೆದ ಗಜಾನನ ವಾಸುದೇವ ಶೆಟ್ಟಿ, ಇತರ ರೀತಿಯಿಂದ ನೆರವಾದ ಗೋವಿಂದ ಚುಳ್ಕಿ, ಆನಂದ ನಾಡಕರ್ಣಿ ಇವರು ಮುಖ್ಯರು.

ಪರ್ಣಕುಟಿ ಗ್ರಂಥಮಾಲೆ ಮೊದಲ ವರ್ಷ ದಾಟಿ ಎರಡನೆಯ ವರ್ಷದಲ್ಲಿ ಕಾಲಿಡುತ್ತಲಿದೆ. ಸಕಾಲಕ್ಕೆ ಹೊರಡಿಸಲು ನೆರವಾದ ಸಂಪಾದಕ ಮಂಡಳಿಯವರು, ಮುದ್ರಣಾಲಯದ ಒಡೆಯರು, ಆಧಾರಸ್ತಂಭರಾದ ಚಂದಾದಾರರು, ಸಂಚಾಲಕರಾದ ಗೋಪಿಬಂಧುಗಳು ಮುಂದೆಯೂ ನೆರವಾಗಿ ಪ್ರಕಾಶಕನ ಕೆಲಸ ಹಗುರುಗೊಳಿಸುವರೆಂದು ನಂಬಿದ್ದೇವೆ.

**ಮ. ಗ. ಶೆಟ್ಟಿ.**

## ಹರಕೆ.

ನಾನು ಬಲ್ಲೆ ಶಹಾಣೆಯವರನ್ನು. ಅವರೊಬ್ಬ ಬೆಳೆದು ಬೆಳಕಿಗೆ ಬರುವ ನನ್ನ ಎಳೆಯ ಗೆಳೆಯರು. ಅವರು ಕನ್ನಡಿಸಿದ ಕಾಂಚನಮೃಗದ ಬಹು ಭಾಗವನ್ನು ನನ್ನ ಮುಂದೆ ಓದಿರುವರು. ಮಹಾರಾಷ್ಟ್ರದಲ್ಲಿ ಖಾಂಡೇಕರರೆಂದರೆ ಸಾಹಿತ್ಯದಲ್ಲಿ ಖ್ಯಾತನಾಮರು; ಕಥೆಕಾದಂಬರಿಗಳಲ್ಲಂತೂ ಎತ್ತಿದ ಕೈ. ಕಾಂಚನಮೃಗವು ಅವರ ಪಳಗಿದ ಕೈಯ ಕಲೆ. ಅದನ್ನು ಕನ್ನಡಕ್ಕೆ ಇಳಿಸುವುದು ಕಷ್ಟದ ಕೆಲಸ. ಆದರೂ ಹೊಸ ಸಾಹಿತಿಗಳಾಗಲಿರುವ ನಮ್ಮ ಶಹಾಣೆಯವರು ಆ ಕಾದಂಬರಿಯ ಕೆಚ್ಚನ್ನು ಕನ್ನಡಕ್ಕೆ ಇಳಿಸಲು ಸಾಕಷ್ಟು ಶಕ್ತರಾಗಿದ್ದಾರೆಂಬುದು ಮರಾಠಿ-ಕನ್ನಡಗಳೆರಡರ ಬಹು ಭಾಗವನ್ನು ಓದಿಸಿಕೊಂಡ ನನಗೆ ಮನವರಿಕೆಯಾಗಿದೆ. ಉತ್ತರ ಕನ್ನಡ ಜಿಲ್ಲೆಯ ಈ ನಮ್ಮ ಹೊಸ ಸಾಹಿತಿಗಳ ಹೊಳವು ಹೆಚ್ಚಾಗಿ ಹೊಳೆಯುತ್ತ ಹೋಗಲೆಂದು ನನ್ನ ಹೃತ್ಪೂರ್ವಕ ಹಾರೈಕೆ ಹಾಗೂ ದೇವರಲ್ಲಿ ಬೇಡಿಕೆ.

**ಸ. ಪ. ಗಾಂವಕಾರ.**

# ಕಾಂಚನಮೃಗ.

ಓ ಚಿತ್ರಕಾರ! ಏ ಸವಾಯಿ ರವಿವರ್ಮ! ಎಂದು ಕರೆಯಲು ಕೆಲಹೊತ್ತಿನ ಮೇಲೆ ಬಾಗಿಲು ತೆರೆಯಿತು. ಆಗ ಇಬ್ಬರು ಗೆಳೆಯರು ಪ್ರವೇಶಿಸಿದರು. ಅವರಲ್ಲಿ ಎತ್ತರವಿದ್ದ ತರುಣ ಚಿತ್ರಕಾರನ ಬೆನ್ನು ಬಡಿದು “ಎಷ್ಟು ಬಡಿವಾರ ಬಡಿಯೋದಪ್ಪಾ, ಕಾಳಿ!” ಎಂದ.

“ಬಡಿಯುವವ ನಾನೋ ನೀನೋ, ತುಸು ನನ್ನ ಬೆನ್ನಿನ ಸಾಕ್ಷಿ ತೆಗೆದುಕೋ. ನೀನು ಬಿ. ಎ.ಗೆ ಮೆಥೆಮೆಟಿಕ್ಸ ತಗೊಳ್ಳೋದು ಬಿಟ್ಟು ತಬಲಾ ಬಾರಿಸೋದು ತೆಗೆದುಕೊಂಡಿದ್ದರೆ ಫಸ್ಟ್‌ಕ್ಲಾಸ ಬರುತ್ತಿತ್ತು ನೋಡು”.

“ಬೆನ್ನಿನ ಸಾಕ್ಷಿ ತೆಗೆದುಕೊಳ್ಳುವದು ಹೇಗೋ? ಬೆನ್ನಿಗೂ ಕಣ್ಣಿಲ್ಲ; ಬಾಯಿಗಂತೂ ಮೊದಲೇ ಇಲ್ಲ” ಎಂದ ಇನ್ನೊಬ್ಬ ಗೆಳೆಯ.

“ಇರಲಿ. ನಿನ್ನ ದಾರಿಗಾದರೂ ಅದೆಷ್ಟು ನೋಡಬೇಕಪ್ಪಾ, ಇಷ್ಟೇಕೆ ತಡ? ನಾಟಕದ ನಾಯಕನಂತೆ ಯಾವುದಾದರೂ ಸುಂದರ ಸುಕುಮಾರಿಕೆಯ ಸಂಕಟ ಪರಿಹರಿಸುವ ಸಂದರ್ಭ ಗಂಟುಬೀಳಲಿಲ್ಲವಷ್ಟೇ?. ಇಂದಿನ ಬೆಳದಿಂಗಳಲ್ಲಿ ಸುಧಾಕರನ ಬೀಳ್ಕೊಡುವ ಸಮಾರಂಭ ಜರುಗಿಸಬೇಕೆಂದು ಸೂಚನೆ ತಂದವ ನೀನು. ಈಗ ತಿಂಗಳು ಮೂಡಿ ತಾಸಾದರೂ ನಿನ್ನ ಸುಳಿವೇ ಇಲ್ಲ”.

“ಅಹುದು. ಆತನಿಗೊಂದು ಪ್ರೇಮದ ಮುಡಿಪು ನೀಡೋಣವೆಂದು ಬಗೆದೆ. ಅದಕ್ಕಾಗಿ ಹೊತ್ತಾಯಿತು”.

"ಇದೇ ಏನು? 'ಕಾಂಚನಮೃಗ!' ಇದರ ಹೊರತು ರಾಮಾಯಣದಲ್ಲಿ ನಿನಗೆ ಇನ್ನಾವ ಸನ್ನಿವೇಶವೂ ದೊರಕಲಿಲ್ಲವೇ? ನಮ್ಮ ಲೇಖಕರಿಗೆ, ಚಿತ್ರಕಾರರಿಗೆ ರಾಮಾಯಣ ಮಹಾಭಾರತಗಳೇ ಆಶ್ರಯಸ್ಥಾನ. ಅಲ್ಲದೆ ದೃಷ್ಟಿಯಂತೆ ಸೃಷ್ಟಿಯೆಂಬ ಮಾತೂ ಸುಳ್ಳಲ್ಲ. ನೀನೂ ಅಳಬುರುಕ; ನಿನ್ನ ಚಿತ್ರನೂ ಅಷ್ಟೇ!"

ಕಾಳಿ ಚಿತ್ರವನ್ನು ದಿಟ್ಟಿಸ ಹತ್ತಿದ. ಹುಣ್ಣಿಮೆಯ ಬೆಳದಿಂಗಳ ಶೋಭೆಯಂತೆ, ಅಮಾವಾಸ್ಯೆಯ ಗಾಂಭೀರ್ಯವೂ ಪ್ರೇಕ್ಷಣೀಯವಿರುತ್ತದೆ. ಭರತಿ ಇರಲಿ; ಇಳಿತವಿರಲಿ; ಕರೆಯನ್ನು ಮುದ್ದಿಡುವ ತೆರೆಯ ಲೀಲೆಯು ಮೋಹಕವಾಗಿಯೇ ಇರುತ್ತದೆ. ಚಿತ್ರ, ಕಾವ್ಯಗಳ ರೀತಿಯೂ ಹಾಗೆಯೇ. ಉತ್ಕಟ ಭಾವನೆ, ವಿಚಾರ ಸೂಕ್ಷ್ಮತೆಗಳ ಹಾಸಿನಿಂದಲೇ ಕಲೆಯ ವಸ್ತ್ರ ನೆಯ್ಯಲ್ಪಡುತ್ತದೆ. ಆದರೆ ಸೌಂದರ್ಯವೆಂದರೆ ಸ್ತ್ರೀಯ ಮುಖಮಂಡಲ, ರಸವೆಂದರೆ ಕಾಮುಕ ಶೃಂಗಾರ, ಎಂಬ ಕೋತಿಬುದ್ಧಿಯ ಜನರಿಗೆ ಕಲೆಯ ನಿಜವಾದ ಸೌಂದರ್ಯದ ಅರಿವು ಹೇಗಾಗಬೇಕು? ಶರದೃತುವಿನ ಸಂಧ್ಯಾಕಾಲದ ಸುವರ್ಣ ಮೋಡಗಳ ಮಾಲೆಯಂತೆ ಮಳೆಗಾಲದ ಕಾರ್ಮೋಡಗಳೂ ಚಿತ್ರಕಾರ ಕಾಳಿಯ ಮನಸ್ಸಿಗೆ ಆನಂದವನ್ನು ಕೊಡುತ್ತಿದ್ದವು. ನೀರ್ಧುನಿಯಾಗಿ ಬ್ರಾಂದೇವಿಯು ಭೂಮಿಯಲ್ಲಿ ನಯವಾಗಿ ನರ್ತಿಸಲು ಆ ನಟನೆಯನ್ನು ಆತ ಎಡೆಬಿಡದೆ ನೋಡುತ್ತಿದ್ದ. ಗಿಡಗಳ ದಟ್ಟವಾದ ಎಲೆಗಳಿಂದ ತೂರಿಬಂದ ಬೆಳದಿಂಗಳ ಕಿರಣವನ್ನು ಕಂಡಾಗ ಅವನಿಗೆ ರಂಗವಲ್ಲಿಯ ನೆನಪಾಗುತ್ತಿತ್ತು. ಹೊಳೆಗೆ ನೆಗಸು ಬಂತೆಂದರೆ ಚಿತ್ರಕಾರ ಪರಮೇಶ್ವರನ ಬಣ್ಣದ ಕುಡಿಕೆ ಉರುಳಿತೆಂದು ಭಾವಿಸಿ ಹೊಳೆಯತ್ತ ಧಾವಿಸುತ್ತಿದ್ದ. ಈ ರೀತಿ ರಸಿಕನ ಅಂತರ್ದೃಷ್ಟಿಗೆ ಗೋಚರಿಸುವ ಸೌಂದರ್ಯ ಇತರರ ವ್ಯಾವಹಾರಿಕ ದೃಷ್ಟಿಗೆ ಹೇಗೆ ಗೋಚರಿಸಬೇಕು? ಮುತ್ತು ಮುಳುಗುವವರ ಸೊತ್ತೇ ಹೊರತು ಮೀನ ಹಿಡಿವವರದಲ್ಲ!"

ಕಾಳಿ ಚಿತ್ರದಲ್ಲಿಯ ಸೀತೆಯನ್ನು ಇನ್ನೊಮ್ಮೆ ನೋಡಿ ರೇಶಿಮೆ ವಸ್ತ್ರದಲ್ಲಿ ಸುತ್ತಿದ. ದೀಪ ಆರಿಸಿ ತ್ರಿಮೂರ್ತಿಗಳೂ ನಿಶ್ಚಿತ ಸ್ಥಳಕ್ಕೆ

ಹೋಗಲು ಹೊರಬಿದ್ದರು. ಆವರೆ ಸುಧಾಕರನು ಬಾರದ್ದರಿಂದ ಆವನ ನ್ನು ಕರೆಯಲೆಂದು ಹೊರಟಿದ್ದ ಇನ್ನೊಬ್ಬ ಗೆಳೆಯ ದಾರಿಯಲ್ಲಿ ಭೆಟ್ಟಿ ಯಾದ. ಹೊಸಬ ತತ್ವಜ್ಞಾನಿಯ ಜಾತಿಗೆ ಸೇರಿದವ. ನಾಲ್ವರೂ ಸುಧಾ ಕರನ ಮನೆಯ ದಾರೀ ಹಿಡಿದರು.

ಶಶಿಯ ಶೀತಲ ಶುಭ್ರ ರಶ್ಮಿಗಳಲ್ಲಿ ಆಹ್ಲಾದಿಸುತ್ತ ಗೆಳೆಯರು ಸು ಧಾಕರನ ಕೋಣೆ ಮುಟ್ಟಿದಾಗ ಆತನ ಕೋಣೆಯ ಬಾಗಿಲು ತೆರೆದೇ ಇತ್ತು. ಗಂಟುಗದಡಿಗಳನ್ನೆಲ್ಲ ಕಟ್ಟಿ ಒತ್ತಟ್ಟಿಗಿಟ್ಟುದರಿಂದ ಕೋಣೆಯ ಒಳಭಾಗವೆಲ್ಲ ಹೇಮಂತ ಋತುವಿನ ಪರ್ಣಹೀನ ವೃಕ್ಷದಂತೆ ಕಾಣಿಸು ತ್ತಿತ್ತು. ಸುಧಾಕರನು ಟ್ರಂಕಿನ ಬಳಿಯಲ್ಲಿ ಕುಳಿತು ಯಾವುದರಲ್ಲಿಯೋ ವ್ಯಸ್ತನಾಗಿದ್ದಾನೆಂಬುದು ಗೋಡೆಯ ಮೇಲೆ ಮೂಡಿದ ನೆರಳಿನಿಂದ ತಿ ಳಿಯುವಂತಿತ್ತು. ''ನಾಳೆ ರಾತ್ರಿ ಇಲ್ಲಿ ಬಂದರೆ ಈ ನೆರಳೂ ಕಾಣಲಿಕ್ಕಿ ಲ್ಲವಲ್ಲ!''ಎಂದು ಕಾಳೆ ಉದ್ಗರಿಸಿದ.

''ಒಳಗೆ ಬನ್ನಿ. ನನ್ನ ಸಲುವಾಗಿ ತಡವಾಯಿತಲ್ಲವೇ?" ಸುಧಾಕ ರನ ದನಿಯಲ್ಲಿ ಕ್ಷಮಾಯಾಚನೆಯಿತ್ತು.

''ಛೇ,ಛೇ, ಹಾಗೇನಿಲ್ಲ"ತತ್ವಜ್ಞ ಉಸುರಿದ. ಬ್ರಹ್ಮ ಸತ್ಯಂ ಜಗ ನ್ಮಿಥ್ಯಾ ಎಂಬ ಉದಾತ್ತವಿಚಾರದಿಂದ ಹಾಗೆ ಹೇಳಿರಬೇಕು.

''ಅಕಾಲೋ ನಾಸ್ತಿ ಖಾದ್ಯಸ್ಯ"ಎಂಬ ನ್ಯಾಯದಂತೆ ಹೊತ್ತಾಗಿ ಲ್ಲವೆಂಬುದು ನಿಜ,ಎಂದು ಕವಿ ಅನುಮೋದಿಸಿದ.

''ಆಗಲೇ ಬರುತ್ತಲಿದ್ದೆ. ಅವರಿವರ ಭೆಟ್ಟಿ, ಬಲವಂತದ ತಿಂಡಿ ತೀರ್ಥಗಳಿಗಾಗಿ ದಿನದ ಹನ್ನೆರಡು ತಾಸೂ ಸಾಲಲಿಲ್ಲ. ಟ್ರಂಕಿನಲ್ಲೆಲ್ಲ ಸಾಮಾನು ತುರುಕಿದ ಮೇಲೆ ಫ್ರೇಮು ಹಾಕಿಸಲು ಕೊಟ್ಟ ತಾಯಿಯ ಫೋಟೋ ನೆನಪಾಯಿತು. ಈಗ ಆದನ್ನು ಹೇಗೆ ಟ್ರಂಕಿನಲ್ಲಿಡಬೇಕೆಂಬ ದೇ ತಿಳಿಯದಾಗಿದೆ. ನೋಡು, ಕಾಳೇ, ಹೃದಯದ ಕನ್ನಡಿಯಲ್ಲಿ ಮಾ ತ್ರ ಮೂಡಿರುವ ಚಿತ್ರ ಇದು. ಸಾದಾ ಕನ್ನಡಿಯ ಮೇಲೆ ಮೂಡಿಸಲು

ಬರುವಂತಿದ್ದರೆ ತಾಯಿಯ ಬಗ್ಗೆ ನನಗಿರುವ ಭಕ್ತಿಯಲ್ಲಿ ಒಂದು ಚೂರಾದರೂ ನನಗೆ ಗೋಚರಿಸುತ್ತಿತ್ತು. ಆಕೆ ಶರೀರದಿಂದ ಜನ್ಮಕೊಟ್ಟದ್ದು ಒಮ್ಮೆಯೆಂಬುದು ನಿಜ. ಆದರೆ ಹೃದಯದಿಂದ ಕೊಟ್ಟ ಜನ್ಮಕ್ಕೆ ನೆಲೆಯಿಲ್ಲ".

"ಫೋಟೋದೊಡನೆ ಆ ಸೀರೇನೂ ಹಾಕಬೇಕಲ್ಲವೇ?"

"ಅಲ್ಲ; ಅದು ಇಲ್ಲಿಯ ಸಾಕುತಾಯಿ ಚಿಕ್ಕಮ್ಮನಿಗೆ. ಬಿ. ಎ. ಆಗುವ ತನಕವೂ ತಾಯಿಯಂತೆ ನೋಡಿಕೊಂಡಿದ್ದಾಳೆ. ಅಂತಹ ನಿರಪೇಕ್ಷ ತಾಯ್ತನವನ್ನು ಕಂಡಾಗ ದೇವರ ಅಸ್ತಿತ್ವವು ಭಾಸವಾಗುತ್ತಿದೆ. ಅವರು ಮುರಲೀಧರ ಗುಡಿಯ ಬಳಿಯಲ್ಲಿದ್ದಾರೆ."

ಸುಧಾಕರ ಮತ್ತು ಕಾಳಿಯಪ್ಪರು ಮುರಲೀಧರ ಗುಡಿಯ ಬಳಿ ಹಾಯ್ದು ಬರುವವರಾದುದರಿಂದ ಉಳಿದವರೆಲ್ಲ ಮುಂದೆ ಹೋಗಬೇಕೆಂದು ಗೊತ್ತಾಯಿತು. ಸುಧಾಕರನು ಬಂದಾಗ ಚಿಕ್ಕಮ್ಮ ತನ್ನ ಮೊಮ್ಮಗಳನ್ನು ತಟ್ಟುತ್ತ ಕುಳಿತಿದ್ದಳು. ಬಂದವನೇ ಸೀರೆ ಮುಂದಿಟ್ಟು 'ಚಿಕ್ಕಮ್ಮ, ಹೋಗಿ ಬರುತ್ತೇನೆ"ಎಂದ. ಅವನ ಹೃದಯ ತುಂಬಿಬಂದಿತ್ತು.

"ಇನ್ನಾವಾಗ ಬರ್ತೀಯಪ್ಪಾ? ಅದೇನು ಮತ್ತೆ ಸೀರೆ?"

"ಬರ್ತೇನಮ್ಮಾ ಬಿಡುವಾದಾಗೆಲ್ಲ. ನನ್ನ ನೆನಪು ಇರಲಿ ಅಂತ ಈ ಸೀರೆ ತಂದೆ"

ಆ ಮಾತೃ ಹೃದಯದ-ವಾತ್ಸಲ್ಯದ ತಾಯಿಗೆ ಪ್ರೇಮಾಶ್ರು ಹರಿಯ ಹತ್ತಿತು. ಅವಳ ಮೊಮ್ಮಗಳು "ಅಣ್ಣಾ, ನೀನು ಎಲ್ಲಿ ಹೋಗ್ತೀಲಿ"

"ಭುರ್ ಮೋಟರ ಮೇಲೆ"

"ತಿಲಗಿ ಯಾವಾಗ ಬಲ್ತೀಲಿ"

"ಬಹಳ ದಿನಾ ಬೇಕು"

"ನಾನೂ ಬಲಲೇನ್ನಿ, ನಿಮ್ಮ ಸಂಗಡ"

"ಉಹುಂ''

"ನಿಮಗೆ ದೇವ್ರು ಸಿಗ್ತಾನೇನ್ರಿ?''

"ಹುಂ"

"ಅವನಿಗೆ ಹೇಳಿ ನಮ್ಮ ಅಮ್ಮನ್ನ ಕಳಿಸಿಕೊಂಡು ಬರ್ತೀರೇನ್ರೀ?"

ಸುಧಾಕರನಿಗೆ ಏನು ಹೇಳಬೇಕೆಂದೇ ತೋಚಲಿಲ್ಲ. ಇಂದಿಲ್ಲ ನಾಳೆ ತನ್ನ ತಾಯಿಯು ದೇವರ ಮನೆಯಿಂದ ತಿರುಗಿ ಬಂದಾಳೆಂಬ ಹಿರಿಯಾಸೆಯಿಂದ ಆ ಅಬೋಧ ಬಾಲಿಕೆಯು ನಲಿಯುತ್ತಿದ್ದಳು. ಆಸೆಯೆಂಬುದು ಸರ್ಪದಂತೆ ಮೋಹಕವಾದರೂ, ದಂಶವೂ ಇರುತ್ತದೆಂಬ ವಿಚಾರ ಸುಧಾಕರನಿಗೆ ಬಂದಿತು. ತಾನು ತಂದ ತಿಂಡಿಯನ್ನು ಮಗುವಿನ ಕೈಯಲ್ಲಿಟ್ಟು ಚಿಕ್ಕಮ್ಮನಿಗೆ ನಮಸ್ಕರಿಸಿದನು.

"ಉದಂಡ ಆಯುಷ್ಮಂತನಾಗು. ಎರಡು ಕೈ ಇದ್ದದ್ದು ನಾಲ್ಕು ಕೈ ಮಾಡಿಕೊಂಡು ಬಾ''ಎಂದು ಆಶೀರ್ವದಿಸಿದಳು. ಸುಧಾಕರ, ಕಾಳೆಯವರು ಹೊರಬಿದ್ದು ಮರೆಯಾಗುವ ತನಕ ಆ ಪ್ರೇಮಮಯಿಯು ದಿಟ್ಟಿಸುತ್ತ ನಿಂತಿದ್ದಳು.

—o—

## ಪ್ರಕರಣ. ೨.

ಸುಧಾಕರನ ಕಾಲೇಜೋ ಕ್ರಮಿಸುತ್ತಿತ್ತು. ಮನಸ್ಸು ಚಿಗವ್ವಿಯ ಬಳಿಯಲ್ಲಿತ್ತು. 'ಕೊಂಕಣದಲ್ಲಿಯ ವಾಳ್ಪಾವಲಿಯೆಲ್ಲಿ? ಬಯಲು ಸೀಮೆಯ ಸಾಂಗಲಿಯೆಲ್ಲಿ? ಕಾಲೇಜಿನ ಶಿಕ್ಷಣಕ್ಕಾಗಿ ಇಲ್ಲಿ ಬಂದೆ. ಕರ್ಮಧರ್ಮ ಸಂಯೋಗದಿಂದ ಚಿಕ್ಕಮ್ಮನ ನೆರೆ ಸಿಕ್ಕಿತು. ತಬ್ಬಲಿಮೊಮ್ಮಗಳ ಹೊರತು ಆಕೆಗೆ ಇನ್ನಾರೂ ಇರಲಿಲ್ಲ. ಆಕೆ ಕೊಂಕಣಸ್ಥೆ. ನಾನು

ಕರ್ಪ್ಪಾಡಿ. ಆಕೆಗೆ ಪುರಾಣ ಪುಣ್ಯಕಥೆ ಪ್ರಿಯವಾದರೆ, ನನಗೆ ಇಬ್ಸನ್ ಗಾಲ್ಸವರ್ದಿಯರ ಸಮಾಜ ಚಿತ್ರಣ ಅಚ್ಚು ಮೆಚ್ಚು. ನಾನು ಕಾಯಿಲೆಯಿಂದ ಮಲಗಿದರೆ ''ಸುಧಾಕರಾ, ಸಂಧ್ಯಾವಂದನೆ ಮಾಡದಿದ್ದದ್ದಕ್ಕೇ ಹೀಗೆಲ್ಲಾ ಆಗೋದು.'' ಎನ್ನುವಳು. ವಯಸ್ಸು, ಮತ, ವಿಚಾರ– ಇವೆಲ್ಲದರಲ್ಲಿಯೂ ಭೂಮ್ಯಾಕಾಶದಷ್ಟು ಅಂತರ. ಆದರೆ ಅನುಗಾಲವೂ ಸೂರ್ಯ ಚಂದ್ರರ ತೇಜಸ್ಸಿನಲ್ಲಿಯೇ ಮುಳುಗಿರುವ ಮುಗಿಲು ಮೇದಿನಿಯ ಮನಸ್ತಾಪವನ್ನು ತಣಿಸಲು ಮಳೆಗಾಲದಲ್ಲಿ ತಣ್ಣೀರಿನ ತೊರೆಯನ್ನೇ ಹರಿಯಿಸುವಂತೆ, ಸ್ವರ್ಗ ನರಕ, ಪಾಪ ಪುಣ್ಯಗಳ ವಿಚಾರದಲ್ಲಿಯೇ ತನ್ಮಯವಾಗಿರುವ ಚಿಗವ್ವಿ ನನ್ನ ಕಾಯಿಲೆಯ ಕಾವನ್ನು ಕಳೆಯುವದಕ್ಕೋಸ್ಕರ ಪ್ರೀತಿಯ ಪೂರವನ್ನೇ ಹರಿಯಿಸುತ್ತಿದ್ದಳು. ಬೆಳಗಿನಲ್ಲಿ ಬಿಸಿನೀರಿನ ಕಾವು ಕೊಡುವದಕ್ಕಾಗಲೀ, ಮಧ್ಯರಾತ್ರಿಯಲ್ಲೆದ್ದು ಔಷಧ ಕೊಡುವದಕ್ಕಾಗಲೀ, ಹಗಲಿಡೀ ಹಾಸಿಗೆಯನ್ನು ಹಸನಾಗಿಡುವದಕ್ಕಾಗಲೀ, ಮಡಿ ಮೈಲಿಗೆ ಬಾಧೆ ತರುತ್ತಿದ್ದಿಲ್ಲ. ಅವಳ ಹೃದಯವೆಂದರೆ ತುಂಬಿದ ಕಡಲು. ಸಂಕುಚಿತ ವಿಚಾರ, ಪರಂಪರಾಗತ ಕಲ್ಪನೆ– ಇವೆಲ್ಲ ತೋರಿಕೆಯ ನೊರೆ ತೆರೆಗಳು. ತಳದಲ್ಲಿದ್ದುದೆಲ್ಲ ವಾತ್ಸಲ್ಯದ ಮುತ್ತು ರತ್ನ. ಆ ಕಡಲನ್ನು ಕಾಯಿಲೆಯಂತಹ ಕಡೆಗೋಲಿನಿಂದ ಕಡೆದಾಗ ವಾತ್ಸಲ್ಯ, ಪ್ರೇಮುಗಳ ಮುತ್ತು ರತ್ನಗಳೆಲ್ಲ ಹೊರಬರುತ್ತಿದ್ದವು. ನಿಜವಾಗಿಯೂ ಉಪಕಾರದ ಹೊರೆ ತೀರಿಸಲಾರದಷ್ಟು. ನಾನು ಇನ್ನೊಮ್ಮೆ ತಿರುಗಿ ಬಂದಾಗ ಇವಳ ದರ್ಶನವಾದೀತೋ, ಇಲ್ಲವೋ ಯಾರು ಬಲ್ಲ? ಕಾಲನ ಗರ್ಭದಲ್ಲಿ ಏನು ಹುದುಗಿದೆಯೋ? ಅವನ ಕತ್ತಿಗೆ ಬಲಿಯಾಗದ ಕಲಿಯ ಕತ್ತೇ ಇಲ್ಲ. ಅದರಲ್ಲಿಯೂ ಚಿಕ್ಕಮ್ಮ ಹಾಗಲಹಣ್ಣು. ಮರಣದ ಬಿರುಗಾಳಿಯಲ್ಲಿ ಬಲಿತ ಎಲೆಗಳೇ ತೂರಿಹೋಗುವಾಗ ಈ ತರಗಿನ ಗತಿಯೇನು? ಈ ಯೋಚನೆ ಬಂದು ಚಿಗವ್ವಿಯ ಪಾದವನ್ನು ಇನ್ನೊಮ್ಮೆ ಕಣ್ಣೀರಿನಿಂದ ತೊಳೆಯೋಣ ಎಂದೆನಿಸಿತು. ಅಂದಿನ ಸೃಷ್ಟಿ ಆತನಿಗೆ ಸಜೀವವಾಗಿ ಕಂಡು ಬಂದಿತು. ಅತಿ ಪರಿಚಯವು ಕುರುಡು ಎಂಬುದೇನೋ ನಿಜ. ಆದರೆ ವಿರಹದ ಕಂಬನಿಯು ಉಂಟಾಯಿತೆಂದರೆ ಸೌಂದರ್ಯದ ದಿವ್ಯದೃಷ್ಟಿಯು ಹುಟ್ಟುತ್ತದೆ. ಐದು ವರ್ಷ

ಗಳಿಂದಲೂ ಆತ್ಮೀಯವಾಗಿದ್ದ ಮನೆ-ದಾರಿ ಇವೆಲ್ಲವನ್ನು ಇನ್ನೆಂದು ಕಂಡೇನು ಎಂಬ ಕಾತರ ಅವನಿಗೆ. ಆಷ್ಟೊತ್ತಿಗೆ ದಾರಿಯಲ್ಲಿದ್ದ ಗಣಪತಿಯ ಗುಡಿಯಲ್ಲಿ ಗಂಟೆ ಬಾರಿಸಿತು. ಇದೂ ನನ್ನ ದೇಶತ್ಯಾಗದ ಗಂಟೆಯಾಗಿರಬಹುದೇ ಎಂದು ಯೋಚಿಸಿದ. ಗ್ರೇನ ಮಸಣ ಗೀತದ ನೆನಪಾಯಿತು. ದೇವರಿಗೆ ವಂದಿಸಿ-ಗೆಳೆಯರೆಲ್ಲ ದಾರಿ ಕಾಯುತ್ತಿರುವರೆಂಬ ಭಾವನೆ ಬಂದೊಡನೆ ಲಗುಬಗೆಯಿಂದ ಗೆಳೆಯರಿಬ್ಬರೂ ಹೆಜ್ಜೆ ಹಾಕಹತ್ತಿದರು.

ನಿರ್ದಿಷ್ಟ ಸ್ಥಳದಲ್ಲಿ ಗೆಳೆಯರು ಸ್ವಚ್ಛಂದವಾಗಿ ನಗೆಚಾಟಿಕೆ ನಡಿಸಿದ್ದರು. ಅಲ್ಲಿ ಒಬ್ಬ ಹಾಡುತ್ತಿದ್ದರೆ ಇನ್ನೊಬ್ಬ ಬೆಕ್ಕು ನಾಯಿಗಳ ಕೂಗಿನ ಅನುಕರಣ ನಡಿಸಿದ್ದ ಆ ಪ್ರಶಾಂತವಾದ ಬೆಳದಿಂಗಳಲ್ಲಿ ಅವರೆಲ್ಲ ನಗೆಯ ಕಡಲಲ್ಲಿ ಈಸಾಡುತ್ತಿದ್ದರು. ಗೆಳೆಯರು ಬರುವದನ್ನು ಕಂಡು ಅವರ ನಗು ನಿಂತಿತು.

"ತುಸು ತಡವಾಯಿತು. ಕ್ಷಮಿಸಿ."

"ಪ್ರೇಮ ಮತ್ತು ಯುದ್ಧಗಳಲ್ಲಿ ಬೇಸರವೇ ಇಲ್ಲ" ಕವಿಯೆಂದ.

ಘಡಕೆಯ ಸೂಚನೆಯಂತೆ ಸುಧಾಕರ, ಕಾಳೆಯರು ಜಮಖಾನಿಷ ಮೇಲೆ ಕುಳಿತರು. ಅಂದಿನ ದೃಶ್ಯ ಪ್ರಶಾಂತವಾಗಿತ್ತು. ನದಿಯಲ್ಲಿ ವಿಶೇಷ ನೀರಿದ್ದಿಲ್ಲ; ಪ್ರೀತಿಯ ಮೂಲಕ ಬಡತನದ ಬಾಳಿನಲ್ಲಿಯೂ ಸುಖದ ಬೆಳಕು ಬೆಳಗುವಂತೆ ಬೆಳದಿಂಗಳ ಮೂಲಕ ಅಲ್ಲಿಯ ಸೌಂದರ್ಯ ದ್ವಿಗುಣಿತವಾಗಿತ್ತು. ತಿಳಿನೀರಿನ ಮೇಲ್ಮೈಯ್ಯ ತೆರೆಗಳನ್ನು ತಾರಾನಾಥನು ತನ್ನ ಕಿರಣಗಳಿಂದ ಪರಿಪರಿಯಾಗಿ ಕುಣಿಸುತ್ತಿದ್ದ. ಎಡಗಡೆ ಗಿಡಗಳ ನೆರಳು; ಅನತಿದೂರದಲ್ಲಿಯೇ ಸಂಕದ ಭವ್ಯ ಕಮಾನು. ಹಗಲಿನಲ್ಲಿ ಜನ ನಿಬಿಡವಾಗುತ್ತಿದ್ದ ಆ ಸ್ಥಾನ ಜನವಿಲ್ಲದುದರಿಂದ ಗೃಹಸ್ಥಾಶ್ರಮವನ್ನು ತ್ಯಜಿಸಿ ಸನ್ಯಾಸವನ್ನು ಪರಿಗ್ರಹಿಸಿದಂತೆ ಭಾಸವಾಗುತ್ತಿತ್ತು.

ಫಡಕೆ ಖಾದ್ಯ ಪದಾರ್ಥ ಬಡಿಸಿದ. ಬಾಯಲ್ಲಿ ಎಲ್ಲರಿಗೂ ನೀರೂ ರಿತು. ತಿನ್ನುವದರ ಜೊತೆಗೆ ವಾದವಿವಾದಕ್ಕೂ ಮಹಾಪೂರು ಬಂದಿತ್ತು. ಎಲ್ಲ ಮುಗಿದ ಮೇಲೆ ತತ್ವಜ್ಞನು ವ್ಯಾಖ್ಯಾತನ ರೀತಿಯಿಂದ "ಇನ್ನು ಸುಧಾಕರನೊಡನೆ ಚಹಾಕುಡಿಯೋ ಸುಪ್ರಸಂಗ ಎಂದೋ ಕಾಣೆ. ಅ ವರಂತೆ ಅವರ ಉಪದೇಶಾಮೃತವೂ...... ಆತನ ಬಾಯಿಂದ ಮುಂದೆ ಮಾತೇ ಹೊರಡಲಿಲ್ಲ.

"ಮುಂದಿನ ಕಾರ್ಯಕ್ರಮದ ಬಗ್ಗೆ ನಾವೆಲ್ಲ ಯೋಚಿಸೋಣ. ಸಭೆ ಸೇರಿತೆಂದರೆ ನಮ್ಮ ಉತ್ಸಾಹವೆಲ್ಲ ನಾಲಗೆಯಲ್ಲೇ ಸಂಚಾರವಾಗಿ ಬಿಡುತ್ತದೆ. ಅಷ್ಟಾಯಿತೆಂದರೆ ನಮಗೆ ಕೈಕಾಲು ಅಲ್ಲಾಡಿಸುವದೂ ಬೇಡವಾಗುತ್ತದೆ"

"ನಿಮ್ಮ ಯೋಚನೆಯನ್ನಷ್ಟು ಮೊದಲು ಹೇಳಿ. ಆಮೇಲೆ ನನ್ನ ಪಾಳಿ. ನೀವು ಮನಸ್ಸು ಮಾಡಿದ್ದರೆ ಕಾಲೇಜಿನಲ್ಲಿಯೇ ಇರಬಹುದಿತ್ತು. ಆದರೆ ನಿಮಗೇ ಮನಸ್ಸಿಲ್ಲ. ಆದಕ್ಕಾಗಿ ನಿಷೇಧ ವ್ಯಕ್ತಮಾಡುವ ಸೂಚನೆ ತರಬೇಕೆಂದಿರುವೆ"–ಕಾಳೆ ನುಡಿದ.

"ಸುಧಾಕರ, ನೀವು ನಮ್ಮನ್ನು ಬಿಟ್ಟು ಹೋಗುವ ನಿರ್ದಯತನವನ್ನು ಏಕೆ ತೋರಿಸುತ್ತೀರೆಂಬುದೇ ತಿಳಿಯದಾಗಿದೆ. ಸೂರ್ಯನಿಲ್ಲದೆ ಕಮಲ... ..." ಕವಿಯ ಮಾತು ಮುಗಿಯುವಷ್ಟರಲ್ಲಿಯೇ ಫಡಕೆಯು 'ಚಹಾದ ಹೊರತು ಕಾಲೇಜಿನ ವಿದ್ಯಾರ್ಥಿಗಳು' ಎಂದ.

"ನಿಮ್ಮನ್ನು ಬಿಟ್ಟು ಹೋಗುವದು ನನಗೊಂದು ಒಸಗೆಯೆಂದು ಭಾವಿಸುವಿರಾ? ಮುಂದಿನ ವರ್ಷವಾದರೂ ನಮ್ಮ ವಿಯೋಗವಾಗಿಯೇ ತೀರುತ್ತದೆ. ಜುಸಿಯುರದಲ್ಲಿದ್ದ ಗೆಳೆಯರು ಹೆಚ್ಚೆಂದರೆ ಇನ್ನೊಂದು ವರ್ಷ ಇಲ್ಲಿರಬಹುದು. ದಾರದಲ್ಲಿ ಪೋಣಿಸಿದ ಹೂವಿನಂತೆ ಸದಾಕಾಲ ಒಂದೆಡೆಯಲ್ಲಿ ಇರಲಾರೆವು. ನಮ್ಮ ಜೀವನವೆಂದರೆ ಆಕರ್ಷಣಶಕ್ತಿಯಿಂದ ತನ್ನ ಕಕ್ಷದಲ್ಲಿ ತಿರುಗುವ ಗ್ರಹರ ಗತಿಯಂತೆ".

ಸುಧಾಕರನ ಮಾತಿನಿಂದ ಅಲ್ಲಿ ಗಾಂಭೀರ್ಯದ ವಾತಾವರಣ ವುಂಟಾಯಿತು. ಮಂಜು ಮುಸುಕಿದರೂ ರವಿ ರಶ್ಮಿಯು ರಂಜಿಸುವಂತೆ ಅವರಲ್ಲಿ ಗಾಂಭೀರ್ಯ ಕಂಡು ಬಂದರೂ ಸುಧಾಕರನ ಮೇಲಿನ ಪ್ರೇಮಕ್ಕಾವ ನ್ಯೂನತೆಯೂ ಇರಲಿಲ್ಲ.

“ನಾವೆಲ್ಲರೂ ಕೂಡಿ ಒಂದೇ ಧ್ಯೇಯವನ್ನು ಮಾಡಿಕೊಂಡರೆ ಎಲ್ಲರೂ ಒಂದೆಡೆಯಲ್ಲಿ ಇರಬಹುದಲ್ಲ” ಕಾಳೆ ಉದ್ಗರಿಸಿದ.

“ಒಂದೇ ತಾಯಿಯ ಮಕ್ಕಳು ಸಹ ಒಂದೆಡೆಯಲ್ಲಿ ಕೂಡಿರಲಾರರು. ಅಂದಮೇಲೆ ನಮ್ಮ ನಿಮ್ಮಂತಹರ ಪಾಡೇನು? ಫಡಕೆ ಸಾತಾರೆಯವನಾದರೆ ಈ ಕವಿ ಸುರತದವ. ಅಲ್ಲದೆ ನೀನು ವರ್ಹಾಡದವ. ಮನೆ ಮಠ ಬಂಧು ಬಳಗಗಳನ್ನೆಲ್ಲ ಬಿಟ್ಟು ಒಂದು ಕಡೆ ಇರುವದು ಹೇಗೆ ತಾನೇ ಸಾಧ್ಯ? ಮುಗಿಲಲ್ಲಿಯ ಮೋಡಗಳೆಲ್ಲ ಒಂದೇ ಕಡೆ ಕಂಡರೂ ಅವುಗಳ ಗತಿ ಗಾಳಿಯನ್ನೇ ಅವಲಂಬಿಸಿರುತ್ತದೆ.”

“ನಿಮ್ಮ ಮಾತು ನಿಜ. ನಾಳೆ ನಾನು ವಕೀಲನಾದೆನೆಂದರೆ ನಿರಾತಂಕವಾಗಿ ನಮ್ಮಪ್ಪನ ಪ್ರೇಕ್ಟೀಸು ನನಗೇ ದೊರೆಯುತ್ತದೆ. ಹೀಗಿರುತ್ತಾ ಸಾತಾರೆ ಬಿಟ್ಟು ಇಲ್ಲಿಗೆ ಬರುವವರು ಯಾರು? ಅಲ್ಲದೆ ವಕೀಲನಾಗಿ ದೇಶಸೇವೆ ಮಾಡಲಿಕ್ಕೆ ಬರುವದಿಲ್ಲವೆಂದಲ್ಲ. ಅವನೇನು ಸರಕಾರಿ ನೌಕರನಲ್ಲ. ಹೀಗೆ ಹೇಳುತ್ತೇನೆಂದು ನಾನೇನು ಸನದು ಪಡೆದಿಲ್ಲ. ನನ್ನ ಸ್ಪಷ್ಟ ಅಭಿಪ್ರಾಯ ಹೇಳಿದೆ. ವಕೀಲನಿಗೆ ಭಾಷಣ ಮಾಡಲಿಕ್ಕೂ, ಲೇಖ ಬರೆಯಲಿಕ್ಕೂ ತೊಂದರೆ ಇಲ್ಲ.”

“ಬುಟ್ಟಿಗಟ್ಟಲೆ ಹಣ ಗಳಿಸಲಿಕ್ಕೂ ತೊಂದರೆಯಿಲ್ಲ.” ಕಾಳೆ ನಡುವೆಯೇ ಬಾಯಿಹಾಕಿದ.

“ಇದು ನಿಮ್ಮ ಸರಳ ಅಭಿಪ್ರಾಯವೆಂದು ಬಲ್ಲೆ. ಆದರೆ ಸರಳತನದಲ್ಲಿಯೂ ಭೇದವಿದೆ. ವಿಧವೆ ಮಗಳ ಮುಂಡನ ಮಾಡಿಸುವ ತಂದೆ, ಹರಿಜನರನ್ನು ಹಾವೆಂದು ದೂರ ಸರಿಯುವ ಹಿರಿಯ, ಇವರೆಲ್ಲ ಸರಳ

ತನದವರೇ! ಕಳೆದ ಮೂರು ವರ್ಷಗಳಿಂದ ಸಮಾಜದ ಮನಸ್ಥಿತಿಯ ನ್ನರಿಯಲು ಹವಣಿಸುತ್ತಿದ್ದೇನೆ. ಮನುಷ್ಯರೆಂದರೆ ಸ್ವಭಾವತಃ ಮೂರ್ಖ ಹಾಗೂ ಕ್ರೂರರೆಂದು ನನ್ನ ಕಲ್ಪನೆಯಿತ್ತು. ಅನುಭವದಿಂದ ಆ ಅಭಿ ಪ್ರಾಯ ಬದಲಾಗಿದೆ. ಮನುಷ್ಯರಲ್ಲಿ ಒಳ್ಳೆಯವರೂ ಇದ್ದಾರೆ. ಅವರಲ್ಲಿ ಯೂ ದುರ್ಗುಣಗಳಂತೆ ಸದ್ಗುಣಗಳೂ ಇವೆ. ಆದರೆ ಸಮಾಜ ರಚನೆ ದೂಷಿತವಾಗಿರುವದರಿಂದ ವಿಷವು ಔಷಧವಾಗುವವರ ಬದಲು ಔಷಧ ವೇ ವಿಷವಾಗಿ ಬಿಟ್ಟಿದೆ."

"ಹಾಗಾದರೆ ಸಾಮಾಜಿಕ ಕಷ್ಟಗಳು ಉತ್ಪತ್ತಿಯಾಗುವದೆಂತು?"

ನಮ್ಮ ಸಮಾಜದ ಎಲ್ಲ ದುಃಖಗಳ ಮೂಲ ಕಾಂಚನಮೃಗದಲ್ಲಿದೆ. ಕಾಂಚನಮೃಗವೆಂದರೆ ಬರೀ ಮೋಸಗಾರಿಕೆ. ಚಿನ್ನದ ಚಿಗುರಿಯನ್ನು ಬೆನ್ನಟ್ಟಿ ರಾಮಲಕ್ಷ್ಮಣರು ಬನ್ನಪಟ್ಟರೆಂಬುದು ಪೌರಾಣಿಕ ಕತೆ. ಅದನ್ನಷ್ಟು ಇಂದಿನ ದೃಷ್ಟಿಯಲ್ಲಿ ವಿಮರ್ಶಿಸೋಣ. ಈಗಿನ ಜನ ಹೊರ ಮಿಂಚಿನ ಆಡಂಬರಕ್ಕೆ ಮರುಳಾಗಿ ನೈಜ ಸುಖಕ್ಕೆ ಎರವಾಗಿದ್ದಾರೆ. ಸ್ವರ್ಗ ನರಕದ ಕಲ್ಪನೆಯೂ ಕೂಡ ಒಂದು ರೀತಿಯ ಕಾಂಚನಮೃಗ ವೇ ಅಲ್ಲವೇ? ಅಂತಃಕರಣದ ಶಾಂತಿಯೇ ಸ್ವರ್ಗ, ಅಶಾಂತಿಯೇ ನರಕ ಎಂಬದನ್ನು ಅದೆಷ್ಟು ಜನ ಒಪ್ಪಬಹುದು? ದಯೆಯೇ ಮಾನವನ ನಿಜಧರ್ಮ. ಅದನ್ನುಳಿದು ರೂಢಿಯ ಕಾಂಚನಮೃಗದ ಬೆನ್ನಟ್ಟಿ ಕಂಗಾಲಾಗಿದ್ದೇವೆ. ಸರಕಾರಿ ನೌಕರಿ ಇಲ್ಲವೆ ವಕೀಲಿ ಮಾಡಿ ದೇಶಸೇವೆ ಸಾಧಿಸಿದ ರಾನಡೆ ಲಜಪತರಾಯರಂಥವರು ನಮ್ಮ ತರುಣ ವರ್ಗದಲ್ಲಿ ಯಾರಿದ್ದಾರೆ? ಆ ಕಾರ್ಯ ಎಲ್ಲರಿಗೂ ದಕ್ಕುವಂತಹದಲ್ಲ. ಕಿರಿ ಬೆರಳಲ್ಲಿ ಗಿರಿಯನ್ನು ಮುರಲಿಧರ ನೆತ್ತಿದನೆಂದು ಉಳಿದ ತುರುಕಾಯುವವರೆತ್ತುವದು ಸಾಧ್ಯವೇ?".

"ವಕೀಲಿಯಿಂದ ನಮ್ಮ ಲಕ್ಷ್ಯ ದುಡ್ಡಿನತ್ತ ಎಳೆಯಲ್ಪಡುತ್ತದೆಂಬ ಮಾತನ್ನು ಒಪ್ಪುವೆ. ಆದರೆ ಹಣವಿಲ್ಲದೆ ಯಾವದೂ ನಡೆಯುದಲ್ಲ!" ತನ್ನ ಅಭಿಪ್ರಾಯವನ್ನು ಪುಷ್ಟೀಕರಿಸುವದಕ್ಕಾಗಿ ಫಡಕೆ ನುಡಿದ.

"ನಾನಾದರೂ ಅದನ್ನೆಲ್ಲಿ ಅಲ್ಲಗಳೆಯುತ್ತೇನೆ ? ಹಿಂದೆ ಹತ್ತಿದ ಹುಲಿಗೆ ಹೆದರಿ ಓಡುವಂತೆ ಮುಂದೆ ಹತ್ತಿದ ಹೊಟ್ಟೆ ಪಾಡಿಗಾಗಿ ಮನುಷ್ಯ ಓಡಬೇಕಾಗುವದು. ಆದರೆ ಕೂಾನವನ ಮುಗಿಲ ಮುಟ್ಟಲಿದ್ದ ಮನೋರಥ ಗೇಣು ಹೊಟ್ಟೆಯ ಹೊಂಡದಲ್ಲಿ ಹೂಳಿಬಿಟ್ಟರೆ ಆವನ ಜೀವನದಲ್ಲಿ ಉಳಿಯುವದಾದರೂ ಏನು? ಈಗಿನ ಪದವೀಧರರಿಗೂ ತಿಂಗಳೊಂದಕ್ಕೆ ೫೦ರೂಪಾಯಿ ದೊರೆಯುವದು ಕಷ್ಟಸಾಧ್ಯವೆಂದು ಒಪ್ಪುತ್ತೇನೆ. ಆದರೆ ಹೊಟ್ಟೆಯಲ್ಲಿಯ ಬೆಂಕಿಯಷ್ಟೇ ಹೃದಯದ ನಂದಾದೀಪಕ್ಕೂ ಬೆಲೆಯಿದೆಯೆಂಬದನ್ನು ಮರೆತು ಪ್ರಯೋಜನವಿಲ್ಲ".

"ಹೀಗೆ ಸುತ್ತಿ ಹೇಳುವದಕ್ಕಿಂತ ಸರ್ಟಿಫಿಕೇಟು ಸಿಕ್ಕೊಡನೆ ಸನ್ಯಾಸಿಯಾಗಬೇಕೆಂದಿದ್ದರೆ ಒಳಿತಾಗುತ್ತಿತ್ತಲ್ಲ!"

"ಹಾಗೇನೂ ಅಲ್ಲ. ಭೋಗ ಮತ್ತು ತ್ಯಾಗವೆಂದರೆ ಮಾನವೀ ಜೀವನದ ಎರಡು ಕಣ್ಣು."

"ಆದರೆ ಆ ದೃಷ್ಟಿಯಲ್ಲಿ ವ್ಯತ್ಯಾಸವಿದೆ"

"ಈ ವ್ಯತ್ಯಾಸವು ಕೇವಲ ಆಭಾಸ. ಹಗಲಿರುಳಿನ ಮಧುರ ಮಿಲನದ ವಿಕಾಸವಾಗುವದು ಸಂಜೆ ಮುಂಜಾವುಗಳಲ್ಲಿ. ಅದರಂತೆ ಭೋಗ ತ್ಯಾಗಗಳ ಸುಂದರ ಸಮನ್ವಯವಾದರೆ ಮಾನವನ ಜೀವನ ಆದರ್ಶವಾಗುವದು. ಗೆಳೆಯಾ, ಭಗೀರಥನ ಪೂರ್ವಜರ ಉದ್ಧಾರಕ್ಕಾಗಿ ಗಂಗೆಯು ಸ್ವರ್ಗ ಬಿಟ್ಟು ಪಾತಾಳ ಸೇರಿದುದರಿಂದಲೇ ತ್ರಿಭುವನ ಪಾವನೆಯಾದುದು. ಭೋಗವೋ, ತ್ಯಾಗವೋ ಎಂಬುದನ್ನು ಯೋಚಿಸುತ್ತ ಹಲವು ರಾತ್ರಿಗಳನ್ನು ನಿದ್ದೆಯಿಲ್ಲದೆಯೇ ಕಳೆದಿದ್ದೇನೆ. ತಾರಕೆಗಳ ನೃತ್ಯ, ಬೆಳದಿಂಗಳ ಅಮೃತವೃಷ್ಟಿ, ವಾಯುವಿನ ಸುಮಧುರ ಸಂಗೀತ- ಇವನ್ನೆಲ್ಲ ಸವಿಯುತ್ತಿರುವಾಗ ನನಗೆ ಈ ಪ್ರಶ್ನೆಯ ಉತ್ತರ ದೊರಕಿತು. ಮಾನವೀ ಜೀವನದ ಅತ್ಯುಚ್ಚ ಆನಂದ ತ್ಯಾಗದಲ್ಲಿದೆ. ತಾಯಿ ತಂದೆಗಳು ನಮಗೋಸ್ಕರ ತ್ಯಾಗಮಾಡುತ್ತಾರೆಂದೇ ಮನೆತನ ಸಾಗುತ್ತಿದೆ. ಟಿಳಕ, ಗಾಂಧಿಯಂತಹ ಧುರೀಣರು ತ್ಯಾಗ ಮಾಡಿದುದರಿಂದ

ಲೇ ಸಮಾಜಕ್ಕೆ ಸುದಿನದ ಆಶೆಯಿದೆ. ಮೋಡ ನೀರನ್ನು ನೆಲದೇವತೆಗೆ ಅರ್ಪಿಸುತ್ತಿರುವದರಿಂದಲೇ ನಮ್ಮ ಬದುಕು ನಡೆದಿದೆ. ತರುಣರಿಗೆ ಮೋಡದಂತಹ ಗುರು ಇನ್ನೊಬ್ಬರಿಲ್ಲ."

"ಇದೆಲ್ಲ ಪುಸ್ತಕದ ಮಾತು. ವ್ಯವಹಾರದಲ್ಲಿ ಇದರ ಉಪಯೋಗ ಹೇಗೆಂಬುದೇ ತಿಳಿಯದಾಗಿದೆ".

"ಹಾಗಾದರೆ ನಾನು ಮಾಡಿದ್ದೂ ಅಷ್ಟರಲ್ಲೇ ಇದೆ. ಆ ದೃಷ್ಟಿಯಿಂದ ನಿಮಗೆ ಉಪದೇಶ ಮಾಡುವ ಅಧಿಕಾರ ನನಗೂ ಇಲ್ಲ. ಭಾವನೆಗಳಿಂದ ಹೃದಯ ತುಂಬಿ ಬಂದಾಗ ನಿಮ್ಮಂತಹ ಗೆಳೆಯರಲ್ಲಲ್ಲದೆ ಇನ್ನಾರಲ್ಲಿ ತೋಡಿಕೊಳ್ಳಲಿ? ಜನಸಾಮಾನ್ಯರು ಪ್ರವಾಹ ಪತಿತರಿಗುತ್ತಾರೆ. ಸಾಲಮಾಡಿಯಾದರೂ ತುಪ್ಪವನ್ನೇ ತಿನ್ನಬೇಕೆಂಬ ತತ್ತ್ವ ನಾವು ಕಲಿತಿದ್ದೇವೆ. ಕೆಲವು ಧ್ಯೇಯಗಳು ದೂರದಿಂದ ನುಣ್ಣಗೆ. ಹತ್ತಿರ ಹೋದಂತೆ ಕಾಂಚನಮೃಗ. ನಿರಾಶೆಯೇ ಗತಿ. ಸರಕಾರೀ ನೌಕರಿ ಮಾಡಿ ದೇಶಸೇವೆ ಮಾಡುವದು, ಸಮಾಜಕ್ಕೆ ನೋಯಿಸದೆ ಸಾಮಾಜಿಕ ಸುಧಾರಣೆ ಮಾಡುವದು, ಶಿಕ್ಷಣದ ಬಗ್ಗೆ ಭಾಷಣ ಮಾಡಿಯೇ ಸಾಕ್ಷರರನ್ನಾಗಿ ಮಾಡುವದು; ಇವೇ ಮೊದಲಾದ ಮೃಗಜಲದ ಬೆನ್ನು ಹತ್ತಿ ಹಿಂದಿನ ಪೀಳಿಗೆ ನಿರಾಸೆಗೊಂಡಿದೆ. ಸಮಾಜದ ರಥ ಅಜ್ಞಾನ ಮತ್ತು ದುಃಖದ ಕೆಸರಿನಲ್ಲಿ ಹುಗಿದು ಬಿದ್ದಿದೆ. ಅದನ್ನೆತ್ತ ಬಂದವರು ಅಲುಗಾಡಿಸಿದ್ದೇನೋ ನಿಜ; ಆದರೆ ಮುಂದೊತ್ತಲಿಲ್ಲ.

"ಶಾಸ್ತ್ರಾತ್ ರೂಢಿಃ ಬಲೀಯಸೀ" ಫಡಕೆ ನುಡಿದ.

"ಎಲ್ಲರೂ ಮಲಗಿರುವರೆಂದು ಎಚ್ಚತ್ತವರೂ ಮುಸುಕೆಳೆದುಕೊಳ್ಳಬೇಕೇ? ಸಮಷ್ಟಿಯಲ್ಲಿಷ್ಟೇ ಅಲ್ಲ, ವ್ಯಕ್ತಿಯ ಆಯುಷ್ಯದಲ್ಲಿಯೂ ಕಾಂಚನಮೃಗದ ಮೋಸಗಾರಿಕೆಯ ಅನುಭವ ಅನೇಕಸಾರೆ ಬರುತ್ತಿದೆ. ನಮಗೆ ಪರಿಚಿತವಿದ್ದವನ ವಿಷಯಕ್ಕಾಗಿಯಾಗಲೀ, ಅಜ್ಞಾತವಿಷಯದಲ್ಲಾಗಲೀ, ನಮ್ಮ ಅಭಿಪ್ರಾಯ ಸರಿ ಇರುತ್ತದೆಂಬ ನಿಯಮವಿಲ್ಲ. ಅನುಭವದ ಗುರು ನಮ್ಮ ಆಯುಷ್ಯ ಗ್ರಂಥದಲ್ಲಿ ತೋರಿಸಿಕೊಟ್ಟಂತಹ

ತಪ್ಪುಗಳನ್ನು ತಿದ್ದಿಕೊಳ್ಳುವದರಲ್ಲಿ ನಾವು ಯಾವಾಗಲೂ ತತ್ಪರರಾಗಿರಬೇಕು. ಆದರೆ ಕಾಲು ಎಡವಿದವರೆಲ್ಲ ಜಾಣರಾಗಿದ್ದಾರೆಂದು ತಿಳಿಯಲಾಗದು. ಮನಸ್ಸಿಗೆ ಮಾನ್ಯವಾದ ಮೇಲೂ ಕೃತಿಯಲ್ಲಿ ಬರಲು ಎಷ್ಟೋ ದಿನ ಹತ್ತುತ್ತಿದೆ. ಇಲ್ಲಿಯ ತನಕ ನಾನೇನು ಮಾಡಬೇಕೆಂಬ ಅರಿವೇ ನನಗಿರಲಿಲ್ಲ."

"ನಮಗೇ ಮಾತ್ರ ಹಾಗೆ ಎಂದು ತಿಳಿದಿದ್ದೆ. ನಿನಗೂ......"

"ಕಾಳೀ, ನಾನೂ ನಿಮ್ಮಂತೆಯೇ ಮನುಷ್ಯ. ಎರಡು ಮಳಿಗಾಲ ಹೆಚ್ಚು ಕಂಡದ್ದರಿಂದ ಗಿಳಿಪಾಠದ ಬೆಳೆ ಒಂದಿಷ್ಟು ಹೆಚ್ಚು ಬಿದ್ದಿದೆ ಸೆರಗಿನಲ್ಲಿ; ಅಷ್ಟೇ! ಮುಂದೇನು ಮಾಡಬೇಕು? ಮನುಷ್ಯನ ನಿಜವಾದ ಸಮಾಧಾನ ಏತರಲ್ಲಿದೆ? ಸಮಾಜಕ್ಕೆ ನನ್ನಿಂದ ಆದಷ್ಟು ಹೆಚ್ಚಿಗೆ ಉಪಯೋಗ ಹೇಗೆ ಆಗಬಹುದು? ನಮ್ಮ ಸಮಾಜದಲ್ಲಿ ಕಾಣುವ ದೈನ್ಯಾವಸ್ಥೆ, ದುಃಖಗಳಿಗೆ ರಾಮಬಾಣ ಯಾವುದು? ಇವನ್ನೆಲ್ಲ ಎಂ. ಎ.ದಲ್ಲಿ ಫಸ್ಟ್ ಕ್ಲಾಸ ಬಂದುದರಿಂದ ಬಿಡಿಸಲಿಕ್ಕಾಗದೆಂದು ನನ್ನ ಅನುಭವ ಸಾರುತ್ತಿದೆ. ಈಗಲಾದರೂ ನನ್ನ ತೀರ್ಮಾನ ಸರಿಯೆಂದು ಯಾರು ಹೇಳಬೇಕು? ಪರೀಕ್ಷೆಯಲ್ಲಿ ಪ್ರಶ್ನೆಗಳನ್ನು ಮೂರು ತಾಸಿನಲ್ಲಿಯೇ ಬಿಡಿಸಬೇಕಾದಂತೆ ಇಡೀ ಆಯುಷ್ಯದ ಪ್ರಶ್ನೆಯನ್ನು ತುಂಬಿದ ತಾರುಣ್ಯದಲ್ಲಿಯೇ ಬಿಡಿಸಬೇಕಾಗುತ್ತದೆ. ಇಲ್ಲವಾದರೆ ಮುದುಕನ ಮದುವೆಯಂತೆ ನಮ್ಮ ಧ್ಯೇಯದ ಗತಿಯಾಗುವದು." ಕೊನೆಯ ಮಾತು ಅಂತಹ ಗಂಭೀರ ವಾತಾವರಣದಲ್ಲಿಯೂ ನಗು ತಂದಿತು.

"ಶಿಕ್ಷಣವೆಂದರೆ ತ್ಯಾಗ, ಧ್ಯೇಯ, ಸಮಾಜ ಸುಧಾರಣೆಗಳ ಸಮನ್ವಯವಲ್ಲವೇ? ಅಂದಬಳಿಕ ಇಲ್ಲಿಯ ಕಾಲೇಜಿನಲ್ಲಿ ಪ್ರೊಫೆಸರರೇಕೆ ಆಗುವದಿಲ್ಲ?"

"ನಾನು ಪ್ರೊಫೆಸರನಾದರೆ ವೈಯಕ್ತಿಕ ಲಾಭವಾಗುವದೇನೋ ನಿಜ. ಆದರೆ ಸಮಾಜದ ಹಿತವನ್ನೇನು ಸಾಧಿಸಿದಂತಾಯಿತು? ನಾನಿಲ್ಲದಿದ್ದರೆ ಇನ್ನಾರಾದರೂ ಪ್ರೊಫೆಸರರಾಗಬಹುದು. ಆದರೆ ನನ್ನ ನಾಡಿ

ನಲ್ಲಿಯ ಸಮಾಜದ ಕಾರ್ಯಕ್ಕೆ ಕಂಕಣ ಬದ್ಧರಾಗುವವರಾರು? ತಾಂಬೆ ಮಾಸ್ತರ ಎನ್ನುವದಕ್ಕಿಂತ ಪ್ರೊ॥ತಾಂಬೆ ಎನ್ನುವದು ಕರ್ಣಮಧುರವೆಂಬುದೇನೋ ನಿಜ. ತಾಂಬೆ ಮಾಸ್ತರನು ಸಮಾಜದೊಡನೆ ಬೆರೆತು ಅವರ ಸುಖ ದುಃಖಗಳಲ್ಲಿ ಪಾಲುಗಾರನಾಗಬಲ್ಲ. ಆದರೆ ಪ್ರೊ. ತಾಂಬೆಯು ಸಮಾಜ ವೃಕ್ಷವನ್ನಡರಿ ಹಣ್ಣು ತಿನ್ನಬಹುದೇ ಹೊರತು ಅದರ ಬುಡಕ್ಕೆ ನೀರೆರೆಯಲಾರ. ಸುಮಾರು ೫೦ ವರ್ಷದ ಹಿಂದೆ ಟಿಳಕ, ಆಗರಕರ ಇವರು "ನ್ಯೂ ಇಂಗ್ಲಿಷ ಸ್ಕೂಲ"ನ್ನು ಸ್ಥಾಪಿಸಿ ಶಿಕ್ಷಣ ಪ್ರಸಾರದ ದಾರಿ ತೋರಿದರು. ಆದರೆ ಆ ದಾರಿಯನ್ನು ತುಳಿದವರು ಅದೆಷ್ಟು ಮಂದಿ? ನಿಮ್ಮ ಜನ್ಮವೆಲ್ಲ ಕಳೆದುದು ಸಾತಾರೆ, ಅಮರಾವತಿಯಂತಹ ದೊಡ್ಡ ದೊಡ್ಡ ಪಟ್ಟಣಗಳಲ್ಲಿ. ನನ್ನ ಜನ್ಮ ಒಂದು ಹಳ್ಳಿಯಲ್ಲಿ– ವಾಲಾವಲಿಯಲ್ಲಿ.. ಆದರಿಂದ ಸಮಾಜ ಗಂಗೆಯ ಉಗಮದಲ್ಲಿ ಅದೆಷ್ಟು ಕೊಳೆ ತುಂಬಿರುತ್ತದೆಂದು ನಾನು ಅರಿತಿರುವೆನು. ಇಂದಿನ ಶಿಕ್ಷಣವೆಂದರೆ ನೆಲಗಟ್ಟು ಗಟ್ಟಿಮಾಡದೆ ಶಿಖರವನ್ನು ಅಲಂಕರಿಸುತ್ತ ಹೋದಂತೆ. 'ನಮ್ಮದೀ ನಮ್ಮದೀ ಭರತಭೂಮಿ' ಎಂದು ನಾವೆಲ್ಲ ದಿನಾಲು ಸ್ಫೂರ್ತಿಯಿಂದ ಹಾಡುತ್ತೇವೆ. ಆದರೆ ನಮ್ಮಲ್ಲಿಷ್ಟು ಮಂದಿಗೆ ನಿಜವಾದ ಭಾರತದ ಕಲ್ಪನೆಯಿದೆ? ಕಾಲೇಜಿನ ಭವ್ಯ ಭವನದಲ್ಲಿ ಹಿಂದೂ ದೇಶವಿಲ್ಲ; ಹಳ್ಳಿಯ ಬಡಬಗ್ಗರ ಗುಡಿಸಲಲ್ಲಿ ಹಿಂದೂ ದೇಶವಿದೆ. ಮೋಟರಿನಲ್ಲಿ ಮೆರವಣಿಗೆ ಮಾಡಿಸಿಕೊಳ್ಳುವ ಹಂಗಾಮಿ ದೇಶ ಭಕ್ತರಿಗಿಂತ ಬೈಲಿನಲ್ಲಿ ಬಿಸಿಲಿನ ಬೇಗೆಯಿಂದ ಬೆವರಿಳಿಸುತ್ತ ಬನ್ನಬಡುವ ಒಕ್ಕಲಿಗರಲ್ಲಿಯೇ ನಮ್ಮ ನಿಜವಾದ ಭಾರತವಿದೆ. ಪಟ್ಟಣ ಬೆಳೆಸಿ ರಾಷ್ಟ್ರೋನ್ನತಿಯನ್ನು ಸಾಧಿಸುವದೆಂದರೆ ಕಾಂಚನಮೃಗವನ್ನು ಬೆನ್ನಟ್ಟಿದಂತೆ. ಹಳ್ಳಿಯು ಸುಧಾರಿಸಿದಮೇಲೆಯೇ ಪಟ್ಟಣದ ಸುಧಾರಣೆಯಾಗಬೇಕು. ಪಟ್ಟಣವು ಹಿಂದಮಾತೆಯ ದುಕೂಲವಾದರೆ ಹಳ್ಳಿ ಅವಳೆಲುಬು. ಎಲುಬೇ ಸವೆಯುತ್ತಿರುವಾಗ ಬಾಹ್ಯ ಶೃಂಗಾರದಿಂದೇನು ಪ್ರಯೋಜನ? ಬಾಯಲ್ಲಿ ಹೆಂಡ, ಕೈಯಲ್ಲಿ ನೋಟೀಸು, ಕಾಲಲ್ಲಿ ಸಾಲದಬೇಡಿ- ಇವೇ ಹಳ್ಳಿಯುವನ ಅಲಂಕಾರ. ಕಾಲಲ್ಲಿಯ ಸಾಲದ ಶೃಂಖಲೆಯನ್ನು ಕಡಿದು, ಕೈಯಲ್ಲಿ ನವವಾಙ್ಮಯವನ್ನಿತ್ತು, ಮುಂದೆ ಜ್ಞಾನಾಮೃತವನ್ನು ನೀಡಿ

ಅವರನ್ನು ಮನುಷ್ಯತ್ವಕ್ಕೆತ್ತುವದೇ ನಮ್ಮಂಥ ಸುಶಿಕ್ಷಿತ ತರುಣರ ಆದ್ಯ ಕರ್ತವ್ಯ. ಪತ್ರಿಕೆಯ ಮುಖಪೃಷ್ಠದಲ್ಲಿ ಹೊಳೆಯುವದಕ್ಕಿಂತ, ಹಳ್ಳಿಗನ ಹೃದಯದಲ್ಲಿ ಕೆತ್ತಲ್ಪಡಬೇಕಾದುದು ಅತ್ಯಂತ ಮಹತ್ವದ್ದು. ಬೊಕ್ಕಸವನ್ನು ಬೆಳೆಸುವದಕ್ಕಿಂತ ನೊಂದವನ ಕಂಬನಿಯನೊಂದನೊರಸುವವನೇ ಧನ್ಯ ಎಂಬ ಭಾವನೆ ನಮ್ಮಲ್ಲಿ ಮೂಡದ ಹೊರತು ಹಿಂದುಸ್ಥಾನದ ಉದ್ಧಾರ ಕನಸಿನ ಗಂಟು.”

ಅಷ್ಟರಲ್ಲಿ ಹಿಂದೆ ಯಾರೋ ಬಿದ್ದ ಸಪ್ಪಳವಾಗಲು ಎಲ್ಲರೂ ಅತ್ತ ಧಾವಿಸಿದರು. ಅಷ್ಟರಲ್ಲಿ ಬಿದ್ದ ವ್ಯಕ್ತಿ ಎದ್ದು ನಿಂತಿದ್ದ. ಆವನ ದೇಹ ತೂಗಾಡುತ್ತಿತ್ತು. ಹತ್ತಿರಕ್ಕೆ ಹೋದೊಡನೆಯೇ ಹೆಂಡದ ವಾಸನೆ ಬರಹತ್ತಿತು. “ಇದೋ ನೋಡಿ ಹಳ್ಳಿಯ ಮೂರ್ತಿಮಂತ ಚಿತ್ರ!” ಎಂದು ಸುಧಾಕರನ ಬಾಯಿಂದ ಹೊರಬಿದ್ದಿತು.

ಆತ ಸಿಕ್ಕಂತೆ ಬಡಬಡಿಸುತ್ತಿದ್ದ. ತಾನೇ ಹಾಡಿ ‘ಒನ್ಸಮೋರ’ ಎನ್ನುತ್ತಿದ್ದ. ಇದನ್ನು ನೋಡಿ ಸುಧಾಕರನಿಗೆ ಕನಿಕರವೆನಿಸಿತು ಉಳಿದವರಿಗೆ ನಗು ಬಂದಿತು.

ಈತನ ಒಂದು ಗಳಿಗೆಯ ಸಹವಾಸ ಇಷ್ಟು ಹೇಯವನ್ನುಂಟು ಮಾಡಿದರೆ ಜೊತೆಯಲ್ಲಿ ಜೀವಮಾನ ಸವೆಯಿಸಬೇಕಾದ ಹೆಂಡತಿಯ ಗತಿಯೇನು? ಎಂದೂ ಕಲ್ಪಿಸದ ಸ್ತ್ರೀಯ ಕರುಣಾಜನಕ ಮೂರ್ತಿ–ಬಟ್ಟೆಯೆಲ್ಲ ಚಿಂದಿ ಚಿಂದಿಯಾಗಿದೆ, ದುಡಿದ ದುಡ್ಡನ್ನೆಲ್ಲ ಗಂಡ ಗಡಂಗಕ್ಕೆ ತೆತ್ತುದ್ದರಿಂದ ‘ಅಮ್ಮಾ ಹಸಿವೆ’ ಎಂದು ಚೀರುವ ಅಬೋಧ ಬಾಲಕನನ್ನು ತಬ್ಬಿಕೊಂಡು ಕಣ್ಣೀರಿಳಿಸುತ್ತಿದ್ದಾಳೆ. ಇಂತಹ ಚಿತ್ರ ಅವರ ಕಣ್ಣೆದುರು ಕಟ್ಟಿತು. ಅಷ್ಟರಲ್ಲಿ ಸಂಬಂಧಿಕನಾರೋ ಬಂದು ಕುಡುಕನನ್ನು ಕರೆದುಕೊಂಡು ಹೋದನು.

ಗೆಳೆಯರೆಲ್ಲ ಮೊದಲಿನ ಸ್ಥಳಕ್ಕೆ ಬಂದರು. ‘ತಾತ್ವಿಕಜ್ಞಾನಕ್ಕೆ ಪ್ರತ್ಯಕ್ಷ ಪ್ರಯೋಗ ಆವಶ್ಯಕವೆಂದೇ ಈ ಹೊತ್ತಿನಲ್ಲಿ ದೇವರು ಈತನನ್ನು ಇಲ್ಲಿ ಅಟ್ಟಿರಬೇಕು! ಅವನಿಗೆ ಶಿಕ್ಷಣ ದೊರೆತಿದ್ದರೆ ಆವನ ಪಾಡು ಈ

ರೀತಿಯಾಗುತ್ತಿತ್ತೇ? ಜಗತ್ತಿನಲ್ಲಿಯ ದುಃಖದ ಮೂಲವೆಲ್ಲ ನಿರುದ್ಯೋಗಿಯ ತಲೆಯಲ್ಲಿ, ಬರಿದಾದ ಹೃದಯದಲ್ಲಿದೆ. ತಲೆಯಲ್ಲಿ ಜ್ಞಾನ, ಹೃದಯದಲ್ಲಿ ಧ್ಯೇಯವಿದ್ದವನಿಗೆ ಜೀವನದಲ್ಲಿ ಕಷ್ಟವೆಂಬುದಿಲ್ಲ. ನಿರುದ್ಯೋಗಿಯ ತಲೆಯಲ್ಲಿಯೇ ಭೂತ ತನ್ನ ಬೀಡು ಬಿಡುತ್ತಿದೆ. ತೆರವಾದ ಹೃದಯದಲ್ಲಿ ಎಲ್ಲಿಲ್ಲದ ಚಟಗಳು ಮನೆಮಾಡುತ್ತಿವೆ."

ಎಲ್ಲರಿಗೂ ನಿದ್ದೆ ಬರುವ ಸಮಯವಾದುದರಿಂದ 'ನಿಮಗೆಲ್ಲ ನಿದ್ದೆಗೂ ತೊಂದರೆ' ಎಂದು ಸುಧಾಕರನು ಎದ್ದ. ಗೆಳೆಯರೆಲ್ಲ ಕಣ್ಸನ್ನೆಯಿಂದಲೇ ಮಾತಾಡುತ್ತಿದ್ದರು ಥಡಕೆ ಮುಂದುವರಿದು ಸುಧಾಕರನ ಕರಾಂಗುಲಿಯೊಳಗೊಂದು ಸುಂದರ ಉಂಗುರವನ್ನು ತಮ್ಮ ನೆನಪಿಗೆಂದು ಇಟ್ಟ. ಅದರಲ್ಲಿ 'ಸುಧಾಕರ' ಎಂದು ಕೊರೆದಿತ್ತು.

"ಇದರ ಉಪಯೋಗ ಹೆಂಡಗುಡುಕನ ಹೆಂಡತಿಗೇ ಹೆಚ್ಚಾಗಬಹುದಿತ್ತಲ್ಲ!"

"ಸಿಕ್ಕ ಸಿಕ್ಕವರಿಗೆಲ್ಲ ಕೊಡೋದಕ್ಕಲ್ಲ. ನಾವಿದನ್ನು ಕೊಟ್ಟದ್ದು ನಾಳೆ ತಾರಾ, ಸುಧಾ, ಎಂಬ ಹೆಸರುಹೊಂದಿ ಬರತಕ್ಕ ಅತ್ತಿಗೆಯವರಿದ್ದಾರಲ್ಲ– ಅವರ ಕೈಗೆ."

ಕಾಳೆ ಇದೇ ಹೊತ್ತಿಗೆ ತನ್ನ ಕಾಂಚನಮೃಗ ಮುಂದುಮಾಡಿದ. ಅದರ ಮೇಲೆ ಹೆಸರು ಕೊರೆದಿತ್ತು. "ಕಾಳೇ? Is it telepathy? ಇಂದಿನ ನನ್ನ ಮಾತಿಗೆ ಇದೊಂದು ಸಂದರ್ಭ ಚಿತ್ರವಿದ್ದಂತೆ ಅಲ್ಲವೆ?"

"ನಮಗೂ ಹಾಗೆಯೇ ಅನಿಸಿತ್ತು. ನಿನ್ನ ಮಾತಿನ ಗಂಭೀರ ವಾತಾವರಣದಲ್ಲಿ ನಮ್ಮ ಅಪಸ್ವರ ತೆಗೆಯ್ಬಾರದೆಂದು ಸುಮ್ಮನಿದ್ದೆವು"

ಕಾಳೆ ನಗುತ್ತಾ ಮೇಲೆ ನೋಡಿದ. ತಾರಾಪುಷ್ಪರಾಜವಿರಾಜಿತ ಶಯ್ಯೆಯ ಮೇಲೆ ರಜನೀನಾಥನು ನಗುತ್ತ ಕುಳಿತಿದ್ದ. ಅವನ ಉಪಗ್ರಹಗಳು ಆತನಿಗೊಂದು ಉಪಹಾರವನ್ನು ಅರ್ಪಿಸಿರಬಹುದೇ?

—o—

# ಪ್ರಕರಣ ೩.

ಮುಳುಗುವ ದಿನಮಣಿಯನ್ನು ಕಳಿಸಲು ಬಂದ ಮೋಡಗಳೆಲ್ಲ ಕೆಲಹೊತ್ತಿನ ಮೇಲೆ ಗಾಳಿ ಕಾಣಿಸಿದ ದಾರಿ ಹಿಡಿಯುವಂತೆ ಸುಧಾಕರನ ಸತ್ಕಾರಕ್ಕಾಗಿ ಕೃಷ್ಣೆಯ ದಡದಲ್ಲಿ ಕೂಡಿದ ಕೆಳೆಯರೆಲ್ಲ ಮನಸ್ಸಿಗೆ ಒಂದೊಂದು ರೀತಿಯಿಂದ ಸಮಾಧಾನ ಹಚ್ಚಿಕೊಂಡು ಮನೆಯ ದಾರಿ ಹಿಡಿದರು. ಕೆಲ ವಿದ್ಯಾರ್ಥಿಗಳು ಸ್ಟೇಶನ್ನಿನ ತನಕ ಬರಲು ಹಟಹಿಡಿದಿದ್ದರು. ಆದರೆ ಸುಧಾಕರನು 'ಕಾಳೆ ಹೇಗಾದರೂ ಬರುತ್ತಾನೆ. ನಾಲ್ಕೈದು ಜನ ಮುಟ್ಟಿಸುವ ಪ್ರಸಂಗ ಈಗ ಬಂದಿಲ್ಲ' ಎಂದು ಹೇಳಿದುದರಿಂದ ಅವರೆಲ್ಲ ನಿರುಪಾಯರಾಗಿ ಹಿಂತಿರುಗಿದರು.

ಮೇಲಿಂದ ಮೇಲೆ ಪತ್ರ ಬರೆಯುತ್ತೇನೆಂದು ಆಶ್ವಾಸನ ಕೊಟ್ಟು ಅವರೆಲ್ಲರಿಂದ ಬೀಳ್ಕೊಳ್ಳಲು ಸುಧಾಕರನಿಗೆ ಸಾಕುಬೇಕಾಯಿತು. ಮನೆಯ ಮಾರ್ಗಗಳೆಲ್ಲ ಭಿನ್ನ ಭಿನ್ನವಾಗಿರುವಂತೆ ನಮ್ಮ ನಮ್ಮ ಜೀವನದಾರಿಯೂ ಬೇರೆಯಾಗಿರಬಹುದೇ ಎಂಬ ಬೇಸರದ ಕಲ್ಪನೆ ಅವರಲ್ಲಿ ತಲೆದೋರಿತು. ಒಂದೇ ಸಾಗರದಲ್ಲಿ ಸಾಗಿದ ಅನೇಕ ನಾವೆಗಳು ತಮ್ಮ ತಮ್ಮ ನಿಲ್ದಾಣವನ್ನು ಸೇರಿ-ಕೊನೆಗೆ ಎರಡೇ ನಾವೆಗಳು ಕಾಣಿಸುತ್ತಿದ್ದಂತೆ ಸುಧಾಕರ, ಕಾಳೆ ಇವರಿಬ್ಬರೇ ಒಂದು ದಾರಿ ಹಿಡಿದರು.

'ತುಸು ಕಣ್ಮುಚ್ಚಿದರೆ ಅಷ್ಟೇ ಸಾಕು' ಎಂದು ಅವರಿಬ್ಬರೂ ಅಡ್ಡಾದರು. ಚಂದ್ರ ತನ್ನ ಕಿರಣಗಳಿಂದ ತಟ್ಟುತ್ತಿದ್ದ. ತಂಗಾಳಿ ಜೋಗುಳ ಪಾಡುತ್ತಿತ್ತು. ಆದರೂ ಅವರಿಗೆ ನಿದ್ದೆ ಹತ್ತಲಿಲ್ಲ. ಕಣ್ಣುಗಳಿಂದ ಹೊರಡುವ ವಿರಹಾಗ್ನಿಯ ಕಿಡಿಗೆ ನಿದ್ದೆಯ ಕೋಮಲ ರೆಕ್ಕೆಗಳು ಹುರುಪಳಿಸಿ ಹೋದುದರಲ್ಲೇನಾಶ್ಚರ್ಯ?

ಸುಧಾಕರನು ತನ್ನಲ್ಲೇ ಯೋಚಿಸಹತ್ತಿದ. 'ವಿದ್ಯಾರ್ಥಿದೆಶೆಯು ತಿಂಗಳ ಬೆಳಕಿನಂತೆ, ಶಾಂತ ಹಾಗೂ ಮನೋಹರವಾಗಿದ್ದರೂ ವಿದ್ಯಾರ್ಥಿಯು ತಿಂಗಳನಾಯನಂತೆ ಪರಪ್ರಕಾಶಿತನಿರುತ್ತಾನೆ. ಮರುದಿನದ

ಶ್ರಮಕ್ಕಾಗಿ ರಾತ್ರಿಯ ವಿಶ್ರಾಂತಿಯಿರುವಂತೆ ತಾರುಣ್ಯದಲ್ಲಿಯ ಕರ್ತ ವ್ಯಕ್ಕಾಗಿ ವಿದ್ಯಾರ್ಥಿದೆಸೆಯಿದೆ. ಸುಡುವ ಸೂರ್ಯನಿರದಿದ್ದರೆ ಶಾಂತ ಶ ಶಿಯ ಶೀತಲ ಪ್ರಕಾಶವೆಲ್ಲಿಂದ ಬರುತ್ತಿತ್ತು? ಇದರಂತೆ ಕರ್ತೃತ್ವ ಮ ತ್ತು ಕಾವ್ಯದ ಬಾಂಧವ್ಯವಿರುತ್ತದೆ.

ಕಾವ್ಯಗಳಲ್ಲಿ ಕಂಡು ಬರುವ ಅಜಿಂಕ್ಯ ಜೀವನಗಳನ್ನು ಕಂಡು ಸುಖ ಬಡುವುದು ಶುದ್ಧ ಮೋಸಗಾರಿಕೆ. ಜೀವನದಲ್ಲಿ ಕಾವ್ಯವಿದೆಯೇ ಹೊರತು ಕಾವ್ಯದಲ್ಲಿ ಜೀವನವಿಲ್ಲ. ಸಾಗರದ ತಳವನ್ನು ಸೇರದ ಹೊರ ತು ರತ್ನವು ಸಿಗದು. ಭೂಮಿಯ ಬಸಿರನ್ನು ಬಗೆದ ಹೊರತು ಉಪಯು ಕ್ತ ಧಾತುವು ನಿಲುಕದು. ಮುಗಿಲ ಮುದ್ದಿಸುವ ತೆಂಗಿನಮರವೇರದ ಹೊರತು ಎಳೆಗಾಯಿ ದೊರಕದು. ಅದರಂತೆ ಸಂಸಾರದ ಸಂಕಟಗಳಿ ಗೆ ಎದುರಾಗಿ ನಿಂತ ಹೊರತು ಸಂಸಾರದಲ್ಲಿಯ ನಿಜವಾದ ಕಾವ್ಯ ಕಾ ಣಿಸದು. ಪ್ರಪಂಚದ ವ್ಯವಹಾರ ಯಾವಾಗಲೂ ರುಕ್ಷವಾದದ್ದೆಂದು ಹೇ ಳುತ್ತೇವೆ. ಆದರ ಉದರದಲ್ಲಿಯ ಕಾವ್ಯಗಂಗೆಯನ್ನು ತಮ್ಮ ಕರ್ತೃತ್ವ ದ ಬಾಣದಿಂದ ಹೊರಗೆಡಹಲಾರದ ಹೇಡಿಗಳು ಬೇಕಾದರೆ ಹಾಗೆ ಹೇ ಳಿಕೊಳ್ಳಲಿ! ಅತ್ಯುನ್ನತ ಪರ್ವತದ ತಲೆಗೆ ದುರ್ಗಮವಾದ ಮೇಘಮಾ ಲೆಯು ದೊರಕುವಂತೆ ಪವಿತ್ರ ಪ್ರೇಮಕ್ಕೆ ವ್ಯವಹಾರದಲ್ಲಿ ಯಾವಾಗ ಲೂ ಶ್ರೇಷ್ಠತಮವಾದ ಕಾವ್ಯವು ದೊರಕುತ್ತಿದೆ. ಈಗ ನೆರೆದ ಗೆಳೆಯರ ಕಣ್ಣಲ್ಲಿ ನೀರೂರಲು ನನ್ನ ನಿರಪೇಕ್ಷ ಪ್ರೇಮವೇ ಕಾರಣವಲ್ಲವೇ? ಜೀ ವನದಲ್ಲಿ ಕಾವ್ಯವಿದೆಯೆಂಬುದಕ್ಕೆ ಇದೊಂದು ದೃಷ್ಟಾಂತವಲ್ಲವೇ?"

ಅತ್ತ ಕಾಳೆ ಸುಧಾಕರನೊಡನೆ ಕಳೆದ ದಿನಗಳನ್ನು ಜ್ಞಾಪಿಸಿಕೊ ಳ್ಳುತ್ತಲಿದ್ದ ಸುಧಾಕರನು ಹೇಳಿದ ಶಾಕುಂತಲದ ನಾಲ್ಕನೇ ಅಂಕ ಅ ವನ ಕಿವಿಯಲ್ಲಿ ಕುಣಿಯುತ್ತಿತ್ತು. ಸಾಕುಮಗಳ ವಿರಹದಿಂದ ಮರಗು ವ ಕಣ್ವ, ಕೋಟೆ ವಶವಾಗದೆಂದು ತಿಳಿದಾಗ ತನ್ನನ್ನೇ ಗುಂಡಿಕ್ಕಿ ಹೊ ಡೆಯಿರಿ; ದೇಹವಾದರೂ ಕೋಟೆಯಲ್ಲಿ ಪ್ರವೇಶಿಸಲಿ; ಎಂದ ಚಿಮ ಣಾಜಿ, ಅನುದಿನವೂ ದೇಶದ ಸ್ವಾತಂತ್ರ್ಯಕ್ಕಾಗಿ ಹುರಿದುಂಬಿಸುತ್ತಿದ್ದ ವೀರವಾಣಿ ಇವೆಲ್ಲ ವಿದ್ಯುದ್ದೀಪದ ಬಿರಡಿ ಒತ್ತಿದೊಡನೆ ಕೋಣೆಯಲ್ಲ

ಪ್ಪೂ ಪ್ರಕಾಶಮಯವಾಗುವಂತೆ ಕಾಳಿಯ ಹೃದಯದಲ್ಲಿ ಹುದುಗಿಕೊಂಡ ನೆನಪುಗಳೆಲ್ಲ ವಿರಹದ ಕಲ್ಪನೆಯ ಸ್ಪರ್ಶದಿಂದ ಒಂದರ ಹಿಂದೊಂದು ಹೊರಬೀಳಹತ್ತಿದವು. ಕೋಣೆಯ ವಸ್ತುಗಳೆಲ್ಲ ಆತನ ಪಾಲಿಗೆ ಸಚೇತನವಾಗಿದ್ದವು. ಅಲ್ಲಿಯ ಕಣಕಣಗಳೆಲ್ಲ ಸುಧಾಕರನ ಸುಸ್ವಭಾವವನ್ನು ಸಾರಿ ಹೇಳುತ್ತಿದ್ದವು. ಸುಧಾಕರನು ಮಾತಾಡತೊಡಗಿದನೆಂದರೆ ನೋಡದ ಕುದುರೆಯನ್ನೇರಿ, ಮಿಂಚಿನ ಚಾಬೂಕಿನಿಂದ ಹೊಡೆಯುತ್ತ ಆಕಾಶಮಂಡಲದಲ್ಲಿ ಕುಣಿಯಿಸಹಚ್ಚುವ ಮಳೆಗಾಲವೇ ಮೂರ್ತಿಮಂತವಾಗಿ ಅವತರಿಸಿ ಬಂದಂತೆ ಅನಿಸುತ್ತಿತ್ತು. ಕೊನೆಗೆ ತಡೆಯಲಾಗದೆ ಕರೆದ.

"ಏನು ಕಾಳಿ?"

"ನಾವಿಬ್ಬರೂ ಸಹೋದರರಾಗಬಾರದಿತ್ತೇ?"

"ಕಾಳೀ, ಇದೇನು ಹುಚ್ಚು ನಿನ್ನದು?"

"ಹಾಗಲ್ಲ. ನಾನು ತಮ್ಮನಾಗಿದ್ದರೆ......"

"ವರ್ಡ್ಡಾಡದ ಗಿರಣಿ ಮಾಲಕನಾಗುತ್ತಿದ್ದಿಲ್ಲ. ಬಿ. ಎ. ಆದೊಡನೆ ನೌಕರಿಗಾಗಿ ಅಲೆಯಬೇಕಾಗುತ್ತಿತ್ತು."

"ಅದೇ ನಿಜವಾಗಿ ಒಳಿತಿತ್ತು."

ಕಾಳಿಯಿಂದ ಮುಂದೆ ಮಾತಾಡಲು ಬರಲಿಲ್ಲ. ಕಪೋಲದ ಮೇಲೆ ಕಣ್ಣೀರು ಹರಿಯಹತ್ತಿತು. ಸುಧಾಕರನು ಆತನನ್ನು ಹತ್ತಿರಕ್ಕೆಳೆದು ಕಣ್ಣೀರು ಒರಸಿದ. ಮಗುವನ್ನು ಸಂತೈಸುವ ತಾಯಿಯಾಗಿದ್ದ ಸುಧಾಕರ. ಆತನ ಸ್ಪರ್ಶದಿಂದ ಕಾಳಿಯ ಆವೇಗ ಶಮನವಾಯಿತು. ಮಳೆಯಲ್ಲಿ ಒದ್ದೆಯಾದ ಪಕ್ಷಿ ಮೈಜಾಡಿಸಿ ಕುಣಿಯುವಂತೆ, ಆತನಲ್ಲಿ ಹೊಸಹುರುಪು ಕಂಡಿತು.

"ಸುಧಾಕರಾ, ಪ್ರೀತಿ ಯಾಕೆ ಹುಟ್ಟುತ್ತಿದೆ?"

"ಅದು ಹೃದಯದ ಧರ್ಮ"

"ನಾನು ನಿಮ್ಮ ತಮ್ಮನಾಗಿದ್ದರೆ ಇನ್ನೂ ಹೆಚ್ಚು ಪ್ರೀತಿಸುತ್ತಿದ್ದವಲ್ಲವೇ?"

"ರಕ್ತದ ಸಂಬಂಧವೆಂಬುದು ಕೇವಲ ಕಟ್ಟೆ ಮಾತ್ರ. ಯಾವಾಗಲೂ ನಲ್ಮೆಯ ನೀರು ಬೇಕು. ಇಲ್ಲವಾದರೆ ಒಣಗಿ ಹೋಗುತ್ತಿದೆ."

"ಸುಧಾಕರ, ನಿಮ್ಮ ಕಾರ್ಯದಲ್ಲಿ ನಾನೂ ಒಬ್ಬ ಚಿಕ್ಕತಮ್ಮನಂತೆ ನೆರವಾಗುತ್ತೇನೆ. ನಿಮ್ಮಷ್ಟು ಸಾಹಸ ಧೈರ್ಯ ನನ್ನಲ್ಲಿಲ್ಲ. ರೇಲಿನ ಇಂಜನು ಆಗದಿದ್ದರೂ ಅದರ ಹಿಂದಿನ ಡಬ್ಬಿಯಾದರೂ ಆಗುವೆ."

"ಕಾಳೀ, ಮೊದಲೊಮ್ಮೆ ಬಿ. ಎ. ಆಗು. ಆ ಮೇಲೇನು? ಕೆಲಸಕ್ಕೆ ಕೊರತೆಯೇ ಇಲ್ಲ. ಶಿಕ್ಷಣ-ರಾಜಕಾರಣ, ಸಮಾಜಸುಧಾರಣೆ, ಇನ್ನೂ ಎಷ್ಟೋ ಕಾರ್ಯಕ್ಷೇತ್ರಗಳು ನಿಮಗಾಗಿ ಕಾದಿವೆ. ಬೇಕಾದುದನ್ನು ಆರಿಸಿಕೊಳ್ಳುವಿಯಂತೆ. ಬೆಳೆಯೇನೋ ಬೇಕಾದ ಹಾಗಿದೆ. ಕುಯ್ಯುವವರೇ ಕಡಿಮೆ."

ಅಷ್ಟರಲ್ಲಿ ಮೋಟರಿನ ಸದ್ದು ಕೇಳಬಂದುದರಿಂದ ಅವರಿಬ್ಬರೂ ಎದ್ದರು. ವಿರಹದ ಕಟು ಅನುಭವ ಮತ್ತೊಮ್ಮೆ ಬಂದಿತು. ಕಾಳಿಗೆ ಯಾವ ವಿಚಾರ ಬಂದಿತೋ ಏನೋ, 'ನನ್ನಿಂದ ಒಂದು ಅಪರಾಧವಾಗಿದೆ'ಎಂದ.

"ಏನಾಯಿತಪ್ಪಾ ಅಂತಹದು ? ಎಲ್ಲಿಯಾದರೊಂದು ಫಂಡಿನ ವ್ಯವಸ್ಥಾಪಕನಾಗಿದ್ದೀಯಾ?" "ಅಣ್ಣನೊಡನೆ ಮುಚ್ಚುಮರೆಯೇಕೆ? ನನ್ನ ಮನಸ್ಸು......"

"ಅದೆಲ್ಲಿ ಹುಡುಗಿ?"

"ಕಳೆದ ನಾತಾಳಿಯಲ್ಲಿ ತಂದೆಯವರು ಮುಂಬೈಗೆ ಬಂದಿದ್ದರು. ಅವರ ಭೆಟ್ಟಿಗಾಗಿ ಹೋಗಿದ್ದೆ."

"ಆ ಮೇಲೆ?"

"ಅವರು ಸರದಾರಿ ಹೋಟೆಲಿನಲ್ಲಿ ಇಳಕೊಂಡಿದ್ದರು. ಅದಕ್ಕೆ ಹೊಂದಿದ ಕೋಣೆಯಲ್ಲಿಯೇ"

"ಹೇಗೋ? ಪೂರ್ವಕಾಲದಲ್ಲಿ ನಾಯಕ ನಾಯಿಕೆಯರ ಭೆಟ್ಟಿ ಉದ್ಯಾವನದಲ್ಲಾಗುತ್ತಿತ್ತು; ಈಗ ಹೋಟೆಲಿನಲ್ಲಿ! ಏನೋ ಕಾಲವೇ ಬದಲಾಯಿಸಿದೆ ಅಂತಾರಲ್ಲ, ಹಾಗೆ!"

"ಹೀಗೆ ಚೇಷ್ಟೆ ನಡಿಸಿದರೆ ನಾನೇನು ಹೇಳಲಿ?"

"ಚೇಷ್ಟೆ ಮಾಡದೆ ಇನ್ನೇನು ಮಾಡಲಿ ಮತ್ತೆ? ಸರದಾರ ಹೋಟೆಲಿನಲ್ಲಿ ಯಾವ ಹುಡುಗಿಯನ್ನು ಸಂಕಟದಿಂದ ಪಾರುಮಾಡಿದೆ? ಮಾಳಿಗೆಯ ಮೇಲಿಂದ ಬೀಳುವಾಗ ಹಿಡಿದೆಯೋ, ಅಥವಾ ಆವಳನ್ನು ಕಡಿಯಲು ಬಂದ ತಗಣಿಯನ್ನು ಕೊಂದೆಯೋ?"

"ಹೀಗೆ ಮಾಡಿದರೆ ನಾನು ಮುಂದೆ ಹೇಳೋದೇ ಇಲ್ಲ!"

"ಇಲ್ಲಪ್ಪ ಇಲ್ಲ. ಇನ್ನು ಹಾಗೆ ಮಾಡೋದಿಲ್ಲ. ಆದರೆ ಆವಳ ಹೆಸರಾದರೂ ಏನು?"

"ನನಗೇನು ಗೊತ್ತು?"

"ಅಂದರೆ? ಆಕೆಗೆ ತಾಯಿ ತಂದೆಗಳು ಹೆಸರಿಡೋ ಶಾಸ್ತ್ರನೇ ಮಾಡಿಲ್ಲೇನು? ಇದೆಲ್ಲಾ ಯಾವ ರಸ? ಶೃಂಗಾರರಸವೋ? ವಾತ್ಸಲ್ಯ ರಸವೋ?"

"ಹಾಗೆ ಚೇಷ್ಟೆಯ ಉಸಿರಿನಿಂದ ತೂರಿಹೋಗಲು ಪ್ರೇಮವೆಂದರೆ ಗಿಡದ ಮೇಲೆ ಬಿದ್ದ ನೀರಿನ ಹನಿಯೆಂದು ಭಾವಿಸಿದ್ದೀರಾ?"

"ನೀನು ಈ ರೀತಿ ನಾಟಕದ ನಾಯಕನಂತೆ ಮಾತನಾಡಬೇಡ. ತಿಳಿಯಾಗಿ ಹೇಳು."

'ಏನು ಹೇಳಲಿ? ನಾನು ಆವಳನ್ನು ಅಲ್ಲಿ ನೋಡಿದುದು ಎರಡೇ ದಿನ. ಆವಳ ಹೆಸರು ಒತ್ತಟ್ಟಿಗಿರಲಿ; ಇದ್ದ ಹೆಸರನ್ನು ಆವಳ ತಂದೆ

ಯೊಡನೆ ಕೇಳಿ ತಿಳಿದು ಕೊಳ್ಳಲಿಕ್ಕೂ ನಾಚಿಕೆ ಅಡ್ಡಬಂತು ನನಗೆ. ಇಲ್ಲಿ ಬಂದೊಡನೆ ಅವೆಲ್ಲ ಮರೆತು ಹೋಗಬಹುದೆಂದು ಭಾವಿಸಿದ್ದೆ. ಈವರೆ ಅವಳ ಮೇಲೆ ನನಗೇಕೋ ಮನಸ್ಸಾಗಿದೆ”.

‘‘ಅವಳ ಪತ್ರವೇನಾದರೂ ಬಂದಿತ್ತೇನಯ್ಯಾ!”

‘‘ಅವಳ ಮೋರೆ ಬೇಕಾದರೆ ನಾನು ಚಿತ್ರಿಸಿದ ಚಿತ್ರದಲ್ಲಿದೆ ನೋಡಿ. ಅದರಂತೆಯೇ ಇದ್ದಾಳೆ.”

‘‘ಸರಿ. ಆದರೆ ಬಿ. ಎ. ಆಗೋತನಕ ಲಗ್ನ ಆಗಬಾರದೆಂದು ಪ್ರತಿಜ್ಞೆ ಮಾಡಿದವರಲ್ಲಿ ನೀನೂ ಒಬ್ಬನಲ್ಲವೇ?”

‘‘ಅಹುದು. ನಾನು ಈಗಲೇ ಮದುವೆಯಾಗುತ್ತೇನೆಂದಲ್ಲ; ಮುಂದೆ ಆದರೆ ಮಾತ್ರ ಅವಳನ್ನೇ ಲಗ್ನವಾಗುವೆ.”

ಬಾಗಿಲದಲ್ಲಿಯೇ ಮೋಟರು ಬಂದು ನಿಂತುದರಿಂದ ಕಾಳಿಯ ಮಾತು ಅಷ್ಟಕ್ಕೇ ನಿಂತಿತು.

## ಪ್ರಕರಣ ೪.

ಕಾಳಿಯು ಎಷ್ಟೇ ಆಗ್ರಹ ಮಾಡಿದರೂ ಸುಧಾಕರನು ಸೆಕೆಂಡ ಕ್ಲಾಸಿನ ಟಿಕೇಟು ತೆಗೆದುಕೊಳ್ಳಲು ಒಪ್ಪಲಿಲ್ಲ. ಥರ್ಡ ಕ್ಲಾಸಿನಲ್ಲಿ ಕೂಡ್ರಲು ಸ್ಥಳವಿಲ್ಲದಂತೆ ಜನರು ತುಂಬಿದ್ದರಾದರೂ ಸುಧಾಕರನು ಹೇಗೋ ತನ್ನ ಸಾಮಾನನ್ನು ಒಂದು ಡಬ್ಬಿಯಲ್ಲಿ ತುರುಕಿ ಬಾಗಿಲ ಬಳಿ ನಿಂತುಕೊಂಡ. ಸುತ್ತಲೂ ನಿರೀಕ್ಷಿಸಿದಾಗ ಸಾಮಾನುಗಳನ್ನಿಡಲು ಇದ್ದ ಹಲಿಗೆಯ ಮೇಲೆಲ್ಲ ಜನರು ಸುರುಳಿಯಾಗಿ ಬಿದ್ದಿದ್ದರು. ಅಂದಮೇಲೆ ಕೆಳಗಿದ್ದ ಜನರ ಬಗ್ಗೆ ಕೇಳಬೇಕೇ? ಶೌಚಕೂಪದ ಮುಂದಿನ ಸ್ಥಳವು

ಸಹ ಬರಿದಾಗಿರಲಿಲ್ಲ. ನಡುವೆ ಒಬ್ಬ ಪ್ರೋಕ್ತ ಗೃಹಸ್ಥ ಪ್ರಾಣಾಯಾಮ ಮಾಡುವವರಂತೆ ಕುಳಿತಿದ್ದ. ಕಲಕತ್ತೆಯಲ್ಲಿ ಕತ್ತಲೆ ಕೋಣೆಯ ಘಟನೆ ನಡೆದಿತ್ತೋ ಇಲ್ಲವೋ? ಆದರೆ ಉಗಿಬಂಡಿಯ ಥರ್ಡಕ್ಲಾಸಿನಲ್ಲಿ ಮಾತ್ರ ದಿನಾಲು ಆಗುತ್ತಿರುತ್ತದೆ, ಎಂಬ ವಿಚಾರ ಮಸಮಸಕಾಗಿ ಸುಧಾಕರನ ತಲೆಯಲ್ಲಿ ಬಂದಿತು. ಆ ಡಬ್ಬಿಯಲ್ಲಿ ಅಂಗಭೇದವಿಲ್ಲದೆ ಜನ ತುಂಬಿದ್ದಿತು. ಮೇಲಾಗಿ ನಾಯಿಯೊಂದು 'ಕುಂಯಿ ಕುಂಯಿ' ಎಂದು ತನ್ನ ಅಸ್ತಿತ್ವವನ್ನು ಸಾರುತ್ತಿತ್ತು. ಶಾಲು ಹೊತ್ತ ಬ್ರಾಹ್ಮಣ, ಮುಂಡಾಸದ ಮರಾಠಿಗ, ಗಡ್ಡದಿಂದಲೇ ಗುರುತಿಸಬಲ್ಲ ಮುಸಲ್ಮಾನ ಇವರೆಲ್ಲರನ್ನು ಒಂದೆಡೆಯಲ್ಲಿ ನೋಡಿ ರಾಷ್ಟ್ರೀಯ ಸಭೆಯ ಕಲ್ಪನೆ ಬಂದಿತು. ಅತ್ತ ಇನ್ನೊಬ್ಬ ಹೆಂಗುಸನ್ನು ನೋಡಿದ. ಹೆಂಗುಸೆಲ್ಲಿ? ಹುಡುಗಿಯೇ ಇದ್ದಳವಳು. ೧೮–೨೦ ವರ್ಷ ಪೂರ್ಣ ಆಗಿತ್ತೋ ಇಲ್ಲೊ? ಶ್ರೀಮಂತರ ಹುಡುಗಿಯಾಗಿದ್ದರೆ ಪುಸ್ತಕ ಹಿಡಿದು ತಿರುಗುವ ಕಾಲ. ಕೊರಳಲ್ಲಿದ್ದ ಮಂಗಲಸೂತ್ರ ವಿವಾಹಿತಳೆಂಬುದಕ್ಕೆ ಸಾಕ್ಷಿ ಹೇಳುತ್ತಿತ್ತು. ಆಕೆ ಕಾಯಿಲೆಯಿಂದ ಸೊರಗಿದ್ದಳು. ಪ್ರವಾಸದಿಂದ ಉಸ್ಸೆಂದು ಉಸುಗರೆಯುತ್ತಿದ್ದಳು. ಹತ್ತಿರದಲ್ಲಿಯೇ ಕಲಿತ ಹುಡುಗನೊಬ್ಬನಿದ್ದ. ಅತ್ತ ಆಕೆಯ ಸಂಬಂಧಿಕನಿರಬೇಕು; ಆಕೆ ಗ್ರಾಮ್ಯಭಾಷೆಯಿಂದ ಮಾತಾಡಿದರೆ ಹುಡುಗ ಶುದ್ಧ ಮರಾಠಿಯಲ್ಲೇ ಉತ್ತರ ಕೊಡುತ್ತಿದ್ದ. ತನ್ನ ಭಾಷೆ ಕೀಳು ಎಂಬ ಕಲ್ಪನೆ ಆತನಿಗಿರಬೇಕು. ಅವರ ಮಾತಿನ ಮೇಲಿಂದ ಅವರೆಲ್ಲ ತನ್ನ ಊರಿನ ಕಡೆಯವರೇ ಎಂದು ಸುಧಾಕರ ತಿಳಿದುಕೊಂಡ. ಮತ್ತೊಂದು ಬೆಂಚಿನ ಮೇಲೆ ಒಬ್ಬ ದಪ್ಪ ಆಸಾಮಿ ಕಾಲುಚಾಚಿ ಮಲಗಿದ್ದ. ಪ್ರತಿಯೊಬ್ಬನೂ ತನ್ನ ಸುಖ ಸೌಕರ್ಯಗಳನ್ನಷ್ಟೇ ನೋಡುತ್ತಿದ್ದನೇ ಹೊರತು ಆ ಬಡವೆಯ ಕಡೆ ಯಾರೂ ಗಮನಿಸುತ್ತಿರಲಿಲ್ಲ.

"ಬಲವಿದ್ದವರು ಮಾತ್ರ ಬದುಕಬೇಕೇ? ಇದೇ ಜಗತ್ತಿನ ನೀತಿಯೇ? Survival of the fittest' ಹಾಗಾದರೆ ಆ ಯೋಗ್ಯನಾರು? ಮನುಷ್ಯನ ಯೋಗ್ಯತೆಯನ್ನು ಅಳೆಯುವ ಸಾಧನವಾವುದು? ಕೇವಲ ಶಕ್ತಿವಂತನಿಗೇ ಆ ಹಕ್ಕು ಇರುವದಾದರೆ ನಾಡೆಲ್ಲ ಕೆಚ್ಚೆದೆಯ ಕ

ಲಿಯ ಪಾಲಾಗಬೇಕು; ಬುದ್ಧಿವಂತನಲ್ಲಿಯೇ ಆ ಶಕ್ತಿ ಇರುವದಾದರೆ ದೇಹದಿಂದ ಬಡಕನಾದರೂ ಬುದ್ಧಿಯಿಂದ ಬೃಹಸ್ಪತಿಯಾದವನಿಗೆ ಸಲ್ಲಬೇಕು. ಪಶುಸೃಷ್ಟಿಯಲ್ಲಿ ಇಲಿಯು ಬೆಕ್ಕಿನ ಭಕ್ಷ್ಯವಾದರೆ ಮನುಷ್ಯ ಸೃಷ್ಟಿಯಲ್ಲಿ ಬಡವ ಬಲ್ಲಿದನ ಭಕ್ಷ್ಯ ಬಲಹೀನನು ಬಲವಂತನ ಹಾಸ್ಯಕ್ಕೆ ತುತ್ತು. ಚದುರಂಗದಲ್ಲಿ ಇಬ್ಬರ ಆಟವನ್ನೂ ತಾನೊಬ್ಬನೇ ಆಡಿ ವೇಳೆಗಳೆಯುವ ಮನುಷ್ಯನಂತೆ ಪರಮೇಶ್ವರನು ಜಗತ್ತಿನಲ್ಲಿ ಒಬ್ಬನನ್ನು ಇನ್ನೊಬ್ಬನ ವಿರುದ್ಧವಾಗಿ ನಿಲ್ಲಿಸಿ-ಒಬ್ಬನಿಂದ ಒಬ್ಬನನ್ನು ಕೊಲ್ಲಿಸಿ ತನ್ನ ವೇಳೆಯನ್ನು ಕಳೆಯುತ್ತಿರಬಹುದೇ? ಆದರೆ ಮನುಷ್ಯನೆಂದರೆ ಚದುರಂಗದ ಕಟ್ಟಿಗೆಯ ಕಾಯಿಯಲ್ಲ. ದೇವಾ, ನಿನ್ನ ವೇಳೆಯ ಜೊತೆಗೆ ನಮ್ಮ ಹರಣವೂ ಹಾಳಾಗಬೇಕೇ?'' ಎಂಬ ಯೋಚನೆ ಬರಹತ್ತಿತು.

ವಾದ್ಯ ಸೂಕ್ಷ್ಮವಾದಷ್ಟು ಸ್ವರವು ಇಂಪಾಗಿಯೂ, ಕೋಮಲವಾಗಿಯೂ ಇರುತ್ತದೆ. ಸುಧಾಕರನು ದೀರ್ಘವಿಚಾರಿಯಿದ್ದರಂತೆಯೇ ಕೋಮಲಾಂತಃಕರಣಿಯೂ ಆಗಿದ್ದ 'ಊರು ಸುಟ್ಟರೂ ಹನುಮಪ್ಪ ಹೊರಗೆ' ಎಂಬ ಜಾತಿಗೆ ಸೇರಿದವನಲ್ಲ. 'ವ್ಯಕ್ತಿಯೆಂದರೆ ಸಮಾಜ ವಸ್ತ್ರದಲ್ಲಿಯ ಎಳೆ' ಎಂದು ಭಾವಿಸುತ್ತಿದ್ದ. 'ಎಳೆ ಕೆಟ್ಟರೆ ಅದರ ಪರಿಣಾಮ ವಸ್ತ್ರದ ಮೇಲೆ ಆಗುತ್ತಿದೆ.' ಎಲ್ಲರ ನೋವೂ ತನ್ನ ನೋವು ಎಂದು ತಿಳಿದಿದ್ದ. ಬಾಲ್ಯಕಾಲದಲ್ಲಿಯೇ ತಾಯಿಯ ಉಪದೇಶ ಆತನಲ್ಲಿ ಚನ್ನಾಗಿ ನಟ್ಟಿತ್ತು. ಒಮ್ಮೆ ತಾಯಿಯೊಡನೆ'' ಅವ್ವಾ, ಕುರುಡರಿಗೇಕೆ ಭಿಕ್ಷೆ ಹಾಕಬೇಕು? ನಾವೇನು ಸಾಲ ಕೊಡುವದಿದೆಯೇ?" ಎಂದು ಕೇಳಿದ್ದ. ಅದಕ್ಕೆ ತಾಯಿಯು ''ಹಿಂದಿನ ಜನ್ಮದಲ್ಲಿ ಅವನು ನಮಗೆ ತುಂಬಾ ಕೊಟ್ಟದ್ದಿದೆ. ಆದರಲ್ಲಿ ಕೆಲವಂಶ ತೆಗೆದುಕೊಂಡು ಹೋಗಲು ಬಂದಿದ್ದಾನೆ' ಎಂದಿದ್ದಳು.

ಇದೇ ರೀತಿಯದು ಇನ್ನೊಂದು ಪ್ರಸಂಗ. ಪ್ರತಿ ಸೋಮವಾರದ ದಿನ ಶಿವಲೀಲಾಮೃತದ ಹನ್ನೊಂದನೆಯ ಅಧ್ಯಾಯ ತಾಯಿಗಾಗಿ ಓದಿ ಹೇಳುತ್ತಿದ್ದ. ಅದರಲ್ಲಿಯ ''ಕುಕ್ಕುಟ-ಮರ್ಕಟ''ವೆಂಬ ಕಥೆಯಿಂದ

ಚಕಿತನಾಗಿ "ಅಮ್ಮಾ, ಇದೆಲ್ಲ ನಿಜವೇನಮ್ಮಾ" ಎಂದು ಕೇಳುತ್ತಿದ್ದ. "ಹೌದು ಮಗೂ, ಬೆಳಿಗ್ಗೆ ನಸುಕಿನಲ್ಲಿ ಏಳದವರು ಕೋಳಿಯಾಗುತ್ತಾರೆ. ಕೆಟ್ಟ ಮೋರೆಯಿಂದ ಅಣಕಿಸುವವರು ಮರ್ಕಟವಾಗಿ ಹುಟ್ಟುತ್ತಾರೆ. ಹಿಂದೆ ದುಷ್ಟತನ ಮಾಡಿದವರೇ ಬೆಕ್ಕಿನ ಜನ್ಮ ತಾಳುತ್ತಾರೆ."

ಜೇಡಿಯಿಂದ ಮೂರ್ತಿಕಾರನು ತರತರದ ಮೂರ್ತಿಯನ್ನು ರಚಿಸುವಂತೆ ಬಾಲ ಸುಧಾಕರನು ತಾಯಿಯ ಮಾತಿನ ಆಧಾರದಮೇಲೆ ಅನೇಕ ಕಲ್ಪನೆಗಳನ್ನು ಕಟ್ಟಿಕೊಂಡಿದ್ದನು. 'ಗಡ್ಡ ಬೆಳಿಸಿದರೆ ಸಿಂಹನ ಜನ್ಮ ಬರುತ್ತಿದೆ; ಸಾಲೆಯಲ್ಲಿ ಪಾಸಾಗದಿದ್ದರೆ ಗಿಳಿಯಾಗುತ್ತಾನೆ. ಮೈಮೇಲೆ ಮಸಿ ಚಲ್ಲಿದರೆ ಕಾಗೆಯಾಗಬೇಕಾಗುತ್ತಿದೆ.' ಇವೇ ಮುಂತಾದವು ಅವನಲ್ಲಿ ಬೆಳೆದು ಬಂದ ಕಲ್ಪನೆಗಳಾಗಿದ್ದವು.

ಬಾಲ್ಯದ ನಿದ್ದೆಯೊಡನೆ ಈ ಸ್ವಪ್ನಸೃಷ್ಟಿಯ ಸಮಾಪ್ತಿಯಾಯಿತು. ಆದರೆ ಬಾಲ್ಯಸಂಸ್ಕಾರದ ಮೂಲಕ ಆತನ ಹೃದಯ ಕಾವ್ಯಮಯವಾಗಿ; ಕರುಣಾಮಯವಾಗಿ, ಭಾವನಾ ಪ್ರಧಾನವಾಗಿ ರೂಪುಗೊಂಡಿತು.

ಆತ ಬಾಗಿಲ ಬಳಿಯಲ್ಲಿ ಇನ್ನೂ ಎಷ್ಟು ಹೊತ್ತಿನ ತನಕ ಜೀವನ ಸಮಸ್ಯೆಯನ್ನು ಬಿಡಿಸುವದರಲ್ಲಿ ತೊಡಗುತ್ತಿದ್ದನೋ ಯಾರು ಬಲ್ಲ? ಆದರೆ ಬೆಂಚಿನ ಮೇಲೆ ಎಲ್ಲರ ಸೀಟನ್ನು ತನ್ನ ಗಾತ್ರದ ಮೂಲಕ ಆಕ್ರಮಿಸಿದ ಪರಾಕ್ರಮಿಯು "ಏನು ಸ್ವಾಮಿ? ತಮ್ಮೂರಾವುದು?" ಎಂದು ಕೇಳಿದನು.

"ಸಾಂಗಲಿ"

"ಖಾದಿ ವ್ಯಾಪಾರಿಗಳಂತ ಕಾಣುತ್ತಿದೆ."

"ಅಲ್ಲ; ಅಲ್ಲಿಯ ಕಾಲೇಜಿನಲ್ಲಿ ಆಸಿಸ್ಟಂಟ ಪ್ರೊಫೆಸರನಿದ್ದೇನೆ"

'ಪ್ರೊಫೆಸರ' ಶಬ್ದ ಕಿವಿಗೆ ಬಿದ್ದೊಡನೆ ಆ ದೇವತೆ ಜಾಗ್ರತವಾಯಿತು. "ಹೀಗೆ ಬನ್ನಿ ಸ್ವಾಮೀ, ಇಲ್ಲಿ ಕುಳಿತುಕೊಳ್ಳಿ. ಪರವಾ ಇಲ್ಲ. ಬೇಕಾದಷ್ಟು ಸ್ಥಳವಿದೆ. ಹೀಗೆಲ್ಲ ದಾಕ್ಷಿಣ್ಯ ಮಾಡಿಕೊಂಡರೆ ಪ್ರಯೋಜನ

ಪಿಲ್ಲ ಪ್ರವಾಸದೊಳಗೆ. ಹಃ ಹಃ ಹಃ! ಅತಿಥಿಯು ಮನೆಗೆ ಬಂದರೆ ಮೊದಲು ಆಸನ ಕೊಡಬೇಕು. ಸದ್ಯ ಈ ಡಬ್ಬೆಯ ಯಜಮಾನರು ನಾವು. ಅಂದರೆ ನಿಮಗಿಂತ ಮೊದಲು ಬಂದವರು. ಅದಕ್ಕಾಗಿ ನಿಮಗೆ ಸ್ಥಳ ಕೊಡುವದು ನಮ್ಮ ಕರ್ತವ್ಯ." ಎಂದು ಇನ್ನೊಬ್ಬ ಗೆಳೆಯನನ್ನುದ್ದೇಶಿಸಿ "ಏನು ಪುಂಡಂಭಟ್ಟರೇ, ಇವರು ಸಾಂಗಲಿ ಕಾಲೇಜಿನ ಆಸಿಸ್ಟಂಟ ಪ್ರೊಫೆಸರರಿದ್ದಾರೆ ತಿಳಿಯಿತೆ?"

ಆ ವ್ಯಕ್ತಿಯು ಮಲಗಿದ್ದಲ್ಲಿಂದಲೇ ಗೋಣೆತ್ತಿ ನೋಡಿ ಕುಳಿತುಕೊಂಡಿತು. 'ಕಾಯಿಲೆಯಿಂದ ಬಳಲುವ ಹೆಂಗಸಿಗೆ ಕೂಡ್ರಲು ಸ್ಥಳವಿಲ್ಲವೆಂಬದನ್ನು ನೋಡಿಯೂ ಈ ಭಟ್ಟರು ಹಾಯಾಗಿ ಮಲಗಿದ್ದನ್ನು ನೋಡಿ ಸುಧಾಕರನಿಗೆ ವ್ಯಥೆಯಾಯಿತು. ಆತ ಹೆಂಗಸಿನ ಜೊತೆಗಿದ್ದ ಹುಡುಗನಿಗೆ ಆಕೆಯನ್ನು ಬೆಂಚಿನ ಮೇಲೆ ಮಲಗಿಸಲು ಹೇಳಿದ. ಆಕೆ ಕೃತಜ್ಞತೆಯಿಂದ ಎದ್ದು ಅತಿ ಕಷ್ಟದಿಂದ ದಾರಿ ಮಾಡಿಕೊಂಡು ಬೆಂಚಿನ ಮೇಲೆ ಮಲಗಿದಳು.

ಇದನ್ನೆಲ್ಲ ನೋಡಿ ದಪ್ಪನ್ನ ಆಸಾಮಿ ಸುಧಾಕರನನ್ನು ಮಾತಿನಲ್ಲಿ ಮೇಲೆ ಕೆಳಗೆ ಮಾಡಬೇಕೆಂದು ಹತ್ತಿರ ಕರೆದ. ಪುಂಡಂಭಟ್ಟರೂ ಅನುಮೋದಿಸಿದರು. ಸುಧಾಕರ ಬಂದು ಕೂತ. ಆತನ ವಂಶ ವೃಕ್ಷವನ್ನೆಲ್ಲ ವಿಚಾರಿಸಿದ ಮೇಲೆ ಭಟ್ಟರು "ನೀವು ಇನ್ನೂ ತನಕ ಮದುವೆಯನ್ನೇಕೆ ಮಾಡಿಕೊಳ್ಳಲಿಲ್ಲ?" ಎಂದು ಕೇಳಿದರು.

"ಮಾಡಿಕೊಳ್ಳಬಾರದು ಎಂದು ಕಂಡಿತು; ಮಾಡಿಕೊಳ್ಳಲಿಲ್ಲ!"

"ಮಾಡಿಕೊಳ್ಳಲಿಲ್ಲ ಅಂದರೆ ಏನು? ನೋಡಿ ನಮ್ಮ ಶಾಸ್ತ್ರಿಗಳು! ೮೮ನೇ ವರ್ಷಕ್ಕೆ ಇವರ ಪತ್ನಿ ಕೈಲಾಸವಾಸಿಯಾದಳು. ಬಹು ಭಾಗ್ಯವಂತೆ ಅವಳು! ಇಲ್ಲವಾದರೆ ಕುಂಕುಮಾ ಇಟ್ಟು ಕೈಲಾಸ ಕಾಣೋ ಭಾಗ್ಯ ಎಲ್ಲರಿಗೂ ಸಿಗೋದಿಲ್ಲ. ಅದಕ್ಕೆ ಪೂರ್ವಪುಣ್ಯಬೇಕು. ಇರಲಿ; ಅವಳ ಹದಿಮೂರನೇ ದಿನಕ್ಕೇನೇ ಇವರು ಮತ್ತೆ ಚತುರ್ಭುಜಗಳಾಗಿಬಿಟ್ಟೆ

ರು. ಆದರೆ ನೀವಿನ್ನೂ ಮೊದಲನೇ ಲಗ್ನ ಮಾಡಿಕೊಳ್ಳಲಿಲ್ಲ ಅಂದರೆ ಹೇಗೆ?"

ಸುಧಾಕರನು ಇನ್ನೂ ತನಕ ಆತನನ್ನು ಸರಿಯಾಗಿ ನೋಡಿರಲಿಲ್ಲ. 'ಜಗತ್ತಿನಲ್ಲಿ ಅಸ್ಪೃಶ್ಯರೆಂದೆನಿಸಿಕೊಳ್ಳಲು ಇಂಥವರೇ ಯೋಗ್ಯರೆಂದು ಅನಿಸಿತು. ಭಟ್ಟರೇ ಮುಂದುವರಿಸಿದರು

"ನೋಡಿ ಸ್ವಾಮಿ, ಈಗಿನ ಕಾಲದಲ್ಲಿ ಎಂಥೆಂಥ ಮಂದಿ ಇದ್ದಾರೆಂತ ಸ್ವಲ್ಪ. ಮೊನ್ನೆ ಸದ್ಯದ ಮಾತು. ನಮ್ಮ ಹಳ್ಳಿಯದೊಂದು ಹುಡುಗಿ-೧೬ ವರ್ಷ-ಬಾಲವಿಧವೆ-ಮುಂಬೈಗೆ ಕಲಿಯೋದಕ್ಕಿಂತ ಹೋದವಳು ಸೀರೆ ಉಡಿಕೆ ಮಾಡಿಕೊಂಡು ಗಳ್ಸಲಿಕ್ಕೆ ಹತ್ಯಾಳೆ."

"ಅದರಲ್ಲೇನು ದೋಷ? ಗಂಡಸರಿಗೆ ೪೮ನೇ ವರ್ಷಕ್ಕೆ ಪುನರ್ವಿವಾಹ ಮಾಡಿಕೊಳ್ಳಲಿಕ್ಕೆ ಹಕ್ಕು ಇದ್ದಮೇಲೆ ಆ ಹುಡುಗಿಗೆ ಮಾತ್ರ ಇರ......."

"ಧನ್ಯರಪ್ಪಾ ಧನ್ಯರು! ಶಾಸ್ತ್ರಿಗಳೇ ಸುಮ್ಮನೇ ಬಂದದ್ದಲ್ಲ ಈ ದುಷ್ಕಾಳ! ಪಾಪದ ಹೊರೆ ಹೊರಲಾರದೆ ಕೊರಗಿದ್ದಾಳೆ ಭೂದೇವಿ! ಬ್ರಾಹ್ಮಣ ಅಂತ ಇಲ್ಲ; ಶೂದ್ರ ಅಂತ ಇಲ್ಲ".

ಸುಧಾಕರನು ಮೋರೆಯನ್ನು ಕಿಟಕಿಯ ಹೊರಹಾಕಿ ನೋಡಹತ್ತಿದ. ಬೇಗನೇ ನಸುಕು ಹರಿಯುವದರಲ್ಲಿತ್ತು. ಹೊಸದಿನದ ಹೊಂಬೆಳಕಿನ ತಂಪುಗಾಳಿಯು ಜನತೆಯಲ್ಲಿ ಹೊಸಹಂಬಲದಂತೆ ಹುರುಪನ್ನುಂಟುಮಾಡುತ್ತ ಬೀಸುತ್ತಿತ್ತು. ಪ್ರತಿದಿನವೂ ಬಂಡಿಯ ಜೊತೆಗೆ ನೂರಾರು ಜನರನ್ನು ನಿರೀಕ್ಷಿಸುವ ಅಲ್ಲಿಯ ವೃಕ್ಷಗಳು ಬಂಡಿಯ ಕಿಟಕಿಯ ಕಡೆಗೆ ಹಣಿಹಣಿಕಿ ನೋಡುತ್ತಿದ್ದವು. ಆದರೆ ಅವನ ಮನಸ್ಸು ಬಹಳ ಹೊತ್ತಿನ ತನಕ ಆ ದೃಶ್ಯದಲ್ಲಿ ರಮಿಸಲಿಲ್ಲ. 'ಪಾಪದ ಹೊರೆ'ಎಂಬ ಪುಂಡಂಭಟ್ಟರ ಶಬ್ದವು ತಡೆಯಿಲ್ಲದೆ ಅವನ ತಲೆಯಲ್ಲಿ ತಾಂಡವವಾಡುತ್ತಿತ್ತು; ಪಾಪದ ಹೊರೆಯು ಪೃಥ್ವಿಗೆ ಉಂಟಾದುದೇನೋ ನಿಜ. ಇಲ್ಲವಾ

ದರೆ ಜಗತ್ತಿನ ಜನತೆ ಈ ರೀತಿ ಸಂಕಟದಲ್ಲಿ ಸಿಲುಕಿ ಗೋಳಾಡುತ್ತಿರಲಿಲ್ಲ. ಆದರೆ ಯಾವುದಕ್ಕೆ ಪಾಪವೆನ್ನಬೇಕೋ ತಿಳಿಯದಾಗಿದೆ. ಅದನ್ನು ನಿಶ್ಚೈಸುವವದರಲ್ಲಿ ಒಬ್ಬನ ಮೋರೆ ಪೂರ್ವಕ್ಕಾದರೆ ಇನ್ನೊಬ್ಬನದು ಪಶ್ಚಿಮಕ್ಕೆ. ಈ ಪುಂಡಂಭಟ್ಟರಿಗೆ ಐವತ್ತರ ಮನೆ ಮುಟ್ಟಿದ ವಿಧುರ ಶಾಸ್ತ್ರಿಗಳು ಮದುವೆಯಾದುದರಲ್ಲಿ ಪಾಪ ಕಾಣಿಸದು. ಆದರೆ ಅದೇ ಅವರಿಗೆ ಹದಿನಾರು ವರುಷದ ಬಾಲವಿಧವೆಯ ಹಣೆಯಲ್ಲಿಯ ಕುಂಕುಮವನ್ನು ಕಂಡರೆ 'ಪಾಪ'ವೆಂದು ಕೋಪಗೊಳ್ಳುತ್ತಾರೆ.

ಇತ್ತ ಆ ಮರಾಠಾ ಹೆಂಗಸು ಮಲಗಿದ್ದಳು. ಅವಳು ಯಾರಮನೆಯಲ್ಲಾದರೂ ಮುಸುರೆ ತಿಕ್ಕುವ ಕೆಲಸ ಮಾಡುತ್ತಿರಬಹುದು. ಅವಳ ಗಂಡ ಇನ್ನಾರ ಹೊಲದಲ್ಲಿಯೋ ಬೆವರಿಳಿಸುತ್ತಿರಬಹುದು. ಇವರ ಶ್ರಮದ ಬಲದಿಂದ ವಿಶ್ರಮಿಸುವ ಶ್ರೀಮಂತರು ಇದೇ ಹೊತ್ತಿಗೆ ಸೆಕೆಂಡ ಕ್ಲಾಸಿನಲ್ಲಿ ಹಾಯಾಗಿ ಕುಳಿತಿರಬಹುದು; ಆದರೆ ಈ ಹೆಂಗಸಿಗೆ ಥರ್ಡ ಕ್ಲಾಸಿನಲ್ಲಿ ಸಹ ಸರಿಯಾಗಿ ಸ್ಥಳ ಸಿಗಬಾರದೆಂದರೆ.......?

ಬಡಬಗ್ಗರಿಗೆ ಶಿಕ್ಷಣ ಸಿಗುವಂತಿಲ್ಲ. ಅವರು ಶ್ರೀಮಂತರಾಗುವಂತಿಲ್ಲ. ಇವೆಲ್ಲವುಗಳಲ್ಲಿ ಪುಂಡಂಭಟ್ಟರಿಗೆ ಪಾಪದ ಲವಲೇಶವೂ ಕಾಣಿಸದು. ಆದರೆ ಒಬ್ಬ ಬಾಲವಿಧವೆಯ ಮದುವೆಯಲ್ಲಿ ಮಾತ್ರ 'ಪಾಪ'ವು ವಿಪರೀತವಾಗಿ ತುಂಬಿಕೊಂಡಂತೆ ಕಾಣುತ್ತಿದೆ. ಈ ಮನಸ್ಸಿನ ಸಂಕುಚಿತತನವನ್ನು ನಿರ್ಮಿಸಿದವರಾರು? ಇವೆಲ್ಲ ನಮ್ಮ ಕೃತ್ರಿಮ ಸಮಾಜ ರಚನೆಯ ಕೈವಾಡವಲ್ಲವೇ? ಬಡವ ಬಲ್ಲಿದ! ಶೂದ್ರ ಬ್ರಾಹ್ಮಣ! ಸ್ತ್ರೀ ಪುರುಷ; ಎಲ್ಲಿ ನೋಡಿದಲ್ಲಿ ಒಬ್ಬನು ಮರಮರನೆ ಮರಗುತ್ತಿರಬೇಕು; ಇನ್ನೊಬ್ಬ ಆತನ ರುಧಿರದಿಂದ ತನ್ನ ಪಿಪಾಸೆಯನ್ನಡಗಿಸಿ ನಲಿಯಬೇಕು! ಶಿಕ್ಷಣವಿಲ್ಲ; ದುಡಿಯುವ ಯೋಗ್ಯತೆಯಿಲ್ಲ; ಅಲ್ಲದೆ ಸ್ವಾತಂತ್ರ್ಯವಿಲ್ಲ. ಇಂಥ ಸ್ಥಿತಿಯಲ್ಲಿ ಇವರೆಲ್ಲರೂ ಗುಲಾಮರಂತೆ ಬಂಧನದಲ್ಲಿ ಇರಬೇಕು. ಹೀಗೆ ಎಲ್ಲೆಡೆಯಲ್ಲಿಯೂ ವಿಷಮತೆಯ ವಿಷ ಬೀಜ ಬಿತ್ತಿದ ಸಮಾಜ ವ್ಯವಸ್ಥೆ ಸಮೂಲವಾಗಿ ನಾಶವಾಗಬೇಕು. ಹಾಗಾಗಬೇಕಾದರೆ ಅದಕ್ಕೆ ಒಂದೇ ಒಂದು ಉಪಾಯ–ಸಾರ್ವತ್ರಿಕ ಯೋಗ್ಯ ಶಿಕ್ಷಣ.

ಹೊಲೆಯನ ಮನೆಯ ಬಾಗಿಲಿಗೂ ಈ ಜ್ಞಾನಗಂಗೆ ಹರಿಯುವಂತಾಗಬೇಕು. ಒಲೆಯ ಸೆಕೆಯಿಂದ ಹೊತ್ತಿಹೋಗುವ ಹೆಂಗಸರ ವರೆಗೂ ಆವರ ಪ್ರವಾಹ ಮುಟ್ಟಬೇಕು".

ಉಗಿಬಂಡಿಯ ವೇಗಕ್ಕೂ ಮಿಕ್ಕಿ ಸುಧಾಕರನ ವಿಚಾರಪ್ರವಾಹ ಧಾವಿಸುತ್ತಿತ್ತು. ಆದರೆ ಅಷ್ಟರಲ್ಲಿ ಪುಂಡಂಭಟ್ಟರು 'ಏ ಪ್ರೊಫೆಸರ ಸಾಹೇಬರೇ, ತಾವು ಬಿ. ಎ. ಆಗಿದ್ದೀರೆಂತ ಕಾಣುತ್ತಿದೆ. ಅಲ್ಲವೇ?" ಎಂದರು.

"ಉಹುಂ. ನಾನು ಎಂ ಎ. ಆಗಿದೇನೆ."

"ಹೀಗೋ, ಎಂ. ಏ.! ಇದೆಲ್ಲಿಯ ಪರೀಕ್ಷೆ ಸ್ವಾಮಿ? ಎಂ. ಎ. ಅಂದರೆ ಬಿ. ಎ. ಪರೀಕ್ಷೆಯ ತಂಗಿ ಅಂತ ಕಾಣುತ್ತಿದೆ. ಅಲ್ಲವೇ?

"ಭಟ್ಟರೇ, ನಿಮ್ಮ ವ್ಯವಹಾರ ನೋಡಿ ನಗು ಬರುತ್ತಿದೆ. ಎಂ. ಎ. ಅಂದರೆ ಬಿ. ಎ. ಪರೀಕ್ಷೆಯ ತಂಗಿಯಲ್ಲ; ಅಕ್ಕ."

"ತಾವು ಯಶ್ಚಿಸಿ, ಅಥವಾ ಪಿಯುಚ್ಚಡಿ ಏನಾದರೂ ಆಗಿದ್ದೀರಾ? ನನ್ನ ಒಬ್ಬ ತಮ್ಮ ಮೆಟ್ರಿಕ್ಯ ಪಾಸಾಗಿ ಮುಂಬೈಯಲ್ಲಿ ಮಾಸ್ತರನಿದ್ದ. ಆದರೆ ಅವನಿಗೆ ಏನು ಮಾಡಿದರೂ ಯಶ್ಚಿಸಿ ಸಾಧ್ಯವಾಗದೆ ಆ ನೌಕರಿ ಬಿಟ್ಟು ಕಟುಕರವನ ಕೈಯಲ್ಲಿ ಕಾರಕೂನಿಕೆ ಮಾಡುತ್ತಾನೆ. ನಾನೆಂದರೆ ಅವನಿಗೆ ಬಹಳ ಭಕ್ತಿ. ಪ್ರತಿತಿಂಗಳೂ ಐದು ರೂಪಾಯಿ ಮನಿಯಾರ್ಡರ ಮಾಡ್ತಾನೆ''.

"ಅಂತಹ ಹಣವನ್ನು ನೀವು ಸ್ವೀಕರಿಸುತ್ತೀರಾ?"

"ಅಂದರೆ! ಅವ ನನ್ನ ಒಡ ಹುಟ್ಟಿದವ ಇದ್ದಾನೆ".

"ಇರಬಹುದು. ಕಟುಕರ ಅಂಗಡಿಯಲ್ಲಿ ದನಾ ಕಡಿಯುತ್ತಾರಲ್ಲವೇ?"

"ಕಟುಕರ ಅಂಗಡಿಯಲ್ಲಿ ದನ ಕಡೀತಾರಂತ. ಅಲ್ಲಿ ನೌಕರೀ ಮಾಡಬಾರದೆಂದು ಎಲ್ಲಿಯೂ ಹೇಳಿಲ್ಲವಲ್ಲ? ಇವರ ತಮ್ಮನ ವರ್ತನೆ

ಯು ತುಂಬಾ ಶಾಸ್ತ್ರಶುದ್ಧವಾಗಿರುತ್ತದೆ. ಕಟುಕರಿಂದಲೇ ದನ ಸಾಯುತ್ತಿದೆಯೆಂದು ನೀವು ತಿಳಿದಿದ್ದರೆ ತಪ್ಪು. ಯಾಕಂದರೆ ಗೀತಾದಲ್ಲಿ 'ಜಾತಸ್ಯ' ಮರಣಂ ಧ್ರುವಂ'ಎಂದಿದೆ. ನಮ್ಮಲ್ಲಿ ಪಾಪ ತೊಳೆಯೋದಕ್ಕೆ ಅನೇಕ ಪ್ರಾಯಶ್ಚಿತ್ತಗಳಿವೆ. ಆತ ನೂರಾರು ರೂಪಾಯಿ ಕೂಡಿಸಿ ನಮ್ಮ ಯಜ್ಞಕ್ಕೆ ಕೊಟ್ಟಿದ್ದಾನೆ"ಎಂದು ಶಾಸ್ತ್ರಿಗಳು ನುಡಿದರು.

"ಯಜ್ಞ! ಅದ್ಯಾವ ಯಜ್ಞ?"

"ಓ ಭಟ್ಟರೇ, ಇವರಿಗೊಂದು ಹೆಂಡಬಿಲ್ಲು ಕೊಡಿ. ಯಜ್ಞದ ಕಲ್ಪನೆಯಾದರೂ ಬರಲಿ. ನೋಡಿ, ನಾವು ಖಾನಾಪುರ ಕಡೆಯವರು. ವಾಜಪೇಯ ಯಜ್ಞ ಮಾಡಬೇಕು ಅಂತ ಮಾಡಿಕೊಂಡಿದ್ದೇವೆ."

"ಯಜ್ಞವೆಂದರೆ ಕುರಿಯನ್ನು ಕೊಲ್ಲುವದಲ್ಲವೇ? ಊರೂರಲ್ಲಿ ಕಟುಕರು ಇದೇ ಕೆಲಸ ಮಾಡುತ್ತಾರೆ."

"ಇಗೊಳ್ಳಿ, ಈ ಹೆಂಡಬಿಲ್ಲು. ನಾವಿಬ್ಬರೂ ಈ ಯಜ್ಞಕಾರ್ಯದ ಸೆಕ್ರೆಟರಿಗಳಿದ್ದೇವೆ. ಯಜ್ಞವೆಂದರೆ ವೇದಪುರುಷನ ಕಾರ್ಯ."

"ಅದರ ಉದ್ದೇಶವೇನು?"

"ಉದ್ದೇಶ? ಊರಲ್ಲಿಯ ಬರಗಾಲ ನಿವಾರಣೆ. ಅಲ್ಲದೆ ಬ್ರಾಹ್ಮಣರಿಗೆ ಯಾರೂ ನೌಕರಿ ಕೊಡುವದಿಲ್ಲ. ಈ ಪರಿಸ್ಥಿತಿಯು ಯಜ್ಞಮಾಡಿ ಪುಣ್ಯ ಸಂಚಯವಾಗದೆ ಹೇಗೆ ಹೋದೀತು? ಯಜ್ಞಪುರುಷನನ್ನು ಪ್ರಸನ್ನ ಮಾಡಿಕೊಂಡರೆ ಮಾತ್ರ ಇವೆಲ್ಲ ಕೆಲಸ ಸಾಧ್ಯ. ಟಿಳಕರು ತುರಂಗ ಸೇರಿದಾಗ ನಮ್ಮ ತಂದೆಯವರು ಅನುಷ್ಠಾನ ಆರಂಭಮಾಡಿ ಆರು ವರ್ಷಗಳ ವರೆಗೆ ನಿರಂತರವಾಗಿ ಶಿವನ ತಲೆಯ ಮೇಲೆ ನೀರಿನ ಧಾರೆ ಬಿಡುತ್ತಿದ್ದರು. ಹೀಗೆ ಮಾಡಿದ್ದರಿಂದಲೇ ಸರಕಾರದವರಿಗೆ ಟಿಳಕರನ್ನು ಬಿಡಲೇಬೇಕಾಯಿತು."

ಸುಧಾಕರನಿಗೆ ನಗು ತಡೆಯಲಿಕ್ಕಾಗಲಿಲ್ಲ. ಆತ ಮೋರೆ ತಿರುಹಿದ. ಆದರೆ ಪುಂಡಂಭಟ್ಟರಿಗೆ ಬೇಟೆಯಲ್ಲಿ ಬಲೆಯಿಂದ ತಪ್ಪಿಸಿಕೊಂಡು

ಹೋದೀತೋ ಎಂಬ ಭಯ. "ವೇದ ಪುರುಷನಿಗೆ ಹೂವಿಲ್ಲದಿದ್ದರೆ ಎಸಳಾದರೂ—ಪತ್ರಂ, ಪುಷ್ಪಂ, ಫಲಂ, ತೋಯಂ ಯೋ ಮೇ ಭಕ್ತ್ಯಾ ಪ್ರಯಚ್ಛತಿ."

"ಪತ್ರ ಬೇಕಾದರೆ ಈ ಹಸ್ತ ಪತ್ರಿಕೆ ಕೊಳ್ಳಿ. ಫಲ, ನೀರು ಬೇಕಾದರೆ ಈ ಹುಕ್ಕೇರೀ ರೋಡಿನಲ್ಲಿ ಸಿಗಬಹುದು."

ನೀರಿನ ಮಾತು ಕೇಳಿದೊಡನೆಯೇ ಆ ಅಸ್ವಸ್ಥ ಹೆಂಗಸು ಸ್ಟೇಶನ್ನು ಬಂತೆಂದು ಭಾವಿಸಿ 'ಜಗ್ಗಾ, ಚಾ ಸಿಗುತ್ತೇನೋ ಇಲ್ಲಿ' ಎಂದಳು. ಸುಧಾಕರನು ಹುಡುಗನಿಗೆ ತಾನು ತರುವದಾಗಿ ಹೇಳಿ ಬಂಡಿ ನಿಂತೊಡನೆಯೇ ತನ್ನ ತಿರುಗಣಿ ತಂಬಿಗೆಯನ್ನು ತೆಗೆದುಕೊಂಡು ಕೈಕಾಲು ಮೋರೆ ತೊಳೆದು ಚಹಾ ಕುಡಿದು, ಅವಳಿಗಾಗಿ ಇನ್ನಷ್ಟು ಚಹಾ ತಂದನು. ಭಟ್ಟರಿಬ್ಬರೂ ಅರ್ಥಪೂರ್ಣವಾಗಿ ತಮ್ಮತಮ್ಮೊಳಗೆ ನೋಡಿಕೊಂಡರು. ಅಷ್ಟರಲ್ಲಿ ಸೆಕೆಂಡಕ್ಲಾಸ ಡಬ್ಬಿಯಿಂದ ಯಾರೋ ಗೆಳೆಯರು ಕೂಗಿ ಕರೆದದ್ದರಿಂದ ಸುಧಾಕರ ಬೇಗನೇ ಬರುವದಾಗಿ ಹೇಳಿ ಲಗುಬಗೆಯಿಂದ ಹೊರಟ. 'ಭಟ್ಟರಿಬ್ಬರೂ 'ದೇವರೇ ನೀನೇ ಗತಿ!' ಎಂದು ಹೇಳಿದುದು ಅವನ ಕಿವಿಗೆ ಬೀಳಲಿಲ್ಲ.

---

## ಪ್ರಕರಣ ೫.

ಆತ ಇನ್ನಾರೂ ಆಗಿರದೆ ವಿಲ್‌ಸನ್ ಕಾಲೇಜಿನಲ್ಲಿ ಜೊತೆಯಾಗಿಯೇ ಓದಿದ ಗೆಳೆಯ ಮಧುಕರ ದೇಸಾಯಿ. ಬಂಡಿ ಬಿಡುವವರೆಗೆ ಮಾತನಾಡಿ ಬರೋಣವೆಂದು ಸುಧಾಕರನು ಭಾವಿಸಿ ಬಂದಿದ್ದನಾದರೂ ಮಧುಕರನ ಒತ್ತಾಯದ ಮುಂದೆ ಅವನಾಟ ನಡೆಯಲಿಲ್ಲ. ಆತನೂ ಅವನ ಜೊತೆಗೆ ಬಂದು ಕುಳಿತ.

ಅಲ್ಲಿ ಒಬ್ಬ ಬೂಟು ಪೆಂಟು ಧರಿಸಿ 'ಟೈಮ್ಸ' ಓದುತ್ತ ಕುಳಿತಿದ್ದ. ಫ್ರೆಂಚಕಟ್ಟಿನ ಮೀಸೆ, ನಿರ್ಜನ ಕಾನನದಲ್ಲಿಯ ದಾರಿಯಂತಹ

ಬೈತಲೆ, ಅಲ್ಲದೆ ನಡನಡುವೆ ಮುಖಕ್ಕೆ ಮುತ್ತಿಟ್ಟು ಉರಿಯುವ ಬಲಗೈಯಲ್ಲಿದ್ದ ಸಿಗರೇಟು,-ಇವೆಲ್ಲ ಸುಧಾಕರನಿಗೆ ಕಂಡು ಬಂತು. ಆತನಿಗೆ ಎದುರಾಗಿ ಸುಮಾರು ೧೮ ವರ್ಷದ ಯುವತಿಯೋರ್ವಳು ಪುಸ್ತಕವೊಂದನ್ನು ಓದುತ್ತ ಕುಳಿತಿದ್ದಳು. ಆಕೆಯ ಮೋರೆ ಪುಸ್ತಕದಲ್ಲಿ ಮರೆಯಾಗಿತ್ತು. ಆದರೂ ಕೃಷ್ಣಮೇಘಮಾಲೆಯೊಡನೆ ಮೇಲಾಟವಾಡುವ ಕೇಶರಾಶಿ– ಅದರಲ್ಲಿ ಬೆಳ್ಳಗಿನ ಬೈತಲೆ ಬಲಗಡೆಯಲ್ಲಿ ಒಪ್ಪುತ್ತಿತ್ತು. ಅವಳ ಕುಡುಕುಗಳಿಗೆ ಮರುಳಾಗಿ ಕೂದಲು ಕಿವಿಯ ಮೇಲೆ ಇಳಿಬಿದ್ದಿತ್ತು. ಆ ಕುಡುಕುಗಳನ್ನು ಕಂಡರೆ ಕೇಶರಾಶಿಯ ಮೋಡದ ಮಡುವಿನಿಂದ ಮರಳಿ ಬಂದ ನೀರಹನಿಯು ಕಿವಿಯ ಸಿಂಪುಗಳಲ್ಲಿ ಬಿದ್ದು ಬೆಳೆದ ಮುತ್ತು ಎಂದೆನಿಸುತ್ತಿತ್ತು. ಹಾಲಿನಂತೆ ಬೆಳ್ಳಗಿರುವ ಅವಳ ಮೇಲಂಗಿಯ ಮೇಲೆ ಕೋಲು ಸಂಪಿಗೆಯ ಮಾಲೆಯಂತೆ ಉರುಳಾಡುವ ಚಿನ್ನದ ಹಾರ, ಲತಾಗ್ರದ ವಲಯದಂತೆ ಒಪ್ಪುವ ಕನಕ ಕಂಕಣ–ಇವೆಲ್ಲ ಆಭರಣಗಳು ಅವಳ ಸೌಂದರ್ಯ ಸಾಗರಕ್ಕೆ ಭರತಿಯನ್ನು ತಂದಿದ್ದವು. ಅವಳುಟ್ಟ ಬಾನ್ಬಣ್ಣದ ಜರಿಯಂಚಿನ ಸೀರೆ ಅವಳ ಶುಭ್ರ ಶರೀರಕ್ಕೆ ಚನ್ನಾಗಿ ಶೋಭಿಸುತ್ತಿತ್ತು. ಮಿಂಚಿದೊಡನೆ ಕಣ್ಣು ಅನಿರೀಕ್ಷಿತವಾಗಿ ಮುಗಿಲ ಕಡೆಗೆ ತಿರುಗುವಂತೆ ಸುಧಾಕರನ ದೃಷ್ಟಿ ಆ ತರುಣಿಯತ್ತ ಹೊರಳಿತು. ಆದರೆ ಆತ ಮನಸ್ಸು ಬಿಗಿಹಿಡಿದು 'ಟ್ರ್ಯಾನ್ಸ'ಓದುವವನತ್ತ ದೃಷ್ಟಿ ಹೊರಳಿಸಿದ.

ಆಗ ಮಧುಕರನು ರಾವ ಸಾಹೇಬರಿಗೆ ತನ್ನ ನೂತನ ಮಿತ್ರನ ಪರಿಚಯಮಾಡಿ ಕೊಡಹತ್ತಿದ. 'ಇವರು ಸುಧಾಕರ ತಾಂಬೆ.' ಎಂದ. ರಾವ ಸಾಹೇಬರು ದೃಷ್ಟಿಯನ್ನು ಟ್ರ್ಯಾಮ್ಸದಿಂದ ತೆಗೆದು ಸುಧಾಕರನನ್ನು ನೋಡಿದರು. ಆದರೆ ಸಾದಾ ಖಾದಿಧಾರಿಯನ್ನು ಕಂಡು ಟ್ರ್ಯಾಮ್ಸನ್ನೇ ತಿರುಗಿ ಓದ ಹತ್ತಿದರು.

"ಫರ್ಸ್ಟ್‌ಕ್ಲಾಸ ಎಂ. ಎ. ಇದ್ದಾರವರು."

ಈಗ ಮಾತ್ರ ರಾವ ಸಾಹೇಬರು ಕನ್ನಡಕ ತೆಗೆದು ಟ್ರ್ಯಾಮ್ಸ ಕೆಳ

ಗಿಟ್ಟರು. ಆ ತರುಣಿಯೂ ತನ್ನ ಕಡೆಗೆ ನೋಡುತ್ತಿರುವಂತೆ ಸುಧಾಕರನಿಗೆ ಭಾಸವಾಯಿತು.

"ಅವೇನು ಕೊಚ್ಚಿಕೊಳ್ಳುವಂತಹದಲ್ಲ; ವರ್ಷ ಸಾವಿರಾರು ಮಂದಿ ಆಗ್ತಾರೆ." ಸುಧಾಕರನು ವಿನಯದಿಂದೆಂದ.

ರಾವಸಾಹೇಬರು ಹೊಗೆಬಿಡುತ್ತ "ವಾರೂ, ಎಂ.ಎ., ಆಗಿದಾರೆ ಎಂಬವರೆ ಮನುಷ್ಯರಿದ್ದಾರೆ ಎಂದು ನಮ್ಮ ಓಲ್ಡ್‌ಫೋಕ್ಸ ಸಾಹೇಬರು ಯಾವಾಗಲೂ ಹೇಳುತ್ತಿದ್ದರಲ್ಲವೇ? ನೋಡಿ, ವಾರು ಎಂದರೆ ಹಳೇ ಪದ್ಧತಿಯ ಹೆಸರೆಂದು ಮೂಗು ಮುರಿಯಬೇಡಿ. ಒಮ್ಮೆ ನಮ್ಮ ಸಾಹೇಬರು ನನಗೆ 'ಮಿ|| ಶಾಸ್ತ್ರೀ, ನಿಮ್ಮ ಮಗಳಿಗೆ ಯಾವ ಹೆಸರಿಟ್ಟೀರಿ. ರಂಗೀನೋ, ಮಂಗೀನೋ?' ಎಂದು ಕೇಳಿಬಿಟ್ಟರು. ಆಗ ನಾನು ಸಾಹೇಬರೇ, ತಮ್ಮ ನೆರೆಯಲ್ಲಿದ್ದ ಕಲ್ಲುಗಳೂ ಸಹ ಸುಧಾರಿಸುತ್ತವೆ. ಅಂದ ಬಳಿಕ ನಾವೆಲ್ಲ ಆ ಹಳೇ ಗೊಡ್ಡು ಹೆಸರನ್ನೇಕೆ ಇಡುವೆವು? ನಮ್ಮ ಮಗಳು 'ವಾರುಣಿ' ಎಂದೆ. ನೋಡಿ ಹೇಗಿದೆ ನನ್ನ ಸಮಯಸೂಚಕತೆ? ನಿಜವಾಗಿ ನೋಡಿದರೆ 'ವಾರು' ಎಂಬದು ಹಳೇ ಪದ್ಧತಿಯ ಹೆಸರೇ. ಇವಳ ತಾಯಿ ಇಟ್ಟ ಹೆಸರು ಅದು. ಶುದ್ಧ 'ಥ' ಇದ್ದಳು ನೋಡಿ ಆಕೆ. ಈಗಿನ ಹೊಸ ಹೆಸರು ಆಕೆಗೆ ಸೇರುತ್ತಲೇ ಇರಲಿಲ್ಲ. ಒಮ್ಮೆ ನಮ್ಮ ಸಾಹೇಬರ ಮೆಡಮ್‌ಳು ನಮ್ಮನ್ನು ಊಟಕ್ಕೆ ಆಮಂತ್ರಿಸಿದ್ದಳು. ಆದರೆ ಅವಳು ಅಲ್ಲಿ ಹೋಗಲಿಕ್ಕೆ ಒಪ್ಪಲೇ ಇಲ್ಲ. ಅಂಥ ಸಾಹೇಬರು ಕರೆಯೋದಂದ್ರೇನು? ತಮ್ಮ ಪಂಕ್ತಿಯಲ್ಲಿ ಕೂಡ್ರೋ ಮಾನಾ ಕೊಡ್ತಾರಂದ್ರೇನು? ಅವಕ್ಕೆಲ್ಲ ಪೂರ್ವ ಪುಣ್ಯವೇ ಬೇಕು. ಹೇಗೆ, ಹೌದೋ ಅಲ್ಲವೋ?"

"ನಮ್ಮ ರಾವ ಸಾಹೇಬರು ಒಮ್ಮೆ ಮಾತಾಡಲಿಕ್ಕೆ ಹತ್ತಿದರೆಂದರೆ ಅವರಲ್ಲಿ ಒಳಗೊಂದು ಹೊರಗೊಂದು ಇಲ್ಲ." ಎಂದು ಮಧುಕರ ನಗುತ್ತ ನುಡಿದ.

ಸುಧಾಕರನಿಗೆ ಅವರ ಬುದ್ಧಿವಂತಿಕೆಯನ್ನು ಕಂಡು ನಗು ಬಂದಿತು. ಸುಧಾಕರನು ತನ್ನ ಮಾತನ್ನು ಮೆಚ್ಚಿಯೇ ನಗುತ್ತಿದ್ದಾನೆಂದು ರಾವಸಾಹೇಬರು ಭಾವಿಸಿ ತಮ್ಮ ಮಾತು ಮುಂದುವರಿಸಿದರು. "ನಮ್ಮ ಸಾಹೇಬರೆಂದರೆ ಒಳ್ಳೇ ಧೂರ್ತರು, ನೋಡಿ. ನಾನೊಮ್ಮೆ ಗೋವೆಯಲ್ಲಿ ಕಸ್ಟಮ್ಸ್ ಆಫೀಸರ ಇದ್ದಾಗ ಅವರ ಸ್ವಾರಿ ಬಂತು. 'ಮಿ॥ಕಾತ್ರೆ, ಗೋವೆ ಏತಕ್ಕೆ ಪ್ರಸಿದ್ಧವಿದೆ?' ಎಂದು ಕೇಳಿದರು. ನಾನು 'ಹಣ್ಣು ಬಹಳ ಎಂದೆ.' ಅವರು ನಗ್ತಾ 'Stupid you are, Mr.Katre, ಹಣ್ಣಲ್ಲ. ಹೆಣ್ಣು, ಹಂದಿ, ಹೆಂಡ ಹೆಚ್ಚು' ಎಂದರು. ಅವರಿಗೂ ನನಗೂ ಸಲಿಗೆ ಬಹಳ. ಒಮ್ಮೊಮ್ಮೆ 'You are a big fool' ಎಂದು ಚೇಷ್ಟೆ ಮಾಡುತ್ತಿದ್ದರು."

'ಅವರ ದೃಷ್ಟಿಯಿಂದ ಮೆಟ್ರಿಕ್ಯಾದವ ಅರ್ಧ ಮನುಷ್ಯ. B.A. ಆದವ ಪೂರ್ಣ ಮನುಷ್ಯ. ಬ್ಯಾರಿಷ್ಟರ ಆದವ ಉತ್ತಮ ಮನುಷ್ಯ. I. C. S. ಆದವ ದೇವ ಮನುಷ್ಯ. ನಿವೃತ್ತರಾಗಿ ಹೋಗುವಾಗ ಅವರನ್ನು ಬೀಳ್ಕೊಡಲು ನಾನೂ ವಾರೂ ಕೂಡಿಯೇ ಬಂದರಕ್ಕೆ ಹೋಗಿದ್ದೆವು. ಆಗ ಅವರು ಹೇಳಿದ ಮಾತು ನೆನೆದರೆ ಈಗಲೂ ರೋಮಾಂಚನವಾಗುತ್ತಿದೆ. 'ಮಿ॥ ಕಾತ್ರೆ, ನನಗೆ ಮಗನಿಲ್ಲ. ಇಲ್ಲವಾದರೆ ನಿಮ್ಮ ಮಗಳನ್ನೇ ನನ್ನ ಮನೆಯ ಮುಂದಿನ ಯಜಮಾನತಿಯನ್ನಾಗಿ ಮಾಡುತ್ತಿದ್ದೆ. ಹುಡುಗಿ ಅಂದರೇನು? ಚಿನ್ನ! ಒಳ್ಳೇ ದೇವ ಮನುಷ್ಯನನ್ನು ನೋಡಿ ಕೊಡಿ' ಎಂದರು. ನನ್ನ ಹೃದಯ ಕೃತಜ್ಞತೆಯಿಂದ ಉಕ್ಕಿ ಬಂದಿತು. ತಮ್ಮ ಆಶೀರ್ವಾದದಿಂದ ನನಗೆ I.C.S. ಅಳಿಯನೇ ಸಿಗುತ್ತಾನೆ.' ಎಂದೆ.

ಸುಧಾಕರನಿಗೆ ಈ ತಾಳಗೆಟ್ಟ ಪುರಾಣ ಬೇಸರ ಹಿಡಿಸಿತ್ತು. ಅದಕ್ಕಾಗಿ ಅಡ್ಡ ಮಾತು ತೆಗೆದ. "ಈಗ ತಾವೇನು ಮಾಡುತ್ತೀರಿ?"

"ನಾನೇ? ದಯಾಳು ಸರಕಾರದ ಪೆನ್ಶನ್ ತಗೊಳ್ತಾ ಇದ್ದೇನೆ. ಇನ್ನೊಂದೆಂದರೆ ಮಗಳಿಗೆ I. C. S. ಗಂಡನ ಶೋಧ ನಡಿಸಿದ್ದೇನೆ.

ಮಗ, ವರದಕ್ಷಿಣೆ ತಗೊಂಡು ತಗೊಂಡು ಎಷ್ಟು ತೆಗೆದುಕೊಂಡಾನು? ಹುಂ. ೨೦—೨೫ ಸಾವಿರ. ಅಷ್ಟಕ್ಕೂ ನನ್ನ ಒಪ್ಪಿಗೆಯಿದ್ದೇ ಇದೆ. ನನ್ನ ಮನೆಯಲ್ಲಿ ಬಿದ್ದುದನ್ನು ತಿನ್ನೋವರಾದರೂ ಯಾರು? ನಾವಿಬ್ಬರು—ನಾನೊಬ್ಬ, ಇವಳ ಚಿಗವ್ವ. ನಮ್ಮದು ಹೇಗಾದರೂ ಸಾಗೀತು."

"ತಮ್ಮಂಥ ಅನುಭವಸ್ಥ ಅನುಕೂಲಸ್ಥ ಹಿರಿಯರು ಯಾವುದಾದರೂ ಸಾಮಾಜಿಕ ಕೆಲಸ ಕೈಗೊಂಡರಾಗದೇ?"

"ನಾನೂ ಅದೇ ವಿಚಾರದಲ್ಲಿದ್ದೇನೆ. ನನ್ನ ಮೂಲ ಊರು ಜಯಗಾಂವ. ಅಲ್ಲಿ ಒಂದು ಹಾಯ್‌ಸ್ಕೂಲ ಇದೆ. ಈಗಂತೂ ಮಧುಕರ ದೇಸಾಯಿಯವರು ಶಿಕ್ಷಕರಾಗಿ ಬರುವವರಿದ್ದಾರೆ. ಓಲ್ಡ ಫ್ರೊಕ್ಸ ದೊರೆಗಳ ಹೆಸರಿನಿಂದ ಒಂದು ಟೆನ್ನಿಸ ಕೋರ್ಟನ್ನೂ, ಅವರ ಹೆಂಡತಿಯ ಹೆಸರಿನಿಂದ ಡಿಬೇಟಿಂಗ ಕ್ಲಬ್ಬನ್ನೂ ಸ್ಥಾಪಿಸಬೇಕೆಂದಿದ್ದೇನೆ. ನಿಮ್ಮನ್ನು ನೋಡಿದರೆ ದೇಶಾಭಿಮಾನಿಗಳಾಗಿ ಕಾಣುತ್ತೀರಿ. ಗಾಂಧಿ ಒಬ್ಬ ಹುಚ್ಚ! ಖಾದಿ ಧರಿಸಬೇಕು., ನೂಲಬೇಕು ಅನ್ನೋದು ನಿಮ್ಮ ದೃಷ್ಟಿಯಿಂದ ದೇಶ ಸೇವೆ ಇರಬಹುದು. ಆದರೆ ಇಂಥ ಇಂಗ್ಲಿಷ ಸರಕಾರ ಬಿಟ್ಟು ನಮಗೆ ಸ್ವರಾಜ್ಯವಾದರೂ ಯಾಕೆ? ಹಿಂದೆ ಸ್ವರಾಜ್ಯ ಕಳಕೊಂಡಾಗ ನಾವು ಖಾದಿಯನ್ನೇ ಹಾಕುತ್ತಿದ್ದೆವಲ್ಲ? ಟಿಳಕನನ್ನು ಜೈಲಿಗೆ ಒಯ್ದಾಗ ನಾನಂತೂ ಮನೆಯಲ್ಲಿ ಹೋಳಿಗೆ ಮಾಡಿಸಿದ್ದೆ. ಅದರಲ್ಲಿಯಂತೂ ಈ ಗಾಂಧಿಗೆ ನಾಲ್ಕು ಇಂಗ್ಲಿಷು ಮಾತು ಆಡಲಿಕ್ಕೂ ಬರೋದಿಲ್ಲವೆಂದು ನಮ್ಮ ಸಾಹೇಬರು ಹೇಳುತ್ತಿದ್ದರು. ಅವ ಇಂಗ್ಲಿಷಿನಲ್ಲಿ ಪತ್ರಿಕೆ ಹೊರಡಸ್ತಾನಂತೆ! ಪತ್ರಿಕೆ!!"

ಸುಧಾಕರನು ಕಿಸೆಯಲ್ಲಿದ್ದ ಯಂಗ ಇಂಡಿಯಾ ತೆಗೆದು 'ಇದರಲ್ಲಿರುವ ತಪ್ಪನ್ನು ತೋರಿಸಿಕೊಟ್ಟರೆ ನಾವಾದರೂ ನಮ್ಮ ಇಂಗ್ಲಿಷನ್ನು ತಿದ್ದಿಕೊಳ್ಳಬಹುದಿತ್ತು' ಎಂದ. ನಮ್ಮ ಶಾಸ್ತ್ರಿ ಸಾಹೇಬರು ಬೆಪ್ಪಾದರು. ಆದರೂ ಸಾವರಿಸಿ "ನೋಡಿ, ಹಿಂದೀ ಮನುಷ್ಯ ಎಷ್ಟೇ ಇಂಗ್ಲಿ

ಬರೆದರೂ ಅದು ಇಂಗ್ಲಿಷ ಆಗಲಾರದು. ಹೆಂಡವು ಎಂದಾದರೂ ಬ್ರ್ಯಾಂಡಿಯಾಗಬಲ್ಲದೇ?"

ಈ ಉಪಮೆ, ವಾದ ಸರಣಿ ಸುಧಾಕರನಿಗೆ ಬೇಸರ ತಂದಿತು. ಆತ ಜಯಗಾಂವದ ಸಾಲೆಯ ವಿಚಾರವಾಗಿ ಮಧುಕರನೊಡನೆ ಮಾತಾಡ ಹತ್ತಿದ. ಸುಧಾಕರನಿಗೆ ಹೊಸದಾಗಿ ಶಿಕ್ಷಣ ಸಂಸ್ಥೆ ತೆಗೆಯುವುದಕ್ಕಿಂತ ಇದ್ದುದನ್ನೇ ಬೆಳಿಸುವುದು ಯೋಗ್ಯ ವೆಂದು ಕಂಡಿತು. ಯಾಕಂದರೆ ಶಿಕ್ಷಣದ ಹೊರತು ಭಾರತದ ಕಲ್ಯಾಣವಾಗಲಾರದೆಂದು ಮನಗಂಡು, ತನ್ನ ಜೀವನವ ನ್ನು ಶಿಕ್ಷಣಕ್ಕಾಗಿಯೇ ಮೀಸಲಾಗಿಡುವೆನೆಂದು ಗೆಳೆಯರ ಮುಂದೆ ಹೇಳಿದ್ದ. ಆದರೆ ಮಧುಕರನ ಮಾತಿನಿಂದ ಸಾಲೆಯನ್ನು ಆದರ್ಶ ಸಂಸ್ಥೆಯನ್ನಾಗಿ ಮಾಡುವ ಹಂಬಲ ಆತನಲ್ಲಿದ್ದಂತೆ ಕಂಡುಬರಲಿಲ್ಲ. ಅಲ್ಲಿಯ ಹೆಡ್ ಮಾಸ್ತರರು ಅವನ ಸಂಬಂಧಿಕರಾದುದರಿಂದಲೂ ಹತ್ತಿರದಲ್ಲಿಯೇ ಇರುವ ಹೊಲ ಮನೆಯನ್ನು ನೋಡಿಕೊಳ್ಳುವವರಿಲ್ಲ ದುದರಿಂದಲೂ, ಕಾತ್ರೆ ಸಾಹೇಬರಂತಹ ಸುಶಿಕ್ಷಿತರಿರುವುದರಿಂದಲೂ ಅಲ್ಲಿರಲು ಒಡಂಬಟ್ಟಿರುವದಾಗಿ ಹೇಳಿದ. 'ನಾಳೆ ನಮ್ಮೂರಲಗ್ನಕ್ಕೆ ಆ ಸಾಲೆಯ ಹೆಡ್ ಮಾಸ್ತರರು ಬರುವವರಿದ್ದಾರೆ. ಅವರಿಂದ ನಿಮಗೆ ಬೇಕಾದ ಮಾಹಿತಿ ದೊರೆಯಬಹುದು.' ಎಂದುದರಿಂದ ಸುಧಾಕರನು ಸುಮ್ಮನಿರಬೇಕಾಯಿತು.

ಮಧುಕರನ ಕಾವ್ಯದೃಷ್ಟಿಗೆ ವಾರುಣಿಯ ಸೌಂದರ್ಯ ಆರಾಧ್ಯ ವಸ್ತುವಾಗಿರುವಾಗ ಇತರ ಧ್ಯೇಯಗಳ ಜಂಜಾಟ ಬೇಕಾಗಿರಲಿಲ್ಲ. ಸುಧಾಕರನಿಗೂ ಬೇರೆ ಕೆಲಸವಿರದ್ದರಿಂದ ಇಲ್ಲದ ಮಾತನ್ನಾಡುವ ರಾವ ಸಾಹೇಬರೂ ನಿದ್ದೆ ಮಾಡುತ್ತಿದ್ದುದರಿಂದ ಒಮ್ಮೊಮ್ಮೆ ವಾರುಣಿ ಯೆಡೆಗೆ ದೃಷ್ಟಿ ಹೋಗುತ್ತಿತ್ತು. ಅದಕ್ಕಾಗಿ ಯಂಗ ಇಂಡಿಯಾ ತೆಗೆ ದು ಓದ ತೊಡಗಿದ.

ಬೆಳಗಾಂವ ಸ್ಟೇಶನ್ನು ಬಂದಿತು. ಕೊಂಕಣ ಸೀಮೆಯವರಾದು ದರಿಂದ ಜಗನ್ನಾಥ, ಯಮೂತಾಯಿ ಅಲ್ಲಿಯೇ ಇಳಿದರು. ಆಕೆ ಗರ್ಭಿ

ಣೆಯಿದ್ದುದರಿಂದ ಸುಧಾಕರನು ಅವರವರ ಸಾಮಾನನ್ನೆಲ್ಲ ಜಗನ್ನಾಥನ ಕೈಗೆ ಕೊಟ್ಟ. ಅಷ್ಟೊತ್ತಿಗೆ ಬೆಳಗಾವಿಯ ‘ಕಾವ್ಯವಿಲಾಸ ಮಂಡಳ’ದವರು ಕವಿವರ್ಯ ‘ಮಧುಕರ’ನ ಸ್ವಾಗತಕ್ಕಾಗಿ ಬಂದಿದ್ದರು. ಮಧುಕರನು ಮಂಡಳದ ಕಾರ್ಯದರ್ಶಿಗಳಿಗೆ ಸುಧಾಕರನ ಪರಿಚಯ ಮಾಡಿಕೊಟ್ಟ. ನಂತರ ಮಂಡಳದ ಕಾರ್ಯದರ್ಶಿಗಳ ಪರಿಚಯ ಮಾಡಿದ್ದಾಯ್ತು. ಪರಸ್ಪರ ಪ್ರಶಂಸಾ ಗೋಷ್ಠಿಯ ಸದಸ್ಯರೆಲ್ಲ ತಮ್ಮ ಕೃತಿಗಳ ಪುರಾಣವನ್ನೇ ಆ ಪ್ಲೆಟಫೋರ್ಮಿನಲ್ಲಿ ಸ್ಥಳ ಕಾಲದ ಪರಿವೆಯಿಲ್ಲದೆ ಬಿಚ್ಚ ಹತ್ತಿದರು. ಗಾಡಿ ಬಿಡಲು ಕೆಲ ಹೊತ್ತು ಇದ್ದುದರಿಂದ ಹೇಗಾದರೂ ವೇಳೆಯನ್ನು ಕೊಲ್ಲುವ ಉದ್ದೇಶದಿಂದ ಸುಧಾಕರನೂ ಅವರ ಆಮಂತ್ರಣವನ್ನು ಸ್ವೀಕರಿಸಿ ಕಾರು ಹತ್ತಿದ.

‘ಮಂಡಳದ ಕಚೇರಿ ಅಲಂಕೃತವಾಗಿತ್ತು. ರಾವ ಸಾಹೇಬರು ಅಲ್ಲಿಯೇ ಇಟ್ಟ ಆರಾಮಖುರ್ಚಿಯನ್ನು ಅಲಂಕರಿಸಿದರು. ಉಳಿದ ಅತಿಥಿಗಳೆಲ್ಲ ತಮಗಾಗಿ ಏರ್ಪಡಿಸಿದ ಸ್ಥಾನದಲ್ಲಿ ಕುಳಿತರು. ಪರಿಚಯ ಮಾಡಿಕೊಟ್ಟ ನಂತರ ಮಂಡಳಿಯ ಸದಸ್ಯರು ತಮ್ಮ ತಮ್ಮ ಕೃತಿಗಳನ್ನು ಓದತೊಡಗಿದರು.

‘ರೇಲ್ವೆ ಅನಾಹುತ’ ಎಂಬ ದುಃಖಾಂತ ನಾಟಕವನ್ನು ಒಬ್ಬ ಬರೆದಿದ್ದ. ಆತನ ದೃಷ್ಟಿಯಿಂದ ಅತ್ಯಂತ ಹೃದಯವಿದಾರಕವಾದ ಕೊನೆಯ ಅಂಕನ್ನು ಓದಿದ— ಅದರ ಕಥಾವಸ್ತುವಿಷ್ಟು ‘ಥರ್ಡ ಕ್ಲಾಸಿನಲ್ಲಿ ದಟ್ಟಣೆಯಿಂದ ಹೃದಯಕ್ರಿಯೆ ನಿಂತು ಜನ ಸಾಯುತ್ತಾರೆ. ಅವರಲ್ಲಿ ಕೊನೆಯವ ಸಾಯುವಾಗ ಕೈಕಾಲು ಬಡಿಯುತ್ತಾನೆ. ಆಬಡಿತ ಅಲ್ಲಿಯ ಸರಪಳಿಗೆ ತಾಕಿ ಎಳೆಯಲ್ಪಡುವುದರಿಂದ ಗಾಡಿ ನಿಂತು ಗಾರ್ಡ ಬಂದು ನೋಡುತ್ತಾನೆ. ಹೆಣದ ರಾಶಿಯೇ ರಾಶಿ.’

ಇನ್ನೊಬ್ಬ ಅಪ್ರಕಟಿತ ಕಾದಂಬರಿಕಾರ ಮುಂದೆ ಬಂದು ಓದುವವನಿದ್ದ. ಮುದ್ರಣವಾದ ಮೇಲೆ ನೋಡಿದರಾಯಿತು ಎಂದು ಸುಧಾಕರನು ಸೂಚಿಸಿದುದರಿಂದ ಆತ ಹಿಂದೆ ಸರಿದ. ಆಮೇಲೆ ಇಲ್ಲೋ

ಪಹಾರವಾಯಿತು. ನಂತರ "ಕಾವ್ಯಗಾನದ ಉದ್ಘಾಟನೆ 'ಅಪ್ಪಣ್ಣ ತನಯ'ರ 'ಮುಸಣಗೀತೆ'ಯಿಂದ ಪ್ರಾರಂಭವಾಯಿತು. ಎಲ್ಲರೂ ತಮ್ಮ ತಮ್ಮ ಕೃತಿಗಳನ್ನು ತಮಗೊಬ್ಬರಿಗೇ ರೋಚಕವಾಗಿ ಓದಿದರು. ಸುಧಾಕರನಿಗಂತೂ ಹೇಗೆ ಪಾರಾದೇನು ಎಂಬ ಚಿಂತೆ ಹತ್ತಿಬಿಟ್ಟಿತು. ಎಲ್ಲರ ಒತ್ತಾಯದಿಂದ ಮಧುಕರ ತನ್ನ ಮೂರು ಕವನಗಳನ್ನು ಹಾಡಿದ. ಜನ ಮೆಚ್ಚಿತು.

ಫೋಟೋ ಪ್ರೋಗ್ರಾಮು, ವಿಜಿಟ್ ಬುಕ್ಕಿನಲ್ಲಿ ಶರಾದ ಶಾಸ್ತ್ರ ಮುಗಿಯಿತು. ಇಷ್ಟೆಲ್ಲ ಮುಗಿದು ಸ್ಟೇಶನ್ನು ಮುಟ್ಟುವಷ್ಟರಲ್ಲಿ ಮೂರು ಬಡೆದಿತ್ತು. ದಾರಿಯುದ್ದಕ್ಕೂ ಸುಧಾಕರನ ಹೃದಯ ಕಾವ್ಯ ಮಂಡಲದ ಘಟನೆಗಳಿಂದ ಮಥಿಸಿಹೋಗಿತ್ತು. ಹೆಂಗಸರ ಆಭರಣ ಪ್ರೀತಿ, ಅಶಿಕ್ಷಿತರ ದೇವರ ಭಕ್ತಿ, ಯುದ್ಧಕ್ಕೆ ಹೋಗಿ ಬಂದ ಸಿಪಾಯಿಯ ಅತಿಶಯೋಕ್ತಿಯ ವರ್ಣನೆ, ಕೇಳಿದಾಗ ಮೂಗು ಮುರಿಯುತ್ತೇವೆ. ಆದರೆ ಈ ಕವಿಗಳೆಂದೆನ್ನಿಸಿಕೊಳ್ಳುವವರ ಅಹಂಕಾರಕ್ಕೆ ಕೊನೆಯೇ ಇಲ್ಲ. ಆದರೂ ಇವರನ್ನು ನಾಡಿನುದ್ಧಾರಕರೆಂದು ಗೌರವಿಸುತ್ತೇವೆ. ಇದೊಂದು ಕಲ್ಪನೆಯ ಸಾಮ್ರಾಜ್ಯದಲ್ಲಿಯೂ 'ಕಾಂಚನಮೃಗ'ದ ಮೋಸಗಾರಿಕೆಯಲ್ಲವೇ ?

—— 0 ——

## ಪ್ರಕರಣ ೬.

ಮನೆಯ ಯಜಮಾನಿ ಸುಂದರಾಬಾಯಿ ಅಲಂಕರಿಸಿಕೊಳ್ಳುತ್ತಲೇ ಸೊಸೆಯನ್ನು ಕರೆದಳು. ಆದರೆ ಪ್ರತ್ಯುತ್ತರ ಬರಲಿಲ್ಲ. ನೀರು ತರಲಿಕ್ಕೆ ಹೋಗಿರಬಹುದೆಂದು ಗ್ರಹಿಸಿ ಬಾವಿಯ ಬಳಿ ಹೋದಳು. ಅಲ್ಲಿಯೂ ಆಕೆಯ ಸುಳಿವಿರಲಿಲ್ಲ. 'ಈಗಿನ ಕಾಲದ ಹುಡುಗಿಯರಿಗೇನು

ನಾಚಿಕೆಯಿಲ್ಲ; ಮರ್ಯಾದೆಯಿಲ್ಲ! ತನ್ನ ಒಡಕು ಹಣೆ ಮೆರಿಸಲಿಕ್ಕೆ ಎಲ್ಲಿಯೋ ಹೋಗಿರಬೇಕು.' ಎನ್ನುತ್ತ ಮನೆಯ ಸಂದಿಗೊಂದಿಗಳನ್ನು ಹುಡುಕಿದಳು. ಎಲ್ಲಿಯೂ ಕಣ್ಣಿಗೆ ಬೀಳಲಿಲ್ಲ. ಎಲ್ಲಿಯಾದರೂ ಭಾವಿಗೀವಿ ಹಾರಿಕೊಂಡಿಲ್ಲವಷ್ಟೇ ಎಂಬ ವಿಚಾರ ಬಂದು ಅತ್ತೆಯ ಕಲ್ಲೆದೆ ದಸಲ್ಲೆಂದಿತು. ದಢಮ್ಮನೆ ಬಾಗಿಲನ್ನು ಮುಚ್ಚಿ ಸೊಸೆಯ ಶೋಧಾರ್ಥವಾಗಿ ಹೊರಬೀಳತಕ್ಕವಳು. ಆದರೆ ತೂಗುಮಣೆಯ ಮೇಲೆ ಸೊಸೆಯು ಮಲಗಿದ್ದುದು ಕಂಡು ಬಂತು. ಅವಳ ಕೈಯಲ್ಲಿದ್ದ ಪುಸ್ತಕದ ಪುಟ ಗಾಳಿಯಿಂದ ಪಟಪಟ ಹಾರಾಡುತ್ತಿತ್ತು. ಮಟಮಟ ಮಧ್ಯಾಹ್ನದಲ್ಲಿ ಮನೆಗೆಲಸ ಬಿಟ್ಟು ಮಲಗುವ ವಿಧವೆ ಸೊಸೆಯನ್ನು ಕಂಡು ಅತ್ತೆ ರೌದ್ರಾವತಾರ ತಾಳಿದಳು.

ಮಲಗಿದ ಹುಡುಗಿ ಯಾವುದೋ ಸುಂದರ ಸ್ವಪ್ನ ಕಾಣುತ್ತಿದ್ದಿರಬಹುದು. ಇಲ್ಲವಾದರೆ ಅವಳ ಕೆಂಪನ್ನ ತುಟಿಯ ಮೇಲೆ ಉಷಃಕಾಲದ ಸೃಷ್ಟಿಯಂತೆ ಉತ್ಸಾಹ ವರ್ಧಕ ಮೃದುಹಾಸ್ಯವು ಹೊಳೆಯುತ್ತಿರಲಿಲ್ಲ. ಈಶ್ವರನ ಚಿಂತೆಯಲ್ಲಿಯೇ ತಲ್ಲೀನನಾದ ಸಾಧುವಿಗೆ ಸಂಕಟಮಯ ಸಂಸಾರದ ಮರವು ಆಗುವಂತೆ ಆಕೆಗೆ ಮೈಮೇಲಿನ ಹರಕು ಸೀರೆ, ಹೃದಯದಲ್ಲಡಗಿದ ಅಪಾರಯಾತನೆ ಇವೆಲ್ಲವುಗಳ ಮರವೆಯಾಗಿತ್ತು. ಇದನ್ನು ಕಂಡು ಸುಂದರಾಬಾಯಿಯ ಕೋಪ ಹೆಚ್ಚಿ ಆಕೆಯ ಗಲ್ಲವನ್ನು ಚನ್ನಾಗಿ ಚಿವುಟಿದಳು. ಹಠಾತ್ತಾಗಿ ಎದ್ದುದರಿಂದ ತಲೆ ತೂಗುಮಣೆಗೆ ತಟ್ಟಿ ನೋವಾಯಿತು. ಆದರೂ ಅತ್ತೆಯನ್ನು ಕಂಡು ಬಡಿದ ಹಣೆಯನ್ನು ತಿಕ್ಕಿಕೊಳ್ಳುವ ಧೈರ್ಯ ಬರಲಿಲ್ಲ. ಕೆಳಗೆ ಬಿದ್ದ ಪುಸ್ತಕವನ್ನೊಂದು ಎತ್ತಿಕೊಂಡು ಗೋಡೆಗೆ ಆನಿಸಿ ಅಧೋವದನಳಾಗಿ ನಿಂತಳು.

"ಏನೇ ಅದು ಓದುತ್ತಿರೋದು, ಅರಿಷ್ಟ ಮುಂಡೆ? ನಿನ್ನೆ ಶನಿವಾರವಿತ್ತು. ಶನಿಸ್ತೋತ್ರ ಓದು ಎಂದರೆ ನಿದ್ದೆ ಬಂದುಬಿಟ್ಟಿತು. ಈಗ ಕಾದಂಬರಿ ಹಿಡಿದು ಕೊಂಡು ಹಾಡೇ ಹಗಲು ಓದ್ತಾ ಬಿದ್ದಿರೋದು? ಕೆಲಸ ಬೊಗಸೆ ಮಾಡಲಿಕ್ಕೆ ಆಳು ಇಟ್ಟುಕೊಂಡೀಯೇನೆ? ನಾಚಿಕೆ

ಇಲ್ಲದವಳು! ಮಧು ಒಮ್ಮೆ ಬರಲಿ, ಪುಸ್ತಕ ಎಲ್ಲ ಕಪಾಟಿನಲ್ಲಿ ಹಾಕಿ ಬೀಗ ಹಾಕಲಿಕ್ಕೆ ಹೇಳುತ್ತೇನೆ."

ಪಾಪ! ಸೊಸೆ ಉತ್ತರ ಕೊಡಲಿಲ್ಲ. ಅತ್ತೆಯ ದೃಷ್ಟಿಯಿಂದ ಅದೂ ಅಪರಾಧವಲ್ಲವೇ? ಅತ್ತೆಯ ಸಿಟ್ಟು ಇನ್ನಷ್ಟು ನೆತ್ತಿಗೇರಿತು. 'ಏನು ಕಾಲುಗುಣವಪ್ಪಾ ಇವಳದು! ಮಟಮಟ ಮಧ್ಯಾಹ್ನದ ಹೊತ್ತಿಗೆ ಮಲಗೋದು. ಬಂದೊಂದು ಆರು ತಿಂಗಳೂ ಆಗಿಲ್ಲ; ಗಂಡನನ್ನು ತಿಂದೇ ಬಿಟ್ಟಳು. ಇವಳನ್ನು ನೋಡಬಾರದೆಂತಲೋ ಏನೋ-ಅವರು ಹೋಗಿ ಹತ್ತು ವರ್ಷ ಆಗಿಬಿಟ್ಟಿತು. ಇವಳಿಂದೇ ಇಷ್ಟೆಲ್ಲಾ ಅರಿಷ್ಟ, ಅದರಲ್ಲಿಯೂ ತಲೆಗೂದಲು ಇಟ್ಟುಕೊಂಡು ಮೈರೀತಾ ಇದ್ದಾಳೆ. ಅಡಿಗೆ ಕಷ್ಟಾನೂ ಇಲ್ಲ. ಈ ಸಕೇಶಿಯ ಕೈ ಕೂಳು ತಿಂದು ಯಾವ ನರಕಕ್ಕೆ ಹೋಗಲಿ? ಗಂಡನಿಲ್ಲ; ಸಂಸಾರ ಇಲ್ಲ; ಅಂದ ಮೇಲೆ ಇನ್ನೇನು? ಇಂಥಹದೇ ಏನಾದರೊಂದು ಕಾದಂಬರಿ ಹಿಡಕೊಂಡು ಅತ್ತೆ ಚಾಡಿ ಹೇಳ್ತಾ ಊರೆಲ್ಲಾ ತಿರುಗಿದರಾಯ್ತು!"

"ನಾನು ಯಾರ ಮುಂದೂ-ಏನೇನೂ ಹೇಳಲಿಲ್ಲ!"

"ಹೂಂ. ಹೂಂ. ಏನೇನೂ ಹೇಳಲಿಲ್ಲ. ಪಾಪ! ನೀನೆಂದರೆ ಸಾಕ್ಷಾತ್ ಸೀತಾ ಸಾವಿತ್ರಿಯರ ಅವತಾರ! ನಾಯಿ ಬಾಲ ನಳಿಗೆಯಲ್ಲಿ ಹಾಕಿದಷ್ಟೇ ಹೊತ್ತು. ಎಷ್ಟು ಹೇಳಿದರೂ ಅಷ್ಟೆ! ಹುಣಸೆ ಮರದ ಬುಡದಲ್ಲಿ ಗಾಡಿಗಟ್ಟಲೆ ಸಕ್ಕರೆ ಸುರುವಿದರೂ ಅದರ ಹಣ್ಣು ಸಿಹಿಯಾದೀತೇ? ನಾನೀಗ ನೆರೆಮನೆ ಲಗ್ನಕ್ಕೆ ಹೋಗುತ್ತೇನೆ. ಓರಗೆಯವಳ ಲಗ್ನ ಎಂದು ನೀನು ಮದುವೆ ಚಪ್ಪರಕ್ಕೆ ಎಲ್ಲಿಯಾದರೂ ಕಾಲಿಟ್ಟೆಯೆಂದರೆ ನೋಡು, ಕಾಲೇ ಮುರಿದುಹಾಕ್ತೇನೆ!" ಈಗ ಮಧು ಬರೋ ಹೊತ್ತಾಯ್ತು. ಅವನ ಕೋಣೆ ಝಳಝಳಾ ಉಡುಗಿಡು" ಎಂದವಳೇ ಲಗ್ನಕ್ಕೆ ಹೊರಟುಹೋದಳು.

ಸೊಸೆಯು ಕೋಣೆಯನ್ನು ಉಡುಗಹತ್ತಿದಳು. ಮಧುಕರ ಬರಲಿದ್ದಾನೆ. ರಾತ್ರಿ ಹನ್ನೆರಡರ ವರೆಗೂ ನಿನ್ನೆ ತಿಂಡಿ-ತಿನಿಸು ತಯಾರಿಸಿ

ದ್ದಾಯಿತು. ಆ ಮೇಲೆ ಶನಿಸ್ತೋತ್ರ ಓದಬೇಕೆಂದು ಒತ್ತಾಯ. ಹಗಲಿಡೀ ದುಡಿದ ಸೊಸೆಯು ಆಗ ತೂಕಡಿಸಹತ್ತಿದರೆ ಅಪರಾಧವೇನು ? ಅಲ್ಲದೆ ದಿನಾ ಬಾಳೆಗಳಿಗೆ ನೀರು ಹನಿಸುವದಕ್ಕಾಗಿ ಐದು ಘಂಟೆಗೇ ಏಳಬೇಕು. ಈ ಅರನಿದ್ದೆಯ ಮೂಲಕ ಎಲ್ಲಿಯಾದರೂ ಇತರ ಸಮಯದಲ್ಲಿ ಕಣ್ಣಿಗೆ ಕಣ್ಣು ತಾಕಿತೆಂದರೆ ಪಾಪವೆನಿಸುವದೇ ? ಯಾವುದು ಪಾಪವೋ, ಯಾವುದು ಪುಣ್ಯವೋ ಯಾರು ಬಲ್ಲ ! ಮಂಗಲಸೂತ್ರದೊಡನೆಯೇ ಸ್ತ್ರೀಯಳ ಆಶಾಸೂತ್ರವೂ ಹರಿದು ಹೋಗಬೇಕೇ ?

ಕಸ ಗುಡಿಸಿಯಾಯಿತು. ಕಪಾಟಿನ ಕನ್ನಡಿಯನ್ನು ಒದ್ದೆ ವಸ್ತ್ರದಿಂದ ಒರಿಸಿಯಾಯಿತು. ಕಪಾಟು, ಮೇಜು, ಖುರ್ಚಿ ಅಲ್ಲಲ್ಲಿ ವ್ಯವಸ್ಥಿತವಾಗಿಟ್ಟು ಕೋಣೆಯನ್ನು ಸಜ್ಜುಗೊಳಿಸಿದಳು. ತನ್ನ ಮೋರೆಯನ್ನೊಮ್ಮೆ ನೋಡಿಕೊಳ್ಳುವ ಉದ್ದೇಶದಿಂದ ಅಲ್ಲಿದ್ದ ಕನ್ನಡಿ ಮುಂದೆ ನಿಂತಿದ್ದಳು.

ಅತ್ತೆ ಮಾಳಿಗೆ ಮೆಟ್ಟಲು ಏರುತ್ತಲೇ ಸಹಸ್ರನಾಮದ ಪಾರಾಯಣಕ್ಕೆ ಆರಂಭಿಸಿದ್ದಳು. ಅತ್ತೆ ನಿಧಾನವಾಗಿ ಕಳ್ಳ ಬೆಕ್ಕಿನಂತೆ ಮೇಲೇರಿ ಬಂದದ್ದು ಸುಧೆಗೆ ತಿಳಿದಿರಲಿಲ್ಲ. ಸುಧೆ ತಲೆ ತಗ್ಗಿಸಿ ಒಂದು ಬದಿಗೆ ಸರಿದಳು.

" ಈಗ ಏಕೆ ತಲೆ ಬಗ್ಗಿಸುತ್ತೀಯೇ ? ನೀನು ಈ ರೀತಿ ಒಂದೊಂದೇ ಮಾಡುವುದರಿಂದ ನಮಗೆ ತಲೆಯೆತ್ತಿ ತಿರುಗುವುದೇ ಕಷ್ಟವಾಗಿದೆ. ಅಲ್ಲ, ಕನ್ನಡಿಯಲ್ಲಿ ನಿನ್ನ ಒಡಕು ಹಣೆ ನೋಡಿಕೊಳ್ಳುವದಕ್ಕೆ ನಾಚಿಕೆಯಾಗುವದಿಲ್ಲವೇ ? ಇನ್ನು ಮುದ್ದಾಗಿ ಹೆರಳುಹಾಕಿಕೊಂಡು ಕಿಡಿಕಿಯಲ್ಲಿ ಕೂಡೋದೊಂದು ಉಳಿದಿದೆ. ಹುಂ! ತಗೋ, ಈ ಮೂಗುತಿ ತೆಗೆದುಕೋ, ಈ ವಂಕಿ, ಕಂಠಿ, ತೆಗೆದುಕೊ, ಶೃಂಗಾರ ಮಾಡಿಕೊಂಡು ಹೇಗೆ ಕಾಣುತ್ತೀಯೆಂತ ಕನ್ನಡಿಯಲ್ಲಿ ನೋಡಿಕೋ," ಎಂದು ಒದರುತ್ತ ತನ್ನ ಆಭರಣಗಳನ್ನೆಲ್ಲ ತೆಗೆದು ಸುಧೆಯ ಎದುರಿಗಿಟ್ಟಳು. ಪಾಪ ! ಸುಧೆಯಾದರೂ ಏನು ಮಾಡಬೇಕು ?

ಮದುವೆ ಮನೆಯ ವಾದ್ಯ ಕೇಳಿಸಹತ್ತಿತ್ತು. ಕಹಳೆಯ ಕೂಗು ಕೇಳಿದೊಡನೆಯೇ ಕಲಿಯು ಧಾವಿಸುವಂತೆ ಸುಂದರಾಬಾಯಿಯು ಹೋಗಲುದ್ಯುಕ್ತಳಾಗಿ 'ಮಧುಕರ ಬಂದರೆ ಅಲ್ಲಿಯೇ ಕಳಿಸು. ಅಕ್ಷತೆ ಬಿದ್ದೊಡನೆಯೇ ಬರುತ್ತೇನೆ. ಮದುವೆ ಮನೆಯವರು ರಾತ್ರಿ ಅಲ್ಲಿಯೇ ಇರಲು ಒತ್ತಾಯಪಡಿಸಿದ್ದರು. ಆದರೂ ನಿನ್ನ ಮೇಲೆ ಹೇಗೆ ಮನೆಬಿಟ್ಟು ಹೋಗಲಿ ? ನೀನು ಯಾರದಾದರೂ ಕೈ ಹಿಡಿದು ಹೋಗಿಬಿಟ್ಟರೆ !' ಎಂದು ಬಂದೆ.

ಸುಧೆಗೆ ದುಃಖ ಒತ್ತರಿಸಿ ಬಂದಿತ್ತು. ಒಬ್ಬಳೇ ಆದುದರಿಂದ ಅತ್ತೆಯ ಮಾತು ಒಂದೊಂದೇ ಎಚ್ಚರವಾಗಿ ದುಃಖ ಹೆಚ್ಚುತ್ತಿತ್ತು. "ಮಾವ ಕಾಣೆಯಾಗುವುದಕ್ಕೂ, ಗಂಡ ತೀರುವುದಕ್ಕೂ ನನ್ನ ಕಾಲ್ಗುಣ ಕಾರಣವೇ ! ಹಸಿ ಹುಲ್ಲಿನ ಮೇಲೆ ನನ್ನ ಕಾಲು ಬಿದ್ದರೆ ಅದೇನೂ ಸುಟ್ಟು ಹೋಗುವದಿಲ್ಲ. ಕೊಳದ ನೀರಲ್ಲಿ ಕಾಲಿಟ್ಟರೆ ನೀರೇನೂ ಕೊಳೆಯಾಗುವದಿಲ್ಲ. ಆದರೂ ಕಾಲ್ಗುಣವೆಂದರೇನು? ಇಷ್ಟೊಂದು ಕಣ್ಣೀರು ಕರೆದರೂ ಕಾಲುಗಳಿಗೆ ಅಂಟಿಕೊಂಡ ಅಮಂಗಲದ ಕಲ್ಮಷ ತೊಳೆದು ಹೋಗಬಾರದೇ ? ಹತ್ತಕ್ಕೆ ಮದುವೆ ಹನ್ನೊಂದಕ್ಕೆ ವೈಧವ್ಯ. ಇಡೀ ಆಯುಷ್ಯವೆಲ್ಲ ಕಷ್ಟಗಳ ಜಂಜಾಟ ! ಈ ಭಾಗ್ಯ ಭೋಗಿಸುವುದಕ್ಕಾಗಿಯೇ ನನ್ನ ಸೃಷ್ಟಿಯಾಯಿತೇ ? ಈ ಬಾಳಿಗಿಂತ ಆತ್ಮಹತ್ಯೆ ಮೇಲು !"

ಆತ್ಮಹತ್ಯೆಯ ವಿಚಾರ ಬಂದೊಡನೆ ಮಧ್ಯಾಹ್ನ ಮಲಗಿದಾಗ ಬಿದ್ದ ಕನಸಿನ ನೆನಪಾಯಿತು. ಆತ್ಮಹತ್ಯೆಗಾಗಿ ಶಿವಾಲಯದೆದುರಿನ ಸಾಗರಕ್ಕೆ ಹೋದಾಗ ಹಿಂದಿನಿಂದ ತಂದೆ ಬಂದು 'ಸುಧಾ' ಎಂದು ಕರೆದರು. 'ಇದೇನು ತಾರುಣ್ಯದಲ್ಲಿಯೇ ಜೀವನಕ್ಕೆ ಉದಾಸೀನಳಾದೆ?' ಎಂದರು.

"ಸುಖದ ಆಸೆ ಕಾಣದಿದ್ದಾಗ ಉದಾಸೀನಳಾಗದೆ ಇನ್ನೇನು ಮಾಡಲಿ ?"

"ಸುಖವನ್ನು ಬಯಸುವ ಅಧಿಕಾರ ಈ ಜಗತ್ತಿನಲ್ಲಿ ಪ್ರತಿಯೊಬ್ಬರಿಗಿದೆ. ನಿನಗೆ ಸಂದೇಹವಿದ್ದರೆ ಈ ಬ್ರಹ್ಮೇಶ್ವರನಿಗೆ ಕೇಳು"

ತಂದೆಯ ಜೊತೆಗೆ ದೇವಾಲಯಕ್ಕೆ ಹೋದೆ. 'ಹೊರಗೆ ನೋಡು' ಎಂದು ಗಂಭೀರವಾಗಿ ಯಾರೋ ಹೇಳಿದಂತಾಯಿತು. ಹೊರಗೆ ನೋಡಹತ್ತಿದೆ. ' ಒಣಗಿದ ಗಿಡ ಚಿಗುರುತ್ತಿದೆ. ಬತ್ತಿದ ಹೊಳೆ ತುಂಬಿ ಹರಿಯುತ್ತಿದೆ. ಕತ್ತಲೆಯಲ್ಲಿ ಕಾಣದ ಪ್ರಕಾಶವನ್ನು ಉಷೆಯು ಸುರಿಸುತ್ತಿದೆ. ಸಂಪೂರ್ಣ ಜಗತ್ತೂ ಬದುಕುವ ಆಶೆಯಿಂದ ಬದುಕುತ್ತಿದೆ. ' ಎಂದು ಕಂಡೆ. ಆದರೆ ಆಸೆಯೇ ಇರದ ನಾನು ಸಾಯದೇನು ಮಾಡಲಿ ? ಎಂದು ಕೇಳುವಷ್ಟರಲ್ಲಿಯೇ ಒಬ್ಬ ತರುಣ ಸಮೀಪಕ್ಕೆ ಬಂದು ಕರೆದ. ಓಗುಡಲು ಯತ್ನಿಸಿದರೂ ಮಾತು ಹೊರಬೀಳಲಿಲ್ಲ. ಹತ್ತಿರಕ್ಕೆ ಬಂದು ಇನ್ನೊಮ್ಮೆ ಕರೆದ. " ಸುಧಾ-" ಗಲ್ಲಕ್ಕೆ ತುಟಿಯ ಸ್ಪರ್ಶವಾದಂತೆ ಅನಿಸಿತು. ನಾನು ಮುಖತಿರುವಿ ಹುಸಿಮುನಿಸಿನಿಂದ " ನಾನೊಲ್ಲೆ ಊಂ " ಎಂದೆ.

ಇಲ್ಲಿಯೇ ಆ ಕನಸು ಕೊನೆಗಂಡಿತ್ತು. ಆದರೆ ವಿಧವೆ ಇಂತಹ ವಿಚಾರ ಮಾಡಬಾರದೆಂದೆನಿಸಿ ಪಶ್ಚಾತ್ತಾಪ ಪಡಹತ್ತಿದಳು. ದೇವರ ಕೋಣೆಗೆ ಹೋಗಿ ಅಡ್ಡಬಿದ್ದು " ದೇವಾ, ಕನಸಿನಲ್ಲಿಯ ಸನ್ನ ಈ ಅಲ್ಲದ ವಿಚಾರಗಳನ್ನು ಕ್ಷಮಿಸು." ಎಂದು ಮೊರೆಯಿಟ್ಟಳು.

ಅವಳು ಅದೇ ಸ್ಥಿತಿಯಲ್ಲಿ ಇನ್ನೆಷ್ಟು ಹೊತ್ತು ಅಲ್ಲಿರುತ್ತಿದ್ದಳೋ ಯಾರು ಬಲ್ಲ ? ಆದರೆ ಅಷ್ಟರಲ್ಲಿ ಯಾರೋ " ಸುಧಾ " ಎಂದು ಕರೆದರು. ಹೊರಗೆ ಹೋಗಿ ನೋಡಲು ಅವಳ ಅಣ್ಣ ಒಬ್ಬ ಗೃಹಸ್ಥನನ್ನು ಕರೆದುಕೊಂಡು ಬಂದಿದ್ದ.

' ಮಧುಕರ ರಾಯರೆಲ್ಲಿ ? '. ಎಂದ ಅಣ್ಣ.

" ಕಾವ್ಯಗಾನಕ್ಕಾಗಿ ಪುಣೆಗೆ ಹೋಗಿರುವರು, ಅಣ್ಣಾ ! ಒಳಗೆ ಬಂದು ಕುಳಿತರಾಗದೇ ?"

" ನಾನು ಇಲ್ಲಿಯ ಮದುವೆಗೆಂದು ಬಂದಿದ್ದೆ. " ಎನ್ನುತ್ತ ಹತ್ತಿರದಲ್ಲಿದ್ದ ತೂಗುಮಂಚದ ಮೇಲೆ ಇಬ್ಬರೂ ಕುಳಿತರು.

" ಅತ್ತಿಗೆಯೆಲ್ಲ ಕ್ಷೇಮದಲ್ಲಿರುವಳೆ ? "

“ ಈಗ ನಾಲ್ಕನೇ ತಿಂಗಳು. ಹಿಂದೆ ಐದಾರು ಗರ್ಭದ ಹಣೆಬರಹವೂ ಒಂದೇ ಆಯಿತು. ನಾಲ್ಕು ತಿಂಗಳಾಗೋದು; ಗರ್ಭಪಾತವಾಗೋದು ” ಎಂದು ಬಂದ ಸದ್ಗೃಹಸ್ಥರಿಗೆ ತನ್ನ ಬವಣೆ ಹೇಳಿದ.

“ ಅತ್ತೆ ಮದುವೆ ಮನೆಗೆ ಹೋಗಿದ್ದಾಳೆ. ಚಹಕ್ಕೆ ಎಸರಿಡಲೆ ?

ಚಹಾ ಮಾಡಲು ಅನುಮತಿ ದೊರೆಯಿತು. ಸುಧೆಯು ಒಳಗೆ ಹೋಗಿ ಚಹಾ ತಯಾರಿಸುತ್ತಿದ್ದಳಾದರೂ ಕಿವಿಯು ಹೊರಗೇ ಇತ್ತು.

“ ಸಾಯಮನ್ ಕಮಿಶನ್ನಿಗೆ ಕರೀಬಾವುಟ ಹಿಡಿದದ್ದು ಸರಿಯಾಗಲಿಲ್ಲ ನೋಡಿ ” ಎಂದ ಇನ್ನೊಬ್ಬ ಗೃಹಸ್ಥ.

“ ನಿಮ್ಮಂಥ ಹುಂಬರಿಗೆ ಇವೆಲ್ಲ ಹೇಗೆ ಗೊತ್ತಾದೀತು ? ನಾವೂ ಕಪ್ಪು. ನಮ್ಮ ಬಾವುಟಾನೂ ಕಪ್ಪು.”

“ ಜನ ಹೀಗೆ ಮಾಡೋದರಿಂದ ಸಿಕ್ಕೋ ಸ್ವರಾಜ್ಯವೂ ದೂರ ಹೋದೀತು. ”

ಅಷ್ಟರಲ್ಲಿ ಚಹಾ ಬಂದಿತು. ಚಹಾಪಾನ ಮುಗಿಸಿ ನಾಳೆ ಬರುತ್ತೇನೆಂದು ಹೇಳಿ ಹೋದ. ಬಂದ ಗೃಹಸ್ಥನೂ ಆತನನ್ನು ಹಿಂಬಾಲಿಸಿದ.

ನೆರೆಮನೆಯವರಲ್ಲಿ ಮುಹೂರ್ತ ಸಮೀಪಿಸಿದಂತೆ ವಾದ್ಯ ಬಾರಿಸಹತ್ತಿದವು. ಸುಧೆಯ ಹೃದಯದಲ್ಲಿ ಕಳವಳವಾಗತೊಡಗಿತು. ಆಕೆಗೆ ತನ್ನ ಮದುವೆಯ ಸಂದರ್ಭ ಕಣ್ಣಮುಂದೆ ಬಂದಿತು. ‘ ಆ ಹರೆಯದ ಹುರುಪು-ಮುಂದಿನ ಸಂಸಾರ ಸುಖದ’ ಕಲ್ಪನಾರಾಜ್ಯ, ಟೊಂಕದ ಮೇಲೆ ಮಗುವನ್ನಿಟ್ಟು ನಲಿಯುವ ಆ ಒಲವಿನ ಉತ್ಸಾಹ, ಅವೆಲ್ಲ ಈಗ ಕನಸಾಗಿದ್ದಿತು. ಒಮ್ಮೆ ಲಗ್ನದ ಮನೆಯ ಹತ್ತಿರ ಹೋಗಿ ಬರೋಣವೆಂಬ ಆಸೆ. ಆದರೆ ತನ್ನ ಕುಂಕುಮವಿಲ್ಲದ ಹಣೆಯ ನೆನಪಾಗಿ ಕಣ್ಣೀರ ಮೂಲಕವೇ ತನ್ನ ಹೃದಯವನ್ನು ಹರಿಬಿಡಬೇಕಾಯಿತು.

# ಪ್ರಕರಣ ೭.

ಸುಧಾಕರನ ತಾಯಿಗೆ ಇಂದು ದಿನವೆಲ್ಲಾ ಯುಗದಂತೆ ಭಾಸವಾಗುತ್ತಿದೆ. ಕೆಲಸ ಮಾಡಲಿಕ್ಕೂ ಇಷ್ಟವಿಲ್ಲ. ಬಾಗಿಲಲ್ಲಿ ತುಸು ನೆರಳು ಕಂಡರೂ ಮಗನು ಬಂದನೆಂದೇ ಭಾವಿಸಿ ಹೊರಗೋಡುವಳು. ಬಾಗಿಲ ಬಳಿಯಲ್ಲಿ ನಿಂತು ಕಾಲಿತ್ತರಿಸಿ ಎಷ್ಟೋ ಸಲ ನೋಡಿದ್ದೂ ಉಂಟು. ಸುಧಾಕರನು ಇನ್ನೂ ಏಕೆ ಬರಲಿಲ್ಲ ? ದಾರಿಯಲ್ಲೆಲ್ಲಾದರೂ ಅಪಘಾತ ಸಂಭವಿಸಲಿಲ್ಲವಷ್ಟೇ ಎಂದು ಯೋಚಿಸಿ ಕಣ್ಣೀರು ಮಿಡಿಯುವಳು. ಆಗ ಕುಲದೇವರಿಗೊಂದು ಹರಕೆ ಹೊರುವಳು. ಮಿತ್ರರ ಜೊತೆಗೆ ಕೂತು ತೆಗೆಸಿದ ಸುಧಾಕರನ ಫೋಟೋ ಮನೆಯಲ್ಲಿತ್ತು. ಅದನ್ನೊಮ್ಮೆ ನಿಟ್ಟಿಸುವಳು. ಪಾಪ ! ತಾಯ ಕೋಮಲ ಹೃದಯ ಕಳವಳ ಅದಾರು ಕಲ್ಪಿಸಬಲ್ಲ ? ಆಕೆ ಮಗನ ಪತ್ರವನ್ನು ಎಷ್ಟೋ ಸಲ ಓದಿದ್ದಳಾದರೂ ಮತ್ತೊಮ್ಮೆ ಪತ್ರವನ್ನು ಓದಹತ್ತಿದಳು. ಸಂಜೆಯಲ್ಲಿ ಮೇಘಮಾಲೆಯು ಸಂಧ್ಯಾರವಿ ತನ್ನ ಕಿರಣಗಳಿಂದ ದಿನದಿನವೂ ಬರೆಯುತ್ತಿರುವ ಪತ್ರ ಓದಿ ಪೃಥ್ವಿಗೆ ಬೇಸರು ಬಂದೀತೇ ? ಕಡಲು ತನ್ನ ಅಗಣಿತ ತೆರೆಯ ಕರಗಳಿಂದ ಬರೆಯುತ್ತಿರುವ ಪ್ರೇಮೋದ್ಗಾರಗಳನ್ನು ಲಕ್ಷಾಂತರ ವರ್ಷಗಳಿಂದ ಚಂದ್ರನೋದುತ್ತಿದ್ದರೂ ಆತನಿಗೆ ಸಾಕೆನಿಸಿದೆಯೆ ? ಸುಧಾಕರನ ತಾಯಿ ಮಗದೊಮ್ಮೆ ಆ ಪತ್ರವನ್ನು ಓದಹತ್ತಿದಳು.

“ ಅಮ್ಮಾ, ನಾನು ಶನಿವಾರ ಬೆಳಿಗ್ಗೆ ಇಲ್ಲಿಂದ ಹೊರಡುವವನಿದ್ದೆ. ಆದರೆ ಕಾಳೆ ಮೊದಲಾದ ಮಿತ್ರರು ತುಂಬಾ ಆಗ್ರಹ ಮಾಡಿದ್ದರಿಂದ ಇನ್ನೂ ಒಂದು ದಿನ ಇಲ್ಲಿರಬೇಕಾಗಿದೆ. ಅಮ್ಮಾ, ಒಂದು ವಿಮಾನು ಇದ್ದಿದ್ದರೆ ಎಷ್ಟು ಒಳಿತಾಗುತ್ತಿತ್ತು! ಇಲ್ಲಿಂದ ಬೆಳಿಗ್ಗೆ ಹೊರಟರೆ ಚಹಾ ಕುಡಿಯಲು ನಿನ್ನಲ್ಲಿಗೆ ಬಂದು ಸೇರುತ್ತಿದ್ದೆ.

ಈಗ ಹಗಲು ಹೇಗಾದರೂ ಕೆಲಸದಲ್ಲಿ ಕಳೆದು ಹೋಗುತ್ತಿದೆ. ಆದರೆ ರಾತ್ರಿಯಾಯಿತೆಂದರೆ ನಿನ್ನ ನೆನಪಾಗಹತ್ತುತ್ತಿದೆ. ಗೆಳೆಯ ಕಾಳೆ ಅಮರಾವತಿಯಿಂದ ನನಗಾಗಿ ಉತ್ತಮ ತಲೆದಿಂಬು ತಂದು ಕೊಟ್ಟ

ದ್ದಾನೆ. ಆದರೇನು ? ಅಮ್ಮಾ, ನಿನ್ನ ತೊಡೆಯ ಮೇಲೆ ತಲೆಯಿಟ್ಟು ಮಲಗಿದಾಗ ಆಗುವ ಸೌಖ್ಯದ ಶತಾಂಶವಾದರೂ ಇದರಿಂದ ಲಭಿಸು ವದೇ ? ನಸಕಿನಲ್ಲಿ ನಿನ್ನ ಉದಯರಾಗ ಕೇಳಬೇಕೆಂದು ಕಿವಿ ಕುತೂ ಹಲಬಡುತ್ತಿದೆ. ಗೆಳೆಯರೆಷ್ಟೋ ಇರಬಹುದು. ಆದಹೂ ನಿನ್ನ ವಾತ್ಸಲ್ಯ ಕ್ಕಾಗಿ ಹೃದಯ ತವಕಗೊಳ್ಳುತ್ತಿದೆ.

ಹಿಂದಿನ ಪತ್ರದಲ್ಲಿ ನನ್ನ ನೌಕರಿಯ ವಿಷಯವಾಗಿ ಬರೆದೇ ಇರು ವೆ. ಇಲ್ಲಿಯ ಕಾಲೇಜೇನೋ ನನ್ನನ್ನು ಇಟ್ಟುಕೊಳ್ಳಲು ಸಿದ್ಧವಿದೆ. ಆದರೆ ನಾನು ಇಲ್ಲಿದ್ದರೆ ಮಾತೃಭೂಮಿಗೆ ನನ್ನಿಂದ ಏನೂ ಪ್ರಯೋಜ ನವಾಗುವದಿಲ್ಲ. ಆಗರಕರರು ಎಂ. ಎ. ಪಾಸಾದಾಗ 'ಇನ್ನು ನಿನ್ನ ಮಗ ಶ್ರೀಮಂತನಾಗುತ್ತಾನೆಂದು ಭಾವಿಸಬೇಡ' ಎಂದು ತಾಯಿಗೆ ಬರೆದಿದ್ದರಂತೆ. 'ಶ್ರೀಮಂತನಾಗುವದಕ್ಕಿಂತ ಗುಣವಂತನಾಗಬೇಕೆಂ ದು ತಂದೆಯವರು ಹಂಬಲಿಸುತ್ತಿದ್ದರೆಂದು ಚಿಕ್ಕಂದಿನಿಂದಲೂ ನೀನು ಹೇಳುತ್ತಿದ್ದಿಯಲ್ಲ! ತಂದೆಯವರು ಹಿಂದೆ ಬೆಂಕಿಪೆಟ್ಟಿಗೆಯ ಕಾರಖಾನೆ ಯನ್ನು ತೆಗೆದಾಗ 'ತಿಳಿದೂ ತಿಳಿದೂ ಈ ಬೆಂಕಿಯಲ್ಲೇಕೆ ಹಾರುತ್ತೀರಿ' ಎಂದು ಅವರ ಗೆಳೆಯರು ಹೇಳಿದರೂ ಅವರು ತಮ್ಮ ಕಾರ್ಯ ನಿಲ್ಲಿಸ ಲಿಲ್ಲವಂತೆ. ನನಗೂ ಹಾಗೆಯೇ ಏನಾದರೊಂದು ಲೋಕೋಪಕಾರದ ಕಾರ್ಯ ಕೈಗೊಳ್ಳಬೇಕೆಂದಿದೆ. ನಮ್ಮಲ್ಲಿ ಬಡವರು, ಅಶಿಕ್ಷಿತರು ಬಹಳ. ಅವರ ಶಿಕ್ಷಣವನ್ನೇ ಕೈಯ್ಯಲ್ಲಿ ತೆಗೆದುಕೊಳ್ಳಬೇಕೆಂದಿರುವೆ. ನಿನ್ನ ಆಶೀರ್ವಾದವೊಂದಿದ್ದರೆ ಯಶವು ಕಟ್ಟಿಟ್ಟದ್ದೆ!"

ಅಷ್ಟರಲ್ಲಿ 'ಜಾನಕವ್ವ' ಎಂದು ಯಾರೋ ಕೂಗಿದುದರಿಂದ ಹೊರ ಬರಬೇಕಾಯಿತು.

"ಏನೇ ಗಂಗಾ ?"

"ಸುಧಾಕರ ಬಂದನೇನೆ?"

"ಇಲ್ಲ."

ಗಂಗಾಬಾಯಿ ಸಿಶ್ಯಂಕೆಯಿಂದ ಮುಂದೆ ಬಂದಳು. "ತುಸು ನಮ್ಮಲ್ಲಿಗೆ ಬರುತ್ತೀರಾ? ಆ ಗೋಪಾಳರಾಯನ ಹೆಂಡತಿ ತನ್ನ ಅತ್ತಿಗೆಯನ್ನು ಸಂಗಡ ಕರಕೊಂಡು ಬಂದಿದ್ದಾಳೆ. ನಿಮ್ಮ ಸುಧಾಕರನಿಗೆ ತಂದರೆ ಎಷ್ಟು ಶೋಭಿಸುತ್ತಿತ್ತು ಅವರ ಜೋಡಿ!"

ಜಾನಕಿಯಮ್ಮ ಬಾಗಿಲಿಳಿದು ಸ್ವಲ್ಪ ಮುಂದಕ್ಕೆ ಬಂದಳು. ಈಗೀಗ ಸುಧಾಕರನ ಮದುವೆಯ ಸುದ್ದಿ ಕಿವಿಗೆ ಬಿದ್ದರೆ ತಾಯಿಗೆ ತುಂಬಾ ಹಿಗ್ಗು.

ಸುಧಾಕರ ಐದು ವರ್ಷದವನಿದ್ದಾಗ್ಗೆ ಅವರ ತಂದೆಯವರು ಸ್ವದೇಶೀ ಬೆಂಕಿಕಡ್ಡಿಯ ಕಾರಖಾನೆ ತೆಗೆದರು. ಆದರೆ ಅದರಲ್ಲಿ ಇವರ ಕೈ ಚನ್ನಾಗಿ ಸುಟ್ಟುಹೋಯಿತು. ಉದ್ಯೋಗ ಪ್ರವೃತ್ತಿಯವರಾದುದರಿಂದ ಸಬಕಾರ ತಯಾರಿಸಹತ್ತಿದರು. ಈ ಸಬಕಾರ ಅವರ ಮನೆಯನ್ನೇ ತೊಳೆದುಬಿಟ್ಟಿತು. ಕೊನೆಗೆ ನಿರುಪಾಯರಾಗಿ ಗೋವೆಯಲ್ಲಿ ಶಿಕ್ಷಕವೃತ್ತಿಯನ್ನವಲಂಬಿಸಿದರು. ಆ ಮೇಲೆ ಜಾನಕಿಯಮ್ಮನ ಚಿಕ್ಕ ಸಂಸಾರ ಸರಾಗವಾಗಿ ಸಾಗಹತ್ತಿತು. ಸುಧಾಕರನಿಗೆ ಹದಿನೈದು ವರ್ಷ ಎನ್ನುವಾಗ ಅವರು ಕಾಲವಾದರು. ಮನೆ ಉತ್ಪನ್ನದಿಂದ ಹಾಗೂ ಹೀಗೂ ಹೊಟ್ಟೆ ತುಂಬುವಂತಿತ್ತು. ಸುಧಾಕರನ ಮೆಟ್ರಿಕ್ಯೂ ಮುಗಿದಿರಲಿಲ್ಲ. ಆದರೂ ತಾಯಿ ಧೈರ್ಯಗುಂದದೆ ಆತನ ಶಿಕ್ಷಣ ಪೂರ್ತಿ ಮಾಡುವ ವ್ಯವಸ್ಥೆ ಮಾಡಿದಳು. ಜನ್ಮತಃ ರೂಢಿಯ ವಾತಾವರಣದಲ್ಲಿ ಬೆಳೆದವಳಾಗಿದ್ದರೂ ಗಂಡನು ಸುಧಾರಣಾ ಪಂಥದವನಾದುದರಿಂದ ಆಕೆಯಲ್ಲಿ ರೂಢಿಪಾರೌಧ್ಯತೆ ಕಡಿಮೆಯಾಗಿತ್ತು. ಊರವರೆಷ್ಟೋ ಸುಧಾಕರನ ನಂಟುತನ ಬಯಸಿ ಬಂದರು. ಆದರೆ ಒಂದಕ್ಕೂ ಒಪ್ಪಲಿಲ್ಲ. ಒಬ್ಬ ಶಾಸ್ತ್ರಿಬುವಾನು "ಹೇಗಾದರೂ ನಿನ್ನ ಮಗ ಈಗ ೨೫ ವರ್ಷದವನಾದ. ಒಳ್ಳೇ ಪ್ರಾಯ. ಈ ಹೊತ್ತಿಗೆ ಮದುವೆ ಮಾಡದಿದ್ದರೆ ಅವನಿಗೆ ಇಲ್ಲದ ವ್ಯಸನ ಹತ್ತುತ್ತದೆ." ಎಂದು ಉಪದೇಶವನ್ನು ಮಾಡಿಯೂ ನೋಡಿದ. ಈ ಧರ್ಮಮಾರ್ತಂಡನಿಗೆ ೧೩ ವರ್ಷದ ಅಕ್ಷರಶಃ ಅಕ್ಷರಶತ್ರುವಾದ ಮದುವೆಗೆ ಬಂದ ಹುಡುಗಿಯು

ರುವುದರಿಂದಲೇ ಅವನಲ್ಲಿ ಈ ಉಪದೇಶದ ಕಳವಳವುಂಟಾಗಿದೆಯೆಂಬುದನ್ನು ಅರಿಯುವಷ್ಟು ಮಂದ ಬುದ್ಧಿಯವಳಲ್ಲ ಅವಳು! ಅಲ್ಲದೆ ೫೦ ವರ್ಷ ಮಿಕ್ಕಿದರೂ ಸೂಳೆ ಮನೆ ಮೆಟ್ಟಲನ್ನು ತಪ್ಪದೇ ಹತ್ತುವ ಈ ಶಾಸ್ತ್ರಿಬುವಾನ ನಿತ್ಯನೇಮ ಎಲ್ಲರ ನಗೆಗೆ ಪಕ್ಕಾಗಿತ್ತು.

ವಯಸ್ಸು, ಶಿಕ್ಷಣ, ಗುಣ ಇವೆಲ್ಲವುಗಳಿಂದ ಅನುರೂಪಳಾದ ಸೊಸೆಯನ್ನು ತರಬೇಕೆಂದು ಜಾನಕಿಯಮ್ಮ ನಿಶ್ಚಯಿಸಿದ್ದಳು. ನೆರೆ ಮನೆಯ ಗಂಗವ್ವನು ಈಗ ಹೇಳಿದ ಹುಡುಗಿ ಮುಂಬೈಯಲ್ಲಿ ಬೆಳೆದವಳು. ಸುಧಾಕರನಿಗೆ ಸರಿಹೋಗಬಹುದೆಂದು ನಿಶ್ಚಯಿಸಿ ಜಾನಕಿಯಮ್ಮ ಗೋಪಾಳರಾಯನ ಮನೆಗೆ ಬಂದಿದ್ದಳು. ಹುಡುಗಿ ಸುಂದರಿಯಾದರೂ ಆಡಂಬರ ಹೆಚ್ಚಾಗಿದೆಯೆಂದು ಭಾವಿಸಿದಳಾದರೂ ಗೋಪಾಳರಾಯನ ಹೆಂಡತಿಯೊಡನೆ ಮಾತನಾಡುವದನ್ನು ಬಿಡಲಿಲ್ಲ. ಅವಳೂ ಸಹ ಒಳ್ಳೇ ಅಭಿಮಾನದಿಂದ ತನ್ನ ಅತ್ತಿಗೆಯ ಗುಣವರ್ಣನೆ ಮಾಡತೊಡಗಿದಳು. ಅಲ್ಲದೆ ತನ್ನ ಗಂಡ ವರ ಶೋಧಕ್ಕಾಗಿ ಹೋದ ವಿಷಯವನ್ನು ಹೇಳಲು ಮರೆಯಲಿಲ್ಲ.

ಆ ಮಾತು ಈ ಮಾತು ಆಡಿದ ನಂತರ ಚಹಾಪಾನವಾಯಿತು. ತಮ್ಮ ಮನೆಯ ಬಾಗಿಲನ್ನು ಯಾರೋ ತಟ್ಟುತ್ತಿದ್ದಾರೆಂದು ಭಾಸವಾಗಿ ಮಗನ ಬರುವಿಕೆಗಾಗಿ ಕಾತರವಾಗಿದ್ದ ತಾಯಹೃದಯ ಎದ್ದು ಬಿಟ್ಟಿತು. ಮನೆಯ ಬಾಗಿಲಲ್ಲಿ ಆಕಳು, ಕರು ಬಂದು ನಿಂತಿತ್ತು. ಒಡತಿಯನ್ನು ಕಂಡೊಡನೆಯೇ ಕರುವು 'ಅಂಬಾ' ಎಂದು ಒದರಿತು. ಜಾನಕಿಯಮ್ಮನಿಗೆ ಸುಧಾಕರನ ನೆನಪಾಗಿ ಹೃದಯ ತುಂಬಿ ಬಂದಿತು. "ಸುಧಾಕರ ಎಂದೂ ಹೀಗೆ ಮಾಡಿದವನಲ್ಲ. ಇಂದೇಕೆ ಹೀಗಾಯಿತು? ದೇವಾ, ನಾರಾಯಣ, ನನ್ನ ಕಂದಮ್ಮನು ಎಲ್ಲಿಯೇ ಇದ್ದರೂ ಅವನನ್ನು ಕೃಪಾದೃಷ್ಟಿಯಿಂದ ಕಾಯಪ್ಪಾ!" ಎಂದು ಬೇಡಿಕೊಂಡಳು.

———o———

# ಪ್ರಕರಣ ೮.

ಬೆಳಗಾವಿಯನ್ನು ಬಿಡಲಿಕ್ಕೆ ವೇಳೆಯಾದುದರಿಂದ ಮೋಟರು ಬಾಣವೇಗದಿಂದ ತೀವ್ರವಾಗಿ ಸಾಗಿತ್ತು. ರಾವಸಾಹೇಬರು ಮುಂದಿನ ಜಾಗೆ ಹಿಡಿದಿದ್ದರು. ಉಳಿದವರೆಲ್ಲ ತಮತಮಗೆ ಯೋಗ್ಯ ಕಂಡಲ್ಲಿ ಕುಳ್ಳಿತುಕೊಂಡರು.

ಮೋಟರ ಪ್ರವಾಸ ಕಣ್ಣಿಗೊಂದು ಬಗೆಯ ಆಲಸ್ಯವನ್ನುಂಟು ಮಾಡುತ್ತದೆ. ಆದರಲ್ಲಿಯೂ ಮಧ್ಯಾಹ್ನ ಊಟವಾಗಿರಲಿಲ್ಲ. ಬಸ್ಸನ್ನು ಹಿಂಬಾಲಿಸುವ ಧೂಳು, ಧೂಳಿನಲ್ಲಿ ಆಡುತ್ತಿರುವ ಹುಡುಗರಂತೆ ಕಾಣುವ ಗಿಡಗಂಟೆ, ಧ್ಯೇಯದಂತೆ ಅತಿದೂರ ಕ್ಷಿತಿಜದ ಮೇಲೆ ಕಾಣುವ ನಸುನೀಲಿ ಬಣ್ಣದ ದಿನ್ನೆ, ಚಿಂವ್ ಚಿಂವ್ ಎಂದು ಒಂದರಿಂದ ಇನ್ನೊಂದು ಗಿಡಕ್ಕೆ ಜಿಗಿಯುವ ಪಕ್ಷಿ, ದಾರಿಯಂಚಿನಲ್ಲಿ ಬಣ್ಣ-ಬಣ್ಣಗಳಿಂದ ಶೋಭಿಸುತ್ತಿರುವ ಪುಷ್ಪ- ಇವೇ ಮೊದಲಾದ ನೋಟಗಳು ಕಣ್ಣನ್ನು ಸೆಳೆಯುತ್ತಿದ್ದರೂ ಮನಸ್ಸು ಮಾತ್ರ ಮನೆಬಾಗಿಲಲ್ಲಿ ಉತ್ಸುಕಳಾಗಿ ನಿಂತ ತಾಯಿಯೆಡೆ ಓಡಿಹೋಗಿದ್ದಿತು.

ಆದರೇನು ? ಗಾಡಿ ಪಂಕ್ಚರ ಆದುದರಿಂದ ನಿಲ್ಲಬೇಕಾಯಿತು. ಕೆಲಹೊತ್ತು ತಡೆದರೂ ಗಾಡಿ ಮುಂದೆ ಹೋಗುವ ಲಕ್ಷಣ ಕಾಣದ್ದರಿಂದ ತುಸು ಕೈಕಾಲಾಡಿಸಿಕೊಂಡು ಬರೋಣವೆಂದು ಸುಧಾಕರ, ಮಧುಕರ, ವಾರುಣಿ ಮತ್ತು ಜಗನ್ನಾಥ ಬಲಗಡೆಯ ಬೆಟ್ಟ ಹೊಕ್ಕರು. ಇಂಪಾದ ಸಂಗೀತದ ಆಲಾಪಕ್ಕೆ ತಲೆಯಲ್ಲಾಡಿಸುವ ರಸಿಕನಂತೆ ಅಲೆವೆಳ್ಳರಿಗೆ ಅಲ್ಲಿಯ ಗಿಡಮರಗಳು ತಲೆದೂಗುತ್ತಿದ್ದವು.

ಸ್ವಚ್ಛವಾದ ಜಾಗೆಯೊಂದನ್ನು ಆರಿಸಿ ಕುಳಿತುಕೊಂಡರು. ವಾರುಣಿಯು ರೇಶಿಮೆಯ ಕರವಸ್ತ್ರವೊಂದನ್ನು ಹಾಸಿ ಸೀರೆಗೆ ಒಂದಿಷ್ಟು ಹೊಲಸು ಹತ್ತದಂತೆ ಜಾಗ್ರತೆಯಾಗಿ ಕುಳಿತಳು. ಎಲ್ಲರೂ ದಣಿದಿದ್ದರಿಂದ ವಿನೋದವೇ ಒಳಿತೆಂದು ಭಾವಿಸಿ ಸುಧಾಕರನು ಬಂಡಿಯಲ್ಲಿಯ ಶಾಸ್ತ್ರಿ ಹಾಗೂ ಪುಂಡಂ ಭಟ್ಟರ ವಿಚಾರಗಳನ್ನು ಅನುಕರಣ ಮಾಡಿ

ವರ್ಣಿಸಿದ. ಜಗನ್ನಾಥನು ಮುಗ್ಗಿ ಹೇಳಿ ಮದುವೆ ಮಾಡಿಸುವ ತಪ್ಪುಗಾರ ಪುರೋಹಿತನ ಕಥೆ ಹೇಳಿದ. ಐದೇ ನಿಮಿಷಗಳಲ್ಲಿ ಏಕಾದಶ್ಶಿಯ ಆವರ್ತನೆ ಮುಗಿಸಿ ಮನುಷ್ಯರೊಡನೆ ದೇವರನ್ನೂ ವಂಚಿಸುವ ವೀರ-ಪ್ರತಿನಿತ್ಯವೂ ಮೂರು ತಾಸು ಮೂಗು ಹಿಡಿದು-ವಿಧವೆಯರ ಪಜೀತಿ ಮಾಡುವ ಅತಿರಥಿ, ತಾನು ನಿತ್ಯವೂ ಸೂಳೆ ಮನೆ ಮೆಟ್ಟಲನ್ನು ಹತ್ತಿದವರೂ, ಅಸ್ಪೃಶ್ಯನಿಗೆ ಮನೆ ಮೆಟ್ಟಲನ್ನು ಹತ್ತಗೊಡದ ಮಹಾರಥಿ- ಇವರೆಲ್ಲರ ಕಥೆ ಒಬ್ಬೊಬ್ಬರ ಬಾಯಿಂದ ಬಂದು ಎಲ್ಲರೂ ನಗೆಯ ಕಡಲಲ್ಲಿ ಈಜಾಡುವಂತಾಯಿತು.

ಸುಧಾಕರನು ಏನನ್ನೋ ಹೇಳುವವನಿದ್ದ. ಆದರೆ ಆತನ ಮುಂದೊಂದು ಹೆಂಗಸು ಕೋಳಿ ಹಿಡಿದುಕೊಂಡು ಹೋಗುತ್ತಿದ್ದಳು. ಅದರ ತಲೆ ಜೋತಾಡುತ್ತಿತ್ತು. ಅವಳುಟ್ಟ ಸೀರೆ ಚಿಕ್ಕದಿದ್ದುದರಿಂದ ಜನರನ್ನು ಕಂಡು ಸೆರಗು ಸರಿಪಡಿಸಿಕೊಳ್ಳಬಯಸಿದಳು. ಆದರೆ ಇನ್ನೊಂದು ಬದಿಮುಚ್ಚಲಿಲ್ಲ.

"ಎಲ್ಲಿಗೆ ಹೋಗುತ್ತೀರವ್ವಾ" ಎಂದು ಸುಧಾಕರನು ಕೇಳಿದ.

ಇಂತಹ ದೈವುಳ್ಳವರ ಮುಂದೆ ನಿಂತು ಮಾತಾಡಿದವಳೇ ಅಲ್ಲ. ಇಂತಹ ಸಂದರ್ಭ ಜೀವನದಲ್ಲಿ ಇದೇ ಮೊದಲಿನದಾದುದರಿಂದ ಆಕೆ ಅವಕ್ಕಾಗಿ ಬಿಟ್ಟಳು. ಅದರಿಂದ ಸುಧಾಕರನು ತಿರುಗಿ ಅದೇ ಪ್ರಶ್ನೆ ಮಾಡಬೇಕಾಯಿತು.

'ಧನಿಯರೇ, ಮಕ್ಕಳಿಗೆ ಬಹಳ ಕಾಯಿಲೆ. ಏನೇನೋ ಉಪಾಯ ಮಾಡಿದ್ವಿ. ಗುಣಾನೇ ಆಗಿಲ್ಲರಿ. ದೇವ್ರಿಗೆ ಕೋಳಿ ಕೊಟ್ಟರೆ ಗುಣ ಆದೀತೆಂತಾ ಭಟ್ಟರು ಹೇಳಿದರು. ಅದಕ್ಕಾಗಿ ಹೊಂಟೆನಿ' ಎಂದು ಹೇಳಿ ನಡೆದಳು. "ಮಧುಕರಾ, ಜನರಲ್ಲಿ ಜ್ಞಾನವಿಲ್ಲದ್ದರಿಂದಲೇ ಈ ಎಲ್ಲ ಬೂಟಾಟಿಕೆ ನಡೆಯುತ್ತಿದೆ. ಕೋಟಿಗಟ್ಟಲೆ ಅಶಿಕ್ಷಿತ ಜನರು ಸ್ವಾರ್ಥಸಾಧುಗಳ 'ಧರ್ಮ'ದಿಂದ ವಂಚಿತರಾಗಿ ಕಲ್ಲು ಮರಗಳಲ್ಲಿ ದೇವರಿದ್ದಾನೆಂದು ಭಾವಿಸಿ ಯಾತನೆಪಡುತ್ತಿದ್ದಾರೆ. ಈಗ ನೋಡು, ಧರ್ಮದ ಕೊಡಲಿಯು ಕೋಳಿಯ ಕತ್ತಿನ ಮೇಲೆ ಬೀಳಲಿದೆ. ಎಲ್ಲ

ಅಶಿಕ್ಷಿತ ಜನರು ನನಗೆ ಈ ಕೋಳಿಯಂತೆಯೇ ಭಾಸವಾಗುತ್ತಿದ್ದಾರೆ. ತಮ್ಮ ವಿಲಾಸಕ್ಕಾಗಿ ಯಾರು ಬೇಕಾದರೂ ಇವರನ್ನು ಬಲಿತೆಗೆದುಕೊಳ್ಳಬಹುದು........ "

ಮೋಟಾರಿನ ಹಾರ್ನು ಬಾರಿಸಹತ್ತಿದುದರಿಂದ ಎಲ್ಲರೂ ಲಗುಬಗೆಯಿಂದ ಹೋಗಿ ತಮ್ಮ ತಮ್ಮ ಜಾಗೆ ಹಿಡಿದುಕೊಂಡರು. ಮುಂದಿನ ಪ್ರಯಾಣವೂ ಸುಖಕರವಾಗಲಿಲ್ಲ. ಯಾಕಂದರೆ ಬಳಲಿದ್ದ ಯಮುವಿಗೆ ವಾಂತಿಗಾರಂಭವಾಯಿತು. ಈ ಎಲ್ಲ ತೊಂದರೆಗಳ ಮೂಲಕ ನಿರ್ದಿಷ್ಟ ಅವಧಿಯಲ್ಲಿ ಮೋಟಾರು ಮುಟ್ಟಲಿಲ್ಲ. ಸಾಯಂಕಾಲದೊಳಗಾಗಿ ತಮ್ಮ ಊರು ಮುಟ್ಟುವುದು ಸಾಧ್ಯವಿಲ್ಲದ್ದರಿಂದ ಎಲ್ಲರೂ ಅಲ್ಲಿಯೇ ತಂಗಿದರು.

ಅಲ್ಲಿ ಬ್ರಾಹ್ಮಣರಿಗೆ ಮಾತ್ರ ಪ್ರವೇಶವಿದ್ದ ಖಾನಾವಳಿಯಿತ್ತು. ಹೀಗಾಗಿ ಯಮುಳ ಬಗ್ಗೆ ಆಲೆದಾಡಿ ಶೂದ್ರರ ಮನೆಯಲ್ಲೊಂದು ಕಡೆ ಊಟಕ್ಕೆ ವ್ಯವಸ್ಥೆ ಮಾಡಿದ. ನಂತರ ಎಲ್ಲರೂ ಚಹಾ ತೆಗೆದುಕೊಂಡು ಸುಧಾಕರ, ಮಧುಕರ, ವಾಸಿಣಿ ಮಾತ್ರ ತಿರುಗಾಡಲು ಹೊರಟು ಅನತಿದೂರದಲ್ಲಿಯ ದಿನ್ನೆಯೊಂದನ್ನೇರಿ ಕುಳಿತರು.

ನಾಲ್ಕೂ ದಿಕ್ಕಿನಲ್ಲಿ ಸೌಂದರ್ಯದ ಸಮುದ್ರ ಪಸರಿಸಿತ್ತು. ಸಾವಿರಾರು ಸುಂದರ ಆಟಿಗೆಗಳ ಮಧ್ಯದಲ್ಲಿ ಯಾವುದೊಂದನ್ನು ಆರಿಸಲು ಸಾಧ್ಯವಾಗದ ಹಸುಳೆಯಂತೆ ಸುಧಾಕರನ ಗತಿಯಾಗಿತ್ತು.

ಸಂಧ್ಯಾಸಾಗರದಲ್ಲಿಯ ತರತರದ ತೆರೆಗಳು ಒಂದೆಡೆ ನರ್ತಿಸುತ್ತಿದ್ದರೆ ಇನ್ನೊಂದೆಡೆ ಕಂದರದಲ್ಲಿ ಗಿಡಗಂಟೆಗಳು ತಮ್ಮ ಚಂಡಿಕೆಗಳನ್ನು ಅಲ್ಲಾಡಿಸುತ್ತಿದ್ದವು. ಎಡಗಡೆಯಲ್ಲಿ ಕೋಟೆಯ ಪ್ರಾಕಾರದಂತೆ ಪಸರಿಸಿಕೊಂಡಿರುವ ಪರ್ವತ; ಬಲಗಡೆಯಲ್ಲಿ ಕಡಲಿನ ದೊಡ್ಡ ದೊಡ್ಡ ತೆರೆಗಳನ್ನು ಹೋಲುವ ಸಹ್ಯಾದ್ರಿಯ ನಸುನೀಲಿಯ ಸಾಲು. ಈ ವಿಶ್ವವನಸ್ಪತಿಗಳ ಸಮ್ಮೇಲನವನ್ನು ಕಂಡಾಗ ಜಗತ್ತಿನಲ್ಲಿ ಮರುಭೂಮಿಯಿದೆಯೆಂದು ಯಾರಿಗೂ ತೋರದು. ಎಲ್ಲಿ ನೋಡಿದಲ್ಲಿ ಹಚ್ಚಹಸಿರು. ಮಗುವಿನ ನಗು, ಸತಿಯ ಶೃಂಗಾರ, ಮಾತೆಯ ಮಮತೆ ಇವುಗಳ

ತ್ರಿವೇಣಿ ಸಂಗಮವಾದಂತಿತ್ತು. ಆ ಸೃಷ್ಟಿಸೌಂದರ್ಯ, ರೋಗರುಜಿನಗಳ ತವರ್ಮನೆಯಾದ ಮನುಜ ಶರೀರವನ್ನು ಬಿಟ್ಟು ಹೊಸ ಚಿಗುರಿನ ರೂಪ ಧರಿಸಿ ಮರಗಳ ಮೇಲೆ ನಲಿದಾಡುತ್ತಿರಬೇಕೆಂದೂ, ಅಸಿಲ ಲಹರಿಯಾಗಿ ಈ ಸೌಂದರ್ಯ ಸಾಗರದಲ್ಲಿ ಈಸಾಡುತ್ತಿರಬೇಕೆಂದೂ, ಇಲ್ಲವೆ ಯಾವುದಾದರೊಂದು ಪಕ್ಷಿಯಾಗಿ ಎಲೆಗಳ ತಾಳಕ್ಕೆ ಹಾಡಬೇಕೆಂದೂ, ಸುಧಾಕರನಿಗೆ ಅನಿಸಿತು.

"ಈಶ್ವರನ ದರ್ಶನವಾಗುವ ತಾಣವಿದೇ."

"ಇವೆಲ್ಲ ಕಾವ್ಯದ ವಿಷಯ, ಸುಧಾಕರಾ."

"ಈಶ್ವರನೆಂದರೆ ಸರ್ವ ಕಾವ್ಯಕಲ್ಪನೆಗಳ ಸಂಗಮವೆಂಬುದು ನಿಜ. ಆದರೆ ಕಾವ್ಯವೇನೆಂದರೇನೆಂಬುದು ಮಾತ್ರ ವಾದಗ್ರಸ್ತ ಪ್ರಶ್ನೆಯಾಗಿದೆ. ಪುಂಡಂ ಭಟ್ಟರಿಗೆ ನಿಜವಾದ ಧರ್ಮದ ಕಲ್ಪನೆಯಿಲ್ಲದಂತೆ-ಬಲಿಗಾಗಿ ಕೋಳಿಯನ್ನು ಒಯ್ಯುವ ಹೆಂಗಸಿಗೆ ದೇವರ ಕಲ್ಪನೆಯಿಲ್ಲದಂತೆ-ಬೆಳಗಾವಿಯ ಕಾವ್ಯಮಂಡಳಿಯವರಿಗೆ ಕಾವ್ಯವೇನೆಂಬುದರ ಗಂಧವೂ ಗೊತ್ತಿಲ್ಲ.".

ತನ್ನನ್ನು ಹೊಗಳುತ್ತಿದ್ದ ಕಾವ್ಯ ಮಂಡಳದ ತೆಗಳಿಕೆ ಮಧುಕರನಿಗೆ ಸಹನವಾಗಲಿಲ್ಲ.

"ಕವಿತೆಯ ಅರ್ಥವಾಗುವದಕ್ಕೂ ಯೋಗ್ಯತೆ ಬೇಕು. Literature is a nurse of noble natures ಎಂಬುದನ್ನು ನೀವು ಮರೆತಿದ್ದೀರಿ. ಕಾವ್ಯದೇವತೆಯು ಎಲ್ಲ ಉದಾತ್ತ ಗುಣಗಳ ಜನನಿಯಿರುತ್ತಾಳೆ."

"ಕಾವ್ಯದೇವತೆ ಉದಾತ್ತಗುಣಗಳ ಜನನಿಯಿರಬಹುದು. ಆದರೆ ಕಾವ್ಯ ರಾಕ್ಷಸಿ."

ವಾರುಣಿ ನಕ್ಕಳು. ಮಧುಕರನಿಗೆ ಇನ್ನಷ್ಟು ಕೋಪಹೆಚ್ಚಿತು.

"ಫರ್ಸ್ಟ್‌ಕ್ಲಾಸ್ ಎಂ. ಎ. ಆದ ಮಾತ್ರಕ್ಕೆ ಕಾವ್ಯದ ಅರ್ಥವಾಗಬೇಕೆಂದೇನೂ ನಿಯಮವಿಲ್ಲ."

ನಿಮ್ಮ ಮಾತು ನಿಜ. ಲಲಿತ ಕಲೆಗಳು ಗಿಳಿಪಾಠ ಮಾಡುವವರ ಸೊತ್ತಲ್ಲ. ಸುಗಂಧವನ್ನು ಹೊರುವ ವಾಯುವಿನ ಯೋಗ್ಯತೆ ಮಕರಂದಕ್ಕೆ ಲುಬ್ಧವಾಗಿರುವ ಪಾತರಗಿತ್ತಿಯಲ್ಲಿ ಹೇಗೆ ಬಂದೀತು? ”

“ ನನ್ನ ಮಾತನ್ನೇ ಒಪ್ಪಿದಿರಲ್ಲ ! ”

“ ಎಲ್ಲಿ ? ಮುತ್ತಿನ ಪರೀಕ್ಷೆ ಜೋಳ ಮಾರುವವನಿಗಾಗದೆಂದ ಮಾತ್ರಕ್ಕೆ ಮುತ್ತಿನಲ್ಲಿ ಹೆಚ್ಚುಕಡಿಮೆ ಇಲ್ಲವೇ ? ಕವಿಯು ನಕ್ಷತ್ರದಂತೆ ಇರುತ್ತಾನೆ ಅವನಿಂದ ಜಗತ್ತಿಗೆ ಸ್ವರ್ಗೀಯ ಸೌಂದರ್ಯ ಲಭಿಸಬೇಕು. ಮಾನವನ ಅಂತಃಕರಣದ ತೃಷೆಯನ್ನು ತಣಿಸದ ಕವಿತೆ ಕವಿತೆಯಲ್ಲ. ಆದರೆ ಇಂದಿನ ಕವಿಗಳಲ್ಲಿ ಹಲವರ ರಚನೆ ಕೇವಲ ಆತ್ಮವಂಚನೆಯಾಗಿ ಬಿಟ್ಟಿದೆ. ಸಮಾಜದ ಮಹತ್ಕಾರ್ಯ ತಾವು ಸಾಧಿಸುತ್ತಿದ್ದೇವೆಂದು ಅವರ ಭಾವನೆಯಿರುತ್ತದೆ. ಹೆಂಗಸರಿಗೆ ಚಿನ್ನಾಭರಣದ ಹಂಬಲವಿರುವಂತೆ ಗಂಡಸರಿಗೆ ಹೆಸರ ಹಂಬಲ ಹೆಚ್ಚು. ನಕಲಿ ಚಿನ್ನಾಭರಣವು ಸಂಪತ್ತು ಎನಿಸಿಕೊಳ್ಳದಂತೆ ಪತ್ರಿಕೆಯಲ್ಲಿ ಹೆಸರು ಬಂದ ಮಾತ್ರಕ್ಕೆ ಕೀರ್ತಿಯಾಗಲಾರದು. ಇಂತಹ ಕವಿಗಳ ಕೀರ್ತಿಯೆಂದರೆ ಸುವಾಸನೆಯಿರದ ಸುಂದರ ಬಣ್ಣದ ಪುಷ್ಪ. ಕವಿತಾದೇವಿಯ ಪದದಡಿಯಲ್ಲಿ ಕುಳಿತುಕೊಳ್ಳುವದಕ್ಕಿಂತ ನಮ್ಮ ಅಶಿಕ್ಷಿತ ದೇಶಬಾಂಧವರನ್ನು ಸಾಕ್ಷರರನ್ನಾಗಿ ಮಾಡಿದ್ದರೆ............”

ಮಧುಕರನ ಕೋಪ ಹಿಡಿಸಲಾರದಂತಾಗಿತ್ತು. ಯಾಕಂದರೆ ವಾರುಣಿಯು ಚಕಿತಳಾಗಿ ಗಂಗಾವತರಣವನ್ನು ಭಕ್ತಿಯಿಂದ ನೋಡುತ್ತ ನಿಂತ ಭಗೀರಥನಂತೆ ಸುಧಾಕರನೆಡೆಗೆ ತನ್ಮಯಳಾಗಿ ನೋಡುತ್ತಿದ್ದಳು.

“ ಸುಧಾಕರ, ದೋಷಹುಡುಕುವುದು ಯಾರಿಗೂ ಕಷ್ಟವಲ್ಲ. ಆದರೆ ಕಲ್ಲೇ ದೇವರೆಂದು ಒಬ್ಬನು ತಿಳಿಯುತ್ತಾನೆಂದ ಮಾತ್ರಕ್ಕೆ ಆ ಕಲ್ಲನ್ನು ಆತನ ತಲೆಯ ಮೇಲೆ ಕುಕ್ಕರಿಸಿ ಬಿಡುವದೇ ?

" ನಿಜವಾದ ಭಕ್ತನಿಗೆ ಅದರಿಂದಲೇ ಆನಂದವಾದೀತು."

" ಉದರದಲ್ಲಿ ಉರಿಯುತ್ತಿರುವ ಉರಿ ಹಾಗೂ ಪ್ರೇಮಶೂನ್ಯತೆಯ ಕಿಚ್ಚಿನಿಂದಲೇ ಜಗತ್ತು ಉರಿಯುತ್ತಲಿದೆ. ಅಂತಹರಿಗೆ ಜೀವನದ ಪೀಯೂಷವನ್ನು ಉಣ್ಣಿಸುತ್ತಿರುವುದು ಕಾವ್ಯವೇ ಅಲ್ಲವೇ ?"

"ಕಾವ್ಯವೊಂದು ಸಾಧನವೇ ಹೊರತು ಕಾವ್ಯವೇ ಜೀವನವಲ್ಲ."

" ಇಂತಹ ಶಾಬ್ದಿಕ ಆಟದಿಂದ ಜೀವನದ ಜಟಿಲ ಸಮಸ್ಯೆಯನ್ನು ಬಿಡಿಸುವುದು ಸಾಧ್ಯವಿಲ್ಲ."

" ಬೆಳಗಾಂವಿಯ ಕವಿಮಂಡಲಕ್ಕೆ ಈ ಮಾತು ಚನ್ನಾಗಿ ಅನ್ವಯಿಸುತ್ತಿದೆ. ದೇವರಂತೆ ಕಾವ್ಯವೂ ನಮ್ಮ ಜೀವನದಿಂದ ದೂರದಲ್ಲಿದೆಯೆಂದು ಭಾವಿಸುವುದು ತಪ್ಪಲ್ಲವೇ ? ಬಡಬಗ್ಗರ ಗುಡಿಸಲಿನಲ್ಲಿ ಭಿಕಾರಿಯ ಚಿಂದಿಯ ವಸ್ತ್ರದಲ್ಲಿ, ತಾಯ ಕಣ್ಣೀರಿಂದ ತೊಯ್ದು ಬೆಳೆಯುತ್ತಿರುವ ಮೂಕ ಅರ್ಭಕನಲ್ಲಿ— ಹೀಗೆ ಎಲ್ಲರಲ್ಲಿ ದೇವರಿದ್ದಾನೆ; ಕಾವ್ಯವೂ ಇದೆ. ಮಧುಕರ, ಕಾವ್ಯವೆಂಬುದು ಹೊರಗಿನಿಂದ ಬರುವ ವಸ್ತುವೆಂದು ನಾವು ತಿಳಿದಿರುವಷ್ಟು ದಿನ ನಮಗೆ ಬಳಲಿಕೆ ತಪ್ಪಿದುದಲ್ಲ."

ಮಧುಕರನಿಗೆ ತನ್ನ ಮಾತಿನಿಂದ ವಾರುಣಿಯ ಮೇಲಾವ ತರದ ಪರಿಣಾಮವಾಗುತ್ತಿದೆಯೆಂಬುದನ್ನು ಕಂಡು ಹಿಡಿಯುವ ಕುತೂಹಲವಿತ್ತು. ಸುಧಾಕರನ ಮುಂದೆ ತನ್ನ ಆಟ ಸಾಗದ್ದರಿಂದ ತಾನೊಂದು ಪದ್ಯ ಬರೆಯುವದಾಗಿ ಹೇಳಿ ಅನತಿದೂರದಲ್ಲಿ ಕೂತು ಕವನ ಗುಣುಗುಣಿಸ ಹತ್ತಿದ.

ಸುಧಾಕರ ಬೇರೆಯ ಹೊತ್ತಿನಲ್ಲಾಗಿದ್ದರೆ ಮಧುಕರನು ವಾರುಣಿಯ ಬಗ್ಗೆಯೇ ಪದ್ಯ ಬರೆಯಲು ಹೋಗಿದ್ದಾನೆಂದು ಊಹಿಸುತ್ತಿದ್ದನೋ ಏನೋ ! ಆದರೆ ಈಗ ಜೊತೆಯಲ್ಲಿ ಯಾರೂ ಇರದ್ದರಿಂದ ಶೂನ್ಯದೃಷ್ಟಿಯಿಂದ ಸಾವಕಾಶವಾಗಿ ಮುಂದವಾಗುತ್ತ ನಡೆದಿರುವ ಮುಂದಿನ ದೃಶ್ಯವನ್ನು ನೋಡಹತ್ತಿದ.

ಬಾಲ್ಯದಲ್ಲಿಯ ಉಜ್ವಲ ಮನೋರಾಜ್ಯಗಳು ಪ್ರತ್ಯಕ್ಷ ವ್ಯವಹಾರ ದಲ್ಲಿ ಕಣ್ಮರೆಯಾಗುವಂತೆ ರಾತ್ರಿಯ ಆಗಮನದಿಂದ ಸಂಜೆಯ ಸುಂದ ರವಾದ ಬಣ್ಣಗಳು ಕಣ್ಮರೆಯಾಗುತ್ತಿದ್ದವು. ರಜನಿಯು ಪ್ರೀತಿದೇವತೆ ಯಂತೆ ಸದ್ದಿಲ್ಲದೆ ಪೃಥ್ವಿಯ ಮೇಲೆ ಬರುತ್ತಿದ್ದಳು.

"ಏನಿಷ್ಟು ವಿಚಾರ ನಡೆಸಿರುವಿರಿ ?"

ಸುಧಾಕರ ಅಪ್ರತಿಭನಾದುದರಿಂದ ಒಮ್ಮೆಲೇ ಮಾತು ಹೊರಡ ಲಿಲ್ಲ.

"ಜೂನಿನಲ್ಲಿ ಪುನಃ ಸಾಂಗಲಿಗೆ ಹೋಗುವಿರಲ್ಲವೇ ?"

"ಇಲ್ಲ. ಇಲ್ಲಿಯೇ ಎಲ್ಲಿಯಾದರೂ, ಸಾಲೆಯಲ್ಲಿ ಮಾಸ್ತರನಾಗ ಬೇಕೆಂದಿದೆ."

"ಎಂ. ಎ.ದಲ್ಲಿ ಫರ್ಸ್ಟ್‌ಕ್ಲಾಸ ಬಂದು ಮಾಸ್ತರರಾಗುವದೇ? ಕಾಲನ್ನು ಸಾರಣೆಯರಿವೆಯನ್ನಾಗಿ ಉಪಯೋಗಿಸುವದೇ?"

ಬೇರೆಯವರಿಗೆ ಉತ್ತರ ಕೊಡಲಿಕ್ಕಾದರೆ ಸುಧಾಕರ ಹಿಂಜರಿ ಯುತ್ತಿದ್ದಿಲ್ಲ. ಈಗ ನಿರುತ್ತರನಾದ. "ನನ್ನ ಮಾತಿನಿಂದ ನಿಮಗೆ ಕೋಪ ಬಂದಿಲ್ಲವಷ್ಟೇ"— ಆಕೆಗೆ ನಾಚಿಕೆಯಾಗಿ ಹೋಗಿತ್ತು.

"ಛೇ, ಛೇ, ಹಾಗೇನಿಲ್ಲ."

"ಚಿನ್ನದಂತಹ ಬುದ್ಧಿಯಿದ್ದೂ ಮಾಸ್ತರರೇಕೆ ಆಗುತ್ತೀರಿ ನೀವು? ಚಿನ್ನದಿಂದ ಆಭರಣ ಮಾಡುತ್ತಾರೆಯೇ ಹೊರತು ಮೊಳೆ ತಯಾರಿಸುವದಿಲ್ಲ."

ಈ ಮಾತಿಗೆ ಯಾವ ಉತ್ತರ ಕೊಡಬೇಕೆಂದು ಯೋಚಿಸುತ್ತಿದ್ದ. ಅಷ್ಟರಲ್ಲಿ ಕವನ ಮುಗಿಸಿ ಮಧುಕರ ಬಂದಿದ್ದರಿಂದಲೂ, ಕತ್ತಲೆಯಾ ಗುತ್ತಲಿದ್ದುದರಿಂದಲೂ ಮನೆಯ ದಾರಿ ಹಿಡಿದರು.

———o———

# ಪ್ರಕರಣ ೯.

ಸುಧಾಕರ ಬಂದವನೇ ನೇರವಾಗಿ ಯಮೂವಿನ ಪ್ರಕೃತಿ ಹೇಗಿದೆ ಯೆಂದು ಕೇಳಲು ಹೋದ. ಅವರಿಬ್ಬರೂ ಗಂಜಿ ಕುಡಿದು ಮಲಗಿದ್ದರು. ಅಪರಿಚಿತ ಸ್ಥಳದಲ್ಲಿ ತಾನೊಂದೆರಡು ಮಾತನಾಡಿದರೆ ಅವರಿಗೆ ಹಿತವೆನಿಸಬಹುದೆಂದೆಣಿಸಿ ಅವರ ಪೂರ್ವಾಪರವೆನ್ನೆಲ್ಲ ಕೇಳಿದ. ಜಗನ್ನಾಥ ಹೇಳಿದ ಸಂಗತಿಯ ಸಾರಾಂಶವಿಷ್ಟು— ಜಯಗಾಂವದಿಂದ ಒಂದು ಮೈಲಿನ ಮೇಲೆ ಅವರ ಮನೆ. ಜಯಗಾಂವ ಹಾಯ್ಸ್ಕೂಲಿನಲ್ಲಿ ಏಳನೇಯತ್ತೆ ಕಲಿಯುವ ವಿದ್ಯಾರ್ಥಿ ಆತ. ಯಮುವಿನ ತವರು ಮನೆಯಿಂದ ಮಾವನ ಮನೆ ಒಂದೇ ಕೂಗಳತೆಯಲ್ಲಿತ್ತು. ಅವಳ ಮಾವ ಒಕ್ಕಲತನ ಮಾಡುತ್ತಿದ್ದ; ಗಂಡ ಗಿರಣಿಯಲ್ಲಿ ಕೂಲಿಕಾರನಾಗಿ ಮುಂಬೈಯಲ್ಲಿದ್ದ. ಹತ್ತು ವರ್ಷಗಳ ಹಿಂದೆ ಅವರ ಸ್ಥಿತಿ ಚನ್ನಾಗಿಯೇ ಇತ್ತು. ಪಿತ್ರಾರ್ಜಿತ ಆಸ್ತಿಯಿದ್ದುದರಿಂದ ಉಂಡುಟ್ಟು ಸುಖವಾಗಿದ್ದರು. ಆದರೆ ಯಮುವಿನ ಮಾವನನ್ನು ಮೋಸಗೊಳಿಸಿ ಆಸ್ತಿಯನ್ನು ಯಾರೋ ಎತ್ತಿಹಾಕಿದುದರಿಂದ ಬಡತನ ಅವರ ಮನೆಯಲ್ಲಿ ಕಾಲಿಟ್ಟಿತು. ಅತ್ತ ಗಿರಣಿಯಲ್ಲಿ ದುಡಿಯುತ್ತಿದ್ದ ಯಮುವಿನ ಗಂಡನೂ ಗಿರಣಿ ಮುಚ್ಚಿದುದರಿಂದ ಕೂಲಿ ಕೆಲಸಕ್ಕಾಗಿ ಅಲೆಯುತ್ತಿದ್ದಾನೆ. ಯಮುವಿಗೆ ನಾಲ್ಕೈದು ತಿಂಗಳಾಗಿದೆಯೆಂದು ಗೊತ್ತಾದುದರಿಂದ ಜಗನ್ನಾಥ ಮುಂಬೈಗೆ ಕರೆಯಲು ಹೋಗಿದ್ದ. ಈಗ ತಾನೇ ಅವರೆಲ್ಲ ಕೂಡಿ ಊರಿಗೆ ಹೊರಟಿದ್ದರು. ”

ಸುಧಾಕರನ ತಲೆಯಲ್ಲಿ ಯೋಚನೆಗಳ ತರಂಗವೇಳಹತ್ತಿದವು. ಆತ ಯಮು ಹಾಗೂ ವಾರುಣಿಯರ ತುಲನೆ ನಡಿಸಿದ್ದ. ಯಮುವಿನ ಹಣೆಯಲ್ಲಿ ಅದಾವ ಸುಖವಿದೆ? ಹತ್ತು ವರುಷಗಳ ಹಿಂದೆ ಇವಳ ಮಾವನನ್ನು ವಂಚಿಸಿದ ಧೂರ್ತ ಸವಿಯೂಟವನ್ನುಂಡು ತೇಗುತ್ತಿರಬಹುದು. ಆದರೆ ಈ ಬಡಪಾಯಿಗಳಿಗೆ ಗಂಜಿಗೂ ಗತಿಯಿಲ್ಲ. ಮೈಮೇಲಿದ್ದುದು ಹರಕು ಹೊಲಸು ಬಟ್ಟೆ. ವಾರುಣಿಯ ಮೈಮೇಲೆ ಇಂದು

ಜರೀ ಪತ್ತಲವಿದೆ. ನಾಳೆ I. C. S. ನನ್ನು ಮದುವೆಯಾಗಿ ಮೋಟಾರಿನಲ್ಲಿ ಮೆರೆಯಬಹುದು. ಹೊಟ್ಟೆಗಿಷ್ಟು ಹಿಟ್ಟು ತರಲು ಬಸುರಿ ಯಮು ಮಾತ್ರ ಹಗಲು-ಬಿಸಿಲೆನ್ನದೆ ದುಡಿಯಬೇಕಾದೀತು. ಸಾಹೇಬರ ಮುಂದೆ ಬಾಲ ಅಲ್ಲಾಡಿಸುವ ರಾವಸಾಹೇಬ, ಮಗಳ ಮದುವೆಗಾಗಿ ನೀರಿನಂತೆ ಹಣ ವೆಚ್ಚ ಮಾಡಬಹುದು. ಆದರೆ ಯಮುವಿನ ಶಿಶುವಿಗಿಷ್ಟು ಹಾಲಿಗೂ ಹಣ ಸಿಗದು. ಅಂದ ಬಳಿಕ ಇಂತಹ ಸ್ಥಿತಿಯನ್ನು ಸುಧಾರಿಸುವ ಬಗೆ ಹೇಗೆ ?....... ಆದಕ್ಕೆ ಶಿಕ್ಷಣವೊಂದೇ ತಾರಣೋಪಾಯ. ”

ಊಟಕ್ಕೆ ವೇಳೆಯಾಯಿತೆಂದು ತಿಳಿದು ಬೇಗನೇ ಖಾನಾವಳಿಗೆ ಬಂದ. ರಾವಸಾಹೇಬರು ಓಲ್ಡ ಫೋಕ್ಸಪುರಾಣ ಪ್ರವಚನಕ್ಕೆ ಆರಂಭಿಸಿದ್ದರು. ಇವೆಲ್ಲವುಗಳಿಂದ ತಪ್ಪಿಸಿಕೊಳ್ಳಲು ಊಟಕ್ಕೆ ಹೋಗುವುದೇ ಒಳಿತೆಂದೆನಿಸಿ ಸುಧಾಕರನು ಊಟಕ್ಕೆ ಹೋಗಲು ಎಬ್ಬಿಸಿದ. ಊಟವಾದ ನಂತರ ಮಧುಕರನು ವಾರುಣಿಯ ಬಗ್ಗೆ ಬರೆದ ಪದ್ಯವನ್ನು ಓದಿತೋರಿಸಿದ. ಅದು ಅಷ್ಟುರವೇ ಇತ್ತು. ಆದರೆ ಸರಳ, ಅನುಭವ-ಹೀನ ವಾರುಣಿಯನ್ನು ದಂಗು ಬಡಿಸುವಷ್ಟು ಸಾಮರ್ಥ್ಯ ಮಾತ್ರ ಅದರಲ್ಲಿತ್ತು. ಓಲ್ಡ ಫೋಕ್ಸ ಸಾಹೇಬರ ಪುರಾಣ ಶ್ರವಣವಾಗುವ ಕಾಲ ಬಂತೆಂದು ಅನಿಸಿದ್ದರಿಂದ ಮೋಟರ ಪ್ರವಾಸದ ಆಯಾಸದ ನೆವ ಮಾಡಿ ಹಾಸಿಗೆ ಹಾಸಿದ. ಎಲ್ಲರೂ ಸುಧಾಕರನನ್ನೇ ಅನುಸರಿಸಬೇಕಾಯಿತು.

ಸುಧಾಕರನಿಗೆ ನಿದ್ದೆ ಹತ್ತಲಿಲ್ಲ. ಮನದೆದುರು ವಾರುಣಿಯ ಸುಂದರ ರೂಪು, ಮದುವೆಯಾಗದೆ ದೇಶಸೇವೆ ಮಾಡಬೇಕೆಂಬ ಧ್ಯೇಯ, ಇವುಗಳಲ್ಲಿ ತುಮುಲ ನಡೆದಿತ್ತು. ಸಮುದ್ರದಲ್ಲಿ ಮುಳುಗಿ ಮುತ್ತನ್ನರಸುವವನು ನೌಕಾವಿಹಾರಕ್ಕಾಗಿ ತಲ್ಲಣಿಸಬಾರದೆಂದು ಯೋಚಿಸಿ ಮನಸ್ಸನ್ನು ಸ್ತಿಮಿತಕ್ಕೆ ತಂದುಕೊಂಡ.

ನಿದ್ದೆಬಾರದ್ದರಿಂದ ಸಾವಕಾಶವಾಗಿ ಹೊರಬಿದ್ದ. ಅಂಬರವು ಅಮೃತವನ್ನು ಸಿಂಪಡಿಸುತ್ತಿತ್ತು. ಮೇಲಿಂದಮೇಲೆ ಬರುವ ಹೂಗಳ ಕಂಪನ್ನೂ, ಅವಿರತವಾಗಿ ಸುರಿಯುತ್ತಿರುವ ಬೆಳದಿಂಗಳ ಸೋನೆಯನ್ನು

ಕಂಡು ಪೃಥ್ವಿಗೆ ಸುಗಂಧವನ್ನು ಪೂಸಿ ಸ್ನಾನವಮಾಡಿಸುತ್ತಿರುವಂತೆ
ಭಾಸವಾಯಿತು. ಪೃಥ್ವಿಯ ತಾಪವನ್ನು ನೋಡಿ ಅಂಬರದ ಅಂತಃಕರ
ಣವು ದ್ರವಿಸಿ ಬೆಳದಿಂಗಳ ರೂಪದಿಂದ ಸಂತೈಸುತ್ತಲಿತ್ತು. ತಿಳಿ ನೀರಿ
ನ ಕೊಳ ಕಂಡೊಡನೆ ಈಸುವ ಹುಮ್ಮಸ ಹೆಚ್ಚುವಂತೆ ಶುಭ್ರ, ಶೀತಲ,
ಶಶಿರಶ್ಮಿರಂಜಿತ ನಿಶೆಯಲ್ಲಿ ಅಡ್ಡಾಡಲು ಮನಸ್ಸಾಗುತ್ತಿದೆ. ಸುಧಾಕರ
ನೂ ಆ ಇಚ್ಛೆಗೆ ಬಲಿಯಾಗದೆ ಉಳಿಯಲಿಲ್ಲ.

ವಿರಹಿಗಳಾದ ತಾಯಿ-ಮಕ್ಕಳಿಗೆ, ಸತಿ-ಪತಿಯರಿಗೆ, ಒಲುಮೆ-
ಗೆಳೆಯರಿಗೆ ಬೀಳುವ ಸವಿಗನಸುಗಳು ಬೆಳದಿಂಗಳ ಹೊಟ್ಟೆಯಲ್ಲಿಯೇ
ಹುಟ್ಟುತ್ತಿರಬೇಕು. ನೋಡಿದಲ್ಲೆಲ್ಲ ಶಾಂತತೆ ಹಬ್ಬಿತ್ತು. ಆದರೆ ಆ
ಶಾಂತತೆಯು ಭಯಾನಕವಿರದೆ ಆಹ್ಲಾದದಾಯಕವಾಗಿತ್ತು. ನಿದ್ರಿಸುತ್ತಿ
ರುವ ಕೂಸಿನೆಡೆಗೆ ನೋಡುತ್ತಿರುವ ತಾಯಿಯಂತೆ, ಬಹುದಿನಗಳಿಂದ
ಅಗಲಿದ ಪತಿಯನ್ನು ಕಣ್ತುಂಬ ನೋಡುವದರಲ್ಲಿ ಮಗ್ನಳಾಗಿ ಮೌನವಿ
ರುವ ಸತಿಯಂತೆ ಎಲ್ಲೆಡೆಯಲ್ಲಿಯೂ ಶಾಂತಿ ನೆಲಸಿತ್ತು. ಗಾಳಿಯ ಸುಳಿ
ವು ಗಿಡಬಳ್ಳಿಗಳ ಪ್ರಣಯ ಸಂವಾದದಲ್ಲಿಯ ಅಕ್ಷರವನ್ನೊಂದು ಕಿವಿ
ಯಲ್ಲಿ ಹಾಕಿ, ಮರುಕ್ಷಣದಲ್ಲಿಯೇ ಇನ್ನೊಬ್ಬರ ಗುಟ್ಟೊಡೆದುದಕ್ಕಾಗಿ
ನಾಚಿ ಅಡಗಿಬಿಡುತ್ತಿತ್ತು. ಭಾವೀ ಆಸೆಯಂತೆ ದೂರದಲ್ಲಿ ತೋರುತ್ತಿರು
ವ ಪರ್ವತ, ಸೈನ್ಯದ ಬಾವುಟದಂತೆ ತೋರುತ್ತಿರುವ ಮರ, ಗಾಳಿ
ಬಂದಂತೆ ಬೆನ್ನು ತಿರುವಿ ಪುನಃ ಆನಂದದಿಂದ ಚಂದ್ರಮನನ್ನು ನೋಡು
ತ್ತಿರುವ ಹುಲ್ಲು— ಇವೆಲ್ಲ ಸುಧಾಕರನಿಗೆ ಚೇತೋಹಾರಿಯಾಗಿದ್ದವು.

ಸುಮಾರು ಅರ್ಧ ಮೈಲು ಹೋಗಿರಬಹುದು. ಆದರೂ ಆತನಿಗೆ
ನಡೆದಂತೆ ಅನಿಸಲಿಲ್ಲ. ಮಾರ್ಗವು ಪರ್ವತದ ಬಸಿರನ್ನು ಹೊಕ್ಕು ಅದ
ರ ಕೊನೆಯನ್ನು ಶೋಧಿಸಲು ಹೊರಟಿತ್ತು. ಎಡಗಡೆಯ ಗುಡ್ಡ ಉಚ್ಚ
ಧ್ಯೇಯದಂತೆ ತೋರುತ್ತಿತ್ತು; ಬಲಗಡೆಯಲ್ಲಿ ಕಂದರವು ಕುರುಡು ಸ್ವಾ
ರ್ಥದಂತೆ ಬಾಯ್ತೆರೆದು ನಿಂತಿತ್ತು. ಮನುಷ್ಯನ ಮನಸ್ಸಿನ ತುಮುಲವಿಲ್ಲಿ
ರೂಪುಗೊಂಡಿತ್ತು. ಕಲ್ಲುಮುಳ್ಳುಗಳಿಂದ ತುಂಬಿದ ಗುಡ್ಡವನ್ನೇರುವು
ದು ದುಸ್ತರವಾಗಿದ್ದರೂ ಹೊಂಡದಲ್ಲಿ ಬಿದ್ದಿರಲಿಕ್ಕಿಲ್ಲ; ಆದರೆ ಕಂದರದ

ಮುಗ್ಗಲು ತುಸು ಬಾಗಿ ಇಣಕಿದವರಲ್ಲಿ ಅದೆಷ್ಟು ಮಂದಿ ಕಂದರದಲ್ಲಿ ಜಾರಿ ಬಿದ್ದಿರುವರೋ ಯಾರು ಬಲ್ಲ ?

ಕಂದರದ ಬಳಿಯಲ್ಲಿ ಯಾರೋ ಒಬ್ಬ ಕುಳಿತಿದ್ದನ್ನು ಕಂಡು ಗಾಬರಿಯಾದ. ಭೂತ-ಪ್ರೇತಗಳ ಕಲ್ಪನೆ ಬಂದಿತಾದರೂ ಹೆಚ್ಚು ಹೊತ್ತು ನಿಲ್ಲಲಿಲ್ಲ. ಆದರೆ ಯಾರೋ ಆತ್ಮಹತ್ಯೆಗಾಗಿ ಧಾವಿಸಿ ಬಂದ ದುರ್ದೈವಿಯಿರಬೇಕೆಂದು ಭಾವಿಸಿದ. ಇಲ್ಲವಾದರೆ ಆತ ಈ ರಾತ್ರಿಯಲ್ಲಿ ಅದೆಂತಹ ಕೆಲಸ ಮಾಡುತ್ತಿರಬಹುದು ?

ಯಾರೋ ಬರುತ್ತಿರುವ ಸಪ್ಪಳವಾದುದರಿಂದ ಆಗಂತುಕ ವ್ಯಕ್ತಿ ಎದ್ದು ನಿಂತ. ಆತನೊಬ್ಬ ಕಾವಿಬಟ್ಟೆ ಧರಿಸಿದ ಸನ್ಯಾಸಿ. ಬಲಗೈಯ್ಯಲ್ಲಿ ಕೆಲ ವನಸ್ಪತಿಗಳಿದ್ದವು. ಎಡಗೈಯ್ಯಲ್ಲೊಂದು ದಂಡವಿತ್ತು. ಹಗಲು ಹೊತ್ತು ಇಂತಹ ಸಂನ್ಯಾಸಿಗಳನ್ನು ಸುಧಾಕರನೆಷ್ಟು ಸಲ ನೋಡಿರಬಹುದೋ ಏನೋ. ಆದರೂ ಆ ಪ್ರಶಾಂತವಾದ ವಾತಾವರಣದಲ್ಲಿ ಕಂಡ ಈ ಸೌಮ್ಯಮೂರ್ತಿಗೆ ವಂದಿಸದಿರುವಷ್ಟು ಉದ್ಧಟತನವುಳಿಯಲಿಲ್ಲ. ಆ ಸನ್ಯಾಸಿಯು "ನಾರಾಯಣ" ಎಂದು ಆಶೀರ್ವದಿಸಿದ. "ನಿದ್ದೆ ಹತ್ತಲಿಲ್ಲವಾದುದರಿಂದ ಹೀಗೆಯೇ ಅಡ್ಡಾಡಿ ಹೋಗೋಣವೆಂದು ಬಂದೆ" ಎಂದು ಸುಧಾಕರನು ವಿನಯದಿಂದ ನುಡಿದನು.

"ಮಗೂ, ನಿಮ್ಮಂತಹರಿಗೆ ಹೀಗೆ ನಿದ್ದೆಬಾರದಿರುವುದು ಒಳಿತಲ್ಲ; ನಿನಗೇನಾಗುತ್ತಿದೆ ಹೇಳು." ಈ ಆತ್ಮೀಯವಾದ ಮಾತಿನಿಂದ ಸುಧಾಕರನಿಗೆ ಆ ಸಾಧುವಿನಲ್ಲಿ ಗೌರವ ಬೆಳೆಯಿತು. ಸಾಧುವಿನ ಹೇಳಿಕೆಯಂತೆ ಅವನು ಅನತಿದೂರದಲ್ಲಿದ್ದ ಶಿಲಾಪೀಠದ ಮೇಲೆ ಕುಳಿತುಕೊಂಡನು.

"ಸ್ವಾಮಿಗಳೇ, ಇವು ಯಾವ ವನಸ್ಪತಿಗಳು ?"

"ಮಗೂ, ಇಲ್ಲಿರುವಷ್ಟು ವನಸ್ಪತಿಗಳು ಇನ್ನೆಲ್ಲಿಯೂ ಇಲ್ಲ. ಚಳಿಜ್ವರಕ್ಕೆಂದು ನಾನೇ ಈ ವನಸ್ಪತಿಗಳನ್ನು ಶೋಧಿಸಿರುವೆ"

"ನಿಮಗೆ ಅಷ್ಟೊಂದು ಪೀಡಿಸುತ್ತಿದೆಯೆ ?"

" ಹಾಗಲ್ಲ; ಈ ನಾಡಿನಲ್ಲಿ ಚಳಿಜ್ವರದಿಂದ ಮಲಗದ ಮನೆಯಿಲ್ಲ; ಇದೊಂದು ಬೇರು ನೀನೂ ಇಟ್ಟುಕೋ, ಯಾವುದಾದರೂ ರೋಗಿಗಳಿಗೆ ಉಪಯೋಗವಾದೀತು. ಈ ಹತ್ತಾರು ವರ್ಷಗಳ ಅವಧಿಯಲ್ಲಿ ನಾನು ಕಾಶಿಯಿಂದ ರಾಮೇಶ್ವರದ ವರೆಗೆ ಕಾಲನಡಿಗೆಯಿಂದಲೇ ಯಾತ್ರೆ ಮಾಡಿದೆ. ಲಕ್ಷಾವಧಿ ಜನರನ್ನು ಕಂಡೆ. ಹಲವರೊಡನೆ ಮಾತಾಡಿದೆ. ಶ್ರೀಮಂತರ ಮನೆಯಲ್ಲಿಯ ಬಾಸುಂದಿ-ಪುರಿಯ ರುಚಿನೋಡಿದೆ. ಬಡತನದಲ್ಲಿ ಬಳಲುವವರ ಒಣರೊಟ್ಟಿಯನ್ನೂ ತಿಂದೆ. ತಮ್ಮ ಮೂಗು ಹಿಡಿದುಕೊಳ್ಳುವವರನ್ನು ಕಂಡೆ. ಇನ್ನೊಬ್ಬರ ಕುತ್ತಿಗೆ ಹಿಚುಕುವವರನ್ನೂ ನೋಡಿದೆ. ಉದ್ಯಾನಗಳಲ್ಲಿ- ಮಸಣಗಳಲ್ಲಿ ಎಷ್ಟೋ ರಾತ್ರಿ ಕಳೆದಿರುವೆ. ಆದರೆ ಮಗು, ಯಾರಿಗೂ ದುಃಖ ತಪ್ಪಿಲ್ಲ. ಸುಖವು ಮಾತ್ರ ಮಿಂಚುಹುಳುವಿನಂತೆ ಮಿನುಗಿ ಮಾಯವಾಗುತ್ತಿದೆ. ಈ ಸುಖವೆಂಬ ಕಾಂಚನ ಮೃಗವು ಕೈಗೆ ಸಿಗುವದೆಂಬ ಆಸೆಯಿಂದ ಜನ ಜೀವಿಸುತ್ತಿದೆ. "

' ಇದಕ್ಕೆಲ್ಲ ದೇವರೇ ಹೊಣೆ. '

' ಅಲ್ಲ; ಹೀಗೆ ಹೇಳುವದೆಂದರೆ ಶಿಷ್ಯನ ಅಪರಾಧಕ್ಕಾಗಿ ಗುರುವನ್ನು ದಂಡಿಸಿದಂತೆ. ಇದರಲ್ಲಿ ದೇವರದೇನು ತಪ್ಪು ? ಶ್ರೀಮಂತರಿಗೆ ಬಡವರ ರಕ್ತವನ್ನು ಜಿಗಳಿಯಂತೆ ಹೀರಿರೆಂದು ಆ ದೇವನೇನು ಆಗ್ರಹ ಪಡಿಸಿರುವನೇ ? ಮಗೂ, ಕಳೆದ ಹತ್ತು ವರ್ಷಗಳಲ್ಲಿ ಅನೇಕ ವಿಚಿತ್ರ ಸಂಗತಿಗಳನ್ನು ಕಂಡಿರುವೆ. ಇದನ್ನೆಲ್ಲ ನೆನಿಸಿಕೊಂಡಾಗ ಬಾಳು ಹೇಯವೆಂದೆನಿಸುತ್ತಿದೆ. ಯಾವುದಾದರೊಂದು ಹಳ್ಳಿಗೆ ಹೋಗಿ, ಅಲ್ಲಿಯ ಶ್ರೀಮಂತರ ಹಾಗೂ ಕಲಿತವರ ಬಾಳ್ವೆಯನ್ನು ನಿರೀಕ್ಷಿಸು. ಆಗ ನಿನ್ನ ಅಭಿಪ್ರಾಯವೂ ನನ್ನಂತೆಯೇ ಆಗಬಹುದು. ಒಕ್ಕಲಿಗರ ರಕ್ತ ನೀರಿನಂತೆ ವೆಚ್ಚವಾಗುತ್ತಿದೆ. ಶ್ರೀಮಂತನು ಅದರಲ್ಲಿ ವಿಲಾಸದ ನೌಕೆಯನ್ನು ಬಿಟ್ಟು ವಿಹರಿಸುತ್ತಿರುವನು. ಒಂದೆಡೆ ವ್ಯಾಪಾರಿಗಳು ತುಂಬಿದ ಹೊಟ್ಟೆಯ ಮೇಲೆ ಕೈಯಾಡಿಸುತ್ತ ಲೋಡಿಗೆ ಆನಿಸಿಕೊಂಡು ಕುಳಿತಿದ್ದರೆ ಇನ್ನೊಂದೆಡೆ ಅವರ ಕೂಲಿಕಾರರು ನಾಳಿನ ಚಿಂತೆ

ಯಿಂದ ನಿದ್ರೆಯಿಲ್ಲದೆ ಹೊರಳಾಡುತ್ತಿದ್ದಾರೆ. ದೇಶಭಕ್ತ, ಸಾಧುಸಂತ, ಸಮಾಜಸುಧಾರಕರಲ್ಲಿಯಾದರೂ ಒಳ್ಳೆಯ ಜನರನ್ನು ಕಾಣುವುದು ಕಷ್ಟ. ಹಣವು ಪರಮೇಶ್ವರನ ಸ್ಥಾನವನ್ನೂ ಆಕ್ರಮಿಸಿ ಬಿಟ್ಟಿದೆ. ಗೀತೆಗಿಂತಲೂ ಬೇಂಕಬೂಕುಗಳೇ ಆಪದ್ರಕ್ಷಕಗಳಾಗಿವೆ. ಸತ್ಯಸಂಧ ರಾಮ, ಪರೋಪಕಾರಿ ಶಿಬಿಚಕ್ರವರ್ತಿಯರ ಕತೆಗಳನ್ನು ಕೇಳಿ ಧರ್ಮಿಷ್ಠರೆಂದೆನಿಸಿಕೊಳ್ಳುವ ಜನತೆಯೂ ಬಡವರ ರಕ್ತವನ್ನು ಹೀರುವುದರಲ್ಲಿ ಹಿಂದಾಗಿಲ್ಲ. ಬಡವರ ಒಡಲಿನಲ್ಲಿ ಬಡಬಾನಲ; ಉದ್ಯೋಗವಿಲ್ಲವೆಂದು ಗೋಳಿಡುವವರ ತಲೆಯಲ್ಲಿ ಸಿಡಿಯು ಸಿಡಿಯುತ್ತಲಿದೆ. ದುರಾಚಾರಿ ಗಂಡಂದಿರ, ಅತ್ಯಾಚಾರಿ ಅತ್ತೆಯರ ಕಾಟದಿಂದ ಸಾವಿರಾರು ನಿರಪರಾಧಿ ಹುಡುಗಿಯರ ಹೃದಯದಲ್ಲಿ ವಿದ್ರೋಹದ ಹೊಗೆಯೇಳುತ್ತಿದೆ. ಎಲ್ಲಿ ನೋಡಿದರೂ ಬೆಂಕಿ ಬಗ್ಗನೆ ಹೊತ್ತಿಕೊಳ್ಳುವುದರಲ್ಲಿದೆ. ಆದರೆ ನಮ್ಮ ಜಮೀನುದಾರರು, ಸಾಹುಕಾರರು ನಿದ್ದೆಗೈಯುತ್ತಲಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ನಿದ್ದೆ ಹೋಗುವವರೆಂದರೆ ಮನುಷ್ಯಾತೀತರಿರಬೇಕು; ಇಲ್ಲವೆ ಕತ್ತೆಗಳಿರಬೇಕು. ನಿನ್ನಲ್ಲಿ ಮನುಷ್ಯತ್ವವಿದ್ದುದರಿಂದಲೇ ನಿನಗೆ ನಿದ್ದೆ ಬಿದ್ದಿರಲಿಕ್ಕಿಲ್ಲ."

ಸುಧಾಕರ ಎಷ್ಟೋ ಕಾವಿ ಬಟ್ಟೆಯವರನ್ನು ಕಂಡಿದ್ದ. "ಇಂಗ್ಲಿಷ ಕಲಿತದ್ದರಿಂದ ಧರ್ಮ ಮುಳುಗಿಹೋಯಿತು. ಸಂಧ್ಯಾವಂದನೆ ಮಾಡದಿದ್ದುದೇ ಸಂಕಟಕ್ಕೆ ಕಾರಣ. ಅಯ್ಯೋ ಕಲಿಯುಗ...." ಎಂದು ಹೇಳುತ್ತಿದ್ದರು. ಆದರೆ ಈತ ಆ ಮಾಲಿಕೆಯೊಳಗಿನ ಮಣಿಯಲ್ಲ. ತೆರೆದ ಕಣ್ಣಿನಿಂದ ಜಗತ್ತನ್ನು ಕಂಡಿದ್ದ ಮಾನವ ಜಾತಿಯ ಅಂತಃಕರಣದ ಮೇಲಿಂದಲೇ ಪರಮೇಶ್ವರ ಪ್ರಾಪ್ತಿಯ ಮಾರ್ಗವು ಹಾಯ್ದು ಹೋಗುತ್ತಿದೆಯೆಂದು ನಂಬಿದ್ದ.

"ನೀನು ಇಂತಹ ಅವೇಳೆಯಲ್ಲಿ ಎತ್ತ ಹೊರಟೆ?"

"ಹೀಗೆಯೇ ಬಂದು ಬಿಟ್ಟೆ."

"ಮುಖವೆಂಬುದು ಮನಸ್ಸಿನ ಕನ್ನಡಿಯಿದ್ದಂತೆ. ನೀನು ಯಾವುದೋ ಚಿಂತೆಯಲ್ಲಿರಬೇಕು! ನಿನ್ನ ಲಗ್ನವಾಗಿದೆಯೇ?"

" ನಾನಿನ್ನೂ ಅವಿವಾಹಿತನಿರುವೆ. "

" ಹಾಗಾದರೆ ಯಾರ ಮೇಲಾದರೂ ಪ್ರೇಮವುಂಟಾಗಿರಬೇಕು."

ಸುಧಾಕರವು ತನ್ನ ಸಂಗತಿಯನ್ನೆಲ್ಲ ತಿಳಿಸಿದ. ಆದರೆ ರಾವಸಾಹೇಬ ಮಧುಕರ ವಾರುಣಿಯರ ಸುದ್ದಿಯನ್ನೆತ್ತಲಿಲ್ಲ.

" ದೇವರು ನಿನಗೆ ಒಳಿತನ್ನು ಮಾಡಲಿ. ಆದರೆ ಕಾಂಚನ, ಕಾಮಿನಿಯರ ಮುಂದೆ ನಿನ್ನಂತಹ ತರುಣನನ್ನು ಬಿಟ್ಟು ವಯಸ್ಸಾದವರೇ ಮೊಣಕಾಲೂರಿದ್ದಾರೆ. ಕೂದಲಿನ ಕಪ್ಪು ಹೋಗುತ್ತಿದೆಯೇ ಹೊರತು ಹೃದಯದ ಕಪ್ಪು ಹೋಗುವದಿಲ್ಲ. ಹೆಂಡತಿಯನ್ನು ಬಂಗಾರದಿಂದ ಶೃಂಗರಿಸಿದರೂ ಮುತ್ತಿನಿಂದ ಶೃಂಗರಿಸುವ ಹವ್ಯಾಸ ಇನ್ನೂ ಹುಟ್ಟುತ್ತಿದೆ. ಇದಕ್ಕೇ ಜನರು ಸದ್ಯ ಸಂಸಾರವೆನ್ನುತ್ತಿರುವರು. "

' ಹಾಗಾದರೆ ತಾವು ಎಂದು ಸಂನ್ಯಾಸವನ್ನು ಸ್ವೀಕರಿಸಿದಿರಿ ?'

' ಹತ್ತೇ ವರ್ಷವಾಯಿತು. '

ಸುಧಾಕರನಿಗೆ ಏನನ್ನೋ ಕೇಳಬೇಕಾಗಿದೆಯೆಂದು ಆತನ ಮುದ್ರೆಯಿಂದ ಕಂಡು ಬರುತ್ತಿತ್ತು. ಸಾಧುವಿಗೆ ಆತನ ಇಂಗಿತ ಗೊತ್ತಾಯಿತು. 'ಮಗೂ, ಅದರ ಕಾರಣವನ್ನು ಹೇಳಿ ನಿನ್ನ ಕಿವಿಯನ್ನು ಹೊಲೆಗೊಳಿಸುವದಿಲ್ಲ. ನಾನು ಸಂನ್ಯಾಸವನ್ನು ಸ್ವೀಕರಿಸಿ ಹತ್ತು ಮಳೆಗಾಲಗಳು ಕಳೆದರೂ ಹೃದಯದ ಉರಿ ಮಾತ್ರ ಆರಿಲ್ಲ. ಲೋಭವೇ ನನ್ನನ್ನು ಬಲಿತೆಗೆದುಕೊಂಡಿತು. ಹಣವು ಸಿಕ್ಕುತ್ತ ಹೋದಂತೆ ನನ್ನ ಆಸೆ ಬಲಿಯುತ್ತ ಹೋಯಿತು. ಅದಕ್ಕಾಗಿ ಎಷ್ಟೋ ಬಡಬಗ್ಗರ ಸೊತ್ತನ್ನು ಎತ್ತಿಹಾಕಿದೆ. ಕೊನೆಯದೊಂದು ಪ್ರಸಂಗ ಇನ್ನೂ ಜ್ಞಾಪಕವಿದೆ. ಓರ್ವ ಒಕ್ಕಲಿಗನ ಪುತ್ರ ಪ್ರೇಮದ ಲಾಭಹೊಂದಿ ಆತನನ್ನು ಆಜನ್ಮ ಭಿಕಾರಿಯನ್ನಾಗಿ ಮಾಡಿದೆ. ಅವನನ್ನು ಮೋಸಗೊಳಿಸಿದೆ. ಆದರೆ ದೈವವು ನನ್ನನ್ನು ಮೋಸಗೊಳಿಸಿತು. ನನ್ನ ಜಾಣ, ಸುಕುಮಾರ, ಆಜ್ಞಾಧಾರಕ ಮುದ್ದುಕುವರ ನನ್ನನ್ನು ನಡುನೀರಿನಲ್ಲಿ ಬಿಟ್ಟು ಹೋದ......." ಇದನ್ನು ಹೇಳುವಾಗ ಆತನಿಗೆ ದುಃಖ ಒತ್ತರಿಸಿ ಬಂತು.

' ಈ ದುಃಖವನ್ನು ಹೇಗಾದರೂ ಸಹಿಸುತ್ತಿದ್ದೇನೆ. ಆದರೆ ಉರಿಯುವ ಗಾಯಕ್ಕೆ ಉಪ್ಪೆರಚಿದಂತೆ ನನ್ನ ಸೊಸೆಯು ನೆನಪು ಸಹಿಸಲಸದಳವಾಗುತ್ತಿದೆ.'

ಇದನ್ನೆಲ್ಲ ತಾನೇಕೆ ಕೇಳಿದೆನೋ ಎಂದು ಸುಧಾಕರ ಕಸಿವಿಸಿಪಟ್ಟುಕೊಂಡ. ಆತನಿಗೆ ಈ ಸ್ಥಳ ಬಿಟ್ಟು ಹೊರತುಒಳಿತಾಗದೆಂದಿನಿಸಿತು.

"ತುಂಬಾ ರಾತ್ರಿಯಾಯಿತಲ್ಲ! ತಾವೆಲ್ಲಿ ಇಳಿದುಕೊಂಡಿರುವಿರಿ?"

' ರಾಮ ಮಂದಿರದಲ್ಲಿ.'

' ಮುಂದೆಲ್ಲಿಗೆ ಹೋಗುವಿರಿ ? '

' ಈ ಹತ್ತು ವರುಷ ದೇವರ ಪೂಜೆಯಲ್ಲಿ ದೇಹ ಸವೆಸಿದೆ. ಆದರೂ ಶಾಂತಿಯಿಲ್ಲ. ಜನ್ಮಭೂಮಿಯೇ ಕರ್ಮಭೂಮಿಯೆಂದು ಭಾವಿಸಿದ್ದೇನೆ. ಅದರ ಶೋಧದಲ್ಲಿ ತೊಡಗಿರುವೆ. ಹತ್ತಿರದ ಒಂದು ಹಳ್ಳಿಯಲ್ಲಿ ಊರಿಗೆ ಊರೇ ಚಳಿಜ್ವರದ ಬಾಧೆಯಿಂದ ಮಲಗಿದೆಯಂತೆ. ಈ ಬೇರುಗಳಿಂದೇನಾದರೂ ಹಿತವಾಗಬಹುದೋ ನೋಡಬೇಕಾಗಿದೆ. '

' ಹಾಗಾದರೆ ತಮ್ಮ ಭೆಟ್ಟಿಯೆಂದು ? '

' ಹೇಗೆ ಹೇಳಲಿ ? ಇಡೀ ಜಗತ್ತೇ ಸಂನ್ಯಾಸಿಯ ಮನೆ. '

' ಹೆಸರು ಕೇಳಿದರೆ ಕೋಪವಿಲ್ಲವಷ್ಟೇ! '

' ಸದು........ ಸದಾನಂದ. '

ಸಂನ್ಯಾಸಿಯ ಈ ಹೆಸರನ್ನು ಕೇಳಿ ನಗುಬಂದಿತು. ಸರ್ವತೀರ್ಥಗಳಲ್ಲಿ ಸ್ನಾನ ಮಾಡಿದರೂ ಹೃದಯದ ಉರಿ ಶಾಂತವಾಗುವದಲ್ಲ. ಆದರೆ ಹೆಸರು ಮಾತ್ರ ಸದಾನಂದ. ಸಂನ್ಯಾಸಿಯು ದಂಡಕಮಂಡಲುಗಳನ್ನೆತ್ತಿಕೊಂಡ. ಸುಧಾಕರನೂ ಜತೆಯಲ್ಲಿ ನಡೆದ. ಗಗನದಲ್ಲಿಯ ಚಂದ್ರಮ, ಬಲಗಡೆಯ ಎತ್ತರ ಪರ್ವತ, ದರೆಕಂದರದಲ್ಲಿಯ ಗಿಡಮರ ಆಶ್ಚರ್ಯದಿಂದ ಈ ಜತೆಯನ್ನು ನೋಡುತ್ತಿದ್ದವು.

' ಸಂಸಾರಿಕನ ಅಂತಃಕರಣದಲ್ಲಿ ಸಂನ್ಯಾಸದ ಜ್ಯೋತಿ ಬೆಳಗಬಲ್ಲದು; ಸಂನ್ಯಾಸಿಗೂ ಸಂಸಾರದ ಬಾಧೆಯಿರಬಲ್ಲುದೆಂ' ಬ ಕಲ್ಪನೆಯಿದ್ದಿದ್ದರೆ ಸುಧಾಕರ, ಸಂನ್ಯಾಸಿಯರ ಬಾಹ್ಯವಿರೋಧದ ಬಗ್ಗೆ ಅವುಗಳಿಗೆ ಅಷ್ಟು ವಿಸ್ಮಯವಾಗುತ್ತಿದ್ದಿಲ್ಲ.

———0———

## ಪ್ರಕರಣ ೧೦.

ಅತ್ತೆಯು ಮನದ ರಾಗ, ಹುಬ್ಬಿನ ತಾಳಕ್ಕೆ ಅನುಸರಿಸಿಯೇ ಸೊಸೆಯು ತನ್ನ ಜೀವನದ ಹಾಡನ್ನು ಹಾಡಬೇಕೆಂಬುದು ಆರ್ಯರ ರೂಢಿಯ ಸನಾತನ ಸಿದ್ಧಾಂತವಿರುತ್ತದೆ. ಅದರಲ್ಲಿಯೂ ವಿಧವೆ ಸೊಸೆಗೆ ಅತ್ತೆಯೇ ಪರದೈವತ. ಅಬರಲ್ಲಿಯೂ ಸುಂದರಾಬಾಯಿಯಂತಹ ಅತ್ತೆಯಿದ್ದ ಬಳಿಕ ಕೇಳುವದೇನು ? ಸುಂದರಾಬಾಯಿಯು ಯಾವಾಗ ತನ್ನನ್ನು ಕರೆಯಬಹುದೆಂಬ ನಿಯಮವಿಲ್ಲದ್ದರಿಂದ ಸುಧೆಯು ಯಾವಾಗಲೂ ಮೊಲದಂತೆ ಕಿವಿ ನೆಟ್ಟಗೆ ಮಾಡಿಕೊಂಡೇ ಇರುತ್ತಿದ್ದಳು. ಆದರೆ ಈ ಹೊತ್ತು ಮಾತ್ರ ಹೊರಗಿನಿಂದ ಅತ್ತೆ ಕೂಗಿದರೂ ಒಳಗಿನಿಂದ ಉತ್ತರ ಬರಲಿಲ್ಲ. ಅಂಗಳದಲ್ಲಿ ಪ್ರಲಯಕಾಲದ ಮೇಘದ ಕಡಕಡಾಟ ಆರಂಭವಾಗಿಬಿಟ್ಟಿತು.

" ಯಾರನ್ನಾದರೂ ಕರಕೊಂಡು ಮಹಡಿ ಮೇಲೆ ಕೂತಿದ್ದಾಳೋ ಏನೋ ? ಅತ್ತೆ ಸ್ವಲ್ಪ ಕಣ್ಮರೆಯಾದರೆ ಸಾಕು; ಸೊಸೆಯಂದಿರದೇ ರಾಜ್ಯ. ನಮ್ಮ ಕಾಲದಲ್ಲಿ ಹೀಗೆಲ್ಲ ಇರಲಿಲ್ಲ. ಮದುವೆ ಮನೆಯ ಫಲಾರಕ್ಕೆ ಹೋಗಿ ಐದು ನಿಮಿಷವೂ ಆಗಿರಲಿಕ್ಕಿಲ್ಲ; ಬಾಗಿಲ ತೆಗೆದು ಬೀದಿ ಬಸವಿ ಎಲ್ಲಿಯೋ ಹೋಗಿಬಿಟ್ಟಳು. ಏನಾದರೂ ಕಳವಾದರೆ ಇವಳಪ್ಪನದೇನು ಹೋಗುವದಿದೆ ? ಇವಳ ಕಾಲಗುಣ ಬೇಕಾದರೆ ಹೇಳುವಂಥಾದ್ದು; ಬಂದ ಆರು ತಿಂಗಳಲ್ಲೇ ಗಂಡನನ್ನು ತಿಂದುಬಿಟ್ಟಳು.

ಆದಾದ ಎರಡು ತಿಂಗಳಲ್ಲೇ ಮಾವ ಮನೆಬಿಟ್ಟು ಹೋದರು. ಈ ಹೊತ್ತು ಅವರಿಬ್ಬರ ಮದುವೆ ಮನೆಯ ಉಡುಗರೆ ಸಿಗುತ್ತಿತ್ತು. ಅಲ್ಲದೆ ಇಲ್ಲಿಯ ಜನರಿಂದ ಒಂದೊಂದೇ ಅಣಕುನುಡಿ ಕೇಳುವ ಪ್ರಸಂಗ. ಆಕೆಯೊಬ್ಬಳು 'ಸುಂದರಾಬಾಯಿಯವರೇ, ಇನ್ನೆಷ್ಟು ದಿನ ಅಂತ ಹೀಗೇ ಇರುತ್ತೀರಿ. ಕಣ್ಮರೆಯಾದ ಗಂಡಂದಿರು ವರ್ಷ ಎರಡು ವರ್ಷಗಳಲ್ಲಿಯೇ ತಿರುಗಿ ಬರುತ್ತಾರೆ.' ಎನ್ನುತ್ತಿದ್ದಾಳೆ. ಈ ಸೊಸೆ ಕಾಲ್ಗುಣ ಚನ್ನಾಗಿದ್ದರೆ ಇವೆಲ್ಲ ಕೇಳಬೇಕಿತ್ತೇ?"

ಹೀಗೆಯೇ ಒಟಗುಟ್ಟುತ್ತ ಜಗುಲಿಯೇರಿದಳು. ಆದರೆ ಅತ್ತ ವಾದ್ಯದ ಧ್ವನಿ ಕೇಳಿಸುತ್ತಿತ್ತು. ಆದರೆ ಒಳಗಿನಿಂದ ಯಾರೋ ನರಳುವ ದನಿ ಕೇಳಿಸಿತು. ಅದನ್ನು ಕೇಳಿ ಕಡಿವಾಣವಿಲ್ಲದ ಕುದುರೆಯಂತೆ ಅತ್ತ ಜಿಗಿದಳು.

"ಏನಾಗಿದೆಯೇ ನರಳಲಿಕ್ಕೆ. ಅಮ್ಮನ ನೆನಪು ಆಗಿದ್ದರೆ ಹೋಗಿಬಿಡು ಸ್ವರ್ಗಕ್ಕೆ. ಔಷಧವಿಲ್ಲದೆ ರೋಗ ದೂರವಾಗಬಹುದು."

ಸುಧೆಯು ಏನೂ ಮಾತಾಡಲಿಲ್ಲ. ನೆಲದ ಮೇಲೆ ಚಾಪೆಯೊಂದನ್ನು ಹಾಸಿಕೊಂಡು ಬಿದ್ದಿದ್ದಳು. ಮೈಮೇಲೊಂದು ಕಂಬಳಿ ಮಾತ್ರ ಇತ್ತು. ಸಮುದ್ರದ ಮೇಲೆ ಹಾರಿಬರುವ ತೆರೆಗಳಂತೆ ಸುಧೆಯ ಮೈ, ಮೇಲೆ ಕೆಳಗೆ ಆಗುತ್ತಿದ್ದುದನ್ನು ನೋಡಿದರೆ ಚಳಿಜ್ವರದಿಂದ ಆಕೆ ಬಳಲುತ್ತಿದ್ದಾಳೆಂದು ಯಾರಾದರೂ ಹೇಳಬಹುದಿತ್ತು. ಆದರೆ ಸೊಸೆಯ ಬಳಲಿಕೆ ಅತ್ತೆಯ ಕಣ್ಣಿಗೆ ಹಬ್ಬವಲ್ಲವೇ?

ಅತ್ತೆಯನ್ನು ಕಂಡೊಡನೆಯೇ ಸುಧೆಯು ಏಳಲು ಹವಣಿಸಿದಳು. ಆದರೆ ಮೈಮೇಲೆ ಜ್ವರವಿದ್ದುದರಿಂದ ಒಮ್ಮೆಲೇ ಏಳಲಿಕ್ಕಾಗಲಿಲ್ಲ.

"ಸೋಗುಮಾಡದೇ ಏನಾಗಿದೆ? ಎಲ್ಲಿಯಾದರೂ ನಾಟಕ ಕಂಪನಿಯಲ್ಲಿ ಸೇರಿದ್ದರೆ ಚೆನ್ನಾಗಿತ್ತು."

'ವಾಂತಿ ಬರುತ್ತಿ ......ದೆ.'

'ವಾಂತಿ ಬರಲಿಕ್ಕೇನಾಯಿತು ? ಗಂಡನಿಲ್ಲದೆ ಬಯಕೆ ಸುರುವಾಯಿತೋ ಏನೋ !'

ಮಧುಕರ ರಾವಸಾಹೇಬರ ಆಗಮನವಾದುದರಿಂದ ಮನೆಯ ಗೌರವ ರಕ್ಷಣೆಗಾಗಿ ಸುಧೆಯು ತನ್ನ ದುಃಖವನ್ನು ನುಂಗಿ ಕಾಲು ತೊಳೆಯಲು ನೀರು ತರಲು ಹೋದಳು. ಸುಧಾಕರನ ಮುಂದೆ ಎರಡು ದೃಶ್ಯಗಳು ಕಂಡವು. ಒಬ್ಬಳು ಮಧ್ಯವಯಸ್ಸಿನವಳಾದರೂ ಜರಿಯ ಸೀರೆಯನ್ನುಟ್ಟು ಮಧುಮಗನ ತಾಯಿಯಂತೆ ಕಾಣುತ್ತಿದ್ದಳು. ಇನ್ನೊಬ್ಬಳು ಇಪ್ಪತ್ತು ವರ್ಷದವಳಾದರೂ ದುಃಖದಿಂದ ಬಾಡಿಹೋಗಿದ್ದಳು. ಐವತ್ತರ ಮನೆಯೊಳಗಿರುವ ಅತ್ತೆಯು ಗೌರಿಯಂತೆ ಶೃಂಗಾರ ಮಾಡಿಕೊಳ್ಳಬೇಕು; ಇನ್ನೂ ಇಪ್ಪತ್ತರ ಮನೆಯನ್ನು ಸಹ ಮುಟ್ಟದಿರುವ ಸೊಸೆಯು ಲಂಕೆಯಲ್ಲಿಯ ಸೀತೆಯ ಅವಸ್ಥೆಯನ್ನು ಅನುಭವಿಸಬೇಕು. ಇದೆಲ್ಲಿಯ ನ್ಯಾಯ ? ಅದರಲ್ಲಿಯೂ ಸುಧೆಗೆ ಜ್ವರ ಬರುತ್ತಿದೆಯೆಂಬ ಸುದ್ದಿ ಆತನಿಗೆ ತಿಳಿಯಿತು. ಸುಧಾಕರನು ತನ್ನ ಕಿಸೆಯಲ್ಲಿಯ ಚೇರನ್ನು ತೆಗೆದು ಮಧುಕರನ ಕೈಗಿತ್ತ.

ಮಧುಕರನು ಅದನ್ನು ತೆಗೆದು ಕಿಡಕಿಯಲ್ಲಿಟ್ಟು "ನನ್ನ ತಂದೆಯವರು ದೊಡ್ಡ ವೈದ್ಯರಾಗಿದ್ದರೂ ನನಗೆ ಮೈಗೆ ಹಚ್ಚುವ ಭಸ್ಮದ ಹೊರತು ಇನ್ನಾವ ಭಸ್ಮವೂ ಗೊತ್ತಿಲ್ಲ. "ಇರಲಿ; ನೀವೂ ಲಗ್ನಕ್ಕೆ ಬರುವವರಷ್ಟೇ. ಒಂಭತ್ತೂವರೆಗೆ ಮುಹೂರ್ತವಿದೆ. ಈಗ ಬರೇ ಎಂಟಾಗಿದೆ."

"ನನಗೇನು ಅಲ್ಲಿಯ ಪರಿಚಯವಿಲ್ಲ. ಅದಕ್ಕಾಗಿ ಬರುವುದು ಸಮಂಜಸವಲ್ಲ."

ಸುಧಾಕರನ ನಿರ್ಧಾರಸ್ವಭಾವ ಮಧುಕರನಿಗೆ ಪರಿಚಿತವಿದ್ದುದರಿಂದ ಒತ್ತಾಯ ಮಾಡಲಿಲ್ಲ. ವರಾನ್ವೇಷಣೆಯೇ ಧ್ಯೇಯವಾಗಿದ್ದ ರಾವಸಾಹೇಬರು ವಾರುವಿಗೆ ಹೊಸ ಸೀರೆಯುಟ್ಟುಕೊಳ್ಳಲು ಹೇಳಿದರು. ಎಲ್ಲ ಮುಗಿದ ಮೇಲೆ ಮಧುಕರ, ಸುಂದರಾಬಾಯಿ, ವಾರುಣಿ ಹಾಗೂ ರಾವಸಾಹೇಬರು ಮದುವೆ ಮನೆಗೆ ಹೊರಟರು. ಸುಧಾಕರನಿಗೆ ಚಹಾ ಮಾಡಿ

ಕೊಡುವಂತೆ ಸೊಸೆಗೆ ಆಜ್ಞಾಪಿಸಲು ಮಾತ್ರ ಸುಂದರಾಬಾಯಿಯು ತಪ್ಪಲಿಲ್ಲ.

ಸುಧಾಕರನ ಮನಸ್ಸಿನಲ್ಲಿ ತುಮುಲ ಯುದ್ಧ ವಾರಂಭವಾಯಿತು. ಅತ್ತಿಗೆಗೆ ಔಷಧಕ್ಕೆಂದು ಕೊಟ್ಟ ಬೇರನ್ನು ವಿಧವೆಯ ಅಳಲ ಬಗ್ಗೆ ಪದ್ಯ ಬರೆಯುವ ಕವಿ ಮಧುಕರ ಕಿಡಕಿಯಲ್ಲಿ ಇಟ್ಟಿದ್ದ. ಆತನಿಗಾಗಿ ಅಸ್ವಸ್ಥ ಸೊಸೆ ಚಹಾ ತಯಾರಿಸುತ್ತಿದ್ದಳು. ನಡುಹರೆಯದ ಅತ್ತೆಯ ವಿಲಾಸಪ್ರಿಯತೆಗೆ ಕುಂದು ಬಂದಿಲ್ಲ. ಸೊಸೆಗೆ ಜ್ವರ ಬಂದಿದ್ದರೂ ಮದುವೆಯ ಮನೆಯಲ್ಲಿ ಮೆರೆಯಲು ಅತ್ತೆ ಹೋಗಬೇಕು. ತನಗೆ ಚಹಾ ಬೇಡವೆಂದು ಹೇಳಿದರಾಗುತ್ತಿತ್ತು. ಎಂದುಕೊಂಡ. ಆದರೆ ಹಾಗೆ ಹೇಳಲು ನಾಲಗೆಯೇಳಲಿಲ್ಲ.

ಚಹಾ ಬಂದಿತು. ತನಗೆ ನೀರು, ಗಂಧದ ಕಲ್ಲು ಬೇಕು ಎಂದ. ಆದರೆ ನೀರನ್ನು ಮಾತ್ರ ತಂದಿಟ್ಟು 'ಗಂಧದ ಕಲ್ಲು ದೇವರ ಬಳಿಯಲ್ಲಿದೆ. ನಾನು ಮುಟ್ಟಿದರೆ ಅತ್ತೆಯವರು ಸಿಟ್ಟಾಗಬಹುದು.' ಎಂದಳು.

ಸುಧಾಕರನೇ ಒಳಗೆ ಹೋಗಿ ಬೇರನ್ನು ತೇಯ್ದು ಕೊಟ್ಟ. ತಲೆಗೆ ಅಮೃತಾಂಜನವನ್ನು ಹಚ್ಚಿಕೊಳ್ಳುವಂತೆ ಹೇಳಿದ. ಅಮೃತಾಂಜನ ತಿಕ್ಕಿಕೊಂಡ ಮೇಲೆ ಕಣ್ಣಲ್ಲಿ ನೀರು ಸುರಿಯಹತ್ತಿತು. ಆ ನೀರನ್ನು ಪೃಥಕ್ಕರಿಸಿದರೆ ಅದರಲ್ಲಿ ಕೃತಜ್ಞತೆಯ ಅಂಶವೇ ಹೆಚ್ಚಿಗಿದ್ದುದನ್ನು ಕಂಡುಕೊಳ್ಳಬಹುದಾಗಿತ್ತು.

ಸುಧೆಯು ಬರೀ ಚಾಪೆಯ ಮೇಲೆ ಕಣ್ಣು ಮುಚ್ಚಿ ಬಿದ್ದಿದ್ದಳು. ಆದರೆ ಬಾಹ್ಯದೃಷ್ಟಿಗಿಂತ ಅಂತರ್ದೃಷ್ಟಿಗೆ ಹೆಚ್ಚಿಗೆ ಸಂಗತಿಗಳು ಗೋಚರವಾಗುತ್ತವೆ. ಚರ್ಮ ಚಕ್ಷುವು ಫೊಟೊಗ್ರಾಫರನ ಕನ್ನಡಿಯಂತೆ ಮುಂದೆ ಬಂದ ದೃಶ್ಯವನ್ನು ಮೂಡಿಸಿಬಿಡುತ್ತದೆ. ಆದರೆ ಅಂತಶ್ಚಕ್ಷುವು ಜ್ಯೋತಿಷಿಯ ದುರ್ಬೀನಿನಂತೆ ಹೃದಯದಲ್ಲಿಯ ಅನಂತ ವಿಶ್ವದ ಸೂಕ್ಷ್ಮ ಮತ್ತು ಸತ್ಯಸ್ವರೂಪವನ್ನು ತಿಳಕೊಳ್ಳಬಲ್ಲುದು; ಅಂಬರವನ್ನು ಚುಂಬಿಸುವ ಶಿಖರಕ್ಕೆ ಕೆಳಗೆ ಬಿದ್ದ ಎಲೆಯ ಇಲ್ಲವೆ ಸಮುದ್ರಕ್ಕೆ

ದಂಡೆಗಪ್ಪಳಿಸಿ ಒಡೆದ ಅಲೆಯ ಬೆಲೆಯೇ ಇಲ್ಲದಿರುವಂತೆ ಈ ಭವ್ಯ ಗಂಭೀರ ಜಗತ್ತಿಗೆ ತನ್ನಂತಹ ದೌರ್ಭಾಗಿನಿಯ ಅರಿವು ಬರದಿರುವುದು ಸಹಜವೆಂದು ಸುಧೆಗೆ ಅನಿಸುತ್ತಿತ್ತು. ಒಡೆದ ಹಡಗದ ತುಂಡಿನಂತೆ ಪ್ರಾರಬ್ಧವು ಒಯ್ಯುತ್ತ ಸಾರಿ, ಕೊನೆಗೆ ಯಾವುದಾದರೊಂದು ತೆರೆಯ ಜತೆಯಲ್ಲಿ ಜಲಸಮಾಧಿಹೊಂದುವಂತೆ ತನ್ನ ಗತಿಯಾದೀತೆಂದು ಅನುಭವದಿಂದ ಆಕೆಗೆ ಖಚಿತವಾಗಿತ್ತು. ಆದರೆ ಸುಧಾಕರನ ಸಹಾನುಭೂತಿಯಿಂದ ಆಕೆಯ ಜೀವನದಲ್ಲಿ ಹೊಸ ಅಧ್ಯಾಯದ ಆರಂಭವಾದಂತಿತ್ತು. ಜ್ವರದ ಓಟ ಆಕೆಯನ್ನು ಬಾಲ್ಯಕಾಲದ ಸುಖಸ್ಮೃತಿಗಳ ಮುಂದೆ ತಂದು ನಿಲ್ಲಿಸಿತು.

ಪರ್ವಕಾಲದಲ್ಲಿ ತಂದೆ ಸಮುದ್ರದ ತೀರಕ್ಕೆ ಕರೆದೊಯ್ಯುತ್ತಿದ್ದ. ಆ ತೆರೆಗಳನ್ನು ಕಂಡು, ಸಮುದ್ರವೆಂಬ ಪಾಟಿಯ ಮೇಲೆ ಪರಮೇಶ್ವರನು ಮೋಡಿ ಬರೆಯುತ್ತಿದ್ದಾನೆಂದು ಆಕೆಗೆ ಅನಿಸುತ್ತಿತ್ತು.

“ ಅಪ್ಪಾ, ಈ ಅಕ್ಷರ ಓದೋದು ಹೇಗಪ್ಪಾ? ” ಎಂದು ಕೇಳಿದರೆ ‘ ಮಗೂ, ಮದುವೆಯಾದ ಮೇಲೆ ಹೆಂಗಸರಿಗೆ ಎಲ್ಲ ಅಕ್ಷರಗಳೂ ಬರುತ್ತವೆ.’ ಎನ್ನುತ್ತಿದ್ದ. ಮಳೆ ಬೀಳುವಾಗ ‘ ಅಪ್ಪಾ, ಆಕಾಶವು ನೆಲಕ್ಕೆ ಈ ಮುತ್ತನ್ನೇಕೆ ಕೊಡುತ್ತಿದೆ ? ’ ಎಂದರೆ, ‘ ಸುಧಾ, ನಾಳೆ ನಿನ್ನ ತೊಡೆಯ ಮೇಲೆ ಮಕ್ಕಳು ಆಡಹತ್ತಿದರೆಂದರೆ ನಿನಗೆ ಈ ಪ್ರಶ್ನೆಯ ಉತ್ತರ ಸಿಗುತ್ತದೆ. ’ ಎಂದು ಅನ್ನುತ್ತಿದ್ದ. ಬೆಳದಿಂಗಳ ರಾತ್ರಿಯಂತೆ ನನ್ನ ಬಾಲ್ಯ ಕಳೆಯಿತು. ಆಗ ಅಪ್ಪನು ನನ್ನನ್ನು ತುಂಬ ಹೊಗಳುತ್ತಿದ್ದ. ‘ಸುಧೆಯ ಕೂದಲೆಷ್ಟು ಮುದ್ದಾಗಿವೆ! ಆಕಾಶದಲ್ಲಿಯ ತಾರೆಗಳೆಲ್ಲ ನಾಳೆ ಕೆಳಗಿಳಿದು ಬಂದು ನಿನ್ನ ತಲೆಯ ಮೇಲೆ ಕುಣಿಯಬಹುದು’ ಎಂದು ಹೇಳುತ್ತಿದ್ದ. ಹೂ ಕೊಯ್ಯಲು ಹೋದಾಗ ನಾನು ಸಹ ಮನದಲ್ಲಿಯೇ ಪ್ರತಿಯೊಂದು ಹೂವಿಗೆ “ಹೂವೇ, ಹೂವೇ, ನಿನಗಾವುದು ಹೆಚ್ಚು ಸೇರುತ್ತದೆ? ಕೋಣೆಯಲ್ಲಿಯ ದೇವರೋ ? ನನ್ನ ತಲೆಯ ಕೂದಲೋ ?” ಎಂದು ಕೇಳುತ್ತಿದ್ದೆ. ದೇವರ ಬೆಲೆ ನನ್ನ ಕೂದಲಿನಷ್ಟು ಸಹ ಇಲ್ಲವೆಂದು ತಿಳಿಸಲಿಕ್ಕೆಂದೋ ಏನೋ, ಅದು ನನ್ನ ಕಡೆ ನೋಡಿ ನಗುತ್ತಿತ್ತು. ಆಗ ಅದನ್ನು

ನ್ನು ಕೊಯ್ದು ನನ್ನ ತಲೆಯಲ್ಲಿ ಮುಡಿದುಕೊಳ್ಳುತ್ತಿದ್ದೆ. ಈ ಅಪಮಾನದ ಸೇಡನ್ನು ತೀರಿಸಿಕೊಳ್ಳುವುದಕ್ಕೆಂದೇ ದೇವರು ನನ್ನನ್ನು ಈ ವೈಧವ್ಯಕುಂಡದಲ್ಲಿ ನೂಕಿರಲಿಕ್ಕಿಲ್ಲವಷ್ಟೆ ?

"ಒಳ್ಳೆಯ ಸ್ಥಳ-ತಿನ್ನುಣ್ಣಲು ಕೊರತೆಯಿಲ್ಲವೆಂದು ತಂದೆ ಹತ್ತು ವರ್ಷಕ್ಕೇ ಮದುವೆ ಮಾಡಿಬಿಟ್ಟ. ಆ ಸಮಯದಲ್ಲಿ ನಾನು ಅದೆಷ್ಟೋ ಮನೋರಾಜ್ಯ ಕಟ್ಟಿದ್ದೆ. ಆದರೆ ಎಲ್ಲ ಆಸೆಗಳೂ ಕ್ಷಣಾರ್ಧದಲ್ಲಿಯೇ ಮಿಂಚಿಹೋಗಿ ಆಜನ್ಮ ಅಂಧಃಕಾರದಲ್ಲಿ ತೊಳಲಾಡುವ ಪ್ರಸಂಗ ನನ್ನ ಪಾಲಿಗೆ ಬಂದಿತು. ಮಾವಯ್ಯನವರು ಮನೆ ಬಿಟ್ಟು ಹೋದರು. ತಾಯಿ ತಂದೆ ತೀರಿಕೊಂಡರು. ಒಂದಲ್ಲ, ಎರಡಲ್ಲ, ಹತ್ತು ವರ್ಷಗಳಿಂದ ಈ ವೈಧವ್ಯಾಗ್ನಿಯಲ್ಲಿ ಬೇಯುತ್ತಲಿದ್ದೇನೆ. ಅತ್ತೆ ಮೃತ್ಯುವಿಗೂ ದಯೆಬಾರದು. ಹಳೆ ಪದ್ಧತಿಯವಳೆಂದು ಅತ್ತೆಯ ಮಾತನ್ನು ಮನಸ್ಸಿಗೆ ಹಚ್ಚಿಕೊಳ್ಳದಿದ್ದರೂ ಭಾವನಂತಹ ಸುಶಿಕ್ಷಿತರು ಸಹ 'ಅತ್ತಿಗೇ, ನಿನಗೇನಾಗುತ್ತಿದೆ ? ಎಂದು ಒಂದು ದಿನವೂ ಕೇಳಿದ್ದಿಲ್ಲ."

ಸುಧೆಯ ಮನಸ್ಸು ಸುಧಾಕರ ಮತ್ತು ಮಧುಕರರ ತುಲನೆ ಮಾಡಹತ್ತಿತು. ಒಬ್ಬನೋ ಇಂದು ಬಂದ ಅತಿಥಿ, ಇನ್ನೊಬ್ಬ ಮೈದುನ. ಒಬ್ಬನನ್ನು ಕಂಡದ್ದು ಇದೇ ಮೊದಲ ಸಲ; ಇನ್ನೊಬ್ಬ ಹನ್ನೊಂದು ವರ್ಷದಿಂದಲೂ ಪರಿಚಿತ. ಆದರೆ ಮೈದುನ ಮಧುವೆಯ ಸಂಭ್ರಮದಲ್ಲಿ ನಿನಗೇನಾಗುತ್ತಿದೆಯೆಂದು ಕೇಳುವ ಸೌಜನ್ಯವನ್ನೂ ತೋರಲಿಲ್ಲ. ಆದರೆ ಈ ಅತಿಥಿ ಮದ್ದು ತೇಯ್ದು ಕೊಟ್ಟ. ಮೈದುನನೊಬ್ಬನೇ ಏಕೆ ? ನಿನ್ನೆ ಸಂಜೆ ನನ್ನ ಒಡಹುಟ್ಟಿದ ಅಣ್ಣನೇ ಬಂದಿದ್ದನಲ್ಲ ! ಅವನಾದರೂ ನನ್ನನ್ನು ಪರಾಂಬರಿಸಿದನೇ ? ಎಲ್ಲರಿಗೂ ನಾನೊಂದು ಭಾರವಾಗಿರುವೆ. ನನ್ನ ಜಗತ್ತೆಂದರೆ ಅತ್ತೆ-ಮೈದುನ; ಅತ್ತಿಗೆ-ಅಣ್ಣ; ಅವರಲ್ಲಿ ಒಬ್ಬರು ಚುಚ್ಚಿ ಮಾತನಾಡುವವರಾದರೆ ಇನ್ನೊಬ್ಬರು ಗಾಸಿಗೊಳಿಸಿ ತಿನ್ನುವವರು; ಉಳಿದವರು ಬೆನ್ನು ತಿರುವಿ ತಮ್ಮ ತಮ್ಮ ಕೆಲಸಕ್ಕೆ ಹೋಗುವವರು. ಇಂತಹ ಜಗತ್ತಿನಲ್ಲಿ ಬದುಕಿ ಪ್ರಯೋಜನವೇನು ? ಈ ಹತ್ತು ವರ್ಷಗಳಲ್ಲಿ ನನ್ನ ಮೈದುನನ ಲಹರಿಗಾಗಿ ನಾನು ಎಷ್ಟೊಂದು ಕಷ್ಟ

ಪಟ್ಟಿಲ್ಲ. ಆದರೆ ಅವೆಲ್ಲ ಡಬ್ಬುಗೊಡದ ಮೇಲೆ ಸುರಿದ ನೀರಿನಂತಾಗಿದೆ. ನನ್ನ ಬಾಳಿಗಿಂತ ಸಾವೇ ವಾಸಿಯಲ್ಲವೇ ?

ಅಂಧಃಕಾರದಲ್ಲಿ ಒಂದು ಚಿಕ್ಕಿಯು ಚಕಚಕಿಸುವಂತೆ ಈ ಉದಾಸೀನತೆಯಲ್ಲಿ ಸುಧಾಕರನ ಮೂರ್ತಿ ಅವಳಿಗೆ ಕಾಣಿಸಹತ್ತಿತು. ಅತ್ತೆಮನೆ, ತವರ್ಮನೆಗಳಲ್ಲಿ ನನ್ನ ಮನಸ್ಸಿಗೆ ನೆಮ್ಮದಿ ನೀಡುವವರಿಲ್ಲ. ಒಂದು ಪ್ರೀತಿಯ ಮಾತಾಡುವವರಿಲ್ಲ. ಪಂಜರದಲ್ಲಿ ಉಪವಾಸ ಸಾಯುವ ಗಿಳಿಯಂತೆ ನನ್ನ ಗತಿಯಾಗಿದೆ. ಈ ಪಂಜರದ ಬಾಗಿಲನ್ನು ಯಾರಾದರೂ ತೆರೆಯಬಹುದೇ ? ಸುಧಾಕರನಿಂದ ಈ ಕೆಲಸ ಸಾಧ್ಯವಾಗಬಹುದೇ ?" ಎಂದು ಯೋಚಿಸಿದಳು. ಈ ಯೋಚನೆ ಒಂದು ಕ್ಷಣದ ಮಟ್ಟಿಗೆ ಆನಂದವನ್ನು ಕೊಟ್ಟಿತು. ಆದರೆ ಮರುಕ್ಷಣದಲ್ಲಿಯೇ ತಾನು ಅಲ್ಲದ ವಿಚಾರ ಮಾಡುತ್ತಿರುವೆನೆಂದು ಖಿನ್ನಳಾಗಿ ಬಿಟ್ಟಳು.

ಅತ್ತ ಸುಧಾಕರ ಜಯಗಾಂವದ ಶಾಲೆಯ ಮಾಹಿತಿಗಾಗಿ ಸಾವಂತವಾಡಿಯಲ್ಲಿ ಎರಡು ದಿನ ಇಳಿದುಕೊಳ್ಳುತ್ತೇನೆಂದು ತಾಯಿಗೆ ಪತ್ರ ಬರೆದ. ಆತ ಇಷ್ಟು ಚಿಕ್ಕ ಪತ್ರ ಎಂದೂ ಬರೆದಿರಲಿಲ್ಲ. ಆತನ ಹೃದಯದಲ್ಲಿ ಅನೇಕ ಸಂಗತಿಗಳ ಸಮ್ಮಿಲನವಾಗಿದ್ದಿತು. ಆದರೆ ಯಾವುದನ್ನು ಆರಿಸಬೇಕೆಂಬ ಗೊಂದಲದಲ್ಲಿ ಬಿದ್ದುಬಿಟ್ಟಿದ್ದ. ವಾರುಣಿಯ ವಿಷಯವನ್ನು ಮರೆಯಬೇಕೆಂಬ ವಿಚಾರದಲ್ಲಿ ಮಾತ್ರ ಭಿನ್ನಾಭಿಪ್ರಾಯವಿರಲಿಲ್ಲ.

ವಾರುಣಿ ಮತ್ತು ಸುಧಾ — ಈ ಎರಡು ಚಿತ್ರಗಳು ಸುಧಾಕರನ ಮುಂದಿದ್ದವು. ಒಂದು ಒಯ್ಯಾರದಿಂದ ರೆಂಬೆಯ ಮೇಲೆ ಮೆರೆಯುವ ಮಲ್ಲಿಗೆ ಹೂವು; ಇನ್ನೊಂದು ರೆಂಬೆಯಿಂದ ಕೆಳಗೆ ಬಿದ್ದು ಮಂಜಿನಿಂದ ಒದ್ದೆಯಾಗಿರುವ ಪಾರಿಜಾತ ಪುಷ್ಪ. ಮೊದಲಿನದು ಶರದೃತುವಿನ ಹುಣ್ಣಿಮೆಯಾದರೆ ಎರಡನೆಯದು ವರ್ಷಾಋತುವಿನ ಹುಣ್ಣಿಮೆ. ಆಯುಷ್ಯದಲ್ಲಿಯ ಸುಂದರ ಸನ್ನಿವೇಶದಲ್ಲಿ ಇನ್ನೂ ಅಭಿನಯಿಸುವವಳಿದ್ದುದರಿಂದ ವಾರುಣಿಯ ಮುಖದ ಮೇಲೆ ಆಶೆಯ ಉಷೆಯು ಲಾಸ್ಯವಾಡುತ್ತಿತ್ತು. ಆದರೆ ಆ ಅಭಿನಯದಲ್ಲಿ ಯಶಸ್ವಿಯಾಗದ್ದರಿಂದ ಸುಧೆಯ

ಮೋರೆಯಲ್ಲಿ ದೀನತೆಯು ಒಡಮೂಡಿತ್ತು. ಹೀಗೆಯೇ ಅದೆಷ್ಟು ಜನರಿದ್ದಾರೋ ಯಾರು ಬಲ್ಲ? ಕಾನನದಲ್ಲಿ ಹರಿಯುವ ನದಿಯಂತೆ, ಅಗಾಧ ಜಲಧಿಯ ತಳದಲ್ಲಿ ಬಿದ್ದಿರುವ ರತ್ನದಂತೆ, ಕಿವುಡರ ಕೂಟದಲ್ಲಿ ಹಾಡುವ ಗಂಧರ್ವನಂತೆ ಇಂತಹರ ಜೀವನ ನಿರರ್ಥಕವಾಗಿ ಬಿಡುತ್ತಿದೆ.

ಅತ್ತ ಮಧುಕರ ಆಕೆಯನ್ನು ವಿಚಾರಿಸಲಿಲ್ಲ. ಅವಳ ಅತ್ತೆಯಂತೂ "ಮುಲುಖಿ ಸೈದಾನ ತೋಫೇ" ಸರಿ. ಈ ಅನಾಥ ಪ್ರಾಣಿಯ ಬಗ್ಗೆ ಅವರಿಗೇಕೆ ಕರುಣೆ ಬಾರದೋ ಕಾಣೆ. ಕಾವ್ಯದಲ್ಲಿಯ ಕಲ್ಪನೆಯಿಂದ ಎದೆ ಒಡೆದುಕೊಳ್ಳುವ ಮಧುಕರನ ಹೃದಯ ಅತ್ತಿಗೆಯ ದುಃಖಕ್ಕೆ ಪಾಷಾಣವಾಗಿರಬೇಕೇ? ಪರದುಃಖ ಕಾತರವಾಗದ ಹೃದಯ ಕವಿಹೃದಯವೇ? ಸ್ತ್ರೀಯ ಹೃದಯವೆಂದರೆ ಜಗತ್ತಿನಲ್ಲಿಯ ಅತ್ಯುತ್ಕೃಷ್ಟ ಕಾವ್ಯವೆಂದು ಕೇಳಿಬಲ್ಲೆ. ಅಂದ ಬಳಿಕ ವಾರುಣಿಯಾದರೂ ಅಪರಿಚಿತ ಮನೆಯಲ್ಲಿಯ ಮದುವೆಗೆ ಹೋಗುವದಕ್ಕಿಂತ ಸುಧೆಯ ಶುಶ್ರೂಷೆಮಾಡುತ್ತ ಕುಳಿತಿದ್ದರೆ ಆಗುತ್ತಿತ್ತಲ್ಲವೇ? ಸ್ತ್ರೀಯ ಹೃದಯವು ಸುಮಗಳ ಕೋಮಲತೆ, ತಾರೆಗಳ ತೇಜ, ರತ್ನಗಳ ಬೆಲೆ– ಇವುಗಳ ತ್ರಿವೇಣಿ ಸಂಗಮವೆಂದು ಹೇಳುವುದು ಕೇವಲ ಕವಿಕಲ್ಪನೆಯೇ? ವಾರುಣಿಯು ಸುಂದರಿಯೆಂಬುವದರಲ್ಲಿ ಸಂದೇಹವಿಲ್ಲ. ಮದುವೆಯ ಮನೆಗೆ ಹೋಗುವಾಗ ತೊಟ್ಟ ಗುಲಾಬಿಪತ್ತಲದಿಂದ, ಪೃಥ್ವಿಯ ಮೇಲಿಳಿದ ಮೂರ್ತಿವಂತ ಉಷೆಯಂತೆ ಭಾಸವಾಯಿತು. ಆದರೆ ಪ್ರಪಂಚದ ಪ್ರವಾಸದಲ್ಲಿ ಬರೇ ಸೌಂದರ್ಯವೊಂದೇ ಸಮಾಧಾನವೀಯಬಲ್ಲುದೇ? ತುಟಿಗಳು ಮುತ್ತಿನಂತೆ ಇರುವದಕ್ಕಿಂತ, ಅವುಗಳೊಳಗಿಂದ ಮುತ್ತಿನಂತಹ ಮಾತು ಹೊರಬೀಳಬೇಕು. ಶರೀರ ಸೌಂದರ್ಯವೆಂದರೆ ಹೃದಯ ಸೌಂದರ್ಯವಲ್ಲ."

ಸಾಗರದ ಅಂತರಂಗದ ಪ್ರವಾಹ, ಇಲ್ಲವೆ ಬೀಸುವ ಗಾಳಿಗಿಂತಲೂ ವಿಚಾರ ತೀವ್ರತೆಯು ವಿಲಕ್ಷಣವಾಗಿರುತ್ತದೆ. ಅದೇ ರೀತಿ ಸುಧಾಕರನ ಗತಿಯಾಯಿತು. ಪಕ್ಷಿಯು ಎಷ್ಟೇ ಮೇಲೆ ಹಾರಿದರೂ ಸೂರ್ಯನಿಂದ ಅಂತರದಲ್ಲಿರುವಂತೆ ಸತ್ಯದಿಂದ ತಾನು ಇನ್ನೂ ದೂರ ಇರುವೆ

ನೆಂದು ಆತನಿಗೆ ಮನವರಿಕೆಯಾಯಿತು. ಸುಂದರಾಬಾಯಿಯವರು ಬಂದ ಮೇಲೆ ಅಲ್ಲಿ ಬಂದ ಬ್ಯಾರಿಸ್ಟರರೊಬ್ಬರ ಆಗ್ರಹದ ಮೂಲಕ ಮಧುಕರ ಮತ್ತು ರಾವಸಾಹೇಬರು ಊಟಕ್ಕೆ ಅಲ್ಲಿಯೇ ನಿಂತರೆಂದು ಗೊತ್ತಾಯಿತು. ವಾರುಣಿಗೆ ತಲೆ ನೋವು ಬಂದದ್ದರಿಂದ ಕಳಿಸಿಕೊಡಲು ಬಂದಿದ್ದಳು. ಅತಿಥಿಗಳಿಗೆ ಅಡಿಗೆ ಮಾಡಲು ಹೇಳಿ ಅತ್ತೆಯು, ಪ್ರವಾಸಿಕರು ಹತ್ತಿದರೋ, ಇಲ್ಲವೋ ಎಂಬುದನ್ನು ಗಮನಿಸದೆಯೇ ಹೊರಡುವ ಮೇಲಗಾಡಿಯಂತೆ ಹೊರಟುಬಿಟ್ಟಳು. ಸುಧೆಗೆ ಔಷದೋಪಚಾರದಿಂದ ತುಸು ತುಸು ಗುಣವಾದುವರಿಂದ ಅಡಿಗೆ ಮಾಡಲು ಮುಂದಾದಳು. ವಾರುಣಿಯು ಹಿಂದೆಂದೂ ಅಡಿಗೆ ಮಾಡಿರಲಿಲ್ಲವಾದುದರಿಂದ ಅವಳಿಂದ ಸುಧೆಗೆ ವಿಶೇಷ ನೆರವಾಗಲಿಲ್ಲ.

ಊಟವಾದ ಬಳಿಕ ಸುಧಾಕರ ಅಡ್ಡಾದ. ಆದರೂ ನಿದ್ದೆಬೀಳಲಿಲ್ಲ. ಕೊನೆಗೆ ಕಾಳಿಯು ಕೊಟ್ಟ ಕಾಂಚನ ಮೃಗದ ನೆನಪಾಗಿ ಅದನ್ನು ತೆಗೆದು ನೋಡಹತ್ತಿದ. ಅದನ್ನು ನೋಡುತ್ತ ಹೋದಂತೆ ಚಿತ್ರದಲ್ಲಿಯ ಸೀತೆಯ ಮುಖವು ವಾರುಣಿಯ ಮುಖದೊಡನೆ ಹೋಲುತ್ತದೆಯೆಂಬ ಶಂಕೆ ತಲೆದೋರಿತು. ಏನು ಮಾಡಿದರೂ ಆ ಸಂದೇಹ ಅವನ ಮನಸ್ಸಿನೊಳಗಿಂದ ಹೋಗದು. ಆ ಆಕೃತಿಯ ಜೊತೆಗೆ ಈ ಪ್ರತಿಕೃತಿಯನ್ನಿಟ್ಟು ನೋಡಬೇಕೆಂಬ ಹಂಬಲದಿಂದ ಅವನು ಎದ್ದು ಜಗುಲಿಗೆ ಬಂದ. ಮಹಡಿಯ ಮೇಲಿನ ಸಪ್ಪಳದಿಂದ ಸುಧಾ ಮತ್ತು ವಾರುಣಿಯರು ಅಲ್ಲಿರುವರೆಂದು ತಿಳಿಯಿತು. 'ಕುಡಿಯಲು ನೀರು ಬೇಕು' ಎಂದು ಹೇಳುವ ನೆವ ಮಾಡಿ, ಮೆಲ್ಲನೆ ನಾಲ್ಕೈದು ಮೆಟ್ಟಲುಗಳನ್ನೇರಲು ಅವನಿಗೆ ಅವರಿಬ್ಬರ ಮಾತುಕತೆಯು ಕೇಳಿಸಿತು.

"ಬೇಡ, ವಾರಕ್ಕಾ, ನಿಮ್ಮ ಕುಡುಕು ಚಂದ ಕಂಡಿತೆಂದು ಕಿವಿಗೆ ಹಾಕಿಕೊಂಡೆ. ಆದರೆ ಈ ಜಂಪತ್ತಲ ಉಟ್ಟುಕೊಳ್ಳಲಾರೆ. ಹೀಗೆ ನನ್ನನ್ನು ಜಗ್ಗಬೇಡಿ. ಅತ್ತೆಯವರು ಕಂಡರೆ ನನ್ನನ್ನು ಜೀವಂತ ಸುಟ್ಟುಬಿಟ್ಟಾರು."

" ನಿಮ್ಮ ಅತ್ತೆಯವರೇನು ಇಷ್ಟು ಬೇಗನೇ ಹೊರಟುಬರಲಿಕ್ಕೆ ಹೋಗಲಿಲ್ಲ. ಇನ್ನು ನೀವು ಈ ಪತ್ತಲ ಉಡುತ್ತೀರೋ ಇಲ್ಲವೆ ನಿಮ್ಮ ಸೆರಗನ್ನು ಜಗ್ಗಲೋ? ನನ್ನ ಚಿಕ್ಕಮ್ಮನವರಿದ್ದಾರೆ. ಅವರಿಗೆ ಅರವತ್ತು ವರುಷ. ಸೂಲಗಿತ್ತಿ ಕೆಲಸಕ್ಕೆ ಹೋಗುವಾಗಲೂ ಇಂತಹ ಪತ್ತಲ ಉಡುತ್ತಾರೆ. ನೀವೇನು ಮುದುಕಿಯರಾಗಿಲ್ಲ. ಹೆಚ್ಚೆಂದರೆ ನನಗಿಂತ ಒಂದೆರಡು ವರ್ಷಕ್ಕೆ ನೀವು ಹಿರಿಯರಿರಬಹುದು. ಇದನ್ನೊಮ್ಮೆ ಉಟ್ಟು ನೋಡಿ. ಹೇಗೆ ರಾಣಿಯರಂತೆ ಶೋಭಿಸುವಿರಿ ! "

ಸುಧೆಯು ಏನೂ ಮಾತನಾಡದೆ ಉಟ್ಟುಕೊಂಡಳು. ಸುಧಾಕರನ ಕಾಲುಗಳು ಅವನಿಗೆ ಗೊತ್ತಿಲ್ಲದೆಯೇ ಎರಡು-ಮೂರು ಮೆಟ್ಟಲು ಹತ್ತಿದವು. ಸುಧಾ ವಾರುಣಿಯರು ಅವನ ದೃಷ್ಟಿಗೆ ಬೀಳುವದಕ್ಕೂ, ವಾರುಣಿಯು ತನ್ನ ತಲೆಯ ಹೊನ್ನಿನ ಹೂವನ್ನು ಸುಧೆಗೆ ತೊಡಿಸುವುದಕ್ಕೂ ಸರಿ ಬಿತ್ತು. ಸಪ್ತರ್ಷಿಯ ಪುಂಜವನ್ನು ಕಿವಿಗಿಟ್ಟು, ತಲೆಯಲ್ಲಿ ಗುರು ಶುಕ್ರರನ್ನು ಮುಡಿದು, ಬೆಳದಿಂಗಳ ಶುಭ್ರಪತ್ತಲವನ್ನುಟ್ಟುಕೊಳ್ಳುವ ರಜನೀದೇವಿಯಂತೆ ಸುಧೆಯು ಕಂಗೊಳಿಸಿದಳು.

" ಬೇಡ, ದಮ್ಮಯ್ಯ! ನನ್ನನ್ನು ಹೀಗೆ ಕಾಡಿಸಬೇಡಿ. " ಎಂದು ಸುಧೆಯು ದೈನ್ಯದಿಂದ ವಾರುಣಿಯನ್ನು ಬೇಡಿದಳು.

" ಕಾಡಿಸುವದೇನಿದೆ ಇದರಲ್ಲಿ ? "

" ಹೆಣವನ್ನು ಶೃಂಗರಿಸಿದರೆ ಅದರ ಭಯ ಇನ್ನಷ್ಟು ಹೆಚ್ಚುತ್ತಿದೆ" ಯೆಂದು ಸುಧೆಯು ಕಣ್ಣೀರಿಳಿಸಹತ್ತಿದಳು. ತನ್ನ ಹಟಸ್ವಭಾವದಿಂದ ಸುಧೆಯ ಮನಸ್ಸನ್ನು ನೋಯಿಸಿದೆನೆಂದು ವಾರುಣಿಯು ಗದ್ಗದಿತಳಾದಳು. ಮಹಡಿಯ ಮೇಲೆ ಹೋಗಬೇಕೆಂದಿದ್ದ ಸುಧಾಕರನು ಕಣ್ಣೊರಸಿಕೊಳ್ಳುತ್ತ ಮೆಲ್ಲನೆ ಕೆಳಗಿಳಿದನು.

———0———

# ಪ್ರಕರಣ ೧೧.

ಅತಿಥಿಗಳೆಲ್ಲ ಊಟಮಾಡಿ ಮರಳಿದಾಗ ಮೂರು ಬಡಿದುಹೋಗಿತ್ತು. ಸಂಜೆ ಚಿವಾಗುಡ್ಡವನ್ನು ನೋಡಲಿಕ್ಕೆ ಹೋಗಬೇಕೆಂದು ನಿಶ್ಚಯಿಸಿಕೊಂಡೇ ಬಂದಿದ್ದರು. ಮಧುಕರನಿಗೆ ಮದುವೆ ಚಪ್ಪರದಲ್ಲಿಯೇ ಗೋಪಾಳರಾಯರ ಇಂಗಿತವು ಅರ್ಧಮರ್ಧ ತಿಳಿದಿತ್ತು. ಆದ್ದರಿಂದ ತನ್ನ ಮದುವೆಯ ಚರ್ಚೆ ಅಮ್ಮನ ಮುಂದೆ ನಡೆಯುವುದಕ್ಕಿಂತ ಪರಸ್ಪರ ಆಗುವದೇ ಲೇಸೆಂದು ಗುಡ್ಡದ ಸಂಚಾರಕ್ಕೆ ಅವರನ್ನು ಆಮಂತ್ರಿಸಿದ್ದ. ಸುಧೆಯ ಸಹೋದರರಾದ ದಾದಾ ಸಾಹೇಬರಂತೂ ಗೋಪಾಳರಾಯರ ಮಧ್ಯಸ್ಥರಾಗಿದ್ದರು. ಅಲ್ಲದೆ ಸುಧಾಕರನು ಜಯಗಾಂವ ಸಾಲೆಯ ವರ್ತಮಾನ ತಿಳಿಯಲೆಂದು ಬಂದಿದ್ದಾನೆಂದು ಗೊತ್ತಾದುದರಿಂದ ಸಂಜೆಯ ತಾಜಾ ಸುದ್ದಿಗಳನ್ನೋದುವ ಮೋಹವನ್ನು ಬದಿಗೊತ್ತಿ ಈ ತಿರುಗಾಟಕ್ಕೆ ಬರಲು ಒಪ್ಪಿದ್ದರು.

ಪೇಟಿಯಿಂದ ತಿಂಡಿಯನ್ನು ತಂದು ಚಹಾ ತಯಾರಿಸುವ ಸಲಕರಣೆಯೊಂದಿಗೆ ಗುಡ್ಡವನ್ನೇರಬೇಕೆಂದು ಮಧುಕರನು ನಿಶ್ಚಯಿಸಿದ್ದ. ರಾವಸಾಹೇಬ, ವಾರುಣಿ, ದಾದಾಸಾಹೇಬ, ಗೋಪಾಳರಾವ, ಸುಧಾಕರ ಮತ್ತು ತಾನು ಹೋಗಬೇಕೆಂದು ಗೊತ್ತುಮಾಡಿಕೊಂಡಿದ್ದ. ಆದರೆ ಅಲ್ಲಿ ಚಹಾ ತಯಾರಿಸುವ ಪಾಳಿ ವಾರುಣಿಯ ಮೇಲೆ ಬರಬಹುದೆಂದು ಕಂಡದ್ದರಿಂದ ಅತ್ತಿಗೆಯನ್ನು ಕಳಿಸಿಕೊಡಲು ತಾಯಿಯ ಮುಂದೆ ಪ್ರಸ್ತಾಪಿಸಿದ.

"ಮಧೂ, ಅವಳಿಗೆ ಬೆಳಿಗ್ಗೆ ಜ್ವರ ಬಂದಿತ್ತು." ಎಂದು ಸುಂದರಾಬಾಯಿಯವರು ಸೌಮ್ಯತನದಿಂದಲೇ ವಿರೋಧಿಸಿದರು.

"ಆದರೆ ಅಮ್ಮಾ, ವಾರುಣಿಯಂತಹ ಶ್ರೀಮಂತರ ಹುಡುಗಿಗೆ ಕೆಲಸಕ್ಕೆ ಹಚ್ಚುವದು ಸರಿಯಲ್ಲ. ರಾವಸಾಹೇಬರು ಅವಳ ಮದುವೆಗಾಗಿ ೨೦–೨೫ ಸಾವಿರ ರೂಪಾಯಿ ವೆಚ್ಚ ಮಾಡುವವರಿದ್ದಾರೆ."

ಈಗ ಸುಂದರಾಬಾಯಿಯವರ ಅಭಿಪ್ರಾಯ ಬದಲಿಸಿತು. ಅತ್ತೆಯ ಸಮ್ಮತಿ ಸಿಕ್ಕೊಡನೆ ಸುಧೆಯು ಅವರ ಜತೆಯಲ್ಲಿ ಹೋದಳು. ಆದರೆ ಚಹಾಮಾಡುವುದಕ್ಕಾಗಿಯೇ ತನ್ನ ಅವಶ್ಯಕತೆಯುಂಟಾಯಿತೆಂದು ಆಕೆಗೆ ತಿಳಿಯದೆ ಹೋಗಲಿಲ್ಲ. ದುಡಿಸಿಕೊಳ್ಳುವುದಕ್ಕಾಗಿಯೇ ಪಶುವನ್ನು ಸಾಕುತ್ತಾರೆ. ಹಾಗೆಯೇ ವಿಧವೆಯ ಜೀವಿತ. ಸೃಷ್ಟಿಶೋಭೆಯು ವಿಧವೆಗೆ ಆನಂದವನ್ನು ಕೊಡುವದಿಲ್ಲವೆಂದೇನೂ ಹೇಳುವಂತಿಲ್ಲ. ಆದರೆ ವಿಧವೆಗೆ ಕಣ್ಣಿರುವದಿಲ್ಲ; ಕಿವಿಯಿರುವದಿಲ್ಲ; ಹೃದಯವಿರುವದಿಲ್ಲ: ಏನೇನೂ ಇರುವದಿಲ್ಲ. ಅವಳಿಗೆ ಬರೀ ಕೈಕಾಲು ಮಾತ್ರ ಇರುತ್ತವೆ. ಮತ್ತು ಅವುಗಳನ್ನು ಇತರರ ಮರ್ಜಿ ಹಿಡಿಯುವುದರಲ್ಲಿಯೂ, ಕಷ್ಟವನ್ನನುಭವಿಸುವುದರಲ್ಲಿಯೂ ಸವಿಸುವುದೇ ವಿಧವೆಯ ಮುಖ್ಯ ಕರ್ತವ್ಯವಿರುತ್ತದೆ.

ಈ ಮಂಡಳಿ ಚಿವಾಗುಡ್ಡ ಮುಟ್ಟಿದಾಗ ಸೂರ್ಯಾಸ್ತವಾಗಲು ಬಹಳ ವೇಳೆಯಿತ್ತು; ಅಲ್ಲದೆ ಬೆಳದಿಂಗಳ ರಾತ್ರಿಯಿದ್ದುದರಿಂದ ತಿರುಗಿ ಹೋಗಲು ಅವಸರ ಪಡುವಂತಿರಲಿಲ್ಲ. ಗೋಪಾಳರಾವ, ಮಧುಕರ ಮತ್ತು ದಾದಾಸಾಹೇಬರು ಅಡ್ಡಾಡುವ ನೆವ ಮಾಡಿ ಮುಂದಿನ ಬೆಟ್ಟವನ್ನು ಹೊಕ್ಕರು. ರಾವಸಾಹೇಬ, ವಾರುಣಿ, ಸುಧಾ, ಸುಧಾಕರರು ಮಾತ್ರ ಗುಡ್ಡದ ಮೇಲಿರುವ ಹೌದಿನ ಬಳಿಯಲ್ಲಿ ಉಳಿದರು. ಸುಮಾರು ಆಳೆತ್ತರವಿದ್ದ, ಕಲ್ಲಿನ ಆ ಚೌಕಾದ ಹೌದಿನ ಮೇಲೆ ಸುಧಾಕರನು ಟಣ್ಣನೆ ಜಿಗಿದು ಕುಳಿತು ಅಲ್ಲಿಯ ನೀರ ರುಚಿ ನೋಡಿದನು.

ವಾರುಣಿಗೂ ಹೌದಿನಲ್ಲಿಯ ನೀರನ್ನು ನೋಡಬೇಕೆಂಬ ಆಸೆ. ಆದರೆ ಅವಳಿಂದ ಮೇಲೆ ಹತ್ತುವದಾಗದು. ಅದರಲ್ಲಿಯೂ ರಾವಸಾಹೇಬರು "ಆ ಬ್ಯಾರಿಸ್ಟರ ಕನಿಷ್ಠ ಮೆಟ್ರಿಕ್ಕಾದರೂ ಆಗಬೇಕೆಂದು ಹೇಳಿರುವ. ನೀನು ಸಾಲೆಯಲ್ಲಿ ಚನ್ನಾಗಿ ಕಲಿಯಬೇಕು........" ಎಂದು ಹಲಬುತ್ತ ಕುಳಿತಿದ್ದ. ಆದರೆ ಆಕೆಗೆ ಅತ್ತ ಲಕ್ಷವಿರಬೇಕಷ್ಟೇ? ಆ ಹೌದನ್ನೇರುವುದಕ್ಕೆ ಇತರ ಸಾಧನಗಳೇನೂ ಇರಲಿಲ್ಲ. ಆದ್ದರಿಂದ ಅವಳಿಗೆ ತುಂಬಾ ಸಂಕಟಕ್ಕಿಟ್ಟುಕೊಂಡಿತು. ಹತ್ತಲೆತ್ನಿಸಿ ಕಲ್ಲಿಗೆ ಗಟ್ಟಿಯಾ

ಗಿ ಹಿಡಿದಿದ್ದುದರಿಂದ ಅವಳ ಕೈ ಕೆಂಪಗಾಗಿ ಬಿಟ್ಟಿತ್ತು. ಹಣೆಯ ಮೇಲೆ ಬೆವರಿನ ಹನಿ ಹೊಳೆಯುತ್ತಿತ್ತು. ಆದರೆ ವಾರುಣಿಯಂತಹ ತರುಣಿಯ ಈ ಸ್ಥಿತಿಯನ್ನು ನೋಡಿ ಹೃದಯ ದ್ರವಿಸುವುದಕ್ಕೆ ಆ ಕಲ್ಲೇನು ಕವಿ ಮಂಡಳದ ಸಭಾಸದನಾಗಿರಲಿಲ್ಲ!

ವಾರುಣಿಯ ಒಪ್ಪಿಗೆಯಿಂದ ಸುಧಾಕರನು ಆಕೆಯನ್ನು ಮೇಲಕ್ಕೆ ಜಗ್ಗಿಕೊಂಡ. ವಾರುಣಿಯು ಸುಧೆಗೆ ಕರೆಯಹತ್ತಿದಳು.

ಸುಧೆಯು ಇನ್ನೊಂದು ಮೂಲೆಯಿಂದ ಮೇಲೆ ಹತ್ತಿ ಬಂದಳು. ಆ ಶ್ರಮದಿಂದ ಕೆಂಪಗಾದ ಅವಳ ಮುಖವು ಸಂಧ್ಯಾರಂಜಿತ ಪಶ್ಚಿಮ ದಂತೆ ಕಾಣುತ್ತಿದ್ದು, ಕೂದಲಿನ ರಾಶಿಯು ಮೋಡದ ಗುಂಪಿನಂತೆಯೂ, ವಿರಲವಾಗಿ ತೋರುವ ಬೆವರ ಹನಿಗಳು ತಾರೆಗಳಂತೆಯೂ ಶೋಭಿಸು ತ್ತಿದ್ದವು. ಈ ಚಿತ್ರದಲ್ಲಿ ಒಂದರ ಕೊರತೆಯಿತ್ತು. ಪಶ್ಚಿಮಾಂಗನೆಯು ಮುಣುಗುತ್ತಿರುವ ರಕ್ತ-ಸೂರ್ಯಬಿಂಬದಿಂದ ಅತಿ ಸುಂದರಳಾಗಿ ತೋರುತ್ತಾಳೆ. ಆದರೆ ಸುಧೆಯ ಹಣೆಯಲ್ಲಿ ಆ ಬಿಂಬದಂತೆ ಶೋಭಿಸು ವ ಕುಂಕುಮ ತಿಲಕವು ಮಾತ್ರ ಇದ್ದಿಲ್ಲ.

ಸುಧಾಕರನು ಒಂದು ಮೂಲೆಯಲ್ಲಿ ಕುಳಿತುಕೊಂಡನು. ಸುಧಾ ಮತ್ತು ವಾರುಣಿಯರು ಅನತಿದೂರದಲ್ಲಿಯೇ ಕಾಲನ್ನು ಇಳಿಬಿಟ್ಟು ಕುಳಿತರು.

“ ಆಹಾ ! ಎಷ್ಟು ಸುಂದರವಾದ ದೃಶ್ಯವಿದು! ಆಕಾಶದ ನಡು ವೆಯೇ ಒಂದು ಭವ್ಯವಾದ ಮೋಡದ ಗುಂಪು ಇರುವಂತೆ ಈ ಬಟ್ಟೆ ದಲ್ಲಿ ಈ ಗುಡ್ಡವಿರುತ್ತದೆ. ”

“ ಇಲ್ಲಿಗಿಂತ ಇಂಗ್ಲಂಡದ ಸೃಷ್ಟಿಸೌಂದರ್ಯವು ಮಿಗಿಲೆಂದು ಓಲ್ಡ್ಫೊಕ್ಸ ಸಾಹೇಬರು ಯಾವಾಗಲೂ ಹೇಳುತ್ತಿದ್ದರು. ಅಲ್ಲಿ ಎಪ್ರಿಲ್ ಆರಂಭವಾಯಿತೆಂದರೆ ಎಲ್ಲರೂ ಎಪ್ರಿಲ್ ಫೂಲ್ ಆಗುತ್ತಾರೆ”ಂದು ಕೆಳಗಿನಿಂದ ರಾವಸಾಹೇಬರು ತಮ್ಮ ಮತವನ್ನು ಹೇಳಿದರು.

ಸುಧಾಕರನು ಉತ್ತರಕೊಡುವ ಸ್ಥಿತಿಯಲ್ಲಿರಲಿಲ್ಲ. ಅವನ ದೃಷ್ಟಿಯು ಎದುರಿನಲ್ಲಿ ಪಸರಿಸಿಕೊಂಡ ವನಸಾಗರದೊಳಗೆ ಈಸಾಡುತ್ತಿತ್ತು; ಎಲ್ಲಿ ನೋಡಿದರೂ ಹಚ್ಚಹಸರು. ಒಮ್ಮೆ ಮೃತಳಾದ ವನಶ್ರೀಯು ವಸಂತದ ಸಂಜೀವಿನಿಯಿಂದ ಮತ್ತೆ ಸಜೀವಳಾಗಿ ಸಂತೋಷದಿಂದ ನರ್ತಿಸುತ್ತಿದ್ದಳೋ ಏನೋ ಯಾರು ಬಲ್ಲ? ತಾಯಿತಂದೆ, ಅಣ್ಣ ತಮ್ಮ, ಗೆಳೆಯ ಗೆಳತಿ ಇವರ ಪ್ರೇಮದ ವ್ಯಕ್ತಸ್ವರೂಪವು ಭಿನ್ನಭಿನ್ನವಾಗಿದ್ದರೂ ಅವರ ಅಂತರಂಗದಲ್ಲಿರುವ ಸಹೃದಯತೆಯು ಒಂದೇ ಆಗಿರುವಂತೆ ಎಲ್ಲ ಚಿಕ್ಕ-ದೊಡ್ಡ ಹಾಗೂ ವಿವಿಧ ವೃಕ್ಷಗಳಲ್ಲಿ ಒಂದೇ ಬಗೆಯ ಸುಂದರ ತತ್ವವು ಇರುತ್ತದೆಂಬ ಕಲ್ಪನೆಯು ಆ ನೋಟವನ್ನು ನೋಡುವವರ ಮನಸ್ಸಿನೊಳಗೆ ನಿಜವಾಗಿಯೂ ಬರಬಹುದಿತ್ತು. ತನ್ನ ಮುದ್ದುವಸಂತನ ಕಾಲಿಗೆ ಕಲ್ಲು ಚುಚ್ಚಬಾರದೆಂದು ಸೃಷ್ಟಿಯು ಎಲ್ಲೆಡೆಯಲ್ಲಿಯೂ ತರತರದ ಬಣ್ಣದ ಹುಲ್ಲಿನ ಹಾಸಿಗೆಯನ್ನು ಹಾಸಿಟ್ಟಿದ್ದಳು. ಗಿಡದ ರೆಂಜೆಗಳ ಮೇಲೆ ಹತ್ತಿದರೆ ಅವನ ಕೋಮಲವಾದ ಮೈಯ್ಯು ಗಾಯಗೊಳ್ಳಬಹುದೆಂಬ ಭೀತಿಯಿಂದ ಅವಳು ಎಲ್ಲ ಗಿಡಮರಗಳ ರೆಂಬೆಗಳನ್ನೂ ಮೊದಲೇ ಹೊಸ ಚಿಗುರುಗಳಿಂದ ಮುಚ್ಚಿಬಿಟ್ಟಿದ್ದಳು. ಕೋಗಿಲೆಯು ದೂರದಲ್ಲೆಲ್ಲೋ ಕುಳಿತು ಅವನೊಡನೆ ಕಣ್ಣುಮುಚ್ಚಣಿಕೆಯ ಆಟವನ್ನಾಡುತ್ತಿತ್ತು. ಆಕಾಶ ಮತ್ತು ಪೃಥ್ವಿಗಳೊಳಗೆ ಸೌಂದರ್ಯ ಸ್ಪರ್ಧೆ ನಡೆದಿರಬೇಕು. ಅತ್ತ ಕುಳಿತಿರುವ ವಾರುಣಿಯಲ್ಲಿ ಆಕಾಶದ ಹಾಗೂ ಇತ್ತ ಕುಳಿತಿರುವ ಸುಧೆಯಲ್ಲಿ ಪೃಥ್ವಿಯ ಪ್ರತಿಬಿಂಬವು ಒಡಮೂಡಿದೆಯೆಂದು ಒಂದು ನಿಮಿಷದ ಮಟ್ಟಿಗೆ ಸುಧಾಕರನಿಗೆ ಭಾಸವಾಯಿತು.

"ಈ ನೀರು ಅದೆಷ್ಟು ದೂರದಿಂದ ಬಂದು ಜನಹಿತಮಾಡುತ್ತಿದೆಯೊ ಏನೋ? ಇದರ ಜೀವನ ಸಫಲವಾದದ್ದು. ಮೋಡಗಳ ಉಡುಪು, ಬೆಳದಿಂಗಳ ಹೂವಿನ ಸೌಂದರ್ಯವನ್ನು ಉಪಭೋಗಿಸುತ್ತ ಅವಿರತ ಪರಹಿತಕಾತರವಾಗಿದೆಯಲ್ಲವೇ?"

“ಇದು ಪಕ್ಕಾ ಇಂಗ್ಲಿಷರ ಹಾಗಿದೆ ನೋಡಿ. ಅವರು ಐದು ಸಾವಿರ ಮೈಲು ದೂರದಿಂದ ಇಲ್ಲಿಗೆ ಬಂದಿಲ್ಲವೇ ? ನಮ್ಮ ಓಲ್ಡ್ ಫೊಕ್ಸ ಸಾಹೇಬರಂತೂ ‘ಮಿ॥ ಶಾಸ್ತ್ರಿ, ಕೇವಲ ನಿಮ್ಮ ಕಲ್ಯಾಣಕ್ಕೋಸ್ಕರವೇ ನಾವು ಇಲ್ಲಿಗೆ ಬಂದದ್ದು.’ ಎಂದು ಹೇಳುತ್ತಿದ್ದರು.”

“ರಾವಸಾಹೇಬ, ನಿಮಗೆ ಈ ಮಾತು ಸರಿದೋರುತ್ತಿದೆಯೇ ?”

“ಅಕ್ಷರಶಃ ನಿಜ. ತ್ರಿವಾರ ಸತ್ಯ. ಅವರಿಲ್ಲದಿದ್ದರೆ ಬೆಳಗಾಂವಿಯಿಂದ ಸಾವಂತವಾಡಿ ಮುಟ್ಟಲು ಐದು ದಿನಗಳು ಬೇಕಾಗುತ್ತಿದ್ದವು.”

“ನಮಗೂ ಮೋಟರು ಮಾಡಲಿಕ್ಕೆ ಬರಲಾರದೆಂದು ನಿಮ್ಮ ತಿಳುವಳಿಕೆಯೆ ? ”

“ಒಂದು ಹೇಳಿದರೆ ಒಂದೆನ್ನುತ್ತೀರಿ. ಇದೆಲ್ಲ ಟಿಳಕರ ಲೇಖ. ಓದಿದರ ಪರಿಣಾಮ ” ಎಂದು ಓಲ್ಡ ಫೊಕ್ಸ ಸಾಹೇಬರ ವೇದವನ್ನು ಆಧಾರಕ್ಕಿಟ್ಟರು.

ಮಧುಕರ ಮೊದಲಾದವರು ಬರುವುದನ್ನು ಕಂಡು ವಾರುಣಿಯು ಬಿನ್ನಹವನ್ನೂ ಲೆಕ್ಕಿಸದೆ ಸುಧೆಯು ಕೆಳಗಿಳಿದಳು. ವಾರುಣಿಗೆ ಸುಧೆಯ ಜೊತೆಗೆ ಹೋಗಬೇಕೆಂದು ಇಚ್ಛೆಯಿದ್ದರೂ ಇಳಿಯಲು ಧೈರ್ಯವಾಗಲಿಲ್ಲ. ಗಾಳಿ ವಿಪುಲವಾಗಿದ್ದುದರಿಂದ ಗಿಡದ ಮರೆಯಲ್ಲಿ ಚಹಾ ತಯಾರಿಸಲು ಮಧುಕರನ ಆಜ್ಞೆಯಾಯಿತು.

ಗೋಪಾಳರಾಯರು ಮೋರೆ ಸಪ್ಪಗೆ ಮಾಡಿಕೊಂಡು ರಾವಸಾಹೇಬರ ಬಳಿಯಲ್ಲಿ ಕುಳಿತರು. ಮಧುಕರ, ದಾದಾಸಾಹೇಬರು ಮಾತ್ರ ಹೌದನ್ನೇರಿದರು. ದಾದಾಸಾಹೇಬರಿಂದ ಸಾಲೆಯ ಬಗ್ಗೆ ಎಲ್ಲ ಮಾಹಿತಿ ದೊರೆಯಿತು.

“ಐದಾರು ವರ್ಷಗಳ ಹಿಂದೆ ಯಾವ ಗ್ರ್ಯಾಜ್ಯುಯೇಟರ ನೆರವೂ ಇಲ್ಲದೆ ಮೂರು ಯತ್ತೆಗಳ ವರೆಗೆ ಸ್ಥಾಪಿಸಿ- ಈ ಅಲ್ಪಾವಧಿಯಲ್ಲಿ ಹಾಯ್ ಸ್ಕೂಲಿನ ಸ್ವರೂಪ ಕೊಟ್ಟ ತಮ್ಮ ಅದ್ಭುತ ಸಾಹಸದ ಕಥಾನಕವನ್ನು

ರಸಭರಿತವಾಗಿ ಬಣ್ಣಿಸಿದರು. ಸದ್ಯ ಸಾಲೆಯಲ್ಲಿ ಇನ್ನೂರೈವತ್ತು ವಿದ್ಯಾರ್ಥಿಗಳಿದ್ದು ಅವರಲ್ಲಿ ಬಹಳಷ್ಟು ಹಿಂದುಳಿದವರಿದ್ದಾರೆ. ಬರುವ ಜೂನದಿಂದ ಅಸ್ಪೃಶ್ಯನೂ ಒಬ್ಬ ಬರಲಿದ್ದಾನೆ.— ಈ ಮೊದಲಾದ ಸಂಗತಿಗಳನ್ನು ಕೇಳಿ ಸುಧಾಕರನಿಗೆ ಅತ್ಯಾನಂದವಾಯಿತು. ತಾನು ಕಲ್ಪಿಸಿದ ಮನೋರಥಗಳೆಲ್ಲ ಈ ಸಾಲೆಯಿಂದ ಈಡೇರಬಹುದೆಂದು ಆತ ಭಾವಿಸಿದ.

" ನಿರ್ಧಾರವನ್ನು ಬೇಗನೇ ತಿಳಿಸುವೆ. "

" ಆಗಬಹುದು. ನಾಲ್ಕಾರು ದಿನಕ್ಕೆ ನಾನೇ ವಾಲಾವಲಿಗೆ ಬರುವವನಿದ್ದೇನೆ. "

" ಏಕೆ ? "

' ನನ್ನ ಹೆಂಡತಿಯನ್ನು ದೇವರ ಸೇವೆಗಾಗಿ ಕೆಲ ದಿನ ಅಲ್ಲಿಡಬೇಕೆಂದು ನಿಶ್ಚಯಿಸಿರುವೆ. ಸುಧಾಕರರಾವ್, ನಾನೊಂದು ವಿಷಯ ಮರೆತೇ ಬಿಟ್ಟಿದ್ದೆ. ವಾಲಾವಲಿಗೆ ಹೋಗುವಾಗ ಸುಧೆಯನ್ನು ಕರೆದುಕೊಂಡು............'

" ಅಮ್ಮನೊಡನೆ ಕೇಳುತ್ತೇನೆ. "

ಇತ್ತ ಸುಧಾಕರ ಸುಖಸ್ವಪ್ನದಲ್ಲಿ ಲೀನವಾಗಿ ಬಿಟ್ಟಿದ್ದ. "ಶಿಕ್ಷಣಾಮೃತವನ್ನು ಜಯಗಾಂವದ ಪ್ರತಿಯೊಂದು ಮನೆಯ ತನಕ ಒಯ್ಯುವೆನು. ಹೀಗಾದ ಮೇಲೆ ದುಃಖದೇವತೆಯ ಮುಖ್ಯಾಸ್ತ್ರಗಳಾದ ದಾರಿದ್ರ್ಯ. ಅಜ್ಞಾನಗಳನ್ನು ಸೆಳೆದುಕೊಂಡಂತೆಯಾದೀತು. ಪ್ರತಿಯೊಬ್ಬ ವಿದ್ಯಾರ್ಥಿಯ ಮೈಮನದಲ್ಲಿ ದೇಶಪ್ರೇಮದ ಹಂಬಲವನ್ನು ತುಂಬುವೆನು. ಆ ಕಲಿತ ವಿದ್ಯಾರ್ಥಿಗಳು ಹಳ್ಳಿಪಳ್ಳಿಗಳಲ್ಲೆಲ್ಲ ಪಸರಿಸಿ ಮನೆಮನೆಗೂ ಕಾಂತಿ ತುಷ್ಟಿ ಪುಷ್ಟಿಗಳನ್ನುಂಟುಮಾಡುವ ಶಿಕ್ಷಣದಾನ ಮಾಡುವರು. ಹೀಗೆ ವಟವೃಕ್ಷದಂತೆ ನನ್ನ ಕಾರ್ಯವಿಸ್ತಾರವಾಗಿ ದಾರಿದ್ರ್ಯ. ಅಜ್ಞಾನ ತಾಪದಿಂದ ಬಳಲಿ ಬೇಸತ್ತವರಿಗೆ ಆಶ್ರಯ ದೊರೆಯುವದು."

" ಸುಧಾಕರರಾವ್, ಇದನ್ನು ಕೇಳುವಿರಾ ? "

"ಏನನ್ನು ?"

'ಮುಂಬಯಿಯಲ್ಲಿ ಗಿರಣಿಗಳು ಬಂದು ಬೀಳುತ್ತಾ ಇದ್ದಾವೆ. ಆಗ ಲಿ, ಕೂಲಿಕಾರರ ಸೊಕ್ಕಾದರೂ ಮುರಿಯಿತು. ಆರಾಣೆಯಿತ್ತು ಕೂಲಿದ ರ; ಈಗ ಹನ್ನೆರಡು ಆಣೆ ಕೊಟ್ಟರೂ ಬರುವದಿಲ್ಲ. ಹೀಗೆ ಉಪವಾಸ ಬಿದ್ದಾಗಲೇ ಬುದ್ಧಿ ಬರಬೇಕು ಈ ಜನರಿಗೆ..........'

"ಅಬ್ಬಾ, ಇದರ ಕೆಳಗೆ ಇನ್ನೊಂದು ಅದ್ಭುತ ಸುದ್ದಿ ಬಂದಿದೆ." ನೋಡಿ, ಈ ಸಾಯಮನ್ ಕಮಿಶನ್ನಿಗೆ ಎಲ್ಲಿ ನೋಡಿದಲ್ಲಿ ಕಪ್ಪು ಬಾವುಟೆ ಹಿಡಿದರು. ಇದ್ದರೆ ಹೀಗಿರಬೇಕು !"

"ಇದೆಂತಹ ಅಪಘಾತವಪ್ಪ ! ಮಹಾಬಲೇಶ್ವರದ ತುದಿಯಿಂದ ಒಬ್ಬನು ಕಾಲುಜಾರಿ ಬಿದ್ದು ಬಿಟ್ಟನಂತೆ. ಆದರೂ ಆ ಬದ್ಮಾಸ ವಿಮಾ ಕಂಪನಿಗೆ ದಗಾ ಕೊಟ್ಟೇಬಿಟ್ಟ. ಹತ್ತು ಸಾವಿರ ರೂಪಾಯಿ ವಿಮಾ ಇಳಿಸಿದ್ದನಂತೆ."

ದಾರಿಯಲ್ಲಿ ತನ್ನ ತಂಗಿಯೊಡನೆ ಒಂದಕ್ಷರವನ್ನೂ ಮಾತನಾಡದ ದಾದಾಸಾಹೇಬರ ವಾಚಾಳಿತನದಿಂದ ಸುಧಾಕರನಿಗೆ ಏನೇನೋ ಅನಿಸಿಬಿಟ್ಟಿತು. ಸುಧೆ ಮತ್ತು ದಾದಾಸಾಹೇಬರು ಒಡಹುಟ್ಟಿದವರೆಂಬುದು ಮಧುಕರ ಹೇಳಿದಾಗಲೇ ಗೊತ್ತು. ವಿಧವೆಯಾದ ತಂಗಿಯ ಭಾವೀ ಜೀವನಕ್ಕಿಂತ ರಾಜಕಾರಣವೇ ಹೆಚ್ಚಿನ ಮಹತ್ವದ್ದೆಂದು ತಿಳಕೊಳ್ಳುವ ಅಣ್ಣನನ್ನು ಕಂಡು ನಗಬೇಕೋ, ಅಳಬೇಕೋ ತಿಳಿಯದಾಯಿತು.

ಚಹಾಪಾನದ ನಂತರ ಮನೆಗೆ ತಿರುಗಿದರು. ಬೆಳದಿಂಗಳು ಬಿದ್ದುದರಿಂದ ಮೌನವಾಗಿ ನಡೆಯುವುದರಲ್ಲಿಯೇ ಆನಂದವಿತ್ತು. ನಡುನಡುವೆ ಯಾರಾದರೂ ಮಾತಾಡುತ್ತಿದ್ದರು. ಆದರೂ ಹೇಳಿಕೊಳ್ಳುವಂತಹ ಮಾತುಕತೆ ನಡೆಯಲಿಲ್ಲ. ತಾಜಾ ಸುದ್ದಿ ಓದಸಿಗದ್ದರಿಂದ ದಾದಾಸಾಹೇಬರ ಜೀವ ಕಳವಳಗೊಂಡಿದ್ದಿತು. ಗೋಪಾಳರಾಯರು ವರಾನ್ವೇಷಣವು ವಿಫಲವಾದುದರಿಂದ ಮೌನವಾಗಿದ್ದರು. ಬ್ಯಾರಿಸ್ಟರರು ಹೆಂಡತಿ

ಯಾಗುವವಳು ಕನಿಷ್ಟ ಮೆಟ್ರಿಕ್ಯಾಗಬೇಕೆಂದು ಹೇಳಿದುದರಿಂದ ದುಡ್ಡಿದ್ದರೆ ವರರಿಗೇನು ಕಡಿಮೆಯೆಂಬ ರಾವಸಾಹೇಬರ ಸಿದ್ಧಾಂತಕ್ಕೆ ಧಕ್ಕೆ ಬಂದಿದ್ದಿತು. ಅದಕ್ಕಾಗಿ ಓಲ್ಡ ಫೂಕ್ಸ ಸಾಹೇಬರ ಕತೆ ಹೇಳಲು ಅವರಿಗೆ ಮನಸ್ಸಾಗಲಿಲ್ಲ. ವಾರುಣಿ ಮತ್ತು ಸುಧಾ ಇವರಿಬ್ಬರು ಮಾತ್ರ ಕೈಕೈ ಹಿಡಿದುಕೊಂಡು ನಡೆಯುತ್ತಿದ್ದರು.

ಮನೆಯು ಹತ್ತಿರವಾದೊಡನೆ ಗೋಪಾಳರಾಯರು ದಾದಾಸಾಹೇಬರು ಮಧುಕರನಿಂದ ಬೀಳ್ಕೊಂಡರು. ‘ ಅಲ್ಲಗಳೆದೆನೆಂದು ಬೇರೇನೂ ಭಾವಿಸಬೇಡಿ. ’ ಎಂದು ಹೇಳಲು ಮಧುಕರನು ಮರೆಯಲಿಲ್ಲ.

ಬಂದ ಅತಿಥಿಗಳು ಶ್ರೀಮಂತರಿದ್ದುದರಿಂದ ತರತರದ ಅಡಿಗೆ ತಯಾರಿಸುವುದರಲ್ಲಿ ಸುಂದರಾಬಾಯಿಯವರು ಮಗ್ನರಾಗಿದ್ದರು. ಸುಧೆಯು ಅತ್ತೆಗೆ ನೆರವಾಗಹತ್ತಿದಳು. ವಾರುಣಿಯು ಕುಸು ಹೊತ್ತು ಅಡಿಗೆ ಮನೆಯಲ್ಲಿ ಕುಳಿತು, ಸುಂದರಾಬಾಯಿಯವರ ಗಡಿಬಿಡಿಗೆ ಬೇಸತ್ತು ಹೊರಬಂದಳು. ಮಧುಕರ ರಾವಸಾಹೇಬರೊಡನೆ ಮದುವೆಯ ಸುದ್ದಿ ಮಾತಾಡುತ್ತ ಕುಳಿತಿದ್ದ.

‘ ಬಡವನಾದರೂ ಜಂಬಕ್ಕೆ ಕಡಿಮೆಯಿಲ್ಲ. ಮದುವೆಗೆ ಬಂದ ತಂಗಿಯಿದ್ದಾಳಂತೆ. ಐನೂರು ರೂಪಾಯಿ ವರದಕ್ಷಿಣೆ ಕೊಟ್ಟು ನನ್ನಂತಹ ಗ್ರ್ಯಜ್ಯುಯೇಟ-ಕವಿಯನ್ನು ಬಲೆಯಲ್ಲಿ ಹಾಕಿಕೊಳ್ಳುವ ಹವ್ಯಾಸ ಬಡುವುದು ಹುಚ್ಚುತನವಲ್ಲವೇ ? ’

ಹನ್ನೆರಡನೆಯ ವಯಸ್ಸಿನಲ್ಲಿ ತಂದೆಯು ಮನೆಬಿಟ್ಟು ಹೋದುದರಿಂದ ತಾಯಿಯ ಮುದ್ದು ಮಗನಾಗಿ ಮಧುಕರ ಬೆಳೆದಿದ್ದ. ಆತನ ಹಟಮಾರಿತನದ ಬೇಡಿಕೆಗಳನ್ನೆಲ್ಲ ಪೂರೈಸುತ್ತಿದ್ದುದಲ್ಲದೆ, ನೆರೆಹೊರೆಯವರ ಮುಂದೆ ತನ್ನ ಮಗನ ಗುಣವರ್ಣನೆಯನ್ನು ಮಾಡುತ್ತಿದ್ದಳು. ತಾಯಿಯು ಮಗನನ್ನು ಅಂಗೈ ಮೇಲಿನ ಜೊಕ್ಕೆಯಂತೆ ನಡಿಸಿಕೊಳ್ಳಹತ್ತಿದ ಮೇಲೆ ಅದು ದುರಭಿಮಾನದ ದೂಷಿತ ರಕ್ತದಿಂದ ತುಂಬಿ ಹೋಗದೆ ಏನು ಮಾಡೀತು ? ತಂದೆಯ ನೆನಪಾದಾಗ ಆತನಿಗೆ ಬೇಜ

ವಾಗುವ ಬದಲು ಆಶ್ಚರ್ಯವೇ ಆಗುತ್ತಿತ್ತು. ಈ ಹತ್ತು ವರ್ಷಗಳಲ್ಲಿ ಯೂ ತಂದೆಯ ಪತ್ತೆಯಾಗದಿರಲು ಬಹುಶಃ ಈ ಜಗತ್ತಿನಲ್ಲಿ ಇರಲ್ಲಿಕ್ಕಿಲ್ಲ ವೆಂದೇ ಅವನಿಗೆ ಅನಿಸುತ್ತಿತ್ತು. ಆದರೆ ತಾಯಿಯ ಮುಂದೆ ಹೇಳುವು ದಕ್ಕೆ ಮಾತ್ರ ಧೈರ್ಯವಿದ್ದಿಲ್ಲ. ಸುಧೆಯು ಸುಮಾರು ಅವನಷ್ಟೇ ವಯ ಸ್ಸಿನವಳು. ಆತನ ದೃಷ್ಟಿಯಿಂದ ಆಕೆ ಮನೆಗೆಲಸಕ್ಕೆ ಉಪಯೋಗವು ಳ್ಳ ಹೆಂಗಸು. ಅಣ್ಣನಿದ್ದಿದ್ದರೆ ಆಕೆಗೂ ಅರ್ಧಪಾಲು ದೊರೆಯುತ್ತಿ ತ್ತೆಂಬ ವಿಚಾರವೆಂದಿಗೂ ಅವನ ಮನದಲ್ಲಿ ಬರಲಿಲ್ಲ. ಅವರ ಚಿಕ್ಕ ಸಂಸಾರದ ಮಾನದಿಂದ ಉತ್ಪನ್ನವು ಚನ್ನಾಗಿಯೇ ಇದ್ದ ಮೂಲಕ ಅವನ ಇಚ್ಛೆಗಳೆಲ್ಲ ಅರೆನಿಮಿಷದಲ್ಲಿಯೇ ಪೂರೈಸಲ್ಪಡುತ್ತಿದ್ದವು. ಹಗಲಿ ಲ್ಲ ಪಲ್ಲಕ್ಕಿಯಲ್ಲಿ ತಿರುಗಾಡುವಾತನಿಗೆ ಹೊತ್ತ ಬೋಯಿಗಳ ಪರಿಶ್ರಮವು ಗೊತ್ತಾಗದಿರುವಂತೆ ತನ್ನ ವಿಲಾಸ, ನಿಷ್ಕಾಳಜಿತನ,, ಲಹರಿ ಇವೆಲ್ಲ ಪರರಿಗೆ ತಾಪದಾಯಕವಾಗಬಹುದೆಂಬ ಸಂದೇಹ ಕೂಡ ಆತನಲ್ಲಿ ಸುಳಿಯಲಿಲ್ಲ. ಸುಂದರಾಬಾಯಿಗೆ ಆತನೇ ಆಧಾರ. ಸುಧೆಗೆ ಇನ್ನೇ ನಾಗಬೇಕು? ಮೈದುನನಾದರೂ ನೆಮ್ಮದಿಯಿಂದಿರಲಿ ಎಂದು ಬಯಸು ತವಳು. ನೆರೆಹೊರೆಯವರೋ -- ಇವರ ಶ್ರೀಮಂತಿಕೆಯಿಂದ ಕಣ್ಣು ಕುಕ್ಕಿನಂತಾಗಿ ತಮ್ಮ ದೃಷ್ಟಿಯನ್ನು ಇತ್ತ ಹರಿಬಿಡಲಿಕ್ಕೂ ಅಂಜು ತ್ತಿದ್ದರು. ಆತ ಬೆಳೆದುದು ಇಂತಹ ವಾತಾವರಣದಲ್ಲಿ. ಪರೀಕ್ಷೆಗಳಲ್ಲಿ ಯ ಯಶಸ್ಸು, ಕಾವ್ಯರಚನೆಯ ಮೂಲಕ ಬಂದ ಕೀರ್ತಿ—ಇವುಗಳಿಂ ದ ಮಧುಕರನ ಒಣ ಹೆಮ್ಮೆಯು ಇನ್ನೂ ಹೆಚ್ಚಿತು. ಆಯುಷ್ಯದ ಉತ್ತರಾರ್ಧದಲ್ಲಿ ದೊರಕಿದ ಕೀರ್ತಿಯು ಅಮೃತದಂತಿದ್ದರೂ, ಚಿಕ್ಕಂ ದಿನಲ್ಲಿ ಲಭಿಸಿದ ಯಶಸ್ಸು ಮದ್ಯದಂತೆ ಉನ್ಮಾದಕಾರಿಯಾಗಿರುವುದೇ ಹೆಚ್ಚು. ಹೊಟ್ಟೆ ಚಿಂತೆ ಹತ್ತಿದರಾದರೂ ಕಣ್ಮೇಲಿನ ಅಹಂಕಾರದ ಮುದವಿಳಿಯಬಹುದಿತ್ತು. ಆದರೆ ಅಂತಹ ಪ್ರಸಂಗವೂ ಬರಲಿಲ್ಲ ಬಿ. ಎ. ಆದ ಕೂಡಲೇ ಜಯಗಾಂವದ ಸಾಲೆ ಸೇರಲು ದಾದಾ ಸಾಹೇ ಬರು ವಿನಂತಿ ಮಾಡಿದ್ದರು. ಆದರೆ ಕಾವ್ಯದಲ್ಲಿ ಶಿಕ್ಷಣದ ವರ್ಣನೆ ಮಾಡಿದ್ದರೂ ಮಾಸ್ತರನಾಗಿ ಕುರಿಕಾಯುವುದು ಆತನಿಗೆ ಸೇರುತ್ತಿರ ಲ್ಲ. ತನ್ನ ಶಿಕ್ಷಣವೆಂದರೆ, ಬಡ್ಡಿ ಸಹಿತ ಸಮಾಜಕ್ಕೆ ತಿರುಗಿ ಮುಟ್ಟಿಸ

ಬೇಕಾದ ಹುಂಡಿಯೆಂದು ಆತ ಅರಿತಂತಿರಲಿಲ್ಲ. ದಾದಾ ಸಾಹೇಬರಿಗೆ ನಿಶ್ಚಿತವಾದ ಯಾವ ಉತ್ತರವನ್ನೂ ಕೊಡದೆ ಬಿ. ಎ. ಪಾಸಾದ ಮೇಲೆ ಒಂದು ವರ್ಷ ಕಳೆದ. ಈ ವರ್ಷ ನಕಾರಾತ್ಮಕ ಉತ್ತರ ಕೊಡಬೇಕೆಂದು ಮಾಡಿದ್ದ. ಆದರೆ ನಮ್ಮ ರಾವಸಾಹೇಬರು ವಾರುಣಿಯನ್ನು ಕರೆದುಕೊಂಡು ಜಯಗಾಂವದಲ್ಲೇ ಇರುವವರಾದುದರಿಂದ ಒಲ್ಲೆನ್ನುವ ಸಾಹಸ ಮಾಡಲಿಲ್ಲ.

ಆವನ ಮದುವೆಯು ಮುಂದಿನ ಪ್ರಶ್ನಾರ್ಥಕವೂ ಹೀಗೆಯೇ ಮುಂದುವರಿಯುತ್ತಲಿತ್ತು. ರೂಪದಲ್ಲಿ ರಂಭೆ, ದ್ರವ್ಯದಿಂದ ಲಕ್ಷ್ಮಿ, ವಿದ್ಯೆಯಲ್ಲಿ ಸರಸ್ವತಿಯಂತಿರುವ ತರುಣಿಗೆ ಮಾತ್ರ ತನ್ನ ಕೊರಳಿಗೆ ಮಾಲೆ ಹಾಕುವ ಹಕ್ಕೆಂದು ತಿಳಿದಿದ್ದ. ಆಕಾಶದಲ್ಲಿಯ ಚಂದ್ರನನ್ನು ಬಯಸುವವನು ಮಣ್ಣಿನ ಹಣತೆಗೆ ಮರುಳಾಗುವನೇ? ನಂದಾದೀಪ ಆತನಿಗೆ ಹಳೆ ಪದ್ಧತಿಯದು. ವಿದ್ಯುದ್ದೀಪವು ಹೆಚ್ಚು ಪ್ರಖರ. ವೈದಿಕರ ಹೆಣ್ಣು ಬಂದರೆ "ಮಹಾಶೇಷನೊಡನೆ ಸಂಬಂಧ ಬೆಳಿಸಲು ಹವಣಿಸಬಾರದು" ಎನ್ನುತ್ತಿದ್ದ. ಸಾಧಾರಣ ಸ್ಥಿತಿಯವರು ಮುಂದಾದರೆ "ತಾಮ್ರಕ್ಕೆ ಬಂಗಾರ ಸಿಗುವದೇ?" ಎಂದುಬಿಡುವ. ನಸುಗಪ್ಪಿನ ಹೆಣ್ಣು ಬಂದರೆ ಸಾಕು, 'ನನ್ನ ಮನೆ ಆಫ್ರಿಕೆಯಲ್ಲಿರುವದಿಲ್ಲ' ಎಂದು ಚುಚ್ಚಿ ಮಾತನಾಡುತ್ತಿದ್ದ. ಹೀಗೆ ಕನ್ಯಾಪಿತರ ಅರ್ಜಿಗಳೆಲ್ಲ ಒಂದಲ್ಲ ಒಂದು ಕಾರಣದಿಂದ ನಿರಾಕೃತವಾಗುತ್ತಿದ್ದುದರಿಂದ ಅರ್ಜಿದಾರರು ಕಡಿಮೆಯಾಗುತ್ತ ಬಂದಿದ್ದರು. ದಾದಾ ಸಾಹೇಬರ ವಶೀಲಿಯೂ ಸಾರ್ಥಕವಾಗಲಿಲ್ಲ.

"ರಾವಸಾಹೇಬ, ನಾಳೆ ಮೆಟ್ರಿಕ್ಕ ಕಲಿಯುವ ಭಿಕ್ಷಾನ್ನದ ಹುಡುಗ ಬಂದು ವಾರುಣಿಯನ್ನು ಕೇಳಿದರೆ ನೀವೇನು ಉತ್ತರ ಕೊಡುವಿರಿ?"

"ಆವನ ಮೇಲೆ ಖಟ್ಲೆ ಹಾಕಿಬಿಟ್ಟೇನು"

ಸುಧಾಕರನು ಯಾವುದೋ ವಿಚಾರದೊಳಗಿದ್ದ. ಮನೆಗೆ ಹತ್ತಿದ ಬೆಂಕಿಯನ್ನು ನೊಂದಿಸಲು ಅಸಮರ್ಥನಾದವನು ಅಸಹಾಯನಾಗಿ

ಬೆಂಕಿಯೆಡೆಗೆ ನೋಡುತ್ತಿರುವಂತೆ ಸುಧಾಕರನ ದೃಷ್ಟಿಯಿತ್ತು; ಗೋಪಾಳರಾಯರ ತಂಗಿಯನ್ನು ಕಣ್ಣಿಂದ ನೋಡದೆ ಕೇವಲ ವರದಕ್ಷಿಣೆ ಸಲುವಾಗಿ ಮಧುಕರನಂತಹ ಸುಶಿಕ್ಷಿತನು ಮದುವೆಯಾಗಲು ಉದ್ಯುಕ್ತನಾದದ್ದು ಆತನಿಗೆ ರುಚಿಸಲಿಲ್ಲ. ಮದುವೆಯೆಂದರೆ ಎರಡು ಹೃದಯಗಳ— ಎರಡು ಮನಸ್ಸುಗಳ— ಎರಡು ಜೀವಿತ ವಿಶ್ವಗಳ— ಸಮ್ಮೇಲನವಿರುತ್ತದೆ. ಅಮೌಲ್ಯವಾದ ಈ ಸಮ್ಮೇಲನವನ್ನು ಕವಡಿಯಿಂದ ಕೂಡಿಸ ಹೊರಟಿದ್ದಾನೆ ಕವಿಯಾದ ಮಧುಕರ. ಪ್ರೇಮದ ಉಷ್ಣತೆಯು ಹತ್ತಿ ಹೃದಯ ಕರಗದ ಎರಡು ಜೀವಗಳು ಒಂದಾಗುವ ಬಗೆ ಹೇಗೆ? ಶಬ್ದಗಳನ್ನು ಕೂಡಿಸುವುದಕ್ಕಿಂತ ಹೃದಯಗಳನ್ನು ಕೂಡಿಸುವುದರಲ್ಲಿ - ಹೊತ್ತಿಗೆಗಳಲ್ಲಿಯ ನವರಸಗಳಿಗಿಂತ ಹೃದಯಗಳಲ್ಲಿಯ ನವರಸಗಳಲ್ಲಿಯೇ ನಿಜವಾದ ಕಾವ್ಯವಿರುತ್ತದೆಂಬುದು ಈ ನರಕಪಿಗೆ ಗೊತ್ತಾಗಬಾರದೇ ? ಆ ಅರಿವು ಇದ್ದುದಾದರೆ ತನ್ನ ಅತ್ತಿಗೆಯನ್ನು ಈ ಪರಿ ನಡಿಸುತ್ತಿರಲಿಲ್ಲ; ಗೋಪಾಳರಾಯರಿಗೆ ಅಂತಹ ಉತ್ತರ ಕೊಡುತ್ತಿರಲಿಲ್ಲ.

ಊಟಕ್ಕೆ ಕೂತಾಗಲೂ ವಿಚಾರದಲ್ಲಿಯೇ ಮಗ್ನನಾಗಿದ್ದ. ಯಂತ್ರವಂತೆ ಎಲೆಯ ಮೇಲಿನ ತುತ್ತನ್ನು ಬಾಯೊಳಗಿಡುತ್ತಿದ್ದ. ಸುಂದರಾಬಾಯಿಯವರು ರಾವಸಾಹೇಬ ಮತ್ತು ವಾರುಣಿಯರಿಗೆ ಆಗ್ರಹಪೂರ್ವಕವಾಗಿ ಬಡಿಸುತ್ತಿದ್ದರು. ಆದರೆ ಸುಧಾಕರನು ಶ್ರೀಮಂತನೆಂಬೆಂಬ ಬಗ್ಗೆ ಯೋಗ್ಯ ಪುರಾವೆಯು ದೊರೆಯದ್ದರಿಂದ ಅವರು ಹೆಚ್ಚಿಗೆ ಒತ್ತಾಯ ಮಾಡಲಿಲ್ಲ.

ರಾವಸಾಹೇಬ, ವಾರುಣಿಯರಿಗೆ ಮಹಡಿಯ ಮೇಲೆ ಮಲಗಲು ಏರ್ಪಾಟಾಗಿತ್ತು. ಸುಧಾಕರ, ಮಧುಕರ ಗಾಳಿ ಬರುತ್ತಿದೆಯೆಂದು ಹೊರಗೆ ಮಲಗಿದ್ದರು. ಸುಂದರಾಬಾಯಿಯವರು ಸೊಸೆಗೆ ಗಿಡಕ್ಕೆ ನೀರೆರೆಯುವ ಕೆಲಸ ಹೇಳಿ, ತಾನು ಬರುವಷ್ಟರಲ್ಲಿ ಪಾತ್ರೆಗಳನ್ನು ತಿಕ್ಕಿಡುವಂತೆ ಸೂಚನೆ ಮಾಡಿ ಕೀರ್ತನ ಕೇಳಲು ಬ್ರಾಹ್ಮಣ ದೇವಮಂದಿರಕ್ಕೆ ಹೊರಟು ಹೋದಳು.

ಬೆಳಿಗ್ಗೆ ಜ್ವರದಿಂದ ಬಳಲುತ್ತ ಬಿದ್ದ ಸೊಸೆಗೆ ಕೆಲಸ ಹೇಳಿ, ಕೀರ್ತನೆಗೆ ಹೋಗುವ ಅತ್ತೆಯ ವಿಚಾರವಾಗಿ ಸುಧಾಕರ ವಿಚಾರಿಸ ಹತ್ತಿದ. "ಮನಸ್ಸು ಮಾಡಿದರೆ ಮನೆಯಲ್ಲೊಂದು ಕೆಲಸದಾಕೆಯನ್ನು ಇಟ್ಟುಕೊಳ್ಳುವುದು ಮಧುಕರನಿಗೆ ಅಸಾಧ್ಯವಲ್ಲ. ಆದರೆ ವಿಧವೆಯೆಂದರೆ ಆಜನ್ಮಜೀತದಾಳಿನಂತೆ ಕೂಳಿಗಾಗಿ ದುಡಿಯುವಾಕೆ. ಸುಂದರಾಬಾಯಿಗಾದರೂ ಬುದ್ಧಿ ಬಾರದೆ? ಸುಧೆಯು ಎಷ್ಟೋ ಮಧುಕರನೂ ಅಷ್ಟೇ ಹತ್ತಿರದವ. ಅಂದ ಮೇಲೆ ಅವಳ ಹಣೆ ಒಡೆಯಿತೆಂದು ಪಟ್ಟಿ ಕಟ್ಟುವುದು ಇವರ ಕರ್ತವ್ಯವಾಗಿತ್ತು ಆದರೆ ಉಪ್ಪು ಸುರಿಯುತ್ತಿದ್ದಾರೆ— ಈ ಕ್ರೂರ ಜನ."

"ಗಂಡನು ಕಣ್ಮರೆಯಾಗಿ ಹತ್ತು ವರ್ಷವಾದರೂ ಇಳಿವಯಸ್ಸಿನಾಕೆ ಚಿನ್ನಾಭರಣಗಳಿಂದ ಶೃಂಗರಿಸಿಕೊಂಡು ಮದುವೆಯ ಮನೆಯಲ್ಲಿ ಮೆರೆಯಬಹುದು; ಆದರೆ ಮಗಳಂತಿರುವ ಸುಧೆಯು ಹರಕು ಸೀರೆಯುಟ್ಟು, ಮನೆಯಲ್ಲಿ ಪಾತ್ರೆ ತಿಕ್ಕುತ್ತ ಕುಳಿತಿರಬೇಕು,— ಇದೆಲ್ಲಿಯ ನ್ಯಾಯ! ಹೆಣ್ಣಿನ ದುಃಖ ಹೆಂಗುಸಿಗೆ ಹೆಚ್ಚು ಅರ್ಥವಾದೀತೆಂದು ತಿಳಿದಿದ್ದೆ. ಆದರೆ ಇಲ್ಲಿ ಅದಕ್ಕೂ ಅಪವಾದ."

ತನ್ನ ತಾಯಿಯಂತೆಯೇ ಎಲ್ಲ ಸ್ತ್ರೀಯರಿರುತ್ತಾರೆಂದು ಸುಧಾಕರನ ಕಲ್ಪನೆಯಾಗಿತ್ತು. ಆದರೆ ಸುಂದರಾಬಾಯಿಯನ್ನು ಕಂಡ ಒಂದು ದಿನದಲ್ಲಿ ಆತನ ಭಾವನೆ ಬದಲಿಸಿತು.

ಮನುಷ್ಯ ಸ್ವಭಾವವು ವಿವಿಧ ರಸಾಯನಗಳ ಮಿಶ್ರಣ. ಸುಂದರಾಬಾಯಿ ಹುಟ್ಟಾ ಸ್ವಾರ್ಥಿ. ಅದರಲ್ಲಿಯೂ ಆಕೆಯನ್ನು ಎರಡನೆಯ ಸಂಬಂಧಕ್ಕೆ ಕೊಟ್ಟಿದ್ದರು. ಅದರಿಂದ ಗಂಡನನ್ನು ತನ್ನ ಮುಷ್ಟಿಯಲ್ಲಿಟ್ಟುಕೊಂಡಿದ್ದಳು. ಆದರೂ ಗಂಡನಿಗೆ ಹಿರೇ ಹೆಂಡತಿಯ ಮಗನ ಮೇಲೆ ವಾತ್ಸಲ್ಯವಿತ್ತು. ಬಾಲ್ಯದಲ್ಲಿಯೇ ಆತನ ಮದುವೆ ಮಾಡಿ ಸುಧೆಯನ್ನು ಮನೆಗೆ ತಂದಿದ್ದ. ಪಾಪ! ಹಿರೇ ಮಗನು ಮದುವೆಯಾದ ಆರು ತಿಂಗಳಲ್ಲಿ ಕಾಲವಶನಾದುದರಿಂದ ವೈರಾಗ್ಯದಿಂದ ಮನೆ ಬಿಟ್ಟು ಹೊರಟುಹೋದ. ಮೊಟ್ಟಮೊದಲು ಕಾಶೀಯಾತ್ರೆಗೆ ಹೋಗಿ

ದ್ದಾರೆಂದು ಸುಂದರಾಬಾಯಿ ಹೇಳಿಕೊಳ್ಳಹತ್ತಿದಳು. ಒಂದು ವರ್ಷವಾದರೂ ಬಾರದಿರಲು ವನಸ್ಪತಿ ಶೋಧಕ್ಕಾಗಿ ಹಿಮಾಲಯಕ್ಕೆ ಹೋಗಿದ್ದಾರೆ ಎನ್ನಹತ್ತಿದಳು. ಆತ ಅಲ್ಲಿಯ ಹೆಸರಾದ ವೈದ್ಯನಿದ್ದುದರಿಂದ ಹಿಮಾಲಯಕ್ಕೆ ಹೋಗಿದ್ದರೂ ಹೋಗಿರಬಹುದೆಂದು ಜನ ನಂಬಿದರು. ಆದರೆ ಎಲ್ಲರನ್ನೂ ಎಲ್ಲ ಕಾಲದ ವರೆಗೆ ಮೋಸಮಾಡಲು ಸಾಧ್ಯವಿಲ್ಲ. ದಿನಗಳೆದಂತೆ ವೈದ್ಯರು ಕೈಲಾಸವಾಸಿಯಾದರೆಂದು ಜನರು ಆಡಿಕೊಳ್ಳಹತ್ತಿದರು. ಆದರೆ ಸುಂದರಾಬಾಯಿಯು ಇವಕ್ಕೆಲ್ಲ ಲಕ್ಷ್ಯಕೊಡದೆ ದಿನದಿನಕ್ಕೂ ಹಣೆಯ ಕುಂಕುಮವನ್ನು ಇನ್ನಷ್ಟು ದೊಡ್ಡದಾಗಿ ಹಚ್ಚಿಕೊಳ್ಳಹತ್ತಿದಳು. ಗಂಡನು ಹೊರಟು ಹೋಗಲು ಸುಧೆಯ ಕಾಲ್ಗುಣವೇ ಕಾರಣವೆಂದು ನಂಬುಗೆಯಿದ್ದುದರಿಂದ ಅವಳನ್ನು ಪೀಡಿಸಿ ತಾನು ಸಮಾಧಾನಪಟ್ಟುಕೊಳ್ಳುತ್ತಿದ್ದಳು. ಅವಳ ಜೀವನನಾಟಕದಲ್ಲಿ ಅಲಂಕಾರದಿಂದ ಶೃಂಗಾರರಸ, ಮಧುಕರನಿಂದ ವಾತ್ಸಲ್ಯರಸ, ಸುಧೆಯಿಂದ ವೀರರಸಗಳ ಗದ್ದಲವೆದ್ದಿತ್ತು. ಆದರೆ ಕರುಣಾರಸಕ್ಕೆ ಅಲ್ಲಿ ಸ್ಥಾನವಿರಲಿಲ್ಲ. ವರ್ಷಗಳು ಕಳೆದಂತೆ ಗಂಡನ ಅಸ್ತಿತ್ವಕ್ಕೆ ಸಂದೇಹ ಬರತೊಡಗಿದರೂ ತೋರಗೊಡದೆ ಸಂಪತ್ತು, ಪುತ್ರನ ಪ್ರೇಮದಲ್ಲಿ ಎಲ್ಲವನ್ನೂ ಮರೆತು ಬಿಟ್ಟಿದ್ದಳು. ತನಗಾಗಿ ಗಂಡನಿದ್ದಾನೆಂಬ ದೃಷ್ಟಿಯಿಂದಲೇ ಆಕೆ ಸಂಸಾರ ಸಾಗಿಸಿದ್ದರಿಂದ ಇತ್ತಿತ್ತಲಾಗಿ ಗಂಡನ ನೆನಪು ಸಹ ಹೆಚ್ಚಿಗೆ ಆಗುತ್ತಿದ್ದಿಲ್ಲ.

ಸುಧಾಕರನಿಗೆ ಅವಳ ಜೀವನದ ರೀತಿ ಗೊತ್ತಿರದ್ದರಿಂದ ಚಕಿತನಾದ. ದೇವಾಲಯದ ಕಲ್ಲಿನಲ್ಲಿ ದೇವರನ್ನು ಕಾಣುವಾಕೆಗೆ ಸುಧೆಯಂತಹ ಹೂವಿನಲ್ಲಿ ಕಾಣಬಾರದೇಕೆ ? ಎಂದುಕೊಳ್ಳುವ. ಕ್ಷೀರಸಾಗರಕ್ಕಿಂತ ಅಶ್ರುಪ್ರವಾಹದಲ್ಲಿ, ಕೈಲಾಸಕ್ಕಿಂತ ಭಾಗ್ಯಹೀನ ಹಣೆಯಲ್ಲಿ ದೇವರ ದರ್ಶನವಾಗುತ್ತಿದೆಯೆಂದು ಆತನ ಹೃದಯವು ಶಿಕ್ಷಣ ಪಡೆದಿತ್ತು. ಜೀವನ ವೃಕ್ಷಕ್ಕೆ ದಯೆಯೆಂಬುದೇ ಬೇರು. ಪ್ರೀತಿಯೆಂಬುದೇ ಎಲೆ. ಭಕ್ತಿಯೆಂಬುದೇ ಫಲವಾಗಿರುತ್ತದೆ. ಅಂದಮೇಲೆ ಬೇರಿಲ್ಲದ ವೃಕ್ಷಕ್ಕೆ ಫಲವೆಲ್ಲಿಂದ ಬಂದೀತು ?

ಗಿಡದ ಎಲೆಗಳನ್ನು ಕೂಡ ಅಲುಗಾಡಿಸದೆ ಗಾಳಿಯು ಮಂದವಾದ ಸುಳಿವು ಬರುವಂತೆ ಸುಧೆಯು ಬಂದು ಮೈದುನನನ್ನು ಎರಡು ಮೂರು ಸಲ ಕರೆದಳು. ಕೊನೆಯ ಸಲ ಮಧುಕರನು ಬೇಸರದಿಂದ

"ಏನೇ ಅತ್ತಿಗೆ?"

"ಬಿಂದಿಗೆ ಬಾವಿಯಲ್ಲಿ— ಬಿತ್ತು."

"ಬಿದ್ದರೆ ಬೀಳಲಿ. ನಾಳೆ ಯಾರಿಂದಾದರೂ ತೆಗೆಯಿಸಬಹುದು"

"ಪಾತ್ರೆ ತಿಕ್ಕೋದು ಹಾಗೇ ಉಳಿದಿದೆ."

"ಉಳಿದರೇನು ಮಾಡಲಿ? ನನಗೆ ಪಾತ್ರೆ ತಿಕ್ಕಲು ಕರೆಯಲು ಬಂದಿರುವೆಯಾ? ರಾತ್ರಿಯೆಂತ ಇಲ್ಲ, ಹಗಲೆಂತ ಇಲ್ಲ, ಈಗಷ್ಟೇ ಜಂಪು ಹತ್ತಿತ್ತು. ಕಟಕಟಿ ಸುರುವಾಗಿ ಬಿಟ್ಟಿತು!" ಎಂದು ಮಧುಕರನು ಮುಸುಕನ್ನೆಳೆದುಕೊಂಡನು. ನಿರಾಶಳಾಗಿ ಸುಧೆಯು ಹೊರಟು ಹೋದಳು. ಸುಧಾಕರನು ಮನಸ್ಸಿನಲ್ಲಿ ತಳಮಳಗೊಂಡದ್ದರಿಂದ ಕೆಲ ಹೊತ್ತಿನ ಮೇಲೆ ಎದ್ದು ಹಿತ್ತಲಕಡೆಗೆ ಹೋದನು. ಬಚ್ಚಲಮನೆಯ ಬಳಿಯಲ್ಲಿ ಪಾತ್ರೆಯ ರಾಶಿ ಬಿದ್ದಿತ್ತು. ಸಮೀಪದಲ್ಲೊಂದು ಚಿಮಣಿ ಉರಿಯುತ್ತಿದ್ದು ಅದರ ಹೊಗೆಯು ಆಕೆಯ ತಲೆಯ ಮೇಲೆ ಯಾವಾಗಲೂ ಕುಣಿಯುತ್ತಿರುವ ನಿರಾಶೆಯಂತೆ ಭಾಸವಾಗುತ್ತಿತ್ತು. ಸುಧೆಯು ಕಾಣಿಸಲಿಲ್ಲ. ಆಕೆ ಬಾವಿಯಲ್ಲಿಳಿಯುವ ಯತ್ನದಲ್ಲಿದ್ದಳು. ಒಂದು ಮೆಟ್ಟಲಿಳಿದಿದ್ದರೂ ಕೆಳಗಿಳಿಯುವ ಧೈರ್ಯವಿಲ್ಲದೆ ನಿಂತಿದ್ದಳು.

"ಇನ್ನೊಂದು ಬಿಂದಿಗೆಯಿಲ್ಲವೇ?"

"ಇದೆ. ಆದರೆ ಅದನ್ನು ಅತ್ತೆಯವರು ತುಂಬಿಟ್ಟಿದ್ದಾರೆ. ಅದನ್ನು ನಾನು ಮುಟ್ಟುವಂತಿಲ್ಲ."

"ನಿಮಗೆ ಈಸು ಬರುತ್ತಿದೆಯೇ?"

"ಇಲ್ಲ"

"ಹಾಗಾದರೆ ಬಾವಿಯಲ್ಲಿ ಏಕೆ ಇಳಿಯುತ್ತೀರಿ?"

" ನಾನು ಮುಳುಗಿದರೆ ಜಗತ್ತೇನು ಮುಳುಗುವದಿಲ್ಲ."

ಸುಧಾಕರನು ಬೇಗನೇ ಕೈಹಿಡಿದು ಸುಧೆಯನ್ನು ಮೇಲಕ್ಕೆ ಎಳೆದುಕೊಂಡ. ಆವನ ಸ್ಪರ್ಶದಿಂದ ಆವಳ ಅಂತಃಕರಣದಲ್ಲಿ ಭರತಿಯ ತೆರೆಗಳು ನರ್ತಿಸಹತ್ತಿದವು. ಆವಳು ಸೆರಗಿನಿಂದ ಕಣ್ಣೊರಸಿಕೊಂಡು ಅಲ್ಲಿಯೇ ಸಮೀಪದಲ್ಲಿರುವ ಅಶೋಕ ಮರದ ಕೆಳಗೆ ನಿಂತುಕೊಂಡಳು.

ಶರೀರ ಪಾಶದಿಂದ ಮುಕ್ತವಾದ ಆತ್ಮದ ಹಾಸ್ಯವು ಮೃತ್ಯುವಿನ ಕಲ್ಪನೆಯಿಂದ ಅತಿಭಯಾನಕವಾಗಿ ತೋರುವಂತೆ, ಸುಧೆಯ ದಿಟ್ಟತನದ ಉತ್ತರದಿಂದ ಆತನ ಅಂತಃಕರಣವು ಎರಡು ಹೋಳಾಯಿತು. "ಓರ್ವ ವಿಧವೆಯು ನೀರಲ್ಲಿ ಮುಳುಗಿದರೆ ಜಗತ್ತು ಮುಳುಗಲಾರದು" ನಿಜ. ದುರ್ಗುಣಿಯಾದ ವಿಧವೆಯ ಆವಶ್ಯಕತೆ ಮಾತ್ರ ಜಗತ್ತಿಗಿದೆ. ಗಿಡವು ಒಣಗಿದ ಎಲೆಯನ್ನು ತಿರಸ್ಕಾರದಿಂದ ತ್ಯಜಿಸುವಂತೆ ಜಗತ್ತು ವಿಧವೆಯನ್ನು ಮಾತ್ರ ಕಾಲಿನಿಂದ ಒದ್ದು ಬಿಡಬೇಕೇ ? ಪ್ರತಿಯೊಂದು ಜೀವವೂ ಭಾವನೆಯ ಸಾಗರ ಮತ್ತು ಬುದ್ಧಿಯ ಗಿರಿಯಾಗಿರುತ್ತದೆ. ಈ ಸಮುದ್ರದೊಳಗಿಂದ ಇತರರ ಗಾಹ ಶಮನಕ್ಕೋಸ್ಕರ ಬೇಕಾಗುವ ಅಮೃತ ಇಲ್ಲವೆ ಈ ಪರ್ವತದಿಂದ ಈ ಎಲ್ಲ ಭೂಮಿಯನ್ನು ಧನಧಾನ್ಯ ಸಂಪನ್ನವನ್ನಾಗಿ ಮಾಡುವಂತಹ ನದಿಯು ಹುಟ್ಟಲಿಕ್ಕಿಲ್ಲೆಂದು ಯಾರು ಹೇಳುವರು ? ಸುಧೆಯು ಇಂದು ಬಾವಿಯಲ್ಲಿ ಬಿದ್ದಿದ್ದರೆ........? ಸುಂದರಾಬಾಯಿ ಹತ್ತು ದಿನದ ಸೂತಕವಾಚರಿಸುತ್ತಿದ್ದಳು. ಅಣ್ಣನಿಗೆ ಹೆಂಡತಿಯ ಬಾಣಂತಿತನದ ಹೊತ್ತಿಗೆ ತುಸು ನೆನಪಾಗುತ್ತಿತ್ತು. ಒಂದು ವಿಧವೆಯ ಜೀವಕ್ಕೆ ಜಗತ್ತು ಇಷ್ಟೇ ಬೆಲೆ ಕಟ್ಟಬಹುದು. ಮಂಗವು ಮಾಣಿಕವನ್ನು ದೂರ ಬಿಸುಟ ಮಾತ್ರಕ್ಕೆ ರತ್ನಪರೀಕ್ಷಕನೂ ಅದರ ಬೆಲೆಯನ್ನು ಅಲ್ಲಗಳೆಯುವನೇ? ಸತಾರಿನ ಬೆಲೆಯನ್ನು ಗವಯಿಯೇ ಕಟ್ಟಬಲ್ಲ ಕುಂಚದ ಬೆಲೆಯನ್ನು ಚಿತ್ರಗಾರನಲ್ಲದೆ ಇನ್ನಾರು ಕಟ್ಟಬಲ್ಲರು ? ಆದರಂತೆ ದೇವನ ಹೊರತು ಜೀವದ ಬೆಲೆ ಕಟ್ಟುವ ಹಕ್ಕು ಇನ್ನಾರಿಗಿಲ್ಲ. ಸುಧೆಯಂತಹ ಜೀವವನ್ನು ನೀರೊಳಗೆ ಮುಳುಗಿ

ಸಾಯುವವಕ್ಕಿಂದೂ ಹುಟ್ಟಿಸಿರಲಾರನು. ತನ್ನ ನಗುವಿನಿಂದ ಗೃಹ ಮಂದಿರದಲ್ಲಿ ಹುಣ್ಣಿಮೆಯ ಬೆಳದಿಂಗಳನ್ನು ಬೆಳಗಿಸುವ, ತನ್ನ ಅಶ್ರು ಬಿಂದುವಿನಿಂದ ಆಣ್ಮನ ಹೃದಯದ ಉರಿಯನ್ನು ಆರಿಸುವ, ನಿರುತ್ಸಾಹಿಗೆ ತನ್ನ ಮೃದು ಸ್ಪರ್ಶದಿಂದ ಸಂಜೀವಿನಿಯನ್ನು ಕುಡಿಸಿ ಉತ್ಸಾಹ ಭರಿತನಾಗಿ ಮಾಡುವ ಸಾಮರ್ಥ್ಯವುಳ್ಳ ಈ ಸುಂದರ ಮೂರ್ತಿಯನ್ನು- ಆತ್ಮಹತ್ಯೆಗೋಸುಗ ಹುಟ್ಟಿಸಿದ್ದಾದರೆ, ದೇವ-ದಾನವರಲ್ಲಿ ಭೇದವೇನು ? ಯಾವ ಮುಖದಿಂದ ಪ್ರೇಮಪೂರ್ಣ ಶಬ್ದಗಳ ಅಮೃತವು ಸ್ರವಿಸುವುದೋ ಅಂತಹದನ್ನು ನಾಲ್ಕು ಗುಟುಕು ನೀರು ಕುಡಿಯಲು ಹಚ್ಚಿ, ಆಮರಣ ಹಂಗೆಡಿಸುವುದರಲ್ಲಿ ಯಾವ ಪುರುಷಾರ್ಥವಿದೆ ? ತನ್ನ ಮರಿಯನ್ನೇ ತಿನ್ನುವ ದುಷ್ಟ ಬೆಕ್ಕಿನಂತೆಯೇ ಜಗದ ಈ ಕೃತಿಯಿರುತ್ತದೆ. ವೀರಕನ್ಯೆ, ವೀರಪತ್ನಿ, ಅಥವಾ ವೀರಮಾತೆಯಾಗತಕ್ಕ ಒಂದು ಜೀವಕ್ಕೆ ಆತ್ಮಹತ್ಯೆಯ ಹೊರತು ಅನ್ಯಥಾ ಮಾರ್ಗವಿಲ್ಲವೆಂದರೆ ಕಲ್ಪವೃಕ್ಷದಿಂದ ನೀರು ಕಾಸಿದಂತಲ್ಲವೇ ? ಹಣೆಯ ಕುಂಕುಮವನ್ನು ಒರೆಸಿದ ಮಾತ್ರಕ್ಕೆ ತಲೆಯಲ್ಲಿಯ ಬುದ್ಧಿ, ಹೃದಯದಲ್ಲಿಯ ಭಾವನೆ, ಮನಸ್ಸಿನಲ್ಲಿಯ ಆಸೆ, ಆತ್ಮದ ಆಕಾಂಕ್ಷೆ— ಇವೆಲ್ಲ ಲೋಪವಾಗದು. ಚಂದ್ರನಿಲ್ಲದಿದ್ದರೂ ರಜನಿಯು ವಿಶ್ವಕ್ಕೆ ಶಾಂತಿಯನ್ನು ಕೊಡಬಲ್ಲುದು. ವಸಂತನಿಲ್ಲದಿದ್ದರೂ ಜಾಜಿಯು ಅರಳುತ್ತಿದೆ. ವರ್ಷಾಕಾಲವಲ್ಲದಿದ್ದರೂ ಪರ್ವತದಲ್ಲಿ ಝರಿಗಳು ಹರಿಯುತ್ತಿರುತ್ತವೆ.

ಮನಸ್ಸಿನಲ್ಲಿ ಈ ಬಗೆಯ ವಿಚಾರ ನಡೆದಿರುವಾಗಲೇ ಬಾವಿಯನ್ನಿಳಿದು ಬಿಂದಿಗೆಯನ್ನು ಹಗ್ಗಕ್ಕೆ ಕಟ್ಟಿದ. ತಲೆಯೆತ್ತಿದಾಗ ಸುಧೆಯು ಕೆಳಗೆ ನೋಡುತ್ತಿದ್ದುದು ಕಂಡುಬಂತು. ತಾನು ಸಮುದ್ರದೊಳಗಿಂದ ಮೇಲಕ್ಕೆ ಬರುತ್ತಿದ್ದ. ಮಿಂಚು ಆಕಾಶದಿಂದ ತನ್ನೆಡೆಗೆ ತಲೆಹಾಕಿನೋಡುತ್ತಿದ್ದಂತೆ ಒಂದು ಕ್ಷಣ ಹೊತ್ತು ಭಾಸವಾಯಿತು. ಬಾವಿಯ ನೀರು ಸಹ ಸುಧೆಯನ್ನು ಕಂಡು ತರಂಗ ರೂಪದಿಂದ ಕುಣಿಯುತ್ತಿದೆಯೆಂದು ಆತನಿಗನಿಸಿತು. ಆತ ಸಪಸರನೆ ಮೇಲೇರಿ ಬಂದ ಮೈಯಿಂದ ನೀರು ಹನಿಯಾಗಿ ಉದುರುತ್ತಿತ್ತು. ಅತ್ತ ಸುಧೆಯ ಕಣ್ಣಿನಿಂದಲೂ ನೀರು

ಸುರಿಯಹತ್ತಿತು. ತನ್ನ ಬಗ್ಗೆ ಒಡಹುಟ್ಟಿದ ಅಣ್ಣ— ಅನುದಿನವೂ ಒಂದೆಡೆಯಲ್ಲಿರಬೇಕಾದ ಅತ್ತೆ ಮೈದುನರು ಕಲ್ಪಿಸದಷ್ಟು ಮಮತೆಯನ್ನು ತೋರುತ್ತಿರುವ ಈ ಅತಿಥಿ ಹಿಂದಿನ ಜನ್ಮದಲ್ಲಿ ಪಿತನೋ, ಪತಿಯೋ, ಪುತ್ರನೋ ಆಗಿರಬೇಕು. ತಂದೆಯಾಗಿದ್ದರೆ ವಯೋವೃದ್ಧರಿರಬೇಕಿತ್ತು. ಪುತ್ರನಾಗಿದ್ದರೆ ಹಸುಳನಾಗಿರಬೇಕಿತ್ತು. ಅಂದಮೇಲೆ ...........? ಆಕೆಗೆ ರೋಮಾಂಚನ ವೆದ್ದಿತು.

"ನಾನಿಲ್ಲಿ ನಿಲ್ಲಬೇಕೇ?" ಸುಧಾರಕರನು ಕೇಳಿದಾಗಲೇ ಆಕೆಗೆ ಎಚ್ಚರಾಯಿತು.

"ಮರಣದ ಭಯವೇ ಇಲ್ಲದ ನನಗೆ ಇನ್ನಾತರ ಭಯ?"

" ಜ್ವರ ಬಂದುದರಿಂದ ಅಶಕ್ತರಾಗಿರಬಹುದಲ್ಲವೇ?"

"ಜ್ವರವೂ ಅಭ್ಯಾಸವಾಗಿಬಿಟ್ಟಿದೆ. ಮರಾಠಿ ಆರನೆತ್ತೆಯ ಅಭ್ಯಾಸಮುಗಿದ ಮೇಲೆ ಮದುವೆಯಾಯಿತು. ಅಂದಿನಿಂದ ಕಸಬರಿಗೆ, ಕಂದೀಲು, ಒಗೆಯುವ ಬಟ್ಟೆ ಇವುಗಳನ್ನು ಅತ್ತೆಯ ಸಂತೋಷಕ್ಕಾಗಿ ಹಿಡಿಯಲು ಅಭ್ಯಾಸ ಮಾಡುತ್ತಿದ್ದೇನೆ. ಎಲ್ಲಿಯಾದರೂ ಅತ್ತೆಯಿಲ್ಲದಾಗ ಪುಸ್ತಕ ಹಿಡಿದೆನೆಂದರೆ ಯಾವುದೇ ಸದ್ದಾದಾಗಲೂ ತನ್ನಿಂದ ತಾನೇ ಪುಸ್ತಕ ಮುಚ್ಚಿಹೋಗುತ್ತದೆ. ಪುಸ್ತಕ ಕಂಡರೆ ಆವರ ಅಂಗಾಲಲ್ಲಿಯ ಉರಿಯು........... ಓಹೋ ಒಳಗಿಂದ ಬಟ್ಟೆ ತಂದುಕೊಡಲೇ? ನೀವು ಒದ್ದೆಯಲ್ಲಿದ್ದುದನ್ನು ಮರತೇ ಬಿಟ್ಟೆ!"

"ಬೇಡ. ನನ್ನಲ್ಲಿ ಬಟ್ಟೆಗಳಿವೆ. ನಾನು ಬಾವಿಯಿಳಿದುದನ್ನು ಮಾತ್ರ ಯಾರಿಗೂ ಹೇಳಬೇಡಿ" ಎಂದು ಸುಧಾಕರನು ಸರಸರನೆ ಹೊರಟು ಹೋದನು.

ಸುಧೆಯು ಪಾತ್ರೆ ತಿಕ್ಕ ಹತ್ತಿದಳು. ಅತ್ತೆಯು ಬಂದೊಡನೆಯೇ "ಪಾತ್ರೆಯನ್ನು ಇನ್ನೂ ತಿಕ್ಕಿಲ್ಲವೇನೇ?" ಎಂದು ಕೇಳದೆ ಇರಲಿಕ್ಕಿಲ್ಲವೆಂದು ಅರಿತಿದ್ದಳು. ಹೆದರಿದ ಮನಕ್ಕೆ "ಸರಸರ" ಸಪ್ಪಳವಾದಂತೆ ಭಾಸವಾಗುವದೇನೂ ಆಶ್ಚರ್ಯವಲ್ಲ. ಅತ್ತೆಯವರು ತಾನೇನು

ಮಾಡುತ್ತಿದ್ದೇನೆಂಬದನ್ನು ನೋಡುತ್ತಿದ್ದಾರೆಂದು ತಿಳಿದುಕೊಂಡಳು. ಅತ್ತೆ ಬಂದದ್ದು ತನಗೆ ಗೊತ್ತೇ ಇಲ್ಲವೆಂದು ತೋರಿಸುವುದಕ್ಕಾಗಿ ಅವಳು ತಿರುಗಿ ಸಹ ನೋಡಲಿಲ್ಲ. ಅವಳ ಕೂದಲಿನಲ್ಲಿ ಚಂದ್ರನ ಕಿರಣಗಳು. ಅಂತಃಕರಣದಲ್ಲಿ ಆಶೆಯ ಕಿರಣಗಳು ಕುಣಿಯುತ್ತಿದ್ದವು. ಆಕೆ ತಲೆಯೆತ್ತಿ ನೋಡಿದಳು. ಅದೆಂತಹ ರಮ್ಯ ದೃಶ್ಯ. ಜಗನ್ಮಾತೆಯು ಪೃಥ್ವಿಯನ್ನು ರಜನಿಯ ಸೆರಗಿನ ಮರೆಯಲ್ಲಿ ಹಾಲುಣಿಸುತ್ತಿದ್ದಳು. ಅಲ್ಲಾಡುತ್ತಿರುವ ಗಿಡಮರಗಳು ಕೈಕಾಲುಗಳನ್ನು ಅಲ್ಲಾಡಿಸುತ್ತ ಕುಡಿಯುವ ಕೂಸಿನ ನೆನಪನ್ನು ತರುತ್ತಿದ್ದವು. ಚಂದ್ರನ ಮೇಲೆ ಮೋಡಗಳು ಒಮ್ಮೊಮ್ಮೆ ಏರಿಬರುತ್ತಿದ್ದವು. ತಾಯಿಯು ಮುಚ್ಚಿದ ಸೆರಗನ್ನು ತೆಗೆದು ಮಗುವನ್ನು ದೂರಸರಿಸಿದಂತೆ ಅದು ಕಾಣುತ್ತಿತ್ತು. ಆದರೆ ಮರುಕ್ಷಣದಲ್ಲಿಯೇ ಆ ಹಟಮಾರಿ ಮಗುವು ಸೆರಗನ್ನು ಬದಿಗೆಳೆದು ಹಾಲು ಕುಡಿಯುತ್ತ ನಗಹತ್ತುತ್ತಿತ್ತು. ನಡುವೆಯೇ ಒಂದು ತಾರೆ ಕೆಳಕುದುರಿತು. ದುಗ್ಧಪಾನಮಾಡುತ್ತಿದ್ದ ಪೃಥ್ವಿಯು ಆಡುತ್ತಾಡುತ್ತ ಅಮ್ಮನ ಕೊರಳಲ್ಲಿಯ ತಾರಕಾಹಾರವನ್ನು ಜಗ್ಗಿದುದರಿಂದ ಆ ಮಣಿಯೊಂದು ಹರಿದುಬಿದ್ದಿರಬೇಕು. ದೂರದಲ್ಲಿ ಕೂಗಿದ ಹಕ್ಕಿಯ ಉಲಿಯು ಮಗುವು ಕುಡಿಯುತ್ತಿರುವಾಗ "ಚುಕ್" "ಚಕ್" ಮಾಡಿದಂತಿತ್ತು.

ಸುಧೆಯು ಮೈಮರೆತಳು. ಕೈಯೆಲ್ಲ ಬೂದಿಯಾಗಿದ್ದರೂ ಹೃದಯದಲ್ಲಿ ಸುವರ್ಣರಸ ಹರಿಯುತ್ತಿತ್ತು. ಎದುರಿನಲ್ಲಿಯ ಮುಸುರೆ ಪಾತ್ರೆಗಳಿಗಿಂತ ಆಕಾಶದಲ್ಲಿಯ ಚಂದ್ರ ಚಿಕ್ಕೆಗಳೇ ಹೆಚ್ಚು ಹತ್ತಿರವೆಂದು ಅನಿಸಹತ್ತಿತು. ಭೂದೇವಿಯ ದುಗ್ಧಪಾನದಿಂದ ಸುಧೆಯ ಅಂತಃಕರಣವು ಕಳವಳಗೊಂಡಿತು. ಮೈಯ್ಯೊಳಗೆ ವಿದ್ಯುತ್ಸಂಚಾರವಾಯಿತು. ಯಾರೋ ತನಗೆ ಕಂಕುಳಲ್ಲಿ ಕೈಯ್ಯಿಟ್ಟು ನಗಿಸುವಂತೆ ಭಾಸವಾಯಿತು. "ತ್ರಿಭುವನಗಳಲ್ಲಿಯ ಸಾಧುಗಳ ಬ್ರಹ್ಮಾನಂದವು ಬಾಲಕನ ರೂಪವನ್ನು ಧರಿಸಿ ತನ್ನ ಎದೆಗೆ ಅವಚಿಕೊಂಡಿದೆ. ನಂದನವನದ ಎಲ್ಲ ಹೂಗಳ ಸಂಯುಕ್ತ ಕಾಂತಿಯಂತೆ ಆ ಬಾಲದೇಹ ಬೆಳಗುತ್ತಿದೆ. ಸುರಾಸುರರು ಮಥಿಸಿ ತೆಗೆದ ಅಮೃತವು ಆ ಚಿಕ್ಕ ಕಣ್ಣುಗಳಲ್ಲಿ ತುಂಬಿ ಸೂಸುತ್ತಿದೆ.

ಗಂಧರ್ವರ ಗಾಯನಕ್ಕೆ ತಾಳ ಹಿಡಿದಂತೆ ಮಗುವು ತನ್ನ ಕಾಲಂದುಗೆಯನ್ನು ಬಾರಿಸುತ್ತಿದೆ. ಅದರ ಒಂದು ಗಲ್ಲಕ್ಕೆ ಉಷೆಯೂ, ಇನ್ನೊಂದು ಗಲ್ಲಕ್ಕೆ ಸಂಜೆಯೂ ಮುದ್ದು ಕೊಡುತ್ತ ಕುಳಿತದ್ದರಿಂದ ಆ ಅಸ್ಫುಟ ಅಧರಗಳೊಳಗಿಂದ ಸೂರ್ಯ ಪ್ರಭೆಯು ಪಸರಿಸಿಕೊಂಡಂತೆ ತೋರುತ್ತಿದೆ. ಅಪ್ಪಯ್ಯ! ಕೂಸು ಕುಡಿಯಹತ್ತಿತು. ಪಟಿಂಗ, ಯಾರಯ್ಯಾ ನಿನಗೆ ಇದನ್ನೆಲ್ಲ ಕಲಿಸಿದ್ದು? ತಡೆ ನಿನ್ನ, ಅವರಿಗೇನೇ ಹೇಳುತ್ತೇನೆ, ಹಾ" ಎಂದು ತಾನನ್ನುತ್ತಿರುವಂತೆ ಸುಧೆಗೆ ಭಾಸವಾಯಿತು. ತನ್ನ ಮಗುವಿನ ಹತ್ತಿರ ತನ್ನ ಕೈ ಇಲ್ಲವೆಂಬುದನ್ನು ಅರಿತು ಸುಧೆಯು ಹೊಟ್ಟೆಯನ್ನು ಹಿಡಿದುಕೊಂಡಳು. ಆದರೆ ಆ ಕೈಗೆ ಹಾರುತ್ತಿರುವ ಹೃದಯದ ಹೊರತು ಇನ್ನೇನೂ ಹತ್ತಲಿಲ್ಲ. ಕೈಗೆ ಹತ್ತಿದ ಬೂದಿಮಾತ್ರ ಸೆರಗಿಗೆ ತಾಕಿತು. ಆ ಹೃದಯದ ಒಳಗೆ ಇದ್ದದ್ದಾದರೂ ಏನು? ಆಸೆಗಳೆಲ್ಲ ಕಮರಿಹೋಗಿ ಉಂಟಾದ ಬೂದಿ! ಸುಧೆಯು ನಿರಾಶೆಯಿಂದ ಅತ್ತ ನೋಡಿದಳು. ಕಣ್ಣಿನಲ್ಲಿ ನೀರು ತುಂಬಿತು. ಮಗನ ಜೊಲ್ಲಿನಿಂದ ಸೆರಗು ತೊಯಿಸುವ ಭಾಗ್ಯ ತನ್ನದಲ್ಲ! ಎಂಬ ಯೋಚನೆಬಂದಾಗ ಹೃದಯದಲ್ಲಿಯ ಎಲ್ಲ ಒಡ್ಡುಗಳೂ ಒಡೆದುಹೋದವು.

ಸುಂದರಾಬಾಯಿಯು "ಯಾವ ಸತ್ತವನೋ ಅವ" ಎಂದು ಕೂಗಿದಾಗ ಸುಧೆಯು ಕಣ್ದೆರೆದು ನೋಡಿದಳು. ಬಲಗಡೆಯ ಮೂಲೆಯಲ್ಲಿ ಅತ್ತೆ ನಿಂತಿದ್ದಳು. ಈಚೆ ಎಡಗಡೆಯ ಮೂಲೆಯಲ್ಲಿ ಓರ್ವ ಸನ್ಯಾಸಿ ನಿಂತಿದ್ದ. ಆತನ ಕಪೋಲಗಳೂ ಕಣ್ಣೀರಿಂದ ತೊಯ್ದಿದ್ದವು. "ಮಧೂ, ಕಳ್ಳ ಬಂದಿದ್ದಾನೆ ಕಳ್ಳ!" ಎಂದು ಸುಂದರಾಬಾಯಿಯು ಕೂಗಿದ್ದರಿಂದ ಆ ಸನ್ಯಾಸಿಯು ಲಗುಬಗೆಯಿಂದ ಬೇಲಿಯಾಚೆಗೆ ಜಿಗಿದನು. ಸುಧಾಕರನೂ ಅದೇ ದಿಕ್ಕಿಗೆ ಓಡುತ್ತಹೋದ.

# ಪ್ರಕರಣ ೧೨.

ಹಾವೆಂದು ಹೊಡೆಯು ಹೊರಟದ್ದು ಹೂವಿನ ಹಾರವಾದಂತೆ ಕಳ್ಳನೆಂದು ಬೆನ್ನಟ್ಟಿದ ವ್ಯಕ್ತಿ ಕಳ್ಳನಾಗಿರದೆ ನಿನ್ನೆ ಭೆಟ್ಟಿಯಾಗಿದ್ದ ಸದಾನಂದಸ್ವಾಮಿಯಾಗಿದ್ದರು. ಅಂಬೋಲಿಯಲ್ಲಿ ಒಂದುದಿನ ಇರಬೇಕೆಂಬ ವಿಚಾರ ಬದಲಾದುದರಿಂದ ಸಂಜೆ ಅಲ್ಲಿ ಬಂದಿದ್ದರು. ಬೆಳದಿಂಗಳು ಬಿದ್ದುದರಿಂದ ತಿರುಗಾಡಲಿಕ್ಕೆ ಹೊರಟರು. ಅಪರಾತ್ರಿಯ ಸಮಯ ವಿಧವೆ ಹೆಣ್ಣುಮಗಳೊಬ್ಬಳು ಪಾತ್ರೆಗಳ ರಾಶಿಯನ್ನು ಮುಂದಿಟ್ಟುಕೊಂಡು ಅಳುತ್ತಿರುವದನ್ನು ಕಂಡು ನಾಲ್ಕು ಸಮಾಧಾನದ ಮಾತು ಹೇಳಬೇಕೆಂದು ಬಯಸಿದ್ದರು. ಆದರೆ ಸುಂದರಾಬಾಯಿಯು ಬಂದು 'ಕಳ್ಳ ಕಳ್ಳ!, ಎಂದು ಒದರಿದ್ದರಿಂದ ತಪ್ಪಿಸಿಕೊಂಡು ಬರಬೇಕಾಯಿತು.

"ಬೇಟಾ, ವಿಧವೆಯ ದುಃಖವನ್ನು ನಾನೂ ಅನುಭವಿಸುತ್ತಲಿದ್ದೇನೆ. ಪರಮೇಶ್ವರನ ಪ್ರಾಪ್ತಿಗಾಗಿ ಬೆಟ್ಟಗಳನ್ನು ಅಲೆದಾಡಹತ್ತಿ ಇಂದಿಗೆ ಹತ್ತು ವರ್ಷಗಳಾದವು. ಆದರೆ ಪಶ್ಚಾತ್ತಾಪದ ಮುಳ್ಳಿನ ಹೊರತು ಇನ್ನೇನೂ ನನ್ನ ಕೈಗೆ ಹತ್ತಲಿಲ್ಲ. ದೇವರು ಅರಣ್ಯದ ನಿರ್ಝರಿಣಿಯಲ್ಲಿಲ್ಲ; ದುಃಖಿತರ ಅಶ್ರುವಿನಲ್ಲಿದ್ದಾನೆ. ಆಕಿವೆಲರಿಗೆ ಬಾಹುಗಳನ್ನಲ್ಲಾಡಿಸುವ ಗಿಡಮರಗಳಲ್ಲಿಲ್ಲ; ದಾರಿದ್ರ್ಯ ಪಂಕದಿಂದೇಳಲು ಸಾಹಸಪಡುವ ಬಡವರ ಬಾಹುಗಳಲ್ಲಿದ್ದಾನೆ. ಸ್ತುತಿಯಲ್ಲಿಲ್ಲ, ಸೇವೆಯಲ್ಲಿದ್ದಾನೆ. ಇದು ಈ ಹತ್ತು ವರ್ಷಗಳಲ್ಲಿ ನನ್ನ ಅನುಭವದಿಂದ ಕಂಡುಕೊಂಡ ಮಾತು. ಹುಲಿಗಿಂತಲೂ ಮನುಷ್ಯನಿಗೇ ಮನುಷ್ಯ ರಕ್ತದ ರುಚಿ ಹೆಚ್ಚು. ಸರ್ಪದ ಸೇಡಿಗಿಂತಲೂ ಮನುಷ್ಯರೇ ಹೆಚ್ಚಿಗೆ ಸೇಡನ್ನು ತೀರಿಸಿಕೊಳ್ಳುತ್ತಾರೆ. ಪಶುವಿಗಿಂತ ಮನುಷ್ಯರೇ ಹೆಚ್ಚಾಗಿ ನಿಸರ್ಗದ ನೇಮವನ್ನು ಮುರಿಯುತ್ತಾರೆ. ಸಂಪತ್ತು, ಸತ್ತೆ, ವಿದ್ಯೆ, ಮಾನ, ಸ್ವಾರ್ಥ ಇವುಗಳಲ್ಲಿ ಯಾವುದಾದರೊಂದರ ಅಮಲಿಸಿಂದ ಕಣ್ಣು ಮಂದವಾಗಿ ಹೆರವರ ಕಣ್ಣೊಳಗಿನ ಅಶ್ರು ಇಲ್ಲವೆ ರಕ್ತ ರಂಜಿತಹಣೆ ಕಾಣಿಸುವದಿಲ್ಲ. ಒಂದೇ ಮನೆಯವರಲ್ಲಿ ಈ ರೀತಿ ಕಂಡುಬರುವಾಗ ಭಿನ್ನ ಭಿನ್ನ ಜನರಲ್ಲಿ ಕಾಣುವದೇನೂ ಅಸಂ

ಭವ ವಲ್ಲ. ಆದರೆ ಮಗೂ, ಇವರು ಕಲ್ಪಿಸಿಕೊಂಡ ಸುಖವು ನಿಜವಾದ ಸುಖವಲ್ಲ; ಬರಿಧೂಳು. ಆ ಧೂಳನ್ನು ತಮ್ಮ ಕಣ್ಣಲ್ಲೆರಚಿ ತಮ್ಮನ್ನು ತಾವೇ ವಂಚಿಸಿಕೊಳ್ಳುತ್ತಾರೆ. ಹಣವನ್ನು ನೀರಿನಂತೆ ಸುರುವಿದ ಮಾತ್ರಕ್ಕೆ ಪಾಪದ ಉರಿ ಆರದು. ಆದುದರಿಂದ ಇವೆಲ್ಲ ಮೃಗಜಲ; ನಿರಪೇಕ್ಷ ಪ್ರೇಮ ಹಾಗೂ ನಿಷ್ಕಾಮ ಸೇವೆಯೇ ಅಮೃತ."

ಮನೆಯವರು ಹುಡುಕಲು ಬರಬಹುದೆಂದೆನಿಸಿದ್ದರಿಂದ ಅವರು ಬೀಳ್ಕೊಂಡರು. ಸುಧಾಕರನು ಹಾದಿಯಲ್ಲಿ ಬರುತ್ತ "ಜಗತ್ತು ಒಂದು ಒಡೆಯಲಾರದ ಒಗಟೆಂದು ಭಾವಿಸಿದ್ದೆ. ಆದರೆ ಪ್ರತಿಯೊಂದು ವ್ಯಕ್ತಿಯೂ ಅಷ್ಟೇ ಗೂಢವಾಗಿದೆಯಲ್ಲ! ನಾನೆಲ್ಲಿಯಾದರೂ ವಾರುಣಿಯಂತಹರ ರೂಪಕ್ಕೆ ಮರುಳಾಗಿ ಕರ್ತವ್ಯ ಪರಾಙ್ಮುಖನಾಗಬಹುದೆಂದು ತಿಳಿದೇ ಸ್ವಾಮಿಯವರು ಇತ್ತ ಬಂದಿರಬಹುದು. ಜಗತ್ತಿನ ಸುಖ ಬರಿಯ ಮೃಗಜಲವೆಂದು ಒತ್ತೊತ್ತಿ ಹೇಳುವುದರ ಉದ್ದೇಶವೇನಿರಬಹುದು? ವಾರುಣಿಯಂತಹಳು ದೊರಕಬೇಕೆಂದು ದೊಡ್ಡ ಸಂಬಳದ ನೌಕರಿಯ ಬೆನ್ನುಹತ್ತಿ ಅಪಾರಧನಗಳಿಸಿ ಅದನ್ನು ವಿಲಾಸದ ಉಸುಕಿನ ಬಯಲಲ್ಲಿ ಸುರಿಯುವುದಕ್ಕಾಗಿಯೇ ನನ್ನ ಜೀವನವಿದೆಯೇ? ಓರ್ವ ಸ್ತ್ರೀಯುಳ ಮನದಿಚ್ಛೆಯನ್ನು ಪೂರೈಸುವದರಲ್ಲಿಯೇ ಇಡೀ ಜನ್ಮವನ್ನು ಕಳೆಯುತ್ತ ಅವಳ ಸಿಂಗರಿಸಿದ ರೂಪವನ್ನು ನೋಡಿ ಸಂತೋಷ ಬಡುವುದಕ್ಕೆಂದೇ ದೇವರು ನನ್ನನ್ನು ಸೃಷ್ಟಿಸಿರಬಹುದೇ? ತೃಷಿತ ಚಾತಕದ ಬಾಯಲ್ಲಿ ಬೀಳುವ ಜಲಬಿಂದುವಿಗಿಂತ ಸಿಂಪಿನಲ್ಲಿ ಬಿದ್ದು ಮುತ್ತಾಗುವ ನೀರ ಹನಿಯೇ ಶ್ರೇಷ್ಠವೆಂದು ಜಗತ್ತು ಅನ್ನಬಹುದು. ಆದರೆ ಪ್ರಜೆಗಳನ್ನು ಹಿಂಡಿ ಹಿಪ್ಪಿಮಾಡುವ ರಾಜನ ಮುಕುಟದಲ್ಲಿ ಶೋಭಿಸುವುದಕ್ಕಿಂತ ತೃಷಿತ ಚಾತಕದ ಅಂತರಾತ್ಮನಿಗೆ ಕ್ಷಣದ ಮಟ್ಟಿಗಾದರೂ ಸಾಂತ್ವನ ಗೊಳಿಸುವುದು. ಅಧಿಕವೆಂದು ನನಗನಿಸುತ್ತಿದೆ. ಮೇಘವು ನಿರ್ಜಲವಾಗಲು ಮಿಂಚು ಅದನ್ನು ಬಿಟ್ಟು ಬಿಡುತ್ತಿದೆ. ಆದರೆ ಹೊಲದಲ್ಲಿ ಅನ್ನಪೂರ್ಣೆಯು ಪ್ರಕಟವಾದಾಗ ಕಂಡು ಕುಣಿಯುವ ಬಡರೈತನ ಮುಖದ ಮೇಲಿನ ತೇಜವು ಆ ಮಿಂಚಿಗಿಂತ ಹೆಚ್ಚಿಗೆ ಆಕರ್ಷಕವಾಗಿರುತ್ತದೆ.

ಸುಧೆ, ಯಮು, ಜಗನ್ನಾಥ ಮೊದಲಾದ ಜನತೆಯ ಪ್ರತಿನಿಧಿಗಳು ಕಷ್ಟ ಕಾರ್ಪಣ್ಯಗಳಲ್ಲಿ ಬಿದ್ದು ಎಂದಿಗೆ ಸಾವು ಬಂದೀತೋ ಎಂದು ತೊಳಲಾಡುತ್ತಿರುವಾಗ ಮೆತ್ತನ್ನ ಗಾದಿಯಮೇಲೆ ಬಿದ್ದು ಹೊರಳಾಡಲು ನನಗೆಲ್ಲಿಯ ಹಕ್ಕಿದೆ ? ವಾರುಣಿಗೆ ಏನೇ ಕ್ಲೇಶಿಸಿದರೂ ನಾನು ಶಿಕ್ಷಕನಾಗುವುದೇ ಖಂಡಿತ" ಎಂದು ನಿಶ್ಚಯಿಸಿದ.

ಸುಧಾಕರನು ತಿರುಗಿ ಬಂದಾಗ ಮಧುಕರ ಮತ್ತು ರಾವಸಾಹೇಬರು ಕೈಯ್ಯಲ್ಲಿ ದೊಣ್ಣೆ ಹಿಡಿದು ನಿಂತಿದ್ದರು.

"ಏನು, ಕಳ್ಳ ಸಿಕ್ಕಿದನೇ? ಪೊಲೀಸರಿಗೆ ತಿಳಿಸುವದೇ ಒಳಿತು."

"ಇಲ್ಲ, ಆತನೊಬ್ಬ ಸನ್ಯಾಸಿಯಾಗಿದ್ದ."

"ಛೀ, ಗುಪ್ತ ಪೋಲೀಸನಿದ್ದನೋ ಏನೋ! ಈ ಡಿಟೆಕ್ಟಿವ್ ಮಂದಿ ಎಲ್ಲಿಲ್ಲದ ವೇಷ ಧರಿಸಿ ಬರುತ್ತಾರೆ. ಒಮ್ಮೆ ನಮ್ಮ ಓಲ್ಡ ಫೊಕ್ಸ ಸಾಹೇಬರ ಬಳಿಗಂತೂ ಒಬ್ಬ ಅವರಪ್ಪನಂತೆ ಪೋಷಾಕು ಮಾಡಿಕೊಂಡು ಬಂದಿದ್ದ. ಆದರೂ ನಮ್ಮ ಸಾಹೇಬರು ಸಿಕ್ಕಿಬೀಳಲಿಲ್ಲ"

"ನಮ್ಮ ಮನೆಗೇಕೆ ಡಿಟೆಕ್ಟಿವ್ ಬಂದಾನು.?"

"ಅವರಿಗೇನು? ಈ ಸುಧಾಕರರ ಹತ್ತರ ಯಂಗ ಇಂಡಿಯಾ ಇದೆ. ನಿಮ್ಮ ಮಾಳಿಗೆಮೇಲೆ ಟಿಳಕರ ಫೋಟೋ ಇದೆ. ನಿಮಗಿನ್ನೂ ಗೊತ್ತಿಲ್ಲ. ಒಬ್ಬರ ಮನೆಯಲ್ಲಿ ಗೇರಬೀಜದ ಲಡ್ಡುಗೆ ಮಾಡುತ್ತಿದ್ದರು. ಅಷ್ಟಕ್ಕೇನೆ ಒಬ್ಬ ಡಿಟೆಕ್ಟಿವ್ ಬಾಂಬು ತಯಾರಿಸುತ್ತಾರೆಂದು ರಿಪೋರ್ಟ ಮಾಡಿ ಬಿಟ್ಟ"

"ಸನ್ಯಾಸಿಯಲ್ಲ, ತ್ರಿದಂಡೀ ಸನ್ಯಾಸಿಯಿರಬೇಕು. ನಮ್ಮ ಸೊಸೆಯೊಬ್ಬಳಿದ್ದಾಳಲ್ಲ, ಬೆಣ್ಣೆಗಿಂತ ನುಣ್ಣಗೆ. ಅದಕ್ಕೇ ರಸ್ತೆದಾಟಿ ಬೇಲೀ ಜಿಗಿದು ಬಂದಿದ್ದ. ನಮ್ಮ ಸೊಸೆಯ ಬಿಂದಿಗೆ ಬಾವಿಯಲ್ಲಿ ಬಿದ್ದಿತಲ್ಲವೇ? ಅವನಲ್ಲದೆ ಅದನ್ನು ಇನ್ನಾರು ತೆಗೆದುಕೊಟ್ಟಿರಬೇಕು? ಈ ಮಹಾರಾಯತಿ ಅದನ್ನೂ ಅಲ್ಲಗಳೆಯುತ್ತಾಳೆ. ಹಿಂದೆ ಜ್ಞಾನೇಶ್ವರನು ಗೋಡೆ

ಯನ್ನು ನಡಿಸಿದ್ದನೆಂದು ಕೇಳಿದ್ದೆವು. ಆದರೆ ಈಗ ಸಂತಸುಧೆಯು ಬಾವಿಯಿಂದ ಬಿಂದಿಗೆ ತೆಗದಿರಬೇಕು. ಇಲ್ಲವಾದರೆ ತುಕಾರಾಮನ ಅಭಂಗದಂತೆ ಅದು ಮೇಲಿಂದ ಮೇಲೆ ತೇಲುತ್ತಿರಬಹುದು. ಮಧೂ, ಏನೇ ಆಗಲಿ, ವರ್ತಮಾನ ಪತ್ರದಲ್ಲಿ ನಾಳೆ ಛಾಪಿಸಿಬಿಡು."

"ಅಲ್ಲ........ ........."

"ಅಲ್ಲದೆ ಏನು? ಇವಳ ಸ್ವರೂಪ ಎಲ್ಲ ನನಗೆ ಗೊತ್ತಿದ್ದಷ್ಟೇ! ಆ ಸನ್ಯಾಸಿ ಅರ್ಜುನ ತನ್ನ ಸುಭದ್ರೆಯು ಬಳಿಗೆ ಬಂದಿರಬೇಕು. ಬಿಂದಿಗೆಯ ನೆಪ ಮಾಡಿ ಮಲಗಿದವರು ಎಚ್ಚರಿದ್ದಾರೊ ಹೇಗೆಂದು ನೋಡಲು ಆಕೆ ಮಧುಕರನ ಬಳಿ ಬಂದಿದ್ದಳು. ನಿಮಗೆಲ್ಲ ನಿದ್ದೆಬಿದ್ದದ್ದು ಖಾತ್ರಿಮಾಡಿಕೊಂಡೇ ಆಕೆ ಹೋಗಿರಬೇಕು."

ಸುಧಾಕರನಿಗೆ ಹೇಗೆ ಹೇಗೋ ಅನಿಸಿತು. ದೇಹವೆಲ್ಲ ಕಂಪಿಸಹತ್ತಿತು. ಆದರೆ ನಡುಮನೆಯಲ್ಲಿದ್ದ ಸುಧೆಯು ಅವನ ಕಡೆಗೆ ಒಂದು ವಿಚಿತ್ರ ರೀತಿಯಿಂದ ನೋಡಿದ್ದರಿಂದ ಅವನ ಮುಖದಿಂದ ಮಾತೇ ಹೊರಬೀಳಲಿಲ್ಲ. ಆಕೆಯ ದೃಷ್ಟಿಯಲ್ಲಿ "ನನ್ನ ಹಣೆಯ ಬರಹ ನಾನು ಭೋಗಿಸುತ್ತಿರುವೆ. ಆ ಬೆಂಕಿಯಲ್ಲಿ ನೀವು ಬಂದು ಬೀಳಬೇಡಿ. ನಿಮ್ಮ ಸ್ನೇಹದಿಂದ ಅದು ಆರುವ ಬದಲು ಇನ್ನಿಷ್ಟು ಉರಿಯಬಹುದು." ಎಂಬ ಅರ್ಥವಿದ್ದರೂ ಇರಬಹುದು.

ಸುಂದರಾಬಾಯಿ ಎಲ್ಲರೂ ನಿದ್ರೆಮಾಡಹತ್ತಿದರು. ಸುಧೆಯು ಪಾತ್ರೆ ತಿಕ್ಕ ಹೋದಳು. ಆದರೆ ನಿದ್ರಾದೇವಿಯನ್ನು ಇಷ್ಟು ಸಹಜವಾಗಿ ಪ್ರಸನ್ನಗೊಳಿಸುವದಕ್ಕೆ ಸುಧಾಕರನಲ್ಲಿ ಸಾಮರ್ಥ್ಯವಿದ್ದಿಲ್ಲ. ಎಷ್ಟೋ ಹೊತ್ತಿನವರೆಗೆ ಸುಧೆಯ ಭವಿಷ್ಯವನ್ನು ಆತ ಚಿಂತಿಸುತ್ತಿದ್ದ. "ಮರದಂಪಿನಲ್ಲಿರುವ ಗಿಡದಂತೆ ಅವಳ ಜೀವನ ನಿಸ್ತೇಜವಾಗಿಬಿಟ್ಟಿದೆ. ಪಾತಾಳಗಂಗೆಯಂತೆ ಅವಳ ಭಾವನೆಗಳು ಬಂಧನದಲ್ಲಿದ್ದುಬಿಟ್ಟಿವೆ. ಈ ಗಂಗೆಯನ್ನು ತನ್ನ ಸಾಮರ್ಥ್ಯದಿಂದ ಮೇಲಕ್ಕೆ ತರುವಂತಹ ಯಾವನಾದರೊಬ್ಬ ಧನಂಜಯನು ಹುಟ್ಟಿದರೆ.........."

" ಹೊಟ್ಟೆಗಿಷ್ಟು ಹಿಟ್ಟು ಮೈಗಿಷ್ಟು ಬಟ್ಟೆ ದೊರೆತರೆ ಜೀವನ ಸಾರ್ಥಕವಾದಂತಾಗಲಿಲ್ಲ. ಹೃದಯಕ್ಕೆ ಪ್ರೇಮಾಮೃತ ಬೇಕು; ದುಃಖದ ಗಾಯಗಳು ಮಮತೆಯ ಶಾಲಿನಿಂದ ಮುಚ್ಚಲ್ಪಡಬೇಕು; ಜೀವಕ್ಕೆ ಸ್ವಾತಂತ್ರ್ಯ ಹಾಗೂ ಕರ್ತವ್ಯದ ಮಾರ್ಗ ದೊರೆಯಬೇಕು. ಅಂದರೆ ಮಾತ್ರ ಬದುಕಿದ್ದು ಸಾರ್ಥಕ. ಈ ದೃಷ್ಟಿಯಿಂದ ನೋಡಿದರೆ ಸುಧೆಯು ಬದುಕಿಯೂ ಸತ್ತಂತಲ್ಲವೇ ? ಕೃಪಣನು ಹೂಳಿಟ್ಟ ಕುಡಿಕೆಯಲ್ಲಿಯ ಲಕ್ಷ್ಮಿಯಂತೆ ಅವಳ ಬುದ್ಧಿಯು ನಿಷ್ಪ್ರಯೋಜಕವಾಗುವದು. ಹುಳ ಹತ್ತಿದ ಉತ್ಕೃಷ್ಟ ಗ್ರಂಥದಂತೆ ಅವಳ ಪ್ರೇಮಮಯ ಹೃದಯವು ಜಗತ್ತಿನ ದೃಷ್ಟಿಯಿಂದ ಇದ್ದೂ ಇಲ್ಲದಂತಾಗಿ ಹೋಗುವದು. ಯಾವ ಮರಣವನ್ನು ಕಂಡು ವಿದ್ವಾಂಸರ ಬಾಯನೀರು ಬತ್ತುತ್ತಿದೆಯೋ, ವೀರರ ಬಾಹುಗಳು ನಡುಗುತ್ತಿವೆಯೋ, ಶ್ರೀಮಂತರು ಒಂದು ಕ್ಷಣದ ಮಟ್ಟಿಗಾದರೂ ಅಂಗಲಾಚಿ ಬೇಡುವರೋ ಅಂತಹ ಮರಣದ ಬಾಗಿಲೊಳಗೆ ದಿಟ್ಟತನದಿಂದ ಹೆಜ್ಜೆಯಿಡುವ ಸಾಹಸ ಈ ಇಪ್ಪತ್ತು ವರ್ಷದ ಅರಿಯದ ತರುಣಿಯ ಮೈಯೊಳಗೆ ಎಲ್ಲಿಂದ ಬಂತು ? ಅಂದ ಬಳಿಕ ಮರಣಕ್ಕಿಂತಲೂ ಭಯಂಕರವಾದ ನಿರಾಶೆಯೊಂದು ಜಗತ್ತಿನಲ್ಲಿ ಇರಲೇ ಬೇಕು. ಜಗತ್ತೇ ಜಡವಾದ ಮೇಲೆ ಬದುಕು ಜಡವಾಗುವದು ಸಹಜವಲ್ಲವೇ ?"

ಸುಧಾಕರನು ಹಾಸಿಗೆಯ ಮೇಲೆ ಎದ್ದು ಕುಳಿತ. ಏನು ಮಾಡಬೇಕೆಂಬುದೇ ಆತನಿಗೆ ಹೊಳೆಯದಾಯಿತು. ಸುಧೆಗೆ ಸಮಾಧಾನ ಹೇಳಲೆಂದು ಎದ್ದ. ಆದರೆ ತನ್ನ ವರ್ತನಕ್ಕೆ ಆಕೆ ವಿಪರೀತವಾಗಿ ಭಾವಿಸಿದರೆ........ ಹೂವಿನಲ್ಲಿಯ ಸುಗಂಧವನ್ನು ಗಾಳಿಯು ಹೊತ್ತುಕೊಂಡು ಹೋಗುವಂತೆ ಹೃದಯದ ಭಾವನೆಗಳು ಶಬ್ದವಿಲ್ಲದೆ ವ್ಯಕ್ತವಾಗುತ್ತಿದ್ದರೆ ಅದೆಷ್ಟು ಒಳಿತಾಗುತ್ತಿತ್ತು ? ಹೃದಯಕ್ಕೆ ದೇಹದ ಬಂಧನವಿದ್ದ ಮೂಲಕವೇ ಈ ಎಲ್ಲ ಅನರ್ಥಗಳು ತಲೆದೋರುತ್ತಿರಬಹುದಲ್ಲವೇ ?

ಎಷ್ಟೋ ಹೊತ್ತು ಹೀಗೆಯೇ ಕುಳಿತಿದ್ದ. ಕೊನೆಗೊಮ್ಮೆ ಕಾಗದದ ತುಂಡಿನ ಮೇಲೆ ಏನೇನೋ ಬರೆದು ಕಿಸೆಯಲ್ಲಿಟ್ಟ. ಕೆಲಹೊತ್ತಿನ

ಮೇಲೆ ಜೊಂಪು ಹತ್ತಿತು. ವಿಚಾರದ ಪ್ರವಾಸ ಮಾಡಿ ದಣಿದ ಅವನ ಮನಸ್ಸಿಗೆ ನಿದ್ರಾಮಾತೆಯು ತನ್ನ ತೊಡೆಯಲ್ಲಿಟ್ಟು ತಟ್ಟಹತ್ತಿದಳು. ಆದರೆ ಹರೆಯಕ್ಕೆ ಬಂದ ಮಗನ ಮನಸ್ಸು ಕೇವಲ ಮಾತೆಯಲ್ಲಿಯೇ ತನ್ಮಯವಾಗದಂತೆ ಸುಧಾಕರನ ಮನಸ್ಸು ಶಾಂತವಾದ ನಿದ್ರೆಯ ಅಧೀನವಾಗಲಿಲ್ಲ. ವಿವಿಧ ರಾಗಗಳ ಮಿಶ್ರಣದಿಂದ ರಮ್ಯವೆನಿಸುವ ಒಂದು ಗಾಯನದಂತೆ ಅವನ ಸ್ವಪ್ನ ಸೃಷ್ಟಿಯಿತ್ತು. ಆ ಕನಸಿನಲ್ಲಿ ಕೊನೆಯ ನೋಟವನ್ನು ಕಂಡು ಆತ ಎಚ್ಚತ್ತ. "ಸನ್ಯಾಸಿಯು ತನ್ನ ಕಾವಿಬಟ್ಟೆಯನ್ನು ತೊಳೆದು ಅದರ ನೀರನ್ನು ಬತ್ತಿಸಿ ಕುಂಕುಮ ತಯಾರಿಸಿ ಸುಧೆಯ ಹಣೆಗೆ ತಿಲಕವನ್ನಿಟ್ಟಂ"ತೆ ಕಂಡಿತು. ಸುಧಾಕರನು ಕಣ್ದೆರೆದು ನೋಡಿದಾಗ ಸುತ್ತಲೂ ಕತ್ತಲೆಯೇ ಮುತ್ತಿಕೊಂಡಿತ್ತು.

ಮಾರನೇ ದಿನ ಎಲ್ಲರಿಗೂ ಹೋಗುವ ಗಡಿಬಿಡಿ. ದಾದಾಸಾಹೇಬರೂ ಅಷ್ಟೊತ್ತಿಗೆ ಬಂದು ಮುಟ್ಟಿದರು. ಸುಧಾಕರನ ನಿಶ್ಚಯವನ್ನು ಕೇಳಿ ಅವರಿಗೆ ಅತ್ಯಾನಂದವಾಯಿತು. ಆ ಆನಂದದ ಭರದಲ್ಲಿ ರಾತ್ರೆ ಓದಿದ ವೃತ್ತಪತ್ರಿಕೆಯಲ್ಲಿಯ ಸುದ್ದಿಯನ್ನು ಹೇಳುವದಕ್ಕೆ ಮರೆತರು.

ಕೆಲಹೊತ್ತಿನಲ್ಲಿ ಬೀಳ್ಕೊಳ್ಳುವುದೆಲ್ಲ ಮುಗಿದ ಮೇಲೆ ಬಸ್ಸು ಹೊರಟಿತು.

ಸುಧೆಗೆ ಮಾತ್ರ ಈಗ ಹೃದಯ ಬರಿದಾಗಿಬಿಟ್ಟಿತು. ವಾರುಣಿಯಂತಹ ಬಿಚ್ಚುಮನಸ್ಸಿನ ಸರಿವಯಸ್ಸಿನ ಗೆಳತಿಯು ಇನ್ನೂ ಕೆಲವು ದಿನ ಇದ್ದರೂ ಬೇಕೇ ಆಗಿತ್ತು. ಆದರೆ ವಾರುಣಿಗಿಂತ ಸುಧಾಕರನ ಹೋಗುವಿಕೆಯಿಂದ ಅವಳ ಮನಸ್ಸು ಅತಿಶಯ ಖಿನ್ನವಾಗಿ ಬಿಟ್ಟಿತು. ಸೂರ್ಯನು ದೂರದಲ್ಲಿದ್ದರೂ ತರುಲತೆಗಳ ಜೀವನ ಅವನನ್ನೇ ಅವಲಂಬಿಸಿರುತ್ತದಲ್ಲವೆ? ಸುಧೆಯ ಹೃದಯದ ಸ್ಥಿತಿಯೂ ಹೀಗೇ ಆಗಿಬಿಟ್ಟಿತ್ತು. ಸುಧಾಕರನ ಬಸ್ಸು ಕೆಟ್ಟರೆ ತಿರುಗಿ ಬರುತ್ತಿದ್ದನಲ್ಲ! ಎಂಬ ವಿಚಾರವೂ ಆಕೆಯಲ್ಲಿ ಸುಳಿಯಿತು. ಆದರೆ ಮರುಕ್ಷಣದಲ್ಲಿಯೇ ಈ ವಿಚಾರದಲ್ಲಿಯ ತನ್ನ ಸ್ವಾರ್ಥವು ಲಕ್ಷ್ಯಕ್ಕೆ ಬರಲು "ಅವರ ಪ್ರವಾಸವು ಸುರಕ್ಷಿತವಾಗಿ ಕೊನೆಗಾಣಲೆ"ಂದು ದೇವರಲ್ಲಿ ಪ್ರಾರ್ಥಿಸಹತ್ತಿದಳು.

ಇತ್ತ ದಾದಾಸಾಹೇಬರು "ತನ್ನ ಹೆಂಡತಿಗೆ ಮೂರು-ನಾಲ್ಕು ತಿಂಗಳಾದುದರಿಂದ ವಾಲಾವಲಿಯಲ್ಲಿ ದೇವರ ಸೇವೆಗಿಡಲು ಬಯಸಿದ್ದೇನೆ. ದೇವರ ಕೃಪೆಯಿಂದ ಈ ಕೂಸಾದರೂ ಬದುಕುತ್ತಿದೆಯೋ ನೋಡಬೇಕಾಗಿದೆ. ಅಲ್ಲಿರಲು ಜೊತೆಗೆ ಯಾರೂ ಇಲ್ಲದ್ದರಿಂದ ಸುಧೆಯನ್ನು ಕಳಿಸಿಕೊಡಿ" ಎಂಬರ್ಥದ ಮನವಿಯನ್ನು ಸುಂದರಾಬಾಯಿಯವರ ಮುಂದಿಟ್ಟರು. ಕೆಲಹೊತ್ತಿನಲ್ಲಿ ಅರ್ಜಿ ಮಂಜೂರಾಯಿತು. ಆದರೆ ಅತ್ತಿಗೆಯ ಸ್ವಭಾವವನ್ನು ಅರಿತ ಸುಧೆಗೆ ಇದರಿಂದ ಯಾವ ಸಂತೋಷವೂ ಆಗಲಿಲ್ಲ. ಕೊನೆಗೊಮ್ಮೆ ಸುಧಾಕರನೂ ವಾಲಾವಲಿಯಲ್ಲಿರುವನೆಂಬ ಕಲ್ಪನೆ ಬಂದುದರಿಂದ ಮನಸ್ಸು ಹಗುರವಾಯಿತು.

ಮನೆಯ ಕೆಲಬೊಗಸೆಗಳನ್ನೆಲ್ಲ ತೀರಿಸಿ ಮಧ್ಯಾಹ್ನ ಓದಲು ಕುಳಿತಳು. ಆದರೆ ಸುಧಾಕರನು ಏನು ಮಾಡುತ್ತಿರಬಹುದೆಂಬ ಯೋಚನೆ ಬಂದುದರಿಂದ ಓದಲಿಕ್ಕೂ ಆಗಲಿಲ್ಲ. ಆದರೆ ತಾನು ಓದುವ ಪುಟದಲ್ಲೊಂದು ಪತ್ರ ಸಿಕ್ಕಿದುದರಿಂದ ಕುತೂಹಲದಿಂದ ಓದಹತ್ತಿದಳು.

"ಒಂದು ಜೀವವು ಸಾವಿರಾರು ಜೀವಕ್ಕೆ ಆನಂದವನ್ನು ಕೊಡಬಲ್ಲುದು; ಅಲ್ಲದೆ ಉಪಯುಕ್ತವಾಗಬಲ್ಲುದು. ಮಲತಾಯಿಯು ಒದೆದಾಗ ಧ್ರುವನು ಜೀವ ಕೊಡಲಿಲ್ಲ. ರಾಜಮಾರ್ಗವನ್ನು ಬಿಟ್ಟು ಅರಣ್ಯದ ದಾರಿ ಹಿಡಿದು ದೇವರಿಂದ ಅಚಲ ಪದವಿ ಪಡೆದ. ಸಾವು ಪ್ರತಿಯೊಬ್ಬರಿಗೂ ಒಂದಲ್ಲ ಒಂದು ದಿನ ಬರತಕ್ಕದ್ದೇ! ಆದರೂ ಪುಷ್ಪವು ಎಂದಾದರೂ ಒಣಗತಕ್ಕದ್ದೆಂದು ಮೊಗ್ಗೆಯನ್ನಾರೂ ಚೂರು ಚೂರು ಮಾಡಿ ಒಗೆಯುವದಿಲ್ಲ. ಜಗತ್ತಿನಲ್ಲಿ ಪ್ರೇಮವೆಂಬದೊಂದಿದೆ. ಆದರೆ ಅದು ಪರಮೇಶ್ವರನಂತೆ ಅದೃಶ್ಯವಿದೆ. ಶೋಧಿಸುವವನಿಗೆ ಅದು ಇಂದಲ್ಲ, ನಾಳೆ ಸಿಕ್ಕೇ ಸಿಗುತ್ತಿದೆ. ಮತ್ತು ಅದಕ್ಕೋಸ್ಕರವೇ ನಾವು ಬದುಕುವುದಿರುತ್ತದೆ."

ಇದನ್ನೋದಿ ಸುಧೆಯಲ್ಲಿ ನವಜೀವನ ಸಂಚಾರವಾಯಿತು. ನಿಜವಾಗಿಯೂ ಸುಧಾಕರನೇ ಇದನ್ನು ಬರೆದಿರಬೇಕು. ಆಶೆಯ ತಾವ್ರ

ಪಟದ ಮೇಲಿನ ಈ ವಾಕ್ಯಗಳು ಅವಳಿಗೆ ಚಿನ್ನದಿಂದ ಬರೆದಂತೆ ತೋರಹತ್ತಿದವು. ಹೃದಯವನ್ನು ತೆರೆದು ಒಳಗಿಡಲು ಬರುತ್ತಿದ್ದರೆ ಈ ಪತ್ರವನ್ನು ಅಲ್ಲಿಯೇ ಇಟ್ಟುಕೊಳ್ಳುತ್ತಿದ್ದಳು.

## ಪ್ರಕರಣ ೧೩.

ಸುಧಾಕರನ ಬಸ್ಸು ಸಾವಂತವಾಡಿಯನ್ನು ಬಿಟ್ಟಿತು. ಆದರೆ ಅವನ ಮನಸ್ಸು ಮಾತ್ರ ಅಲ್ಲಿಯೇ ಸುಳಿದಾಡುತ್ತಿತ್ತು. “ ರಾತ್ರಿ ಭಾವನೆಯ ಭರದಲ್ಲಿ ಬರೆದ ಪತ್ರ ಸುಧೆಗೆ ಅರ್ಥವಾಗಬಹುದೇ ? ಆ ಪತ್ರ ಯಾರ ಕೈಗಾದರೂ ಸಿಕ್ಕಲ್ಲಿ ಅನರ್ಥವಾಗಬಾರದೆಂದು ಸಾಮಾನ್ಯ ತತ್ವದ ಹೊರತು ಇನ್ನೇನೂ ಬರೆದಿರಲಿಲ್ಲ. ಅಲ್ಲದೆ ಸಹಿ ಕೂಡ ಮಾಡಿರಲಿಲ್ಲ. ತತ್ವವೆಂಬುದು ಮಾವಿನ ಗೊರಟದಂತೆ ಶುಷ್ಕವಾಗಿರುತ್ತದೆ. ಅದನ್ನು ಸಕ್ರಿಯ ಸಹಾನುಭೂತಿಯ ಭೂಮಿಯಲ್ಲಿ ನೆಟ್ಟರೆ ಮಾತ್ರ ಮರವಾಗಿ ರಸಭರಿತವಾದ ಹಣ್ಣು ಸಿಗುತ್ತದೆ. ಆದ್ದರಿಂದ ನನ್ನ ಹುರುಳಿಲ್ಲದ ಬರೀ ಮಾತಿನಿಂದ ಸುಧೆಗೆ ಹೇಗೆ ಸಮಾಧಾನವಾದೀತು? ಸೆಕೆಯಿಂದ ಬಳಲಿದವನಿಗೆ ಗಾಳಿಯ ಸುಳಿವು ಸುಖಕರವೆನಿಸುತ್ತಿದೆಯಾದರೂ ಬೆಂಕಿಯಿಂದ ಸುಡಲ್ಪಟ್ಟವನಿಗೆ ವೇದನೆಯನ್ನು ಇನ್ನಷ್ಟು ಹೆಚ್ಚಿಸುತ್ತದಲ್ಲವೇ ? ನನ್ನ ರುಕ್ಷವೇದಾಂತದಿಂದ ಆಕೆಯ ಹೃದಯಕ್ಕೆ ಶಾಂತಿ ದೊರಕುವ ಬದಲು ಇನ್ನಷ್ಟು ಕ್ಷುಬ್ಧವಾದೀತು. ನಾನು ಇನ್ನೂ ಒಂದು ದಿನ ಸಾವಂತವಾಡಿಯಲ್ಲಿ ಇದ್ದರೆ ಒಳಿತಾಗುತ್ತಿತ್ತು! ಇದ್ದರೂ ಸುಂದರಾಬಾಯಿಯವರ ಗರ್ಜನೆಯ ಮುಂದೆ ಕಿವಿಯಲ್ಲಿ ಬೊಟ್ಟುಹಾಕಿಕೊಂಡು ಕೂಡ್ರದೆ ಗತ್ಯಂತರವಿರಲಿಲ್ಲ. ಪಂಜರದ ಪಕ್ಷಿ ಇಲ್ಲವೆ ತುರಂಗದ ಕೈದಿಯು ಕೂಡ ಸುಧೆಗಿಂತ ಅಧಿಕ ಸುಖದಲ್ಲಿರಬಹುದು. ಇಂತಹ ದುರ್ದೈವಿಗಳಿಗೋಸ್ಕರ ಸಮಾಜವೇನು ಮಾಡುತ್ತಿದೆ ? ಒಂದು ವೇಳೆ

ಸುಧೆಯು ಸ್ವಾವಲಂಬಿಯಾಗಿದ್ದರೆ........? ಶಿಕ್ಷಣದ ಹೊರತು ಅದೆಲ್ಲಿ ಸಾಧ್ಯ?........"

"ಸುಧಾಕರ, ಕತ್ತೆಯಾಗಿಯಾದರೂ ಹುಟ್ಟಬಹುದು. ಆದರೆ ಹುಡುಗಿಯ ತಂದೆ ಇಲ್ಲವೆ ಸಹೋದರನಾಗಿ ಹುಟ್ಟಬಾರದು. ಎಂದು ಗೋಪಾಲರಾಯರು ನುಡಿದದ್ದರಿಂದ ಸುಧಾಕರನ ವಿಚಾರಚಕ್ರ ಹಾಗೇ ನಿಂತುಬಿಟ್ಟಿತು. ಮೋಟಾರಿನಲ್ಲಿ ಕುಳಿತವರೆಲ್ಲ ನಗಹತ್ತಿದರು. ಆದರೆ ನೈಸರ್ಗಿಕ ವ್ಯಂಗವು ಸಾಮಾನ್ಯ ಮನುಷ್ಯನಿಗೆ ಹಾಸ್ಯಾಸ್ಪದ ವೆನಿಸಿದರೂ ಸಹೃದಯನ ಕಾರುಣ್ಯವನ್ನು ಜಾಗ್ರತಗೊಳಿಸುವಂತೆ ಈ ವಾಕ್ಯದಿಂದ ಸುಧಾಕರನ ಮನಸ್ಸು ಖಿನ್ನಗೊಂಡಿತು. ಗೋಪಾಳ ರಾಯರು ತಮ್ಮ ವರಸಂಶೋಧನ ಚಳವಳಿಯ ಇತಿಹಾಸವನ್ನು ವರ್ಣಿಸಹತ್ತಿದರು."ನೋಡಿ, ಒಬ್ಬ ಹುಡುಗಿ ಎತ್ತರ ಇದ್ದಾಳೆಂದು ಹೇಳಿದರೆ ಇನ್ನೊಬ್ಬ ಗಿಡ್ಡ ಎನ್ನುತ್ತಾನೆ. ಅಂದಮೇಲೆ ಇವರಿಗೆ ಬೇಕಾಗುವಷ್ಟೇ ಎತ್ತರದ ಹುಡುಗಿಯನ್ನು ತರುವದಾದರೂ ಎಲ್ಲಿಂದ? ಜಗ್ಗಿದೊಡನೆ ಉದ್ದ-ಗಿಡ್ಡವಾಗಲು ಹುಡುಗಿಯೆಂದರೇನು ರಬ್ಬರ ಇರುತ್ತಿದೆಯೇ? ಹೇಳಿ ಕೇಳಿದವರಿಗೆಲ್ಲ ಬಿಳೇ ಹುಡುಗಿ ಬೇಕು. ಈ ಮಕ್ಕಳು ಮಾತ್ರ ಮಶಿ ಕೆಂಡದ ಹಿರೇ ಅಣ್ಣಂದಿರಿದ್ದರೂ ಪರವಾಯಿಲ್ಲ. ಹುಡುಗಿಯ ಕಣ್ಣು ಮೂಗು ಕಾವ್ಯದಲ್ಲಿ ವರ್ಣಿಸಿದಂತೆಯೇ ಇರಬೇಕೆಂದು ಪ್ರತಿಯೊಬ್ಬನ ಇಚ್ಛೆಯಿರುತ್ತಿದೆ. ಆದರೆ ಇವರ ಕಣ್ಣು ಆನೆಯ ಕಣ್ಣಿನಂತಿದ್ದರೂ ಇವರಿಗೆ ಬೇಕಾದುದು ಚಿಗರಿಗಂಗಳ ಚಲುವೆ! ಇವರ ಮೂಗಿನಮೇಲೆ ಎಮ್ಮೆ ಕಾಲಿಟ್ಟಿದ್ದರೂ ಅಡ್ಡಿಯಿಲ್ಲ; ಹೆಂಡತಿಯ ಮೂಗು ಮಾತ್ರ ಸಂಪಿಗೆಯ ಮೊಗ್ಗೆಯಂತಿರಬೇಕು. ಇಷ್ಟೆಲ್ಲ ದಾಟಿ ಬಂದರೂ ವರದಕ್ಷಿಣೆಯ ಸಂಕಟ ಇದ್ದದ್ದೇ! ಹಾವಿಗೆ ಹೊಡೆಯಲು ವೈಯ್ಯುಬ್ಬಿಸುವಂತೆ ಇದರ ಗತಿ. ಬರೆಯುವಾಗ ಇಲ್ಲವೆ ಮಾತಾಡುವಾಗ ಅದರ ವಿರುದ್ಧ ಹಲ್ಲೆಯೇ ಹಲ್ಲೆ. ಮದುವೆ ಮಾಡಿ ಕೊಳ್ಳುವದಾದರೆ ಮಾತ್ರ ಮೊದಲು ವಶವಾಗಬೇಕಾದುದು ಈ ಕಿಲ್ಲೆ"

ಊರು ಮುಟ್ಟುವ ವರೆಗೆ ಜನಕ್ಕೆಲ್ಲ ಗೋಪಾಳರಾಯರ ಮಾತು ಮನರಂಜನೆಯ ಸಾಧನವಾಗಿದ್ದರೂ ಸುಧಾಕರನಿಗೆ ಮಾತ್ರ ವೇದನೆಯನ್ನುಂಟುಮಾಡಿತು. "ಇಂದಿಗೆ ಎರಡು ತಲೆಮಾರುಗಳಿಂದ ವರದಕ್ಷಿಣೆಯ ನಿಂದೆ ನಡೆದಿದೆ. ಆದರೂ ಅದರ ಪ್ರಾಬಲ್ಯ ಕಡಿಮೆಯಾಗದೆ ಹೆಚ್ಚುತ್ತಲಿದೆ. ಕಾಲೇಜಿನ ಕ್ಲಬ್ಬಿನಲ್ಲಿ ಸಂಪೂರ್ಣ ಸ್ವಾತಂತ್ರ್ಯದ ಹರಟೆಕೊಚ್ಚುವ ತರುಣ ಪೀಳಿಗೆಯಿಂದು ಹತವೀರ್ಯವಾಗಿರುವುದರಿಂದಲೇ ಇಂತಹ ದುಷ್ಟ ನಡತೆಗಳು ಅಧಿಕಾರದಲ್ಲಿವೆ. ಈಗ ನಾನು ಗೋಪಾಳರಾಯರ ತಂಗಿಯೊಡನೆ ಮದುವೆಯಾದರೆ ಅವರನ್ನು ಕಷ್ಟದಿಂದ ಪಾರು ಮಾಡಿದಂತಾಗುವದೇನೋ ನಿಜ. ಆದರೆ ಮದುವೆಯೆಂದರೆ ಆಮರಣದ ಸಂಬಂಧ. ಅದರಿಂದ ಭಾವನಾವಶರಾಗಿ ದುಡುಕುವುದು ವಿಹಿತವಲ್ಲ." ಎಂದು ಯೋಚಿಸಿ ಮನೆಯ ದಾರಿ ಹಿಡಿದ.

"ನಾನು ಈಗ ಬರುವೆನೆಂದು ತಾಯಿ ನೆನೆಸಿರಲಿಕ್ಕಿಲ್ಲ. ಸಾಯಂಕಾಲ ದಾರಿ ನೋಡಬಹುದು. ನಾನು ಹೋಗಿ ಒಮ್ಮೆಲೇ ಅವಳ ಮುಂದೆ ನಿಂತರೆ ಅವಳಿಗೆ ಅದೆಷ್ಟು ಆಶ್ಚರ್ಯವಾದೀತು?" ಎಂದು ಯೋಚಿಸುತ್ತ ನಡೆದುದರಿಂದ ಮೇಲೆ ಕಾಯುತ್ತಿದ್ದ ಬಿಸಿಲಿನ ಅರಿವಾಗಲಿಲ್ಲ. ಆತ ಮನೆಗೆ ಹೋಗದೆ ಐದಾರು ತಿಂಗಳಾಗಿತ್ತು. ಎಷ್ಟೇ ವೇಗವಾಗಿ ಹೊರಟಿದ್ದರೂ ಕಾಲು ಬೇಗನೇ ಹೆಜ್ಜೆ ಹಾಕುತ್ತಿಲ್ಲವೆಂದು ಭಾಸವಾಗುತ್ತಿತ್ತು.

ದಾರಿಯಲ್ಲಿ ತಾಯಿಯ ಮರಣಕ್ಕಾಗಿ ವ್ಯಥಿಸುತ್ತಿದ್ದ ಬಾಲಿಕೆಯೊಬ್ಬಳನ್ನು ಕಂಡು ಆತನ ಹೃದಯ ಕಳವಳಗೊಂಡಿತು. "ಇಂದಲ್ಲ ನಾಳೆ ನನ್ನ ತಾಯಿಯೂ ನನ್ನನ್ನು ಹೀಗೇ ಬಿಟ್ಟು ಹೋಗಬಹುದಲ್ಲವೇ? ಆ ಮೇಲೆ ಅವಳ ಪ್ರೇಮಪೂರ್ಣ ಸ್ವರ ಮತ್ತು ಸ್ಪರ್ಶ ಹೇಗೆ ಲಭಿಸೀತು? ಸಮುದ್ರದಲ್ಲಿ ಅನೇಕ ರತ್ನಗಳಿದ್ದರೂ ಮುತ್ತಿನ ರಕ್ಷಣೆಯು ಅದರ ಸಿಂಪಿನಿಂದಲೇ ಆಗುತ್ತಿದೆ. ಅದರಂತೆಯೇ ಈ ಜಗತ್ತಿನಲ್ಲಿ ಕೋಟಿಗಟ್ಟಲೆ ಬುದ್ಧಿವಂತರಿದ್ದರೂ ಹೆಚ್ಚಿಗೆ ಕಲಿಯದ ನನ್ನ

ಶಿಷ್ಟ್ರನನ್ನು ಸರಿಗಟ್ಟುವನು ಯಾರಿಂದಲೂ ಸಾಧ್ಯವಿಲ್ಲ. ಅವಳ ವರದ ಹಸ್ತವೇ ನನ್ನ ಆಕಾಶ. ಅವಳ ತೊಡೆಯೇ ನನ್ನ ಪೃಥ್ವಿ. ಅವಳು ಮೈಮೇಲೆ ಕೈಯ್ಯಾಡಿಸಲು ಅಮೃತದಿಂದ ಮಿಂದು ಬಂದ ಗಂಧಸಮೀರದ ನೆನಪಾಗುತ್ತದೆ. ನನ್ನ ತಲೆಯಲ್ಲಿ ಬೆಂಕಿಯ ಜ್ವಾಲೆ ಎದ್ದಿದ್ದರೂ ಅವಳ ಕಣ್ಣೀರಿನ ನಾಲ್ಕು ಹನಿಗಳಿಂದ ಆರಿಹೋಗುತ್ತದೆ. ಪ್ರೇಮದ ಮುಂದೆ ತ್ರಿಭುವನದ ಸಂಪತ್ತು ಕೂಡ ನಗಣ್ಯವಾಗಿದ್ದು. ಅವಳ ಹಾಸ್ಯದಲ್ಲಿ ಜಗತ್ತಿನಲ್ಲಿಯ ಎಲ್ಲ ಹಾಸ್ಯವು ಸಂಗ್ರಹಿಸಿರುತ್ತದೆ. ನಾಸ್ತಿಕನನ್ನು ಕೂಡ ಆಸ್ತಿಕನನ್ನಾಗಿ ಮಾಡಲು ಮಾತ್ರ ಪ್ರೇಮದಂತಹ ಸಾಧನವು ಇನ್ನೊಂದಿಲ್ಲ. ”

ಮಗನು ಇನ್ನೂ ಬಂದಿಲ್ಲವೆಂದು ದೇವರಿಗೆ ಹರಕೆ ಮುಟ್ಟಿಸಲು ಹೊರಡುವದಕ್ಕೂ ಸುಧಾಕರನು “ಅಮ್ಮಾ” ಎಂದು ಕೂಗುವುದಕ್ಕೂ ಗಂಟುಬಿದ್ದಿತು. ದೇವರ ಹರಕೆಯನ್ನು ನಂತರ ಮುಟ್ಟಿಸಿದರಾಯಿತೆಂದು ಮಗನಿಗಾಗಿ ಅಡಿಗೆ ತಯಾರಿಸುವುದರಲ್ಲಿ ತೊಡಗಿದಳು. ಸುಧಾಕರನು ತನ್ನ ಪರಿಚಯವನ್ನು ಮನೆಯಲ್ಲಿಯ ಸಾಕಿದ ಪಶುಗಳಿಗೆಲ್ಲ ಮಾಡಿಕೊಟ್ಟನು. ಗಿಡಮರಗಳೂ ತಲೆಯಲ್ಲಾಡಿಸಿ ತಮ್ಮ ಪರಿಚಯವನ್ನು ಸೂಚಿಸಿದವು.

ಊಟವಾದ ಬಳಿಕ ಪರಿಚಿತರಿಗೆಲ್ಲ ಭೆಟ್ಟಿಕೊಟ್ಟ. ಇನ್ನು ಹದಿನೈದು ದಿನಗಳಲ್ಲಿ ಆ ಊರಲ್ಲಿ ರಾಮನವಮಿಯ ಉತ್ಸವ ಜರುಗುವದಿತ್ತು. ಆ ಕಾಲಕ್ಕೆ ಸ್ವಯಂಸೇವಕ ದಳದ ಆವಶ್ಯಕತೆಯಿದೆಯೆಂಬುದನ್ನು ಸರಿಕ ಗೆಳೆಯರೊಡನೆ ಚರ್ಚಿಸಿದ.

ರಾತ್ರಿ ಬೆಳದಿಂಗಳಿದ್ದುದರಿಂದ ಚಾಪೆಯ ಮೇಲೆ ಅಡ್ಡಾಗಿ ಚಂದ್ರನ ಕಡೆಗೆ ನೋಡುತ್ತ ಬಿದ್ದುಕೊಂಡಿದ್ದ. ಕೆಲಹೊತ್ತಿನಲ್ಲಿ ಅಲ್ಲಿಯೇ ನಿದ್ದೆ ಹತ್ತಿತು. ಜಾನಕಿಯಮ್ಮನು ತಲೆದಿಂಬಿಲ್ಲದೆ ಮಲಗಿದ ಮಗನನ್ನು ನೋಡಿ ಕುತ್ತಿಗೆ ಉಳುಕೀತೆಂದು ಭಾವಿಸಿ ಮೆಲ್ಲನೆ ಆತನ ತಲೆಯನ್ನು ತೊಡೆಯ ಮೇಲಿಟ್ಟುಕೊಂಡಳು.

ಪುರಾಣದಲ್ಲಿ ಕ್ಷೀರಸಾಗರಶಾಯಿ ವಿಷ್ಣುವಿನ ವರ್ಣನೆ ಕೇಳಿದ್ದಳು. ಮೇಲೆ ಪಸರಿಸಿದ ಬೆಳದಿಂಗಳ ಸಾಗರವನ್ನು ಕಂಡು ತನ್ನ ಸುಧಾನೂ ವಿಷ್ಣುವೇ ಇದ್ದಾನೆಂದು ಅವಳಿಗೆ ಭಾಸವಾಯಿತು. "ಸುಧಾನೇ ನನ್ನ ಧನ, ವೈಭವ; ಆತನೇ ಸರ್ವಸ್ವ! ಇಪ್ಪತ್ತೈದು ವರ್ಷಗಳ ಹಿಂದೆ ಆತನೆಲ್ಲಿದ್ದ? ಮಕ್ಕಳಿಲ್ಲವೆಂದು ಕೊರಗುತ್ತಿದ್ದೆ. ಸಖಿಕರೆಲ್ಲ ಒಂದೆರಡು ಮಕ್ಕಳ ತಾಯಿಯಾದುದನ್ನು ಕಂಡು ವ್ಯಸನವಾಗುತ್ತಿತ್ತು. ತುಂಬಿದ ಮನೆ, ಪತಿಯ ಸಂಪೂರ್ಣ ಪ್ರೇಮವಿದ್ದರೂ ಅದಾವುದೋ ಕೊರತೆಯೊಂದು ಭಾಸಿಸುತ್ತಿತ್ತು. ಆದರೆ ದೇವರಿಗೆ ನನ್ನ ಮೇಲೆ ಕರುಣೆ ಬಂತು. ಬೆಳದಿಂಗಳ ಪ್ರಭೆ, ಹೂಗಳ ಸುಗಂಧ, ಮುತ್ತಿನಮಳೆ ಬರುವಲ್ಲಿಂದ ನನ್ನ ಸುಧಾಕರನ ಬಂದ. ಆತ ಕಣ್ಣುಬಿಟ್ಟಾಗ ನನ್ನ ಹೃದಯದ ಅಂಧಃಕಾರವು ಮಾಯವಾಯಿತು." ಚಿಕ್ಕಂದಿನಲ್ಲಿ ದುಂಡ ಮಲ್ಲಿಗೆಯ ಮೊಗ್ಗೆಯಂತೆ ತೋರುವ ಆತನ ಮುಚ್ಚಿದ ಮುಷ್ಟಿಯು ಈವಾಗ ಅರಳಿದ ಕಮಲದಂತೆಯಾಗಿತ್ತು. ತನ್ನ ಬೆರಳನ್ನು ಬಾಯಲ್ಲಿಟ್ಟು ಚೀಪುತ್ತಿದ್ದ ಮಗನು ಕೈಯಲ್ಲಿ ಲೆಕ್ಕಣಿಕೆಯನ್ನು ಹಿಡಿದು ದೊಡ್ಡ ದೊಡ್ಡ ಪರೀಕ್ಷೆ ಪಾಸಾಗಿದ್ದ. ನನ್ನ ಸುಖಸ್ವಪ್ನವು ಸತ್ಯವಾಯಿತು. ಇನ್ನೇನು, ನನ್ನ ಮಗನಿಗೆ ಅನುರೂಪಳಾದ.........

ತೊಡೆಯು ತುಸು ಅಲುಗಿದ್ದರಿಂದ ಸುಧಾಕರನು ಕಣ್ಣು ಬಿಟ್ಟು ನೋಡಿದ. ಬಾಯಿಂದ ಒಮ್ಮೆಲೇ ಮಾತು ಹೊರಡಲಿಲ್ಲ.

"ಇದೇನಪ್ಪಾ, ಚಿಕ್ಕ ಕೂಸಿನಂತೆ ನೋಡುತ್ತೀಯಲ್ಲಾ?" ಎಂದು ತಲೆಗೂದಲನ್ನು ನೇವರಿಸಹತ್ತಿದಳು.

"ನಾನು ಚಿಕ್ಕವನೇ ಅಲ್ಲವೇ?"

"ಆದರೆ ಇಂದಿನ ಮಿಡಿಯು ನಾಳೆ ಮಾವು ಆಗತಕ್ಕದ್ದೆ! ಮಗೂ, ನಿನ್ನ ಸುಖಕ್ಕಾಗಿ ಒಂದು ಮಾತು ಹೇಳಬೇಕೆಂದಿರುವೆ. ಹೇಳಲೇ?"

"ನನಗೆ ನೀನು ಏನು ಹೇಳುವಿಯೆಂದು ಗೊತ್ತೇ ಇದೆ. ಜಗತ್ತಿನ ಎಲ್ಲ ತಾಯಂದಿರಿಗೂ ಹೆಚ್ಚಿಗೆ ಸೇರುವ ಮಾತು ಅದು."

"ನೀನೇನು ಚೇಷ್ಟೆ ಮಾಡುವದೇ! ನಿನ್ನ ವಯಸ್ಸೇ ಅಂತಹದು. ಆದರೆ ನೀನು ನಿನ್ನ ಮಕ್ಕಳ ಮದುವೆ ಮಾಡುತ್ತಿದ್ದಾಗ ಅವರೂ ನಿನ್ನನ್ನು ಹೀಗೇ ಚೇಷ್ಟೆಮಾಡಬಹುದು."

"ಅಮ್ಮಾ, ಇನ್ನೂ ನನ್ನ ಮದುವೆಯೇ ಆಗಿಲ್ಲ. ನನ್ನ ಮಕ್ಕಳ ಮದುವೆಯೆಲ್ಲಿಂದ ಬಂತು ?"

"ನನ್ನ ಮಾತಿನ ಸತ್ಯಾಸತ್ಯತೆ ಸಮಯ ಬಂದಾಗ ತಿಳಿದೀತು. ಈಗ ನಿನ್ನ ಎರಡು ಕೈ ಇದ್ದದ್ದು ನಾಲ್ಕು ಕೈ........"

"ಒಂದು ಮುಖ ಇದ್ದದ್ದು ಎರಡು ಮುಖ. ಮದುವೆಯಾದ ಮೇಲೆ ಎಲ್ಲರದೂ ಎರಡು ನಾಲಿಗೆಯಾಗುತ್ತಿದೆ."

"ಹೌದು, ಎರಡು ನಾಲಗೆಯಾಗದ ಹೊರತು ಮಮತೆಯ ಮಾತು ಸಿಗುವದಿಲ್ಲ."

"ಮಮತೆಯ ಗಂಗಾನದಿಯೇ ಹತ್ತರದಲ್ಲಿರುವಾಗ ಬಾವಿಯನ್ನೇಕೆ ಕಡಿಯ ಹೋಗಲಿ ?"

"ಮಗೂ, ನನಗೆ ಬೇಕಾದ ರೀತಿಯಿಂದ ತಿಳಿದುಕೋ – ನದಿಯೆನ್ನು; ಸಮುದ್ರವೆನ್ನು. ಆದರೆ ಒಂದು ದಿನ ಬತ್ತಿ ಹೋಗಲೇ ಬೇಕಷ್ಟೇ."

ಸುಧಾಕರನಿಗೆ ಬೆಳಿಗ್ಗೆ ಕಂಡ ಮಾತೃಹೀನ ಹುಡುಗೆಯ ನೆನಪಾಗಿ ಒಂದೆರಡು ಅಶ್ರುಬಿಂದು ಉದುರಿದವು. ಕುತ್ತಿಗೆ ಬಿಗಿದು ಬಂತು.

"ಅಮ್ಮಾ, ನಾನು ಮದುವೆಯನ್ನೇನೋ ಮಾಡಿಕೊಳ್ಳುವೆ; ಆದರೆ—"

"ಆದರೇನು?"

"ರೂಪಕ್ಕೆ ಇಲ್ಲವೆ ದುಡ್ಡಿಗೆ ಮರುಳಾಗಿ ಮದುವೆಯಾಗುವದು ಒಳಿತಲ್ಲ. ಹೆಂಡತಿ ಅಡಿಗೆ ಮಾಡುವುದು; ಗಂಡ ಅವಳಿಗೆ ಆಭರಣಗಳನ್ನಿಡಿಸುವದು; ಮನೆಯಲ್ಲಿ ತೊಟ್ಟಿಲ ಕಟ್ಟುವುದು; ಇಷ್ಟಾದರೆ ಸಾಕೆ? ಸಂಸಾರ ನೌಕೆಗೆ ಗಂಡನು ಹೀಡಿನಂತಿದ್ದರೆ ಹೆಂಡತಿಯು ಚುಕ್ಕಾಣಿಯಂತಿರಬೇಕೆಂದು ನಾನೊಂದು ಪುಸ್ತಕದಲ್ಲಿ ಓದಿರುವೆ. ನಿನಗೆ ನಾನದನ್ನು ಓದಿ ತೋರಿಸುವವನಿದ್ದೇನೆ. ಗಂಡನ ದೋಷವನ್ನು ಸರಿಮಾಡಿಕೊಳ್ಳಬೇಕು; ತಪ್ಪುತ್ತಿದ್ದರೆ ಹಿಂದಕ್ಕೆಳೆಯಬೇಕು. ಯೋಗ್ಯ ಮಾರ್ಗದಿಂದ ನಡೆಯುತ್ತಿದ್ದರೆ ನೆರವಾಗಬೇಕು; ಅಂತಹಳೇ ನಿಜವಾದ ಪತ್ನಿ."

"ನಮ್ಮ ಜಾತಿಯಲ್ಲಿ, ಅದೂ ಈ ಕೊಂಕಣದಲ್ಲಿ ಅಂತಹ ಹುಡುಗಿ ಹೇಗೆ ದೊರಕೀತಯ್ಯಾ!"

"ಪರಜಾತಿಯಲ್ಲಾದರೂ ಏನಡ್ಡಿ? ಅಮ್ಮಾ, ನಾನು ಹಾಗೇನಾದರೂ ಮಾಡಿದರೆ ನಿನಗೆ ಒಪ್ಪಿಗೆಯಾದೀತಲ್ಲವೇ?"

"ನಿನ್ನ ಸುಖವೇ ನನ್ನ ಸುಖ."

ತನಗೂ ಹಾಗೇ ಹೇಳಬೇಕೆಂದು ಅನಿಸಿದರೂ ಸುಧಾಕರನ ಬಾಯಿಂದ ಮಾತು ಹೊರಡಲಿಲ್ಲ. ಆಕಾಶದತ್ತ ನೋಡಿ ತಾಯಿಯು "ಈ ಬೆಳದಿಂಗಳ ಕಣ್ಣುಸನ್ನೆ ಮತ್ತು ತರುಣರ ಮಾತಿನ ಅರ್ಥ ಅವರವರಿಗೇ ಹೊರತು ಇನ್ನಾರಿಗೂ ತಿಳಿಯಲಿಕ್ಕೆ ಶಕ್ಯವಿಲ್ಲ" ಎಂದಳು.

# ಪ್ರಕರಣ ೧೪.

ನಾಲ್ಕಾರು ದಿನಗಳಲ್ಲಿಯೇ ದಾದಾಸಾಹೇಬರು ತನ್ನ ಹೆಂಡತಿ ಮತ್ತು ಸುಧೆಯರನ್ನು ಕರೆದುಕೊಂಡು ವಾಲಾವಲಿಗೆ ಬಂದು ಬಿಡಾರ ಮಾಡಿದರು. ಶಾಸ್ತ್ರಿಗಳು ದಿನಾಲು ಏಕಾದಶ್ಣಿ ಮಾಡುತ್ತಿದ್ದರು. ದಾದಾಸಾಹೇಬರು ಶಾಸ್ತ್ರಿಗಳಿಗೆ ರಾತ್ರಿ ಬಿಡಾರದಲ್ಲಿ ಮಲಗಲು ವ್ಯವಸ್ಥೆ ಮಾಡಿ, ಏನಾದರೂ ಅಗತ್ಯಬಿದ್ದಲ್ಲಿ ಸುಧಾಕರನ ಸಹಾಯ ಪಡೆಯಲು ಹೆಂಡತಿ ಹಾಗೂ ತಂಗಿಗೆ ಹೇಳಿ ಹೊರಡಲು ಅನುವಾದರು.

"ನಾಲ್ಕಾರು ದಿನ ಇದ್ದು ಹೋಗಬಹುದಿತ್ತಲ್ಲ!" ಎಂದ ಸುಧಾಕರ.

"ಎಂಜಲು ನುಂಗಲಿಕ್ಕೂ ವೇಳೆ ಇಲ್ಲ ನೋಡಿ. ನಮ್ಮ ಇನ್ಸಪೆಕ್ಟರ ಸಾಹೇಬರ ದೂರದ ಸಂಬಂಧಿಕರಾರೋ ಜಯಗಾಂವದ ಕೋಟೆ ನೋಡಲು ಬರತಕ್ಕವರಿದ್ದಾರಂತೆ. ಅವರಿಗೆ ವ್ಯವಸ್ಥೆ ಮಾಡಲು ಇನ್ಸಪೆಕ್ಟರರಿಂದಲೇ ಪ್ರಾಯ್ವೇಟ ಪತ್ರ ಬಂದಿದೆ. ಆ ಮೇಲೆ ಸಾಲೆ ಸಲುವಾಗಿ ಹಣಕೂಡಿಸಲು ಮುಂಬೈಗೆ ಹೋಗಬೇಕೆಂದಿದ್ದೇನೆ. ಒಂದು ವ್ಯಾಯಾಮ ಸಾಲೆ ಕಟ್ಟಿಸಬೇಕಾಗಿದೆ. ನೋಡಿ, ನಿನ್ನೆ ಜ್ಞಾನಪ್ರಕಾಶದಲ್ಲಿ ಇಂಗ್ಲಂಡದ ಯಾವನೋ-ಲೇಖಕ ತೊಂಭತ್ತು ವರ್ಷಕ್ಕೆ ಸತ್ತನೆಂದು ಸುದ್ದಿಯಿತ್ತು. ನಾವಾದರೆ ಇಷ್ಟರಲ್ಲಿ ಎರಡು ಸಲ ಸತ್ತು ಹುಟ್ಟಬಹುದಿತ್ತು. ಗ್ಲಾಡಸ್ಟನ್ ಸಾಹೇಬರು ಆಗಿಯುತ್ತಿದ್ದರಂತೆ. ನಾನೂ ಈಗ ಹತ್ತುವರ್ಷಗಳಿಂದ ಸ್ವತಃ ನಮ್ಮ ಮನೆ ಮುಂದಿನ ತೆಂಗಿನ ಗಿಡಕ್ಕೆ ನೀರು ಹಾಕುತ್ತೇನೆ. ಅಂದಿನಿಂದ ಛಳಿಜ್ವರ ಸಹ ಒಮ್ಮೆಯೂ ಬರಲಿಲ್ಲ."

"ನಿಮ್ಮ ಸುಧೆಯ ಜ್ವರ ಹೇಗಿದೆ ಈಗ ?"

"ನನಗೇನು ಗೊತ್ತಿಲ್ಲ. ಏನೋ ಮೈನೋವಿನಿಂದ ಬಂದಿರಬಹುದು ನಮ್ಮ ಕಡೆ ಹೆಂಗಸರು ವ್ಯಾಯಾಮ ಮೊದಲಾದದ್ದು ಮಾಡೋದೇ ಇಲ್ಲ ಒಮ್ಮೆ ಟ್ರ್ಯಾಮ್ಸದೊಳಗೆ ಈಜುವ ಹೆಂಗುಸಿನ ಫೋಟೋ

ಬಂದಿತ್ತು ! ಅಹಾ, ಏನವಳ ಎದೆ! ಆದರೆ ನಮ್ಮ ಸುಧೆ ನೋಡಿ. ಹುಂ. ಹೋಗಲಿ ಬಿಡಿ. ಆದರೂ ನಮ್ಮ ಜನ ಸಾಯುಮನ್ ಕಮೀಶನ್ ದವರಿಗೆ ಒಳ್ಳೇ ಕೈ ತೋರಿಸುತ್ತಿದ್ದಾರೆ. ಮೊನ್ನೆ 'ಕೇಸರಿ' ಪತ್ರಿಕೆ ಅಗ್ರಲೇಖ ಬಹಳ ಉಗ್ರವಾಗಿತ್ತು.

ಸುಧಾಕರನಿಗೆ ಸಾಲೆಯ ಮಾತೆತ್ತಿ, ದಾದಾಸಾಹೇಬರ ವೃತ್ತಪತ್ರಿಕೆಯ ಸುದ್ದಿಯಿಂದ ತಪ್ಪಿಸಿಕೊಳ್ಳಬೇಕಾಯಿತು.

' ತಿಂಗಳೊಪ್ಪತ್ತಿನಲ್ಲಿಯೇ ಬಂದು ಹೆಂಡತಿ ಮತ್ತು ಸುಧೆಯರನ್ನು ಕರೆದೊಯ್ಯುವೆನು. ಆಗ ನೀವೂ ನಮ್ಮ ಜೊತೆಯಲ್ಲಿಯೇ ಬಂದು ಬಿಡಿ. ಮನೆಯ ಸಮೀಪದಲ್ಲಿಯೇ ನಿಮಗೂ ಒಂದು ಒಳ್ಳೇ ಮನೆ ಹಿಡಿದಿಡುತ್ತೇನೆ. " ಎಂದರು.

ಅಷ್ಟೊಂದು ಮಾತುಕತೆಯಾದರೂ ಪಗಾರವೆಷ್ಟೆಂದು ಮಾತ್ರ ದಾದಾಸಾಹೇಬರು ಹೇಳಲಿಲ್ಲ. ಸುಧಾಕರನಿಗೂ ಅದರ ಬಗ್ಗೆ ಕೇಳುವುದು ಸಾಧ್ಯವಾಗಲಿಲ್ಲ. ತಾನು ತತ್ವಕ್ಕೋಸ್ಕರ ಕೆಲಸ ಮಾಡುವವನು. ಸಾಲೆಯಿಂದ ಶಕ್ಯವಿದ್ದ ಸಂಬಳ ಸಿಕ್ಕೇ ಸಿಕ್ಕೀತು" ಎಂದು ಸಮಾಧಾನ ಮಾಡಿಕೊಂಡನು. ಭಾವನಾಪ್ರಧಾನ ಜನರು ಯಾವಾಗಲೂ ತಮ್ಮ ವರ್ತನೆಯನ್ನು ಸಾಧ್ಯವಿದ್ದಷ್ಟು ಮೃದುವಾಗಿಡಲು ಯತ್ನಿಸುತ್ತಾರೆ. ಆದರೆ ತಮ್ಮ ವಿನಂತಿಯನ್ನು ಜನರು ಹೇಡಿತನವೆಂದು ತಿಳಿದು ದುರುಪಯೋಗಮಾಡುತ್ತಾರೆಂದು ಕಂಡುಬಂದಾಗ ರೊಚ್ಚಿಗೇಳುವರು. ಜಯಗಾಂವದ ಸಾಲೆಯನ್ನು ಸುಧಾಕರನು ಸೇರುವವನಿದ್ದಾನೆಂದು ತಿಳಿದಾಗ ತಾಯಿ ಸಂಬಳವೆಷ್ಟೆಂದು ಕೇಳಿದ್ದಳು. ಈ ಎರಡನೇ ಸಂದರ್ಶನದಲ್ಲಿಯಾದರೂ ದಾದಾಸಾಹೇಬರು ಈ ಮಾತನ್ನು ಹೇಳಬಹುದೆಂದು ಸುಧಾಕರನು ಊಹಿಸಿದ್ದ. ಆದರೆ ತಾವು ಕೊಡುವ ಪಗಾರು ಕಡಿಮೆಯಾದಲ್ಲಿ ಸುಧಾಕರನು ಕೈತಪ್ಪಿ ಹೋಗಬಹುದೆಂಬ ಭಯದಿಂದ ಅವರು ಆ ಸುದ್ದಿಯನ್ನೇ ಎತ್ತಲಿಲ್ಲ.

ಸುಧೆಗೆ ಹೆಪ್ಪಿಗೋಸುಗ ಮಜ್ಜಿಗೆ ಬೇಕಾದುದರಿಂದ ಸುಧಾಕರನ ಮನೆಗೆ ಬಂದಳು. ಆಗ ಜಾನಕಿಯಮ್ಮನಿಗೆ ಜೊಂಪು ಹತ್ತಿತ್ತು. ಸುಧಾಕರನು ತಾಯಿಯ ಕಾಲೊತ್ತುತ್ತಿದ್ದ.

"ಈಗ ಜ್ವರ ಹೇಗಿದೆ.?" ಎಂದು ಬಹುದಿನದ ಪರಿಚಯವಿರುವಂತೆ ಸುಧಾಕರನು ಕೇಳಿದ."

" ಆ ಮೇಲೆ ಒಮ್ಮೆ ಬಂದಿತ್ತು. ಆ ಬೇರು ತೆಯ್ದು ತೆಗೆದುಕೊಂಡೊಡನೆಯೇ ಬೆವರು ಬಂದು ಬಿಟ್ಟು ಹೋಯಿತು."

ಸುಧಾಕರನಿಗೆ ಆ ಬೇರಿನ ನೆನಪೇ ಇದ್ದಿರಲಿಲ್ಲ. ಆತನೇ ಒಮ್ಮೆ ಬೇರನ್ನು ತೆಯ್ದು ಕೊಟ್ಟಿದ್ದೇನೋ ನಿಜ. ಆದರೆ ಎಲ್ಲಿಯೋ ತೆಗೆದಿಟ್ಟಿದ್ದ. ಸುಧೆಯ ಸೂಕ್ಷ್ಮದೃಷ್ಟಿಯನ್ನು ಕಂಡು ಕೌತುಕವೆನಿಸಿತು. ಜಗತ್ತಿನ ದೃಷ್ಟಿಯಿಂದ ಇವಳಿಗೆ ಯಾವ ಬೆಲೆಯೂ ಇಲ್ಲವಲ್ಲ! ಎಂಬ ವಿಚಾರ ಬಂದು ವಿಷಾದವಾಯಿತು. ಎಂತಹ ಕುಶಲ ಅಕ್ಕಸಾಲಿಗನಿದ್ದರೂ ಚಿನ್ನದ ಹೊರತು ಆತನ ಕಲೆ ಮಣ್ಣಿಗೆ ಸಮಾನವಲ್ಲವೇ?

" ಅಮ್ಮನಿಗೆ ಏನಾಗುತ್ತಿದೆ? ನಾನಾದರೂ ತುಸು ಕಾಲೊತ್ತುತ್ತೇನೆ."

ಸುಧೆಯ ಈ ಆತ್ಮೀಯತೆಯಿಂದ ಸುಧಾಕರನ ಹೃದಯ ಕರಗಿತು. ತಾನು ಅಲ್ಲಿಯೇ ಕುಳಿತರೆ ಸುಧೆಯು ಸುಮ್ಮನೇ ನಿಂತುಕೊಳ್ಳಬೇಕಾಗುತ್ತಿದೆಯೆಂದು ಕಂಡದ್ದರಿಂದ ಸುಧಾಕರನು ಅಮ್ಮನ ಹಾಸಿಗೆಯ ಮೇಲಿಂದ ಎದ್ದನು. ಸತಾರಿನ ತಂತಿಗೆ ಸಾಮಾನ್ಯ ಹಾಗೂ ಕುಶಲ ವಾದಕನ ಸ್ಪರ್ಶದಲ್ಲಿಯ ವ್ಯತ್ಯಾಸವು ಕೂಡಲೇ ಗೊತ್ತಾಗುವಂತೆ ತನ್ನ ಕಾಲಮೇಲೆ ಆಡುವ ಕೈಗಳಲ್ಲಿಯ ವ್ಯತ್ಯಾಸವು ಗೊತ್ತಾದುದರಿಂದ ಜಾನಕಮ್ಮ ನಿದ್ದೆ ತಿಳಿದೆದ್ದರು. ಆವರಿಗೆ ನೆರಮನೆಗೆ ಹೊಸದಾಗಿ ಬಂದ ಹುಡುಗಿಯೆಂದು ಗೊತ್ತಾಗಲು ಹೆಚ್ಚು ಹೊತ್ತು ಹಿಡಿಯಲಿಲ್ಲ.

" ಮಗೂ, ಆಯುಷ್ಮಂತಳಾಗು. "

"ಆಯುಷ್ಯವಂತಳಾಗಿ ಪಡಬೇಕಾದ ಭಾಗ್ಯವಾದರೂ ಏನಿದೆ? ನನ್ನಪಾಲು ಅತ್ತಿಗೆಯ ಮಕ್ಕಳಿಗಾದರೂ ದೇವರು ಆಯುಷ್ಯ ಕೊಟ್ಟರೆ ಒಳಿತಾಗುತ್ತಿತ್ತು."

"ಉದಾಸೀನಳಾಗಬಾರದು, ಮಗು. ಜಗತ್ತಿನಲ್ಲಿ ಯಾರಿಗಾದರೂ ದುಃಖ ತಪ್ಪಿದೆಯೇ ? ರಾಮನೇ ವನವಾಸ ಅನುಭವಿಸಬೇಕಾಗಲಿಲ್ಲ ವೇ ? ನಾನಾದರೂ ಕಡಿಮೆ ದುಃಖಪಟ್ಟಿರುವೆನೇ ? ಬೇಕಾದರೆ ಸುಧಾಕರನಿಗೇ ಕೇಳು." ಎಂದು ಜಾನಕಿಯಮ್ಮ ಸುಧೆಯನ್ನು ಸಂತೈ ಸಿದರು. ಸುಧೆಯು ತಂದ ಪಾತ್ರೆಯನ್ನು ತೆಗೆದುಕೊಂಡು ಮಜ್ಜಿಗೆ ತರಲು ಒಳಗೆ ಹೋದಳು.

"ಓದಲಿಕ್ಕೇನಾದರೂ ಪುಸ್ತಕವಿದೆಯೇ?" ಎಂದು ದೃಷ್ಟಿಯನ್ನು ಇನ್ನೊಂದೆಡೆ ಮಾಡಿ ಸೀರೆಯಂಚಿನಿಂದ ಕೈಬೆರಳನ್ನು ಸುತ್ತುತ್ತ ಸುಧೆ ಯು ಕೇಳಿದಳು.

"ಬೇಕಾದಷ್ಟಿದೆ. ಆ ಕಪಾಟು ತುಂಬಾ ಪುಸ್ತಕವಿದೆ."

ಸುಧೆಯು ಒಂದು ಕೈಯಲ್ಲಿ ಮಜ್ಜಿಗೆಯನ್ನು, ಸೆರಗಿನ ಮರೆಯಲ್ಲಿ ಪುಸ್ತಕವನ್ನೂ ಹಿಡಿದುಕೊಂಡು ಹೊರಟಳು. ಜಾನಕಮ್ಮನಿಗೂ ಅವಳ ಸ್ಥಿತಿಯನ್ನು ಕಂಡು ಕನಿಕರವೆನಿಸಿತು. 'ಹಿಂದಿನ ಜನ್ಮದಲ್ಲಿ ಏನು ಪಾಪ ಮಾಡಿದ್ದಳೊ, ಏನೋ, ಇಲ್ಲವಾದರೆ ರಾಣಿಯಾಗಿ ಮೆರೆಯಬಹು ದಿತ್ತು.'

'ಆದರೆ ಈಗ ಅಪ್ಪೇಷ್ಟರ ದಾಸಿಯಾಗಿ ಬಿಟ್ಟಿದ್ದಾಳೆ.'

ಜಾನಕಿಯಮ್ಮನಿಗೆ ಸುಧಾಕರನು ಹೇಳಿದ ಸಾವಂತವಾಡಿಯ ಚಿತ್ರ ಕಣ್ಣೆದುರು ಕಟ್ಟಿತು. "ದಾರಿಯ ಮೇಲೆ ಬಿದ್ದ ಅಕ್ಕಿಕಾಳನ್ನು ನಾವು ಹೆಕ್ಕಿಕೊಳ್ಳುತ್ತೇವೆ. ಅನ್ನ ಕಾಲಿನಿಂದ ತುಳಿಯುವುದು ಒಳಿತಲ್ಲ ವೆಂದು ಅನಿಸುತ್ತಿದೆ. ಆದರೆ ಇಂತಹ ಚಿನ್ನದಂಥಾ ಜೀವವನ್ನು ತುಳಿ ದು ಬಿಸುಡುವದೆಂದರೆ ಅದೆಂತಹ ಘೋರ ಪಾಪ."ಎಂದು ಯೋಚಿಸ ಹತ್ತಿದರು.

* * * *

ಸುಧೆಯ ಅತ್ತಿಗೆಯವರು ಒಳ್ಳೇ ಆದರ್ಶಭೂತರಿದ್ದರು. ಶಿಕ್ಷಣ ಪಿದ್ದುದು ಅಷ್ಟಕ್ಕಷ್ಟೆ! ಆದರೆ ಜಂಬ ಆಡಂಬರಗಳಿಗೇನು ಕೊರತೆ ಯಿದ್ದಿಲ್ಲ. ಆಕೆಯ ಬಾಲ್ಯ ಕಳೆದುದು ಖಾನಾಪುರದಲ್ಲಿ. ವಿವಿಧ ಕೇಶ ರಚನೆ,— ಒಂದು ಪತ್ತಲ ಬಿಚ್ಚಿ ಇನ್ನೊಂದು ಪತ್ತಲ ಉಡುವಿಕೆ ಇವುಗಳಲ್ಲಿಯೇ ಆಕೆ ವೇಳೆ ಕಳೆಯುತ್ತಿದ್ದಳು. ಮದುವೆಯಾದ ಕೆಲ ದಿನಗಳಲ್ಲಿಯೇ ಅತ್ತೆ ಮಾವಂದಿರು ತೀರಿಕೊಂಡದ್ದರಿಂದ ಸರ್ವಾಧಿ ಕಾರವೂ ಅವಳ ಕೈಸೇರಿತು. ಹೆಂಡತಿಯ ರೂಪ ನೋಡಿಯೋ, ಮಾವನಿಗೆ ಒಬ್ಬಳೇ ಮಗಳಾದುದರಿಂದ ಮಾವನ ಆಸ್ತಿಯೆಲ್ಲ ತನ್ನ ಪಾಲಾದೀತೆಂಬ ಆಸೆಯಿಂದಲೋ ದಾದಾಸಾಹೇಬರು ಹೆಂಡತಿಯ ನ್ನೆಂದಿಗೂ ನೋಯಿಸುತ್ತಿರಲಿಲ್ಲ. ಮೊದಮೊದಲು ಅತ್ತಿಗೆ ನೆಗಣ್ಣಿಯ ರಲ್ಲಿ ಕೂಡಿಬರುತ್ತಿತ್ತು ಆದರೆ ವರ್ಷಕ್ಕೊಂದು ಗರ್ಭಪಾತವಾಗಹತ್ತಿ ದ್ದರಿಂದ — ಮನೆತನದ ತಾಪತ್ರಯವೆಂದು ಯಾರೋ ಕಿವಿ ಊದಿ ದುದರಿಂದ ಅವರಲ್ಲಿ ವೈಮನಸ್ಸು ಬೆಳೆಯುತ್ತಲೇ ಇತ್ತು. ಈಗ ಇನ್ನಾ ರೂ ಸಿಗುವ ಸಂದರ್ಭವಿಲ್ಲದ್ದರಿಂದ ಸುಧೆಯನ್ನೇ ಕರೆದುಕೊಂಡು ಬಂದಿದ್ದಳು.

ಆಕೆ ದೇವರ ಪ್ರದಕ್ಷಿಣೆಯಲ್ಲಿ - ಪುರಾಣಶ್ರವಣದಲ್ಲಿ – ಬಡ ಹೆಂಗುಸರ ಮುಂದೆ ಹೆಡ್ ಮಾಸ್ತರನ ಹೆಂಡತಿಯೆಂಬ ಬಿಂಕದಿಂದ ತನ್ನ ಚಿನ್ನಾಭರಣಗಳನ್ನು ತೋರಿಸುವುದರಲ್ಲಿ ಕಾಲಕಳೆಯುತ್ತಿದ್ದಳು. ಸುಧೆಯು ಮನೆಗೆಲಸ ಮುಗಿಸಿ, ಕೂಡಿದಾಗ ಜಾನಕಿಯಮ್ಮನಿಗೆ ನೆರ ವಾಗುತ್ತಿದ್ದಳು. ಅತ್ತಿಗೆಯಿಂದ ಬೊಯ್ಯಿಸಿಕೊಳ್ಳದ ದಿನವೊಂದೂ ಇರುತ್ತಿ ದ್ದಿಲ್ಲವಾದರೂ ಜಾನಕಿಯಮ್ಮನ ವಾತ್ಸಲ್ಯ, ಸುಧಾಕರನ ಮಮತೆಯ ಮೂಲಕ ಅವೆಲ್ಲವನ್ನೂ ಮರೆಯುತ್ತಿದ್ದಳು. ಎದುರಿಗೆ ಅಮೃತತುಲ್ಯಪ್ರ ವಾಹ ಕಂಡಿರಲು, ಕಾದ ಉಸುಕನ್ನು ತುಳಿಯುವವರಂತೆ ಅವಳ ಸ್ಥಿತಿ ಯಾಗಿತ್ತು. ಅಷ್ಟೇಅಲ್ಲ; ಮಳೆಯಿಂದ ತೊಯ್ದ ಗಿಡದೆಲೆಗಳು ಸೂರ್ಯ ಕಿರಣದಿಂದ ಇನ್ನಷ್ಟು ಚಕಚಕಿಸುವಂತೆ ಅತ್ತಿಗೆಯ ಬಯ್ಗಳಿಂದ ದುಃಖದಗ್ಧವಾದ ಅವಳ ಹೃದಯಕ್ಕೆ ಸುಧಾಕರನ ಮನೆಯಲ್ಲಿ ಆನಂದ

ದ ಕೋಮಲ ಪಲ್ಲವಿಯು ಚಿಗುರಹತ್ತಿತು.

ಅಂದು ಪಾಡ್ಯ. ಅತ್ತಿಗೆ ಕೀರ್ತನೆಗೆಂದು ಶಾಸ್ತ್ರಿಗಳ ಜೊತೆಗೆ ದೇವಸ್ಥಾನಕ್ಕೆ ಹೋಗಿದ್ದಳು. ಅತ್ತಿಗೆ ಬರುವುದರೊಳಗಾಗಿ ಮಲಗು ವದು ಸರಿಯಲ್ಲವೆಂದು ಸುಧಾಕರನಿಂದ ತಂದ ಪುಸ್ತಕವನ್ನು ಓದುವು ದಕ್ಕೆಂದು ತೆರೆದಳು. ಆದರೆ ಒಮ್ಮೊಮ್ಮೆ ಜಗತ್ತಿನಲ್ಲಿಯ ಸರ್ವೋತ್ಕೃಷ್ಟ ಗ್ರಂಥಗಳಿಗಿಂತ ತನ್ನ ಜೀವನ ಗ್ರಂಥವನ್ನು ಮಗುಚುತ್ತ ಕೂಡ್ರುವುದೇ ಅಧಿಕಸುಖದಾಯಕವೆನಿಸುತ್ತಿದೆ. ಅವಳ ಸ್ಥಿತಿಯೂ ಈಗ ಹಾಗೆಯೇ ಆಯಿತು. ಗ್ರೀಷ್ಮದ ಭಯದಿಂದ ಪೃಥ್ವಿಯ ಉದರದಲ್ಲಡಗಿರುವ ಹಸಿ ಹುಲ್ಲು, ವರ್ಷಾಕಾಲದ ವಾತ್ಸಲ್ಯಪೂರ್ಣ ಸ್ಪರ್ಶದಿಂದ ಹೊರಬಂದು ನರ್ತಿಸುತ್ತಿರುವಂತೆ, ಅವಳ ಹೃದಯದಲ್ಲಿ ಸುಪ್ತಭಾವನೆಗಳೆಲ್ಲ ಕಳೆದ ಹದಿನೈದು ದಿನಗಳಲ್ಲಿ ಜಾಗ್ರತವಾಗಿ ಹಾಡುವುದಕ್ಕೆ ಹತ್ತಿದ್ದವು. ಆಕೆ ಕಳೆದ ಹದಿನೈದು ದಿನಗಳಲ್ಲಿಯ ಈ ಬಗೆಯ ಸುಖಸ್ಮೃತಿ ಯ ಮಾಲೆಯನ್ನು ತನ್ನ ಹೃದಯದದಾರದಲ್ಲಿ ಪೋಣಿಸುತ್ತಿದ್ದಳು. ಸುಧಾಕರನ ಉದಾರತೆ, ಜಾನಕಮ್ಮನವರ ವಾತ್ಸಲ್ಯ ನೆನಿಸಿ ಆಕೆಯ ಹೃದಯ ತುಂಬಿ ಬಂದಿತು. ಯಾರದೋ ಕಾಲು ಸಪ್ಪಳ ಕೇಳಿಸಿದ್ದ ರಿಂದ ಮೇಲೆ ನೋಡಿದಳು. ತಾನು ಒಬ್ಬೊಂಟಿಗಳಾದುದರಿಂದ ಜಾನ ಕಿಯಮ್ಮ ಇಲ್ಲವೆ ಸುಧಾಕರ ಬಂದಿರಬಹುದೆಂದು ಭಾವಿಸಿದ್ದಳು. ಆದರೆ ಬಂದವರು ಶಾಸ್ತ್ರಿಗಳು.

‘ ಶಾಸ್ತ್ರಿಗಳೇ, ಅತ್ತಿಗೆಯವರೆಲ್ಲಿ? ’

‘ ಕೀರ್ತನೆ ಕೇಳುವುದಕ್ಕೆ ಕುಳಿತಿದ್ದಾರೆ ’

ಆಕಾಶವು ಕಪ್ಪುಗಟ್ಟಲು ಮಳೆಯಭಯ ಹುಟ್ಟುವಂತೆ ಶಾಸ್ತ್ರಿಗಳ ಮಾತಿನಿಂದ ಸುಧೆಯು ಭಯಗ್ರಸ್ತಳಾದಳು.

ಶಾಸ್ತ್ರಿಗಳೂ ಇನ್ನೂ ಎರಡು ಹೆಜ್ಜೆ ಮುಂದಿಟ್ಟು ‘ನೋಡಿ, ಸುಧಾ, ಮೊನ್ನೆ ಕೆರೆಯ ಹತ್ತಿರ ನಿಮ್ಮ ಅಪಮಾನವಾದಂದಿನಿಂದ ನನ್ನ ಮೈ

ಅತಿಶಯ ಉರಿಯುತ್ತಿದೆ ನೋಡಿ. ಆ ಮುಡಿ ಹೆಂಗುಸಿನ ಗುಟ್ಟು ಅಲ್ಲಿಯೇ ರಟ್ಟು ಮಾಡುತ್ತಿದ್ದೆ. ನಿಮ್ಮ ಮೈ ತಗುಲಿದ ಮಾತ್ರಕ್ಕೆ "ಗಂಡ ಸತ್ತರೂ ಬೈತಲ ತೆಗೆದುಕೊಂಡು ಮೆರೆಯುತ್ತೀಯೇ? ಕೂದಲ ತೆಗೆದುಕೊಂಡು ಕೆಂಪುಸೀರೆ ಏಕೆ ಉಟ್ಟುಕೊಳ್ಳಬಾರದು ? ಈ ಮುಂಡೇರಿಗೆ ಗಂಡನಂತೂ ಇಲ್ಲೇ ಇಲ್ಲ; ಧರ್ಮವಾದರೂ ಇರಬಾರದೇ? " ಎಂದವಳ ಯೋಗ್ಯತೆ ನನಗೆ ಪೂರಾ ಗೊತ್ತಿತ್ತು. ಆದರೆ ಪಾಪ! ಹೋಗಲಿ, ಅಂತ ಬಿಟ್ಟೆ. ಈವಾಗ ನಾನು ಇಲ್ಲಿಗೆ ಬಂದದ್ದಾದರೂ ಏಕೆ ಗೊತ್ತೇ? ನೀವು ಪಾಪ, ಒಬ್ಬರೇ ಇರುತ್ತೀರಿ. ಸಂಗಡ ಯಾರಾದರೂ ಇದ್ದರೆ ಒಳಿತು ಅಂತ ಬಂದೆ. ನಿಮ್ಮಂತಹ ಹರೆಯದವರಿಗೆ ಜತೆ ಬೇಕೇ ಬೇಕು. ಇಲ್ಲವಾದರೆ ಸುಧಾಕರನಂತಹ ಘಟಿಂಗರು............

"ಸುಮ್ಮನೇ ಅವರ ನಿಂದೆಯೇಕೆ ಮಾಡುತ್ತೀರಿ ?"

"ಓಹೋ, ಇಷ್ಟರಲ್ಲೇ ಅವನ ಬಗ್ಗೆ ಅಭಿಮಾನವೆನಿಸಹತ್ತಿತೇ ನಿಮಗೆ? ಇನ್ನು ಸ್ವರ್ಗ ಮುಟ್ಟುವುದಕ್ಕೆ ಒಂದೆರಡೇ ಬೆರಳುಳಿಯಿತು. ಆದರೆ ಇಲ್ನೋಡಿ............

"ನನಗೇನೂ ನೋಡುವ ಇಚ್ಛೆ ಇಲ್ಲ. ಮೊದಲು ನೀವು ಇಲ್ಲಿಂದ ಹೊರಡಿರಿ..........."

"ಸೇರದಿದ್ದಾಗ ಅನ್ನದಲ್ಲಿ ಕಲ್ಲು ಬಂದಿತಂತೆ ಆದರೆ ಈ ಅನ್ನದ ರುಚಿನೋಡಿದಹೊರತು ನೀವು ಬಿಡುಗಡೆಹೊಂದಲಾರಿರಿ."

ಶಾಸ್ತ್ರಿಗಳು ಮುಂದೆ ಸರಿಯುತ್ತಿರುವರೆಂದು ಗೊತ್ತಾಗಲು ಸುಧೆಯು ಮಿಂಚಿನ ಚಪಲತೆಯಿಂದ ಜಿಳಿರಿ ಹುಲಿಯನ್ನು ಕಂಡು ಕಾಲಿಟ್ಟು ಹಾರುವ ಹರಿಣದಂತೆ ಸುಧಾಕರನ ಮನೆಯನ್ನು ಮುಟ್ಟಿದಳು. ಆಕೆಯ ಅಂಜಿದ ಮುದ್ರೆ ಹಾಗೂ ಉಬ್ಬಸತೆಗೆಯುತ್ತಿರುವುದನ್ನು ಕಂಡು ಸುಧಾಕರನು "ಸರ್ಪ-ಗಿರ್ಪ ಬಂದಿದೆಯೇ?" ಎಂದು ಚಕಿತನಾಗಿ ಕೇಳಿದನು.

" ಮಾನವ ಸರ್ಪ! " ಎಂದವಳೇ ಜಾನಕಮ್ಮನವರನ್ನು ತಬ್ಬಿಕೊಂಡಳು. ಅವಳ ಹೃದಯವು 'ಧಡ ಧಡ' ಎಂದು ಹೊಡೆದುಕೊಳ್ಳುತ್ತಿರುವದನ್ನೂ, ದೇಹವೆಲ್ಲ ಬೆವರಿನಿಂದ ತೋಯ್ದಿರುವದನ್ನೂ ಕಂಡು ಜಾನಕಿಯಮ್ಮ ಗಾಬರಿಯಾದಳು.

"ಏನಾಯಿತು, ಮಗೂ?"

ಸುಧೆಗೆ ಏನುತ್ತರ ಕೊಡಬೇಕೆಂಬುದೇ ತಿಳಿಯದಾಯಿತ್ತು. ದಾರಿ ತಪ್ಪಿದ ಚಿಕ್ಕ ಮಗುವಿನಂತೆ ಅವಳು ಬಿಕ್ಕಿ ಬಿಕ್ಕಿ ಅಳಹತ್ತಿದಳು.

ಹೆಣ್ಣಿನ ಕಷ್ಟ ಹೆಣ್ಣಿಗೇ ಹೆಚ್ಚಾಗಿ ತಿಳಿಯುತ್ತಿದೆಯೆಂದು ಸುಧಾಕರನು ಹೊರಗೆ ಹೋದ. ಅವಳಿಗೆ ಭೂತ ಪ್ರೇತಗಳ ಬಾಧೆಯಾಗಿರಬಹುದೇ?' ಎಂಬ ಕಲ್ಪನೆಯೂ ಬಂದಿತು. ಆದರೆ ಸುಧೆಯು ಹೇಳಿದ "ಮಾನವ ಸರ್ಪ" ಎಂಬುದರ ನೆನಪಾಯಿತು. ಯಾವನಾದರೊಬ್ಬ ಕಾಮುಕನು ಅವಳ ಕೈ ಹಿಡಿದಿರಲಿಕ್ಕಿಲ್ಲವಷ್ಟೇ ? ಎಂಬ ಸಂಶಯ ಬಲವಾಯಿತು. ವಿಧವೆಯ ಜೀವನವು ಎಷ್ಟರಮಟ್ಟಿಗೆ ಕಷ್ಟಮಯವಿರುತ್ತದೆಂಬ ಕಲ್ಪನೆಯು ಸಹ ತನಗಿಲ್ಲದೇ ಹೋಯಿತಲ್ಲ ಎಂದು ಮರುಗಿದ. "ಅವಳ ಜೀವನವೆಂದರೆ ಜಾಗ್ರತಜ್ವಾಲಾಮುಖಿಯ ಮೇಲೆ ಅಂತರಾಳದಲ್ಲಿ ತೂಗಹಾಕಿದ ವ್ಯಕ್ತಿಯ ಬದುಕಿನಂತೆ. ಲಂಪಟಪುರುಷರಿಂದ ತುಂಬಿದ ಜಗತ್ತಿನಲ್ಲಿ ಅವಳು ನಿರ್ಮಲವೃತ್ತಿಯಿಂದಿರಬೇಕು. ಕಾಲಿಗೆ ಹಸಿ ನೀರನ್ನೂ ತಗಲಗೊಡದೆ ನದಿದಾಟಬೇಕು!"

ಆ ದಿನ ರಾತ್ರಿ ಸುಧೆಯು ಜಾನಕಿಯಮ್ಮನ ಬಳಿಯಲ್ಲೇ ಮಲಗಿಕೊಂಡಳು. ಎಲೆಗಳ ಮರೆಯಲ್ಲಿ ಅಡಗಿರುವ ಮೊಗ್ಗೆಯಂತೆ ಜಲಲಹರಿಯ ಸೆರಗಿನ ಮರೆಯಲ್ಲಿ ಮಲಗಿರುವ ಕಮಲದಂತೆ, ಜಾನಕಿಯಮ್ಮನವರ ವಾತ್ಸಲ್ಯಪೂರ್ಣ ಬಾಹುಪಾಶದಲ್ಲಿ ಬಿದ್ದುಕೊಂಡದ್ದರಿಂದಲೇ ಅವಳಿಗೆ ನಿದ್ದೆಹತ್ತಿತು. ಆದರೆ ಸುಧಾಕರನಿಗೆ ಮಾತ್ರ ಆ ರಾತ್ರಿ ನಿದ್ದೆಹತ್ತಲಿಲ್ಲ. ಅಮ್ಮನಿಂದ ಅರ್ಧಮರ್ಧ ತಿಳಿದ ಸಂಗತಿಯಿಂದ ಆತ ಕೋಪಸಂತಪ್ತನಾಗಿದ್ದ. ವಿಧವೆಯ ಪುನರ್ವಿವಾಹವನ್ನು ವಿರೋಧಿಸುವ ಠಕ್ಕು ಸಮಾಜದ

ಮೇಲೆ ಆವನು ರೊಚ್ಚಿಗೆದ್ದು ಬಿಟ್ಟಿದ್ದ. ಜಯುಗಾಂವಕ್ಕೆ ಹೋದ ಮೇಲೆ ವಿಧವೆಯರ ಶಿಕ್ಷಣಕ್ಕೆ ಪ್ರಯತ್ನಿಸಬೇಕೆಂದು ನಿಶ್ಚಯಿಸಿದ.

ನಡೆದ ಸಂಗತಿ ತಿಳಿದ ಮೇಲೆ ಸುಧೆಯ ಅತ್ತಿಗೆಯು ಶಾಸ್ತ್ರಿಗಳಿಗೆ ಸಾಕು ಬೇಕು ಮಾಡಬಹುದೆಂದು ಸುಧಾಕರನಿಗೆ ಅನಿಸಿತ್ತು. ಆದರೆ ಮರುದಿನ ಆತನಿಗೆ ಬಂದ ಅನುಭವ ತೀರ ಬೇರೆಯಾಗಿತ್ತು. ಸುಧಾಕರನ ಮನೆಯಲ್ಲಿ ಹೋಗಿ ಮಲಗಿದ್ದಕ್ಕೆ ಸುಧೆಯನ್ನೇ ಒಳಿತಾಗಿ ಬಯ್ದಳು. "ಹೀಗೆ ಕದ್ದುಮುಚ್ಚಿ ಯಾಕೆ ಬೇಕು? ಸರಿ, ಒಮ್ಮೆಲ್ಲೇ ಪುನರ್ವಿವಾಹ ಮಾಡಿಕೊಂಡರಾಗದೇ? ನಮ್ಮ ಸುಧೆ ಬಹಳ ಒಳ್ಳೆಯವಳೆಂದು ಹೆಮ್ಮೆಯಿಂದ ಎಲ್ಲರೊಡನೆ ಹೇಳುತ್ತಿದ್ದೆ. ಆದರೆ ಮನುಷ್ಯರನ್ನು ವಂಚಿಸಿದ ಮಾತ್ರಕ್ಕೆ ದೇವರನ್ನು ವಂಚಿಸುವದು ಸಾಧ್ಯವೇ? ಅವನೇ ಒಳ್ಳೆಯದಾಗಿ ಬುದ್ಧಿ ಕಲಿಸಿದ. ಶಾಸ್ತ್ರಿಗಳು ನಮ್ಮವರಾದ್ದರಿಂದ ಒಳಿತಾಯಿತು. ಇಲ್ಲವಾದರೆ ಈ ಸುದ್ದಿ ಊರೆಲ್ಲ ಹರಡುತ್ತಿತ್ತು. ಇನ್ನು ಮುಂದೆ ಅವರ ಮನೆಯಲ್ಲಿ ಕಾಲಿಟ್ಟರೆ ಜೋಕೆ! ನಾನು ಸಕೇಶಿಯ ಕೈ ಅಡಿಗೆ ಉಣ್ಣುತ್ತೇನೆಂತ ನನ್ನ ಮುಂದೆ ಇವೆಲ್ಲ ನಡೆಯದು. ಯಾರಾದರೂ ನನಗೆ ಕೆಟ್ಟವಳೆಂದರೂ ಅಡ್ಡಿಯಿಲ್ಲ. ಮರ್ಯಾದೆ ಬಿಟ್ಟ ಕೂಡಲೇ ಕಾಲು ಜಾರುತ್ತದೆ. ಅಲ್ಲಾ, ಆ ಸುಧಾಕರನ ಮನೆಯಲ್ಲಿ ನಿಮ್ಮ ಗಂಟಾದರೂ ಏನು ಹೂಳಿಟ್ಟಿದ್ದಾರೆ? ಗಳಿಗೆಗೆ ಮೂರು ಸಲ ಹೋಗುತ್ತಿದ್ದರೂ ನಾನು ಲಕ್ಷ್ಯಕೊಡಲಿಲ್ಲ. ಆದರೆ ಮೆತ್ತಗೆ ಕಂಡೊಡನೆ ಮನುಷ್ಯ ಗುದ್ದಲಿಯಿಂದ ಅಗಿಯಲಿಕ್ಕೇ ಹತ್ತುತ್ತಾನೆ."

ಅತ್ತಿಗೆಯ ಆರೋಪವನ್ನು ಕೇಳಿ ಸುಧೆಯು ನಿಂತಲ್ಲೇ ನಿಂತುಬಿಟ್ಟಳು. ರಾತ್ರಿ ಸುಧಾಕರನ ಮನೆಯಲ್ಲಿ ತನ್ನನ್ನು ವಿಚಾರಿಸುವದನ್ನು ಬಿಟ್ಟು ಶಾಸ್ತ್ರಿಗಳ ಸುಳ್ಳು ಸುದ್ದಿಯ ಮೇಲೆ ವಿಶ್ವಾಸವಿಟ್ಟು ಅತ್ತಿಗೆಯವರು ತನ್ನ ಮೇಲೆ ಮಿಥ್ಯಾರೋಪ ಹೊರಿಸುತ್ತಿದ್ದದ್ದನ್ನು ಕಂಡು ಅವಳಿಗೆ ಮನಸ್ಸಿನಲ್ಲಿಯೇ ಸಿಟ್ಟು ಬಂದಿತು. ಆದರೆ ಸಮುದ್ರದ ಉನ್ನತ ತೆರೆಯು ತನ್ನಿಂದ ತಾನೇ ಇಳಿದು ಹೋಗುವಂತೆ ಅತ್ತಿಗೆಯ ಸಿಟ್ಟು ಇಳಿಯು

ಬಹುದೆಂದು ನೆನೆಸಿ ಆವಳು ಸುಮ್ಮನಾದಳು. ಇರುಳುಗುರುಡನಿಗೆ ಬೆಳಗಾದ ಹೊರತು ಕಾಣಿಸದಂತೆ, ಕೋಪದಿಂದ ಅಂಧರಾದವರಿಗೆ ಯುಕ್ತಿವಾದ ಹೇಳಲು ಸಿಟ್ಟು ಇಳಿಯಬೇಕಷ್ಟೇ! "

ಅತ್ತಿಗೆ ಹುಕುಂ ಮಾಡಿದ್ದರಿಂದ ಸುಧೆಗೆ ಸುಧಾಕರನ ಮನೆ ಬಂದಾಯಿತು. ಮೊದಲಾದರೂ ಸುಧಾಕರನ ಮನೆಯಲ್ಲಿ ಆಕೆ ವೇಳೆ ಕಳೆಯುತ್ತಿದ್ದುದು ಕೇವಲ ನಾಲ್ಕಾರು ಗಳಿಗೆ. ಆದರೆ ಸ್ವಲ್ಪಸಮಯವಾದರೂ ಪೂರ್ವ, ಪಶ್ಚಿಮ ದಿಕ್ಕುಗಳ ಪ್ರೇಮಪೂರ್ಣ ಸಹವಾಸವು ದೊರೆಯುವದರಿಂದಲೇ ಸೂರ್ಯನಿಗೆ ಆಕಾಶದಲ್ಲಿಯ ದೀರ್ಘಪ್ರವಾಸವು ಸಹ್ಯವಾಗುತ್ತಿದೆ. ಸುಧಾಕರನ ಮನೆಗೆ ಹೋದ ಕೂಡಲೇ ಸುಧೆಗೆ ಕಾದ ಉಸುಕಿನಿಂದ ಅನೇಕ ಮೈಲು ನಡೆದವನಿಗೆ ಶೀತಲ ಸರೋವರವು ಲಭಿಸಿದಂತೆ ಅನಿಸುತ್ತಿತ್ತು. ಅಲ್ಲಿ ಸುಧಾಕರ, ಮತ್ತು ಜಾನಕಿಯಮ್ಮನವರ ಸಂವಾದ ತುಷಾರ ಪುಟಿಯುತ್ತಿದೆ; ಮಾತೃಪ್ರೇಮ, ಪುತ್ರಪ್ರೇಮಗಳ ಕಮಲಗಳು ನಡುವೆಯೇ ತಲೆಯೆತ್ತಿ ನೋಡುತ್ತಿವೆ. ಸಹೃದಯತೆಯ ಮಂದ ಸಮೀರವು ಒಂದೇ ಸವನೆ ಸುಳಿಯುತ್ತಿದೆ. ಇಂತಹ ಸ್ಥಳದಲ್ಲಿ ಸುಧೆಗೆ ಸ್ವರ್ಗತುಲ್ಯ ಆನಂದವಾಗುತ್ತಿತ್ತು. ಜಾನಕಿಯಮ್ಮನ ಮುಂದೆ ಸುಧಾಕರನಿಂದ ಹೊಸ ಪಾಠಕಲಿಯುವದು— ಆತ 'ತಪ್ಪಿತು' ಎಂದಾಗ ಬಾಡಿದ ಮುಖದಿಂದ ಅವನೆಡೆಗೆ ನೋಡುವುದು— 'ನಿಮ್ಮ ಬುದ್ಧಿ ಚುರುಕಿದೆ' ಎಂದಾಗ ಮೈಯಲ್ಲಿ ಹಿಡಿಮಾಂಸ ಹೆಚ್ಚಾದಂತೆ ಭಾವಿಸುವುದು— ಇವೆಲ್ಲ ಈಗೀಗ ಸುಧೆಯ ಜೀವನಕ್ರಮದಲ್ಲಿ ಆವಶ್ಯಕಸಂಗತಿಯಾಗಿತ್ತು. ಆದರೆ ಈಗ ಅತ್ತಿಗೆಯ ಕಟ್ಟಪ್ಪಣೆಯಿಂದ ಈ ಹೊಸ ಅಧ್ಯಾಯ ಮುಚ್ಚಲ್ಪಟ್ಟಿತ್ತು.

ತುಳಸಿಗೆ ನೀರೆರೆಯುವ ನೆವದಿಂದ ಸುಧಾಕರನ ಮನೆಯ ಕಡೆಗೆ ತುಂಬಿಬಂದ ಕಣ್ಣಿನಿಂದ ನೋಡುತ್ತಿದ್ದಳು. ಹೊಸ ಪುಸ್ತಕ ಓದುವಿಕೆ, ಸುಧಾಕರ ದರ್ಶನ, ಜಾನಕಿಯಮ್ಮನ ವಾತ್ಸಲ್ಯ ಇವೆಲ್ಲವುಗಳಿಗೆ ಆಕೆ ಎರವಾಗಿದ್ದಳು. ನನ್ನ ಯಾವ ದೋಷವೂ ಇಲ್ಲದೆ ನನ್ನ ಮೇಲೆ ತಪ್ಪು ಹೊರಿಸಲು-ಅತ್ತಿಗೆಗೆ ಯಾವ ಅಧಿಕಾರ? ನನ್ನ ಜೀವದ ಒಡೆಯರು

ನಾನೋ ಅಥವಾ ಅತ್ತಿಗೆಯೋ ? " ಎಂಬ ಪ್ರಶ್ನೆಗಳು ಅವಳ ಮನಸ್ಸಿನಲ್ಲಿ ಉದ್ಭವಿಸದೆ ಹೋಗಲಿಲ್ಲ. ಆದರೆ ಅತ್ತಿಗೆಯ ವಿರುದ್ಧ ನಡೆದರೆ ತನ್ನ ರಕ್ಷಕರಾರು ಎಂಬ ವಿಚಾರವೂ ಬಂದಿತು. ಮೊಗ್ಗೆಯಲ್ಲಿಯ ಸುಗಂಧವನ್ನು ವಾಯುವು ಅಪಹರಿಸುವದಾದರೂ ಅದರ ಭಾರವನ್ನು ಬಳ್ಳಿಯೇ ಹೊರಬೇಕಾಗುತ್ತದೆ. ಪರಕೀಯರಲ್ಲಿ ಮತ್ತು ಆಪ್ತೇಷ್ಟರಲ್ಲಿ ಇದೇ ವ್ಯತ್ಯಾಸವಿರುತ್ತದೆ. ಅತ್ತಿಗೆಯು ನನ್ನನ್ನು ಹೊರದಬ್ಬಿಬಿಟ್ಟರೆ ಸುಧಾಕರರು ತಮ್ಮ ಮನೆಯಲ್ಲಿ ಇಟ್ಟುಕೊಳ್ಳಬಹುದೇ ? ಛೀ, ಅದು ಶಕ್ಯವೇ ಇಲ್ಲ. ಜನರು ಅವರನ್ನು ಕೊಚ್ಚಿ ತಿನ್ನಬಹುದು. ನಾಳೆ ಸುಧಾಕರರ ಹೆಂಡತಿ ಬಂದಳೆಂದರೆ ನಾನೊಂದು ಭಾರವಾಗಬಹುದು. ಹಕ್ಕಿಗೆ ರೆಕ್ಕೆ, ಗಂಡನಿಗೆ ಹೆಂಡತಿ ಭಾರವೆನಿಸುವದಿಲ್ಲ. ಆದರೆ ನನ್ನಂತಹ ಹತಭಾಗ್ಯರೆಂದರೆ ಹಕ್ಕಿಯ ಕೊರಳಿಗೆ ಕಟ್ಟಿದ ಕಲ್ಲಿನಂತೆ. ಸಮುದ್ರದಲ್ಲಿ ಎದ್ದು ಒಡೆಯುವ ತೆರೆಗಳಂತೆ ಸುಧೆಯ ಮನಸ್ಸಿನಲ್ಲಿ ಹೀಗೆ ಎಷ್ಟೋ ವಿಚಾರಗಳು ಎದ್ದು ಅಳಿದು ಹೋದವು. ಪಂಜರದಲ್ಲಿಯ ಪಕ್ಷಿಯು ಅಖಂಡವಾಗಿ ರೆಕ್ಕೆ ಬಡಿದರೂ ಹಾರಿ ಗೂಡು ಮುಟ್ಟಬಲ್ಲುದೇ ?

ಸುಧೆಯು ಎರಡು ದಿನ ಬಾರದಿದ್ದುದನ್ನು ಕಂಡು ಜಾನಕಿಯಮ್ಮನವರು ಅದರ ಕಾರಣವನ್ನು ತಮ್ಮ ಮನಸ್ಸಿನಲ್ಲಿಯೇ ಮೆಲಕುಹಾಕಿದರು. ಶಾಸ್ತ್ರಿಗಳು ಸುಧಾಕರನನ್ನು ಕಂಡಾಗ "ಪ್ರೊಫೆಸರ ಸಾಹೇಬರೇ, ನೀವು ಪರೀಕ್ಷೆ ಪಾಸಾಗುವಾಗ ತಾಯಿ ಲಘುರುದ್ರದ ಹರಕೆ ಹೇಳಿಕೊಂಡಿದ್ದರು. ಬರೀ ಮೂರು ರೂಪಾಯಿಯ ಲಘುರುದ್ರದ ಹರಕೆ ಇನ್ನೂ ಮುಟ್ಟಿಸಬಾರದೇ ? " ಎಂದರು.

" ಹೂಂ, ಮೂರು ರೂಪಾಯಿಯ ವಿನಿಯೋಗ ಏನೇನಾಗುತ್ತಿದೆಯೆಂದು ಯೋಚಿಸುವದು ಬೇಡವೇ ? ಸೂಳೆಗೋಸ್ಕರವೋ ಅಥವಾ ವಿಧವೆಯನ್ನು ಪಂಢರಪುರಕ್ಕೆ ಕಳಿಸುವ ವ್ಯವಸ್ಥೆಗೋಸ್ಕರ............"

" ಛೆ, ಬಾಯಿಯಿದೆಯೆಂತ ಸುಮ್ಮನೆ ಹರಿಬಿಡಬೇಡಿ. ಕಳ್ಳನ ಬಾಯಿ ಯಾವಾಗಲೂ ದೊಡ್ಡದು. ಹೆಡ್‌ಮಾಸ್ತರರ ಹೆಂಡತಿಯವರು

ನಿಮ್ಮ ವಿಷಯವಾಗಿ ಏನೇನನ್ನೋ ಹೇಳುತ್ತಿದ್ದರು. ಇನ್ನೊಬ್ಬರ ಮನೆಯ ವಿಧವೆಯರು ಯಾವಾಗಲೂ ನಮ್ಮ ಮನೆಯಲ್ಲಿ ಬಂದು ಮಲಗುವದಿಲ್ಲ ನೋಡಿ. ”

ಕೋಪದಿಂದ ಕೆಂಪಗಾಗಿ ಸುಧಾಕರನು ಕೈಯೆತ್ತಿದನು. ಆದರೆ ಅವನ ವಿಕಾರ ಕುದುರೆಗಳ ಚಪಲತೆಯಷ್ಟೇ ವಿವೇಕರೂಪಿ ಸಾರಥಿಯು ದಕ್ಷನಿದ್ದ. ಅವನು ಶಾಸ್ತ್ರಿಗಳ ಕಡೆಗೆ ತಿರಸ್ಕಾರದಿಂದ ನೋಡುತ್ತ ಮನೆಗೆ ನಡೆದನು. ಚೀಲದಲ್ಲಿ ಮನುಷ್ಯನನ್ನು ತುಂಬಿ ಸಮುದ್ರದೊಳಗೆ ಬಿಸುಟುವಂತೆ ಸುಧೆಯನ್ನು ನಿರ್ಬಂಧದಲ್ಲಿಡುವುದಕ್ಕೆ ಅವಳ ಅತ್ತಿಗೆಗೆ ಯಾವ ಅಧಿಕಾರವಿದೆ? ಸುಧೆಯು ಯಾರದಾದರೂ ಹೆಂಡತಿಯಾಗಿದ್ದರೆ, ಇಲ್ಲವೆ ಸ್ವತಂತ್ರತೆಯಿಂದ ಹೊಟ್ಟೆತುಂಬಿಕೊಳ್ಳಲು ಬರುತ್ತಿದ್ದರೆ ಅವಳ ಮೇಲೆ ಕಲ್ಲಿನಂತೆ ಚಾಣಹೊಡೆದು ತಮ್ಮ ಮನಸ್ಸಿಗೆ ಬಂದ ಆಕಾರದಲ್ಲಿಳಿಸುವದಕ್ಕೆ ಜಗತ್ತಿನಲ್ಲಿ ಯಾರೂ ಧೈರ್ಯಪಡುತ್ತಿದ್ದಿಲ್ಲ.

ಆ ದಿನ ಸಂಜೆಯ ಸೊಬಗನ್ನು ಸಂದರ್ಶಿಸುವದಕ್ಕೋಸ್ಕರ ಸುಧಾಕರನು ತನ್ನ ಮನೆಯ ಹಿಂದುಗಡೆ ಬಂದು ನಿಂತಾಗ ಅವನ ಕಣ್ಣುಗಳು ಆಕಾಶದಲ್ಲಿಯ ಸಂಧ್ಯಾಶ್ರೀಯನ್ನು ನೋಡುವುದಕ್ಕಿಂತ ಸುಧೆಯ ಕಣ್ಣುಗಳನ್ನೇ ಹುಡುಕಹತ್ತಿದವು. ಅತ್ತಿಗೆಯು ದೇವಸ್ಥಾನಕ್ಕೆ ಹೋಗಿದ್ದುದರಿಂದ ಸುಧೆಯೂ ಅದೇ ಹೊತ್ತಿಗೆ ತುಳಸಿಯ ಹತ್ತಿರ ಬಂದು ಸುಧಾಕರನ ಮನೆಯ ಕಡೆಗೆ ನೋಡುತ್ತಿದ್ದಳು. ಅವಳನ್ನು ಕಂಡೊಡನೆಯೇ ಸುಧಾಕರನು ಒಳಗೆ ಹೋಗಿ ಒಂದು ಪುಸ್ತಕವನ್ನು ತೆಗೆದುಕೊಂಡು ಅವಳ ಮನೆಯ ಕಡೆಗೆ ನಡೆದನು. ಹಾಗೂ ಗಿಡದ ದಟ್ಟನೆರಳಿನಲ್ಲಿ ನಿಂತು ಸುಧಾಕರನು ಪುಸ್ತಕವನ್ನು ಮುಂದೆ ಮಾಡಿದನು. ಸುಧೆಯು ಮೆಲ್ಲನೆ ಮುಂದೆ ಬಂದು ಪುಸ್ತಕವನ್ನು ತೆಗೆದುಕೊಂಡು ದುಂಡುಮಲ್ಲಿಗೆ ಹೂವನ್ನು ಅವನ ಕೈಗಿತ್ತಳು. ಮಾತನಾಡುವುದು ಯೋಗ್ಯವಲ್ಲೆಂದು ಇಬ್ಬರೂ ತಮ್ಮ ತಮ್ಮ ಮನೆ ಸೇರಿದರು.

ಈ ರೀತಿ ಪ್ರತಿನಿತ್ಯ ನಡೆಯುತ್ತಿತ್ತು. ರಾತ್ರೆ ಪುರಾಣ ಪುಸ್ತಕ ಓದುವ ನೆವಮಾಡಿ ಸುಧೆಯು ದೀಪವನ್ನು ಒಂದು ಬದಿಗೊಯ್ದು ಕುಳಿ

ತುಕೊಳ್ಳುತ್ತಿದ್ದಳು. ಆ ಪುರಾಣ ಪುಸ್ತಕದಲ್ಲಿ ಸುಧಾಕರನು ಕೊಟ್ಟ ಪುಸ್ತಕವಿರುತ್ತಿತ್ತು. ಸುಧಾಕರನು ಅಮ್ಮನಿಗೆ ಯಾವುದಾದರೊಂದು ಪುಸ್ತಕವನ್ನು ಓದಿಹೇಳುವಾಗ ಅವನ ಎಡಗೈಯ್ಯಲ್ಲಿ ಮಲ್ಲಿಗೆ ಹೂ ನಗುತ್ತಿತ್ತು. ಮೊದಲ ನಿದ್ರೆಯ ನಂತರ ಎಚ್ಚರಾದ ಸುಧೆಗೆ ಆ ಪುಸ್ತಕದ ಸ್ಪರ್ಶವಾಗಲು ಅವಳು ಕಲ್ಪನಾ ತರಂಗಗಳ ಮೇಲೆ ಆರೂಢಳಾಗುತ್ತಿದ್ದಳು. ಇತ್ತ ಸುಧಾಕರನೂ ತಲೆದಿಂಬಿನ ಬಳಿಯಿಟ್ಟ ಹೂವಿನ ಮುಗ್ಧ ಮಧುರ ವಾಸನೆಯಿಂದ ವಿಚಾರ ಲಹರಿಯೊಡನೆ ತೇಲಿಹೋಗುತ್ತಿದ್ದ. ಹೀಗೆ ಸುಧೆಯ ಕಲ್ಪನಾತರಂಗ ಮತ್ತು ಸುಧಾಕರನ ವಿಚಾರಲಹರಿಗಳ ಸಂಗಮ ವಾತಾವರಣದೊಳಗೆ ಎಲ್ಲಿಯಾದರೂ ಆಗಬಹುದು. ಆದರೆ ಅದನ್ನು ನೋಡುವ ಭಾಗ್ಯ ತಾರೆಗಳ ಹೊರತು ಇನ್ನಾರಿಗೂ ಲಭಿಸುವದು ಸಾಧ್ಯವಿಲ್ಲ.

ಹಗಲು ರಾತ್ರಿಗಳ ಭೆಟ್ಟಿಗಿಂತಲೂ ನಿಶ್ಶಬ್ದವಾದ ಆ ಭೆಟ್ಟಿಯಿಂದ ಸುಧಾ ಮತ್ತು ಸುಧಾಕರರಿಬ್ಬರಿಗೂ ಆನಂದವಾಗಹತ್ತಿತು. ನಿಜವಾಗಿಯೂ ನಾಲಗೆಗಿಂತ ಕಣ್ಣುಗಳಲ್ಲಿಯೇ ಹೃದಯ ಹೆಚ್ಚಾಗಿ ಹಿಡಿಸುತ್ತಿರಬಹುದು. ಇಲ್ಲವಾದರೆ ಯುಗಯುಗಾಂತರಗಳಿಂದ ಚಂದ್ರ—ಸಾಗರಗಳು ತಮ್ಮ ತರಂಗಗಳ ಮುಖಾಂತರವಾಗಿ — ವಸಂತ ವನಶ್ರೀಯರು ಕೋಗಿಲೆಯ ಕಂಠದಿಂದ— ಆತ್ಮರಾಜ ತನುಲತೆಯರು ಆನಂದವಾಣಿಯಿಂದ- ಮಾತನಾಡುತ್ತಿದ್ದರೂ ಪ್ರಾಪ್ತವಾಗದಿರುವಂತಹ ಸಂತೋಷ ಇವರೀರ್ವರಿಗೆ ಲಭಿಸುತ್ತಿದ್ದಿಲ್ಲ. ಸುಧೆಗಂತೂ ಪುಸ್ತಕವನ್ನು ಕೊಂಡು ಹೂ ಕೊಡುವುದರಲ್ಲಿ ಬ್ರಹ್ಮಾನಂದವೆನಿಸುತ್ತಿತ್ತು. ಸುಧಾಕರನು ಕೊಟ್ಟ ಪುಸ್ತಕವು ಅವಳಿಗೆ ಮೋಡದಲೆಗಳಿಂದ ಶೃಂಗರಿಸಿದ ಸಂಧ್ಯಾಕಾಲಕ್ಕಿಂತಲೂ ಅಧಿಕ ಆಕರ್ಷಕವಾಗಿ ತೋರುತ್ತಿತ್ತು. ಅಲ್ಲದೆ ತಾನು ಕೊಡುವ ಹೂಗಳಲ್ಲಿ ಅವಳಿಗೆ ಎಲ್ಲ ತಾರೆಗಳು ಇಳಿದು ಬಂದಿವೆಯೆಂದು ಭಾಸವಾಗುತ್ತಿತ್ತು.

ಈ ಮೂಕವ್ರತವು ನಡೆಯುತ್ತಿರುವಾಗಲೇ ರಾಮನವಮಿಯ ಉತ್ಸವವು ಪ್ರಾರಂಭವಾದುದರಿಂದ ಸುಧಾಕರನ ವೇಳೆಯೆಲ್ಲ ಸ್ವಯಂ ಸೇವಕ ಮಂಡಳಿಯನ್ನು ವ್ಯವಸ್ಥಿತಗೊಳಿಸಿ ಜುಗಾರು ಬಂದು ಮಾಡು

ವುದರಲ್ಲಿಯೇ ಕಳೆಯಹತ್ತಿತು. ಸ್ವಯಂಸೇವಕರ ಕಣ್ಣು ತಪ್ಪಿಸಿ ಆಡು ವುದಕ್ಕೆ ಜುಗಾರಿಯವರೂ ಯತ್ನಮಾಡುತ್ತಿದ್ದರು.

ಹೀಗೆಯೇ ನಾಲ್ಕೈದು ದಿನಗಳು ಕಳೆದವು. ಒಂದು ರಾತ್ರಿ ತಾಯಿಗಾಗಿ ಈಶ್ವರಚಂದ್ರ ವಿದ್ಯಾಸಾಗರರ ಕಥೆಯೋದುತ್ತ ಕುಳಿತಾಗ, ದೇವಸ್ಥಾನದಿಂದ ದೂರದಲ್ಲಿರುವ ಬಿದ್ದ ಮನೆಯೊಂದರಲ್ಲಿ ಜುಗಾರಾಟ ನಡೆಯುತ್ತಿದ್ದ ಸುದ್ದಿ ಒಬ್ಬ ಸ್ವಯಂಸೇವಕನಿಂದ ತಿಳಿದು ಬಂತು. ಕೂಡಲೇ ಕೈಯಲ್ಲೊಂದು ಬಡಿಗೆಯನ್ನು ಹಿಡಿದುಕೊಂಡು ಹೊರಟನು. ದಾರಿಯಲ್ಲಿ ವೇಗವಾಗಿ ಹೋಗುತ್ತಿದ್ದಾಗ ಎಡವಿ ಗಾಯವಾಯಿತು. ಆದರೆ ಉತ್ಸಾಹದ ಗತಿಯು ವಾಯುವೇಗವನ್ನೂ ಮೀರಿರುತ್ತದೆ. ಜುಗಾರಿ ಮಂಡದ ಹತ್ತರ ಹೋಗಲು ಸ್ವಯಂಸೇವಕರನ್ನೆಲ್ಲ ಹಿಂದೆ ನಿಲ್ಲಿಸಿ ತಾನೊಬ್ಬನೇ ಮುಂದೆ ಹೋದ. ಆದರೆ ಅಷ್ಟರಲ್ಲಿ ಆಟದವರಲ್ಲಿ ಹೊಡದಾಟ ಆರಂಭವಾದುದರಿಂದ ಕೂಡಲೇ ಸಿಳ್ಳು ಹಾಕಿದನು. ಸಿಳ್ಳು ಕೇಳಿದೊಡನೆಯೇ ಜುಗಾರಿ ಆಡುವವರೆಲ್ಲ ಓಡಿಹೋದರು. ಅದರಲ್ಲಿ ಒಬ್ಬನು ಮಾತ್ರ ಇನ್ನೊಬ್ಬನನ್ನು ಕೆಡವಿ ಆತನ ಎದೆಯ ಮೇಲೆ ಕುಳಿತು ಚೂರಿ ಹಾಕುವವನಿದ್ದ. ಸುಧಾಕರನು ಬಿದ್ದವನನ್ನು ತಪ್ಪಿಸುವದಕ್ಕಾಗಿ ಮುಂದೋಡಲು ಹೆಂಡದ ನಾತ ಬರಹತ್ತಿತು. ಅಲ್ಲದೆ ಆ ಜುಗಾರಿಯವನು ಸುಧಾಕರನಿಗೇ ಚೂರಿ ಹಾಕಲು ಬಂದನು. ಕೈಗೆ ಗಾಯವಾದರೂ ಅಡ್ಡಿಯಿಲ್ಲವೆಂದು ನಿಶ್ಚಯಿಸಿ ಜುಗಾರಿಯವನ ಕೈಹಿಡಿಯುವಷ್ಟರಲ್ಲಿ ಯಾರೋ ಗಂಭೀರವಾಣಿಯಿಂದ " ಇಡು ಕೆಳಗೆ ಆ ಚೂರಿ! " ಎಂದರು.

ಜುಗಾರಿಯಾಡುವವನು ಮೇಲಕ್ಕೆ ನೋಡಿ ಒಮ್ಮೆಲೇ ಕೈಯೊಳಗಿನ ಚೂರಿಯನ್ನು ಕೆಳಕ್ಕೊಗೆದ. ಎದುರಿಗೆ ನಿಂತವರು ಇನ್ನಾರೂ ಇರದೆ ಸದಾನಂದ ಸ್ವಾಮಿಯವರಾಗಿದ್ದರು. ಕೆಳಗೆ ಬಿದ್ದ ಮನುಷ್ಯನು ಸಾಂಗಲಿಯ ಘಟ್ಟದ ಮೇಲೆ ಕಂಡ ಹೆಂಡಗುಡುಕನಾಗಿದ್ದ.

# ಪ್ರಕರಣ ೧೫.

ಸದಾನಂದ ಸ್ವಾಮಿಯವರು ಆ ಹೊತ್ತಿಗೆ ಅಲ್ಲಿ ಬಾರದೇ ಇದ್ದಿದ್ದರೆ ಜುಗಾರಿಯಾಡುವವನು ಸುಧಾಕರನ ಮೇಲೆ ಹಲ್ಲೆ ಮಾಡದೆ ಬಿಡುತ್ತಿರಲಿಲ್ಲ; ಲಕ್ಷ್ಮಿಯೊಡನೆ ಕಣ್ಣು-ಮುಚ್ಚಾಣಿಕೆಯಾಡುವ ಜುಗಾರಿಗಳಿಗೆ ಸ್ಮೃತಿಯೇ ಇರುವದಿಲ್ಲ. ಆದರೂ ಕಾವಿಬಟ್ಟೆಯ ಸದಾನಂದಸ್ವಾಮಿಯನ್ನು ಕಂಡು ಆ ಅಶಿಕ್ಷಿತ ಜುಗಾರಿಯವರಿಗೆ ಭೀತಿಯುಕ್ತ ಆದರವುಂಟಾಯಿತು. ಆಗ ಸದಾನಂದ ಸ್ವಾಮಿಯವರು ದಯಾದ್ರ್ರಹೃದಯರಾಗಿ ನಾಲ್ಕು ಹಿತೋಪದೇಶದ ಮಾತುಗಳನ್ನಾಡಿದರು. ಸಿಡಿಲಿನ ಮಿಂಚು ಒಂದು ಕ್ಷಣದ ಮಟ್ಟಿಗಾದರೂ ಇಡೀ ಆಕಾಶವನ್ನು ಬೆಳಗಿಸುವಂತೆ ಸ್ವಾಮಿಯವರ ಉಪದೇಶಾಮೃತದಿಂದ ಅವರಿಗೆ ತಮ್ಮ ದುಷ್ಕೃತ್ಯದ ಅರಿವಾಯಿತು. ಒಬ್ಬೊಬ್ಬರಾಗಿ ಸ್ವಾಮಿಯವರಿಗೆ ಅಡ್ಡಬಿದ್ದು ಹೋಗಹತ್ತಿದರು. ಕೊನೆಗೆ ಸೋತಮನುಷ್ಯನು ನಮಸ್ಕರಿಸಿ ಹೊರಡಲುದ್ಯುಕ್ತನಾದೊಡನೆ ಸ್ವಾಮಿಯವರು ಅವನ ಬೆನ್ನಮೇಲೆ ಕೈಯ್ಯಾಡಿಸಿ "ಬೇಟಾ, ನೀನು ಜಯಗಾಂವದಿಂದ ಬಂದಿರುವಿಯಾ? ನಿನ್ನ ಹೆಸರು............ಗಂಗಾಧರನಿರಬೇಕಲ್ಲವೇ?" ಎಂದು ಕೇಳಿದರು.

ಪೃಥ್ವಿಯು ಒಮ್ಮೆಲೇ ಇಬ್ಭಾಗವಾಗಿ ಅದರಿಂದ ಶೇಷನು ಹೊರಬಿದ್ದಿದ್ದರೂ ಗಂಗಾಧರನಿಗೆ ಆಶ್ಚರ್ಯವಾಗುತ್ತಿದ್ದಿಲ್ಲ. ಆದರೆ ತನ್ನ ಸಂಪೂರ್ಣಪರಿಚಯವನ್ನು ಹೇಳಿದ ಸ್ವಾಮಿಯವರ ಅಗಾಧ ಶಕ್ತಿಯ ಬಗ್ಗೆ ವಿಶ್ವಾಸಕುಳಿತುಬಿಟ್ಟದ್ದರಿಂದ, ಆತನು ಸ್ವಾಮಿಯವರ ಕಾಲಿಗೆ ಬಿದ್ದು ಬಿಕ್ಕಿ ಬಿಕ್ಕಿ ಅಳಹತ್ತಿದನು. ಇದನ್ನು ಕಂಡು ಸುಧಾಕರ, ಹಾಗೂ ಸ್ವಯಂಸೇವಕ ದಲದವರು ಆಶ್ಚರ್ಯಗೊಂಡರು. ಸ್ವಾಮಿಯವರು ಅವನನ್ನು ಎಬ್ಬಿಸಿ ಸಂತೈಸುತ್ತ "ಹತ್ತು ವರ್ಷಗಳ ಹಿಂದೆ ನಿನಗೆ ಅತಿಶಯ ಕಾಯಿಲೆಯಾಗಿತ್ತಲ್ಲವೇ?" ಎಂದು ಕೇಳಿದರು.

ಆತನು ಅಹುದೆಂದು ತಲೆಯಲ್ಲಾಡಿಸಿ ಆಮೇಲಿನ ವೃತ್ತಾಂತಗಳನ್ನೆಲ್ಲ ತೋಡಿಕೊಂಡನು. "ಹತ್ತು ವರ್ಷಗಳ ಹಿಂದೆ ಜೀವದ ಮೇಲೆ

ಬಂದ ಸಂಕಟ ಒಬ್ಬ ವೈದ್ಯನಿಂದ ದೂರಾದುದೇನೋ ನಿಜ. ಆದರೆ ನನ್ನ ತಂದೆಯನ್ನು ಮೋಸಗೊಳಿಸಿ ಆತನ ಆಸ್ತಿಯನ್ನೆಲ್ಲ ಎತ್ತಿಹಾಕಿ ಬಿಟ್ಟನು. ಆದರಿಂದ ಅನ್ನಾನ್ನಗತಿಕನಾಗಿ ಮನೆಯನ್ನೆಲ್ಲ ತೊರೆದು ಮುಂಬೈಯಲ್ಲಿ ಗಿರಣಿಕೂಲಿಕಾರನಾಗಿ ಹೊಟ್ಟೆ ಹೊರೆಯಹತ್ತಿದೆ. ಮುಂದೆ ಗಿರಣಿಯೂ ಬಂದು ಬಿದ್ದದ್ದರಿಂದ ಕೆಲಸಕ್ಕಾಗಿ ಅಲೆಯ ಹತ್ತಿದೆ. ಸಾಂಗಲಿಯಲ್ಲಿ ಕೆಲದಿನ ದೂಡಿ ಜಯಗಾಂವಿಗೆ ಬಂದೆ."

ಇದನ್ನೆಲ್ಲ ಕೇಳಿ ಸ್ವಾಮಿಯವರ ಕಣ್ಣಲ್ಲಿ ನೀರೂರಿತು. ಜಯಗಾಂವದಲ್ಲಿ ತಾನೂ ಬರುವವನಿರುವದರಿಂದ ಅಲ್ಲೊಂದು ಕೆಲಸ ದೊರಕಿಸಿ ಕೊಡುತ್ತೇನೆಂದು ಸುಧಾಕರನು ಆಶ್ವಾಸನವಿತ್ತ. ಅಲ್ಲದೆ ಸಾಂಗಲಿಯಲ್ಲಿ ಆತನನ್ನು ಕಂಡದ್ದರಿಂದ ಗಂಗಾಧರನೇ ಯಮೂ ಗಂಡನಿರಬೇಕೆಂದು ಭಾವಿಸಿ ಕೇಳಿಯೂ ಬಿಟ್ಟ. ಇದರಿಂದ ಗಂಗಾಧರನು ಸ್ತಂಭಿತನಾದ. ಸ್ವಾಮಿಯವರಲ್ಲಿ ಹೆರವರ ಭೂತಭವಿಷ್ಯ ಹೇಳುವ ಸಾಮರ್ಥ್ಯವಿರಬಹುದು. ಆದರೆ ಸುಧಾಕರನಂತಹ ಆಧುನಿಕ ನಾಸ್ತಿಕರಂತೆ ವರ್ತಿಸುವ-ಸಾಮಾನ್ಯ ಮನುಷ್ಯನಲ್ಲಿ ಈ ಸಾಮರ್ಥ್ಯ ಬಂದುದಾದರೂ ಹೇಗೆ? ಅವನ ಪ್ರಶ್ನೆಗೆ 'ಹೂಂ' ಎಂದನಾದರೂ 'ಈ ಭಟ್ಟನಿಗೆ ನನ್ನ ಹೆಂಡತಿಯ ಹೆಸರು ಗೊತ್ತಾಗುವ ಕಾರಣವೇನು?' ಎಂಬ ವಿಚಾರ ಆತನ ತಲೆಯಲ್ಲಿ ಮನೆಮಾಡದೆ ಹೋಗಲಿಲ್ಲ. ಸುಧಾಕರನೊಡನೆ ಸ್ವಾಮಿಯವರಿಗೆ ಮಾತನಾಡುವದಿದ್ದುದರಿಂದ ಸ್ವಯಂಸೇವಕರೊಡನೆ ಗಂಗಾಧರನನ್ನು ಕಳಿಸಿ, ಅವರಿಬ್ಬರೂ ಅನತಿ ದೂರದಲ್ಲಿದ್ದ ಕೆರೆಯ ತಡಿಯನ್ನು ಸೇರಿದರು.

ಕೆರೆಯಲ್ಲಿಳಿದು ನೀರಿಗೆ ಕಾಲು ತಾಗುವಂತೆ ಕೊನೆಯ ಪಾವಟಿಗೆಗಳ ಮೇಲೆ ಕುಳಿತರು. ಅಲ್ಲಿಯ ತನಕವೂ ಗಂಗಾಧರನ ವಿಷಯವಾಗಿಯೇ ವಿಚಾರಮಾಡುತ್ತಿದ್ದರು. ಗ್ರೀಷ್ಮದಲ್ಲಿಯ ಬಿಸಿಲು ಮತ್ತು ವರ್ಷಾಕಾಲದ ಮಳೆ ಇವೆರಡೂ ಒಂದೇ ಆಕಾಶದಲ್ಲಿ ಹುಟ್ಟುವಂತೆ ಗಂಗಾಧರನಲ್ಲಿ ಹೆಂಡಗುಡುಕುತನ, ಜುಗಾರಿಗಳ ಜೊತೆಗೆ ವಿಲಕ್ಷಣ ಕೃತಜ್ಞತೆಯೂ ತುಂಬಿತ್ತು.

ಸ್ವಾಮಿಯವರು ಆಗಮನದ ವಿಷಯವನ್ನೆಲ್ಲ ಹೇಳಿದರು. ಆ ಮೇಲೆ ಸುಧಾಕರನು "ಗಂಗಾಧರನಂಥವನ ಜೀವನ ಕಂಡಾಗ ಎಲ್ಲಿಯಾದರೂ ದೂರ ಅರಣ್ಯದೊಳಗೆ ಹೋಗಿ 'ಹರಿ, ಹರಿ' ಎನ್ನುತ್ತಾ ಕೂತುಬಿಡಬೇಕೆಂದೆನಿಸುತ್ತಿದೆ. ಈ ಗಂಗಾಧರನು ತನ್ನ ಹೆಂಡತಿ ಮಕ್ಕಳ ಹಿಂದಿನ ಜನ್ಮದ ವೈರಿಯೇ ಅಲ್ಲವೇ ?"

"ಬರೇ ಹರಿ ಹರಿ ಎಂದ ಮಾತ್ರಕ್ಕೆ ಹರಿಯು ನಮ್ಮ ಮುಂದೆ ಬಂದು ನಿಲ್ಲಲು ಆತನೇನು ನಮ್ಮ ಸೇವಕನೇ ! ಆದರೆ ಗಂಗಾಧರನ ಕೃತ್ಯಕ್ಕೆ ಅವನೊಬ್ಬನನ್ನೇ ದೂಷಿಸುವುದು ಸರಿಯಲ್ಲ. ಅವನ ತಂದೆಯು ಜಮೀನನ್ನು ಆ ವೈದ್ಯನು ಎತ್ತಿ ಹಾಕದಿದ್ದರೆ ಆತನೇನು ಹೊಟ್ಟೆಪಾಡಿಗಾಗಿ ಸಿಕ್ಕತ್ತ ಅಲೆಯಬೇಕಾಗುತ್ತಿದ್ದಿಲ್ಲ. ಆತ ವ್ಯಸನದ ಪಾಶದಲ್ಲಿ ಸಿಲುಕುತ್ತಿರಲಿಲ್ಲ. ಅಲ್ಲದೆ ಅವನಿಗೆ ಶಿಕ್ಷಣವಾದರೂ ಎಲ್ಲಿದೆ ? ಶಿಕ್ಷಣ ಸಿಕ್ಕಿದ್ದರೆ ಆತನೆಂದೂ ಈ ರೀತಿ ಸ್ವೈರವೃತ್ತಿಯವನಾಗುತ್ತಿದ್ದಿಲ್ಲ. ಕೃತಜ್ಞತೆಯುಳ್ಳ ಆತನ ಹೃದಯವನ್ನು ನಾನೊಮ್ಮೆಲೇ ಕಲ್ಲೆಂದು ತೀರ್ಪು ಕೊಡಲಾರೆ. ಚಂದನ ಮರಕ್ಕೆ ಸರ್ಪಸುತ್ತಿಕೊಂಡ ಮಾತ್ರಕ್ಕೆ ಅದು ವಿಷವೃಕ್ಷವೆಂದು ಹೇಳಬಹುದೇ? "

ಸುಧಾಕರನಿಗೆ ಸ್ವಾಮಿಯವರ ವಿಚಾರ ಹೌದೆನಿಸಿತು. ಗಂಗಾಧರನು ಸ್ವಭಾವತಃ ಕೆಟ್ಟವನಲ್ಲ. ಇಂದು ಜುಗಾರಿಯೆಡೆಗೆ- ಹೆಂಡದ ಬಾಟ್ಲಿಯೆಡೆಗೆ ಓಡುತ್ತಿದ್ದ ಕೈ ಚಿಕ್ಕಂದಿನಲ್ಲಿ ಶಿಕ್ಷಣ ದೊರೆತಿದ್ದರೆ ಪುಸ್ತಕ ಕೊಳ್ಳುವುದಕ್ಕಾಗಲೀ, ಪರಹಿತಕ್ಕಾಗಲೀ ಮುಂದಾಗುತ್ತಿತ್ತು. 'ಬಿತ್ತಿದ್ದು ಬೆಳೆಕೋ' ಎಂಬ ನಿಯಮ ಮನುಷ್ಯನ ಮನೋಭೂಮಿಕೆಗೂ ಅನ್ವಯಿಸುತ್ತಿದೆ. ಸಾಮಾನ್ಯ ಗಿಡವು ಕಲಮಿ ಹಚ್ಚುವುದರಿಂದ ಒಳ್ಳೆಯ ಫಲ ಕೊಡುವದಾದರೆ ಶಿಕ್ಷಣ ಸಿಕ್ಕರೆ ಮನುಷ್ಯನು ಒಳ್ಳೆಯವನಾಗಲೇಬೇಕಷ್ಟೇ ! ಯಮೂವಿನ ದುಃಖಕ್ಕೆ ಅವಳ ಗಂಡನ ದುರ್ವ್ಯಸನ ಕಾರಣವಾದರೆ ಆತನ ವ್ಯಸನಕ್ಕೆ ಅವನಿಗೆ ಶಿಕ್ಷಣವಿಲ್ಲದಿರುವದೇ ಕಾರಣವಾಗಿದೆ. ಹಿಂದುಳಿದ ಜನಕ್ಕೆ ಶಿಕ್ಷಣಕೊಡುವ ಪ್ರಯತ್ನವನ್ನಾದರೂ ನಾವೆಲ್ಲಿ

ನಡೆಸಿದ್ದೇವೆ? ಆ ದೃಷ್ಟಿಯಿಂದ ನಾನು ಜಯಗಾಂವದಲ್ಲಿ ಶಿಕ್ಷಕನಾಗಲು ನಿಶ್ಚಯಿಸಿದ್ದು ಒಳಿತೇ ಆಯಿತು."

ಈ ವಿಚಾರದಿಂದ ಉಲ್ಲಸಿತನಾಗಿ ತನ್ನ ನಿಶ್ಚಯವನ್ನು ಸ್ವಾಮಿಯವರಿಗೂ ತಿಳಿಸಿದನು. ಅದನ್ನು ಕೇಳಿ ಸ್ವಾಮಿಯವರಿಗೆ ಸಂತೋಷವಾಯಿತು "ಮಗೂ, ಹತ್ತು ವರ್ಷಗಳ ವರೆಗೆ ಬೆಟ್ಟಗುಡ್ಡಗಳಲ್ಲಿದ್ದರೂ ಕಾಣದ ಪರಮಾತ್ಮನು ನಿನ್ನ ಮಾತುಗಳಲ್ಲಿ ಪ್ರತ್ಯಕ್ಷನಾದನು. ತುಂಬಿದ ತಾರುಣ್ಯದಲ್ಲಿ ಕಾಂಚನವನ್ನು ಕಾಲಿನಿಂದೊದೆದು ನನಗೂ ಗುರುವಾದೆ."

"ಕೆರೆಯು ಎಷ್ಟೇ ದೊಡ್ಡದಾದರೂ ಸಮುದ್ರವನ್ನು ಸರಿಗಟ್ಟೀತೇ? ತಾವು ಸಂಸಾರವನ್ನೇ ಬಿಟ್ಟಿದ್ದೀರಿ..............."

"ಸಂಸಾರವನ್ನು ಬಿಟ್ಟಿರುವೆನೆಂಬುದೇನೋ ನಿಜ. ಆದರೆ ಅದರ ಸಮಸ್ಯೆಯನ್ನು ಮಾತ್ರ ಇನ್ನೂ ಬಿಡಿಸಲಿಲ್ಲ. ಸಂಸಾರಜಾಲಕ್ಕೆ ಕಾಂಚನವು ಅಡ್ಡನೂಲಾದರೆ ಕಾಮಿನಿಯು ನೆಟ್ಟಗಿನ ಎಳೆಯಂತೆ. ನಾನು ಇವೆರಡೂ ಪಾಶಗಳಿಂದ ಬಂಧಿತನಾದೆ. ಹೊಟ್ಟೆಗೆ ಸಾಲುವಷ್ಟು ದುಡ್ಡಿನಿಂದ ಸಮಾಧಾನಪಡದೆ ಇನ್ನೊಬ್ಬರ ಮನೆಯನ್ನಗೆದು ನನ್ನ ಮನೆಯನ್ನು ಬೆಳಸಲು ಹವಣಿಸಿದೆ. ನನ್ನ ಮನೆ - ಹಣ ಬೆಳೆದಂತೆ ಸುಖವು ನನ್ನಿಂದ ದೂರಸರಿಯಹತ್ತಿತು. ಹಣದ ಗುಲಾಮನಾದ ಮನುಷ್ಯನು ಜೀವನ್ಮೃತನಾದಂತೆಯೇ ಸರಿ. ನನ್ನ ಗತಿಯೂ ಹಾಗೆಯೇ ಆಯಿತು. ಅವನ್ನೆಲ್ಲ ನೆನಸಿದರೆ ನನಗೇ ನಾಚಿಕೆಯಾಗುತ್ತಿದೆ. ದುಡ್ಡಿನ ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು. ಲೋಭಿ ಮನಸ್ಸಿಗೆ ಎಷ್ಟು ಹಣ ಸಿಕ್ಕರೂ ಸಮಾಧಾನವಾಗದು. ಲೋಭವು ಯಾವಾಗಲೂ ಅಂಧವಿರುತ್ತದೆ. ಆದರಿಂದ ತನ್ನ ಕೈಯೊಳಗೆ ಬಿದ್ದ ಹಣವು - ಅನಾಥರ ಅಶ್ರುವಿನಿಂದ ತೊಯ್ದಿರಲಿ ಇಲ್ಲವೆ ಬಳಲಿ ಬೇಸತ್ತ ಬಡವರ ರಕ್ತದಿಂದ ಬಣ್ಣಗೊಂಡದ್ದಿರಲಿ, ಆ ಹಣದ ಮೇಲಿದ್ದ ಅಶ್ರು ಅಥವಾ ರಕ್ತ ಕಾಣಿಸುವದಿಲ್ಲ. ದುಡ್ಡಿನ ಗುಡ್ಡದ ಮೇಲೆ ಸುಖದ ಹೊಳೆ ಹರಿಯುತ್ತದೆಂಬ

ಬಗ್ಗೆ ಯಾವ ನಿದರ್ಶನವೂ ಇಲ್ಲ. ಅದರಿಂದ ಕನಕದ ಕಾಂಚನಮೃಗವನ್ನು ಬೆನ್ನಟ್ಟುವುದರಲ್ಲಿ ಹುರುಳಿಲ್ಲವೆಂದು ಈ ವಯಸ್ಸಿನಲ್ಲಿಯೇ ನಿರ್ಧರಿಸಿದ ನೀನು ಧನ್ಯ. ಸಂಸಾರದ ಪಾಶದಲ್ಲಿ ಅರ್ಧ ಹರಿದಂತಾಯಿತು. ಇನ್ನರ್ಧ.................”

ಸುಧಾಕರನು ಗಾಬರಿಯಿಂದ ಸ್ವಾಮಿಯವರ ಕಡೆಗೆ ನೋಡಿದನು. ಚಂದ್ರಮನು ಮುಳುಗಿದ್ದರಿಂದ ಪೃಥ್ವಿಯು ಅಂಧಃಕಾರದಿಂದ ಆವೃತವಾಗುತ್ತಲಿತ್ತು. ಸ್ವಾಮಿಯವರ ಮುದ್ರೆಯನ್ನು ಸೂಕ್ಷ್ಮವಾಗಿ ನಿರೀಕ್ಷಿಸುವುದು ಅಶಕ್ಯವಿದ್ದುದರಿಂದ ಅವರ ಅಭಿಪ್ರಾಯವನ್ನು ಸರಿಯಾಗಿ ಊಹಿಸಲು ಶಕ್ಯವಾಗಲಿಲ್ಲ. ಗಂಗಾಧರನ ಊರು ಹೆಸರುಗಳನ್ನು ತಪ್ಪದೇ ಹೇಳುವ ಈ ಅಂತರ್ಜ್ಞಾನಿಗೆ ನನ್ನ ಅಂತರ್ಯವು ತಿಳಿದಿದ್ದರೂ ತಿಳಿದಿರಬಹುದೆಂದು ಭಾವಿಸಿ ಲಜ್ಜಿತನಾದರೂ ಅವರ ಮಾತನ್ನು ಉತ್ಸುಕತೆಯಿಂದ ಕೇಳಹತ್ತಿದನು.

“ ಜನರೆಲ್ಲ ಸಾಮಾನ್ಯವಾಗಿ ಲಕ್ಷ್ಮಿಯ ಪಾದ ಹಿಡಿದು ಪೂಜೆ ಮಾಡುವವರೇ ಆಗಿರುತ್ತಾರೆ. ಲಕ್ಷ್ಮಿಯೆಡೆಗೆ ಬೆನ್ನು ತಿರುಗಿಸುವವರು ಅತಿ ವಿರಳ. ಇಂತಹ ಉಚ್ಚಧ್ಯೇಯದವರು ಸಹ ಕಾಮಿನಿಯ ಪಾಶದಿಂದ ಪಾರಾಗುವುದು ದುಸ್ತರವಾದದ್ದು. ”

‘ ಉಚ್ಚ ಆದರ್ಶವನ್ನಿಟ್ಟುಕೊಳ್ಳುವವನು ಮದುವೆಯಾಗಬೇಕೋ, ಬೇಡವೋ ? ’

“ ಹೃದಯಕ್ಕೆ ಹೃದಯ ಕೂಡಿತೆಂದರೆ ಮಾತ್ರ ಸುಖವಾಗುತ್ತದೆ. ಗಂಗಾತೀರದಲ್ಲಿಯೂ, ಹಿಮಾಲಯದಲ್ಲಿಯೂ ನಾನು ಅನೇಕ ವರ್ಷ ಕಳೆದಿದ್ದೇನೆ. ಜಗತ್ತಿನಲ್ಲಿ ಹೃದಯದ ಕೊಡಕೊಳ್ಳುವ ವ್ಯವಹಾರ ಅವಿರತವಾಗಿ ಸಾಗಿದೆಯೆಂದು ಊರಿನ ನನ್ನ ಅನುಭವ ಹೇಳುತ್ತಿದೆ. ಆಕಾಶವು ಪರ್ಜನ್ಯರೂಪದಿಂದ ತನ್ನ ಹೃದಯವನ್ನು ಪೃಥ್ವಿಗೆ ಕೊಟ್ಟರೆ ಪೃಥ್ವಿಯು ಬಾಷ್ಪರೂಪದಿಂದ ಆ ಸಾಲ ತೀರಿಸುತ್ತಿದೆ. ಮಗೂ, ಪ್ರೇಮವೆಂಬುದು ಪೃಥ್ವಿಯ ಆತ್ಮವಿದ್ದುತ್ತದೆ. ಇಂತಹ ಪ್ರೇಮ ದೊರೆತಲ್ಲಿ

ಮಾತ್ರ ಸಂಸಾರವು ಸುಖಮಯವಾಗಿ ಸಾಗಬಲ್ಲುದು. ಆದರೆ ಇಂತಹ ಪ್ರೇಮವು ದುರ್ಮಿಳವಾದದ್ದು. ನನ್ನ ಮೊದಲಿನ ಹೆಂಡತಿಯು ಪುತ್ರರೂಪದಿಂದ ತನ್ನ ಪ್ರತಿಮೆಯನ್ನು ಇಟ್ಟು ಹೋದರೂ ನಾನು ಇನ್ನೊಂದು ಮದುವೆಯಾದೆ. ರತ್ನಕ್ಕಿಂತಲೂ ತರುಣಿಯ ಕಟಾಕ್ಷದಲ್ಲಿ ಅಧಿಕ ಮೋಹಿನಿ ಇರುತ್ತಿದೆ. ಕುಬೇರನ ಸಂಪತ್ತಿಯನ್ನು ಕಾಲಿನಿಂದೊಗೆವ ವಿರಕ್ತನೂ ಸಹ ಬರೇ ವಲ್ಕಲವನ್ನುಟ್ಟು ರಂಭೆಯ ಮುಂದೆ ಮೊಣಕಾಲೂರುವನು. "

ವಾರುಣಿಯ ಮೇಲಿನ ಆಸಕ್ತಿಯಿಂದ ತಾನು ಧ್ಯೇಯಭ್ರಷ್ಟನಾಗಬಹುದೆಂದೇ ಸ್ವಾಮಿಯವರು ಇಂತಹ ಉಪದೇಶವನ್ನು ಮಾಡುತ್ತಾರೆಂದು ಭಾವಿಸಿ ಆಸಕ್ತಿಯಿಂದ ಕೇಳತೊಡಗಿದ. ಆ ಮೇಲೆ ಕೆಲ ಹೊತ್ತು ಇಬ್ಬರೂ ಮೌನವಾಗಿದ್ದರು. ಅವರ ಕಾಲಮೇಲೆ ನರ್ತಿಸುತ್ತಿದ್ದ ಜಲತರಂಗ-ಕಿವಿಯಲ್ಲಿ ಗುಪ್ತಮಾತನ್ನಾಡುವ ವಾಯುಲಹರಿ - ಕತ್ತಲೆಯಾದದ್ದನ್ನು ನೋಡಿ ಆ ತಾರಾಖಚಿತ ಆಕಾಶದ ಚಿತ್ರಪಟವನ್ನು ತೋರಿಸುವ ರಜನಿ-ಅತ್ತ ದೇವಾಲಯದಲ್ಲಿ ನಡೆದ ಕೋಲಾಹಲ-ಇವುಗಳಲ್ಲಿ ಯಾವವೂ ಅವರ ಧ್ಯಾನವನ್ನು ಆಕ್ರಮಿಸಿಕೊಳ್ಳಲು ಸಮರ್ಥವಾಗಲಿಲ್ಲ. ಕೆಲಹೊತ್ತಿನ ಮೇಲೆ ಸುಧಾಕರನು—

" ಈಗ ಮನೆಗೆ ಹೋಗೋಣವಲ್ಲವೇ ?"

" ಸನ್ಯಾಸಿಗೆ ಮನೆಯೆಲ್ಲಿ ? "

" ಅವನ ಮಗನ ಮನೆ ಅವನದಲ್ಲವೇ ?"

" ಮಗೂ, ನಿನ್ನಂತಹ ಮಗನನ್ನು ಪಡೆಯಲು ಸುಕೃತ ಬೇಕು."

" ನನ್ನ ಮನೆಗೆ ಬರುವುದಕ್ಕೆ ನಿಮಗಾವ ತೊಂದರೆಯಿದೆ ?"

" ಅಂತಹ ಅಡ್ಡಿಯೇನಿಲ್ಲ. ಆದರೆ ನಿನ್ನಂತಹ ಸ್ವಾರ್ಥತ್ಯಾಗಿ ತರುಣನ ಮನೆಯಲ್ಲಿ ನನಗೆ ಸುಖವಾಗಿ ನಿದ್ದೆ ಬೀಳದು. "

" ಏಕೆ ?"

" ಏನು ಹೇಳಲಿ ? ತುಟಿಯ ತನಕ ಬರುವ ಸತ್ಯಸಂಗತಿಗಳನ್ನು ಹೊರಹಾಕುವಷ್ಟು ಮನೋಧೈರ್ಯ ನನ್ನಲ್ಲಿ ಇಲ್ಲದಾಗಿದೆ. ವಿಚಾರ ಮಾಡಿ ನೋಡಿದರೆ ನನ್ನಂತಹ ಸರ್ವಸಂಗತ್ಯಾಗಿಗಳು ಯಾವುದರಲ್ಲಿಯೂ ಲಕ್ಷ್ಯ ಹಾಕಬಾರದು. ಹತ್ತಿರದಲ್ಲಿಯೇ ಬಾಂಬುಳಿಯಲ್ಲೊಂದು ಜಾಗ್ರತ ಶಿವಲಿಂಗವಿದೆಯೆಂದು ಕೇಳಿದ್ದೇನೆ. ಅದರ ಸೇವೆ ಮಾಡುತ್ತ ಇರಬೇಕೆಂದು ನಿಶ್ಚಯಿಸಿದ್ದೇನೆ. "

" ಇಂದಿನದೊಂದು ರಾತ್ರಿ ಕಳೆದು ........."

" ಸನ್ಯಾಸಿಗೆ ರಾತ್ರಿ ಹಗಲು ಎಲ್ಲವೂ ಒಂದೇ. ಜಗತ್ತೇ ಅವನ ಮನೆ. ಅಂದಮೇಲೆ ಒಂದೂರಿನಿಂದ ಇನ್ನೊಂದೂರಿಗೆ ಹೋಗುವುದೆಂದರೆ ಒಂದು ಮನೆಯ ಒಂದು ಕೋಣೆಯಿಂದ ಇನ್ನೊಂದು ಕೋಣೆಗೆ ಹೋದಂತೆ ಅಲ್ಲವೇ?"

" ಹಾಗಾದರೆ ಅಲ್ಲಿ ನೀವೆಷ್ಟು ದಿನ ಇರುವಿರಿ? ನಾನೇ ಬಂದು ಭೆಟ್ಟಿತೆಗೆದುಕೊಳ್ಳುವೆ."

" ಜೇಳು ಎಷ್ಟು ದಿನ ಒಂದೆಡೆಯಲ್ಲಿ ನಿಲ್ಲುತ್ತದೆಂದು ಹೇಳಲಿಕ್ಕಾಗುತ್ತಿದೆಯೇ? ಅದರ ಬಿಡಾರ ಅದರ ಬೆನ್ನಮೇಲೇ ಇರುತ್ತದೆ. ಆದರಿಂದ ಮನಸ್ಸು ಬಂದರೆ ನಾಲ್ಕು ತಿಂಗಳೂ ಇರಬಹುದು; ಇಲ್ಲವಾದರೆ ನಾಲ್ಕು ತಾಸಿನಲ್ಲಿಯೇ ಹೊರಟು ಹೋಗಬಹುದು. ಆದರೆ ಇಷ್ಟು ಮಾತ್ರ ನಿಜ, ಕೆಲದಿನಗಳಲ್ಲಿ ಕಾಶಿಗೆ ಹೋಗುವ ವಿಚಾರವಿದೆ. ಹೋಗುವದಾದರೆ ನಿನಗೆ ಭೆಟ್ಟಿಯಾಗದೇ ಹೊರಡುವದಿಲ್ಲ."

ಸುಳಿಗಾಳಿಯಂತೆ ಅನಿಶ್ಚಿತ ಭ್ರಮಣ ಮಾಡುವ ಸ್ವಾಮಿಯವರ ಮನಸ್ಸಿನಲ್ಲಿ ತನ್ನ ಬಗ್ಗೆ ಇಷ್ಟು ಪ್ರೇಮವಿದ್ದುದನ್ನು ಕಂಡು ಸುಧಾಕರನಿಗೆ ಅತ್ಯಾನಂದವಾಯಿತು. ಸ್ವಾಮಿಯವರ ಮನಸ್ಸಿನಲ್ಲಿ ಯಾವುದೋ ವಿಷಯವೊಂದು ಕಟಿಯುತ್ತಿದೆಯೆಂದು ಅನಿಸಿತು. ಆದರೆ ಕೇಳುವ ಧೈರ್ಯವಾಗಲಿಲ್ಲ. ಪಾವುಟಿಗೆ ಹತ್ತಿ ಮೇಲೆ ಬಂದು ಸ್ವಾಮಿಯವರಿಗೆ

ಸುಧಾಕರ ನಮಸ್ಕರಿಸುವುದರಲ್ಲಿದ್ದ. ಅಷ್ಟರಲ್ಲಿ ತಾಯಿಯನ್ನೂ ಸುಧೆಯ ನ್ನೂ ಕಂಡು, ತಾಯಿಯನ್ನು ಕರೆದ. ತಾಯಿಯೂ ಸ್ವಾಮಿಗಳಿಗೆ ನಮಸ್ಕರಿಸಿ ಆಶೀರ್ವಾದ ಪಡೆದಳು. ಸ್ವಾಮಿಯವರಿಗೆ ಸುಧೆಯ ಪರಿಚಯ ಮಾಡಲೆತ್ನಿಸಿದರೂ " ಇವಳು - ಇವಳು" ಎಂದಿಷ್ಟೇ ಮಾತು ಹೊರಟಿತು. ಅದರಿಂದ ಸುಧೆಯು ಸುಧಾಕರನ ಹೆಂಡತಿ ಇರಬಹುದೆಂದು ಗ್ರಹಿಸಿ ಆಕೆ ಸ್ವಾಮಿಯವರಿಗೆ ಎರಗಿದಾಗ " ಸೌಭಾಗ್ಯವತೀ ಭವ " ಎಂದು ಬಿಟ್ಟರು. ಸುಧೆಯು ಗಡಗಡ ನಡುಗಹತ್ತಿದಳು. ಸುಧಾಕರನು ಅತಿ ಕಷ್ಟದಿಂದ ಅವಳು ಸುಧಾಕರ ದೇಸಾಯಿಯ ಅತ್ತಿಗೆಯೆಂಬುದನ್ನು ತಿಳಿಸಿದನು. ಅದನ್ನು ಕೇಳಿ ಸ್ವಾಮಿಯವರ ಮುಖ ಗಾಬರಿಯಿಂದ ಬಿಳುಪೇರಿತು. ಅವರು ತಡವರಿಸುತ್ತ " ಮಗೂ, ಕತ್ತಲೆಯಲ್ಲಿ ಕಾಣಲಿಲ್ಲ; ಕ್ಷಮಿಸು. " ಎಂದರು.

* * * *

ಬಹಳ ಹೊತ್ತು ದಾರಿ ನೋಡಿದ ಮೇಲೆ ಜೀವಕ್ಕೆ ಸಮಾಧಾನವೆನಿಸದೆ ತಾಯಿ ತನ್ನನ್ನು ಹುಡುಕಲು ಹೊರಟದ್ದು; ದಾರಿಯಲ್ಲಿ ಬರುವ ಜನರ ಬಾಯಿಂದ ಅಸ್ಪಷ್ಟವಾಗಿ ' ಜುಗಾರ - ಚೂರಿ - ಸುಧಾಕರ ' ಎಂಬ ಶಬ್ದಗಳನ್ನು ತನ್ನ ಮನೆಯಂಗಳಲ್ಲಿ ನಿಂತ ಸುಧೆಯು ಕೇಳಿ ಗಾಬರಿಯಿಂದ ಮೈಯೆಲ್ಲ ಬೆವತು ತಾಯಿಡೆಗೆ ಓಡಿ ಬಂದದ್ದು; ದೇವಸ್ಥಾನಕ್ಕೆ ಹೋಗಿರುವ ಅತ್ತಿಗೆಯು ಸಿಟ್ಟಿನ ಪರಿವೆಯಿಲ್ಲದೆ ಅಮ್ಮನ ಜೊತೆಗೆ ಬರಲು ಹಟಹಿಡಿದದ್ದು ಇವೆಲ್ಲ ಸಂಗತಿಗಳನ್ನು ತಾಯಿಯ ಬಾಯಿಂದ ಕೇಳಿ ಸುಧಾಕರನಿಗೆ ಮುಗುಳಿಗೆ ರವಿಕಿರಣದ ವೀಣೆಗೆ ವಾದಕನ ಬೆರಳಿನ ಅಥವಾ ಗಗನದೇವಿಗೆ ಅರುಣನ ಕೋಮಲ ಬೆರಳಿನ- ಸ್ಪರ್ಶವಾಗಲು ಉಂಟಾಗುವ ಒಂದು ಬಗೆಯ ಮುಗ್ಧಾನಂದದ ಅನುಭವವಾಯಿತು. ತನ್ನ ಮೇಲೆ ಯಾರದಾದರೂ ಪ್ರೇಮವಿದೆಯೆಂಬ ಭಾವನೆಯು ಅತ್ಯುತ್ಸಾಹವರ್ಧಕವಿರುತ್ತದೆ.

ಸುಧೆಯು ಮನೆಗೆ ಹೋಗಹತ್ತಲು ಯಾವುದೋ ಆಲಸ್ಯವು ತನ್ನಲ್ಲಿ ಮನೆಮಾಡಿದಂತೆ ಗೋಚರವಾಗಹತ್ತಿತು. ಸ್ವಾಮಿಯವರು

ಸೌಭಾಗ್ಯವತೀ ಭವ ' ಎಂದು ತಪ್ಪಿನುಡಿದ ಆಶೀರ್ವಾದದ ನೆನಪಾಗಿ ಕಣ್ಣಲ್ಲಿ ನೀರು ನಿಂತಿತು. ಆದರೆ ಮರುಕ್ಷಣದಲ್ಲಿಯೇ ಅದು ಆಸೆಯಿಂದ ಚಕಚಕಿಸಹತ್ತಿತು. ಕೆಲಹೊತ್ತಿನಲ್ಲಿ ಇಂಥ ಕಲ್ಪನೆ "ಪಾಪಕರ"ವೆಂಬ ವಿಚಾರ ಬಂದು ಆಕೆಗೆ ಏನೂ ಸೂಚಿಸದಾಯಿತು. 'ವಿಧವೆಗೂ ಸೌಭಾಗ್ಯಕ್ಕೂ ಎಣ್ಣೆ ಸೀಗೇಕಾಯಿ ನಂಟು, ಚಿತೆಯ ಪ್ರೇತಕ್ಕೆ ಚಿರಂಜೀವಿಯಾಗೆಂದು ಆಶೀರ್ವದಿಸುವವನು ಹುಚ್ಚನೆಂದು ಗಣಿಸಲ್ಪಡಲಿಕ್ಕಿಲ್ಲವೇ ? ಸ್ವಾಮಿಯವರು ತಪ್ಪಿ ಆಶೀರ್ವದಿಸಿದರೂ..............." ಅವಳ ಮನಸ್ಸಿನಲ್ಲಿ ಮುಂದಿನ ವಿಚಾರ ಬರಲು ತನ್ನ ಎರಡೂ ಕೈಗಳಿಂದ ಮುಖವನ್ನು ಮುಚ್ಚಿಕೊಂಡು ಅಳಹತ್ತಿದಳು. ಅವಳು ಹೊರಗೆ ಬಂದು ನಿಂತಾಗ ರಜನಿಯು ಅವಳಿಗೆ ಹೀಗೆ ಹೇಳಿರಬಹುದೋ ಏನೋ ಯಾರು ಬಲ್ಲ ? " ಪ್ರಿಯ ಭಗಿನಿ, ನಿನ್ನಂತೆ ನನ್ನ ಕಣ್ಣಲ್ಲಿಯೂ ಪ್ರತಿನಿತ್ಯವೂ ನೀರು ಬರುತ್ತಿದೆ. ಆದರೆ ನನಗೋಸ್ಕರ ಗುಲಾಬಿ ಹೂವನ್ನು ತರುವ ಸೂರ್ಯದೇವನ ಸದ್ದು ಕೇಳಿಬರಲು ನಾನು ತದ್ರೂಪಳಾಗಿಬಿಡುತ್ತೇನೆ. ಅವನ ಕರಪಾಶದಲ್ಲಿ ನನ್ನನ್ನೇ ನಾನು ಮರೆತುಬಿಡುತ್ತೇನೆ. "

ಸುಧೆಯು ಸುಧಾಕರನ ಮನೆಯ ಕಡೆಗೆ ನೋಡಿದಳು. ಅವಳ ಕಣ್ಣೀರು ಎಲ್ಲಿಯೋ ಮಾಯವಾಗಿ ಬಿಟ್ಟಿತ್ತು.

ಜಯಗಾಂವಕ್ಕೆ ಹೋಗುವ ಮುಂಚೆ ಒಮ್ಮೆ ಹರಕೆಯ ಲಘುರುದ್ರವೊಂದು ಮಾಡಿಬಿಡಬೇಕೆಂದು ಜಾನಕಿಯಮ್ಮನವರು ಸೂಚಿಸಿದಾಗ ಶಾಸ್ತ್ರಿಗಳ ಮೇಲಿನ ಸಿಟ್ಟಿನಿಂದಲೂ ದೇವರು ಢಾಂಬಿಕನ ಮಂತ್ರಕ್ಕಿಂತ ಬಡವರ ಹೃದಯದಲ್ಲಿದ್ದಾನೆಂಬ ಕಲ್ಪನೆಯಿಂದಲೂ, ಸುಧಾಕರನು ವಿರೋಧಿಸಿದನು. ಆಗ ತಾಯಿಯು—

" ಹಾಗಾದರೆ ಜಗತ್ತಿನಲ್ಲಿ ದೇವರೇ ಇಲ್ಲವೆಂದು ನಿನ್ನ ಮತವೇ?"

" ನೀನು ಎದುರಿನಲ್ಲಿರುವಾಗ ದೇವರಿಲ್ಲೆಂದು ಹೇಳಲಿಕ್ಕೆ ಯಾರಿಗೆ ಧೈರ್ಯವಿದೆ ? " ಎಂಬ ಉದ್ಗಾರವನ್ನು ತೆಗೆಯುವಾಗ ಸುಧಾಕರನ ಮುದ್ರೆಯ ಮೇಲೆ ಮಾತೃಭಕ್ತಿಯು ಸಂಪೂರ್ಣವಾಗಿ ಮೂಡಿತ್ತು. ಅಮ್ಮನು ಲಘುರುದ್ರದ ವಿಷಯವಾಗಿ ಮಾತೆತ್ತಲಿಲ್ಲ.

## ಪ್ರಕರಣ ೧೬.

ಪತ್ರ ಮುಗಿಸಿ ಗಡಿಯಾರದೆಡೆಗೆ ನೋಡಿದಾಗ ಹನ್ನೊಂದು ಬಡೆದು ಹೋಗಿತ್ತು. ರಜನಿಯ ಮೋಹಿನಿ ಮಂತ್ರದ ಪರಿಣಾಮವು ಚನ್ನಾಗಿ ಆಗಿದ್ದರಿಂದ ಎಲ್ಲ ಸೃಷ್ಟಿಯು ನಿದ್ದೆ ಹೋಗಿತ್ತು. ಹೊರಗೆ ರಾತ್ರಿಹುಳದ 'ಕಿರ್‌ಕಿರ್' ಒಳಗೆ ಗಡಿಯಾರದ 'ಟಿಕ್‌ಟಿಕ್' – ಇವಿಷ್ಟೇ ಸಪ್ಪಳ ಕೇಳಬರುತ್ತಿತ್ತು. ತಾನು ಕಾಳೆಗೆ ಬರೆದ ಆ ಉದ್ದಪತ್ರವನ್ನು ಇನ್ನೊಮ್ಮೆ ಓದಿಕೊಂಡ.

ಶ್ರೀ. ಜಯಗಾಂವ (ಜಿಲ್ಹಾ ರತ್ನಾಗಿರಿ)
೧ ಜೂನ ೧೯೩೮.

ಸಾ. ನ. ವಿ. ವಿ. ಕಳೆದ ಹದಿನೈದು ದಿನಗಳಲ್ಲಿ ನಾನು ಒಂದು ಕಾರ್ಡನ್ನೂ ಬರೆಯಲಿಲ್ಲವಾದುದರಿಂದ ನಿನ್ನನ್ನು ಸಾವಕಾಶವಾಗಿ ಮರೆಯುತ್ತೇನೆಂದು ನಿನಗೆ ಅನಿಸಿರಬಹುದು. ಆದರೆ ನಿಜವಾಗಿಯೂ ಮರೆತಿಲ್ಲ. ಎರಡು ವ್ಯಕ್ತಿಗಳ ನಡುವಿನ ಅಂತರ ಬೆಳೆದ ಮಾತ್ರಕ್ಕೆ ಅವರನ್ನು ಬಂಧಿಸಿದ ಪ್ರೇಮಪಾಶವು ಹರಿದು ಹೋಗಲಾರದು.

ಕಳೆದ ಹದಿನೈದು ದಿನವಂತೂ ತುಂಬಾ ಗೊಂದಲದಲ್ಲಿಯೇ ಕಳೆಯಿತು. ವಾಲಾವಲಿಯ ಬಿಡಾರ ವ್ಯವಸ್ಥೆ ಮಾಡಬೇಕಾಯಿತು. ಯುದ್ಧದಲ್ಲಿ ಸಿಪಾಯಿಗಳಿಗಿಂತ ತೋಫುತುಬಾಕಿ ಸ್ಥಳಾಂತರಿಸುವದೇ ಹೆಚ್ಚು ಕಷ್ಟದಾಯಕವಾಗಿರುವಂತೆ ಬಿಡಾರ ಬದಲಿಸುವಾಗ ಮಂದಿಗಿಂತ ಸಾಮಾನು ಒಯ್ಯುವದೇ ಕಷ್ಟಸಾಧ್ಯವಾಗುತ್ತಿದೆ. ಜಯಗಾಂವಕ್ಕೆ ಬಂದುಮುಟ್ಟಲು ಸಾಕುಬೇಕಾಯಿತು. ಯಾವುದಾದರೊಂದು ನಾಟಕ ಕಂಪನಿಯ ಅಥವಾ ಸರ್ಕಸ್ ಕಂಪನಿಯ ಮೆನೇಜರನನ್ನು ಸಹಾಯಕ್ಕೆ ಕರೆದಿದ್ದರೆ ಚೆನ್ನಾಗುತ್ತಿತ್ತೆಂದು ಅನಿಸಿತು. "ಶ್ರುತೇರಿವಾರ್ಥಂ ಸ್ಮೃತಿರನ್ವಗಚ್ಛತ್" ಎಂಬ ಕಾಲಿದಾಸೋಕ್ತಿಯನ್ನು ನೆನಪು ಮಾಡಿಕೊಡುವ ಸಾಮಾನುಗಾಡಿಯ ಹಿಂದಿನ ಆಕಳು — ಯಾರ ರಾಜ್ಯದಲ್ಲಿ

ಗುಪಿಸ್ತ್ರೀ ಎಂಬುದನ್ನು ಅರಿಯದ ಚೇಲವಲ್ಲಿಯ ಬೆಕ್ಕು— ಇವುಗಳ ವರ್ಣನೆಯನ್ನು ಮಾಡಹತ್ತಿದರೆ ಅದೊಂದು ಗ್ರಂಥವೇ ಆದೀತು.

ಇನ್ನು ಇಲ್ಲಿಯ ಎಲ್ಲ ವ್ಯವಸ್ಥೆ ಮುಗಿದಂತೆಯೇ ಸರಿ. ಮನೆ ಎಷ್ಟು ಚನ್ನಾಗಿ ದೊರತಿದೆಯೆಂದು ಊಹಿಸಬಲ್ಲೆಯಾ? ಸಮೀಪದಲ್ಲೊಂದು ದಿನ್ನೆಯಿದೆ. ಮುಂದೆ ಅರ್ಧಮೈಲಿನೊಳಗೆ ಸಮುದ್ರವಿದೆ. ಇವೆರಡರ ನಡುವೆ ಹೋಗಿ ನಿಂತರೆ 'ನಿಸರ್ಗವು ದಿನ್ನೆಯನ್ನು ತಲೆಗಿಂಬಾಗಿ ಮಾಡಿಕೊಂಡು ನಿರುಪದ್ರವಿಯಾಗಿ ಮಲಗಿದೆ. ಸಮುದ್ರವು ಮಾತ್ರ ಮೇಲಿಂದಮೇಲೆ ಕಾಲಿಗೆ ಗಿಲಿಗಿಲಿ ಮಾಡುತ್ತಿದೆ"ಯೆಂದು ಭಾಸವಾಗುತ್ತಿದೆ. ನೋಡಿದಲ್ಲೆಲ್ಲ ತೆಂಗಿನ ಬನವೇ ಬನ. ಸಾಗರದಿಂದ ಹೊರ ಬೀಳುವ ಲಕ್ಷ್ಮಿಗೆ ಗಾಳಿ ಹಾಕುವುದಕ್ಕೆಂದು ನಿಸರ್ಗವು ಮೊದಲೇ ಲಕ್ಷಾವಧಿ ಚಾಮರಗಳನ್ನು ನಿರ್ಮಿಸಿಟ್ಟಿರುವದೋ ಯಾರು ಬಲ್ಲ? ಬಹಳ ಬಣ್ಣಿಸಲು ನಾನು ಕವಿಯಲ್ಲ. ಆದರೂ ನಿನ್ನಂತಹ ಚಿತ್ರಕಾರನು ಮಾತ್ರ ನೋಡಬೇಕಾದ ಸ್ಥಳವೆಂದು ಮಾತ್ರ ಹೇಳಬಲ್ಲೆ. ನನ್ನ ನೋಟ ಸಾದಾ ಗಾಜಿನಂತೆ. ನಿನ್ನದು ಫೋಟೋಗ್ರಾಫಿಯ ಗಾಜು.

ನಮ್ಮ ಶಾಲೆಯ ಹೆಡ್‌ಮಾಸ್ತರ ದಾದಾಸಾಹೇಬರು(ಇವರ ವರ್ತಮಾನಪತ್ರದಲ್ಲಿಯ ಆಸಕ್ತಿಯ ಬಗ್ಗೆ ನಾನು ನಿನಗೆ ಹಿಂದೊಮ್ಮೆ ಬರೆದಿರಬೇಕು)ಇನ್ನೂ ಮುಂಬಯಿಯಿಂದ ಬಂದಿಲ್ಲ. ಇಂದು ತಲುಪಿದ್ದ ಅವರ ಪತ್ರದಿಂದ ವ್ಯಾಯಾಮಶಾಲೆಯ ಬಗ್ಗೆ ಮುಂಬಯಿಯಲ್ಲಿ ಒಂದು ಸಾವಿರ ರೂಪಾಯಿ ಕೂಡಿಸಿರುವರೆಂದು ತಿಳಿಯುತ್ತಿದೆ. ಹೀಗೆ ತಮ್ಮ ಬಿಡುವಿನ ವೇಳೆಯನ್ನು ಸಹ ಶಾಲೆಯ ಕೆಲಸದಲ್ಲಿಯೇ ಕಳೆಯುವ ಸ್ವಾರ್ಥತ್ಯಾಗಿ ಮನುಷ್ಯರ ಬಗ್ಗೆ ಯಾರಿಗೆ ತಾನೇ ಹೆಮ್ಮೆಯೆನಿಸದು? ಜಯಗಾಂವವು ಕೊಂಕಣದಲ್ಲಿ ದೊಡ್ಡ ಊರಾಗಿದ್ದರೂ ಇಲ್ಲಿಯ ಜನವಸತಿ ಹತ್ತು ಸಾವಿರಕ್ಕೂ ಕಡಿಮೆ ಇದೆ. ದಾದಾಸಾಹೇಬರು ಇಲ್ಲಿ ಶಾಲೆ ಸ್ಥಾಪಿಸದಿದ್ದರೆ ಇಲ್ಲಿಯ ಚಿಕ್ಕಮಕ್ಕಳೆಲ್ಲ ಇಂಗ್ಲೀಷು ಮೊದಲನೇಯತ್ತೆ ಕಲಿಯಲು ಹತ್ತು ಹದಿನೈದು ಮೈಲು ದೂರವಿರುವ ಸಾವಂತವಾಡಿಯಂತಹ ಊರಿಗೆ ಹೋಗಬೇಕಾಗುತ್ತಿತ್ತು. ಈಗ ಈ ಶಾಲೆಯ ಮೂಲಕ ಎಷ್ಟೋ

ಪಾಲಕರ ಹಣ ಉಳಿತಾಯವಾಗುತ್ತಿದೆ. ಒಂದು ಗಂಗಾನದಿಯಿಂದ ಬಂಗಾಲವೇ ಬೆಳೆಯುಳ್ಳದ್ದಾಗಿರುವಂತೆ ಈ ಸಾಲೆಯಿಂದ ಎಲ್ಲ ಜಾತಿಯ ಜನದ ಉನ್ನತಿಯಾಗುತ್ತಿದೆ.

ಇಂತಹ ವಾತಾವರಣದಲ್ಲಿ ಕೆಲಸ ಮಾಡಲು ಪೂರ್ವಪುಣ್ಯವೇ ಬೇಕು. ಸಾಂಗಲಿಯಲ್ಲಿದ್ದರೆ ನನಗೆ ನೂರು ರೂಪಾಯಿ ಸಿಗಬಹುದಿತ್ತು. ಅದಕ್ಕೂ ಹೆಚ್ಚು ಆಗಬಹುದಿತ್ತು. ಆದರೆ ಪ್ರೊಫೆಸರನ ಕೆಲಸವೆಂಬುದು ಆಕಾಶಗಂಗೆಯ ಹಾಗೆ ನೋಡಲಿಕ್ಕೇ ಚಂದ. ಪ್ರತ್ಯಕ್ಷ ವ್ಯವಹಾರದಲ್ಲಿ- ಬಡಬಗ್ಗರಿಗೆ ಶಿಕ್ಷಣಕೊಟ್ಟು ಸುಧಾರಿಸುವ ಕಾರ್ಯದಲ್ಲಿ- ಪ್ರೊಫೆಸರನಿಂದ ಏನೂ ನೆರವಾಗುವದಿಲ್ಲ. ಇಲ್ಲಿ ನನಗೆಷ್ಟು ಸಂಬಳವೆಂಬುದು ಇನ್ನೂ ಗೊತ್ತಾಗಿಲ್ಲ. ಹಾಗೆ ನಿಶ್ಚಯವಾಗದಿದ್ದುದು ಒಂದು ದೃಷ್ಟಿಯಿಂದ ಒಳಿತೇ ಆಯಿತು. ಕೂಲಿಯನ್ನು ನಿಶ್ಚಯಿಸಿ ಕೆಲಸಮಾಡುವದೆಂದರೆ ಅದೊಂದು ಧಂದೆಯಾಯಿತು. ನನಗೆ ಧಂದೆ ಬೇಕಾಗಿಲ್ಲ. ಧ್ಯೇಯ ಬೇಕು. ಈ ಸಾಲೆಯಿಂದ ನನ್ನ ಧ್ಯೇಯ ಸಿದ್ಧಿಸೀತೆಂಬ ಭರವಸೆಯಿದೆ. ಜಯಗಾಂವಿಯಲ್ಲಿ ಮೂರಂತಸ್ತಿನ ಮನೆಯಲ್ಲಿ ವಾಸಿಸುವ ಸಾವುಕಾರರಿದ್ದಾರೆ; ಕೈಯ ಐದೂ ಬೆರಳಿಗೆ ಉಂಗುರ ಧರಿಸಿ ಮೆರೆಯುವ ಜಮೀನುದಾರರಿದ್ದಾರೆ. ಆದರೆ ಹಾಗೆ ಆಗಬೇಕೆಂಬ ವಿಚಾರ ನನಗೆ ಈ ಎಂಟು ತಿಂಗಳಲ್ಲಿ ಒಮ್ಮೆಯೂ ಬಂದಿಲ್ಲ.

ನಮ್ಮ ಸಾಲೆಯು ಜೂನ ೭ಕ್ಕೆ ಸುರುವಾಗಲಿದೆಯಾದರೂ ನಾನು ೬-೭ನೇ ಇಯತ್ತೆಯ ಅಭ್ಯಾಸವನ್ನು ಕಳೆದ ವಾರದಿಂದಲೇ ಕಲಿಸಹತ್ತಿದ್ದೇನೆ. 'ಸರ್, ಸರ್' ಎಂದು ಹದಿನಾಲ್ಕು ಹದಿನೈದು ವರ್ಷದ ಮಕ್ಕಳು ಕರೆಯಹತ್ತಿದಾಗ, ಚೊಚ್ಚಲ ಮಗುವು 'ಅವ್ವಾ' ಎಂದು ಒದರಿದಾಗ, ತಾಯಿ ಪಡುವ ಸಂತಸವನ್ನೇ ನಾನು ಹೊಂದುತ್ತಿದ್ದೇನೆ. ಆದರಿಂದ ನನ್ನಲ್ಲಿ ಉತ್ಸಾಹವರ್ಧನೆಯಾಗಿದೆ. ಸಮುದ್ರದ ತೆರೆಗಳ ಮೇಲೆ ನರ್ತಿಸುವ ನಾವೆಯಂತೆ ಇಲ್ಲಿಯ ಹುಡುಗರ ಗಡಿಬಿಡಿಯೊಂದಿಗೆ ನನ್ನ ಕಣ್ಣು ಕುಣಿಯುತ್ತಿರುತ್ತದೆ. ಉತ್ತರ ಕೊಡಲು ಯಾವನಾದರೊಬ್ಬ ನಿಂತರೆ ಅರಳುತ್ತಿದ್ದ ಮೊಗ್ಗೆಯಂತೆ ಭಾಸವಾಗುತ್ತಿದೆ. ವರ್ಗವೇ ನನ್ನ

ದೊಂದು ಜಗತ್ತು; ಅಲ್ಲಿ ದುಡ್ಡಿಗೆ ಬೆಲೆಯಿಲ್ಲ. ಸಿರಿವಂತಿಕೆಗೆ ಅನಾವಶ್ಯಕ ಮಾನವಿಲ್ಲ; ಬಡವ ಬಲ್ಲಿದನೆಂಬ ಭೇದವಿಲ್ಲ. ಲಕ್ಷಾಧೀಶನ ಮಗನ ಬಳಿಯಲ್ಲಿ ಒಕ್ಕಲಿಗನ ಮಗ ಕುಳಿತು ಓದುತ್ತಿದ್ದಾನೆ. ಬ್ರಾಹ್ಮಣಪುತ್ರರ ಹಾಗೂ ಶೂದ್ರಮಕ್ಕಳ ಸಮ್ಮೇಲನವಾಗುತ್ತಿದೆ. ಈ ಜಗತ್ತು ಅತಿ ನಿರ್ಮಲವೂ ನಿಷ್ಪಾಪವೂ ಆಗಿರುತ್ತದೆ. ಹುಡುಗರನ್ನು ಸೂಕ್ಷ್ಮವಾಗಿ ನೋಡಿದಾಗ ನನಗೆ ಅವರಲ್ಲಿ ಪಕ್ಷಿಗಳ ಚಪಲತೆ, ಪ್ರಾತಃಕಾಲದ ಸೌಮ್ಯ ಉಜ್ವಲತೆ, ನಿರ್ಝರಿಣಿಯ "ಕಲಕಲ" ನಿನಾದಗಳ ತ್ರಿವೇಣಿ ಸಂಗಮವು ಕಂಡುಬರುತ್ತಿದೆ.

ಮಕ್ಕಳನ್ನು ವೃಥಾ ಸ್ತುತಿಮಾಡುತ್ತಿದ್ದೇನೆಂದು ನಿನಗೆ ಅನಿಸಬಹುದು. ಆದರೆ ನಮ್ಮ ಮೊದಲಿನ ನಿರ್ಧಾರದಂತೆ ಮುಂದಿನ ವರ್ಷ ನೀನೂ ಶಿಕ್ಷಕನೆಂದ ಮೇಲೆ ನಿನಗೆ ಈ ಅನುಭವ ಬರಬಹುದು. ಮದುವೆಯಾದ ಅಕ್ಕ ತವರುಮನೆಯಲ್ಲಿ ಬಹಳದಿನ ಏಕೆ ಉಳಿಯುವದಿಲ್ಲವೆಂಬುದು ತಂಗಿಗೆ ಲಗ್ನವಾದ ಮೇಲೇ ಗೊತ್ತಾಗುತ್ತಿದೆ.

ಇಲ್ಲಿಯ ವಿದ್ಯಾಮಂದಿರವು ಗಿರಿಶಿಖರದ ಮೇಲಿದೆ. ಕಾಮ ಕ್ರೋಧಾದಿಗಳಿಂದ ಕ್ಷುಬ್ಧಗೊಂಡ ಜಗತ್ತು ಇದರಡಿಯಲ್ಲಿದೆ. ಕೆಳಗಿನ ದೂಷಿತ ಹವೆಯ ಸಂಪರ್ಕ ಶಾಲೆಯ ಶುದ್ಧ ಹವೆಯಲ್ಲಿ ಬೆರೆಯಲಾರದು. ಆಕಾಶದಲ್ಲಿ ಹಾರಾಡುವ ಹಕ್ಕಿಗಳಿಗೆ ನೆಲದಮೇಲಿನ ಕಲ್ಲು ಮುಳ್ಳುಗಳ ಪರಿವೆಯಿರದಂತೆ ಕೆಳಜಗತ್ತಿನಲ್ಲಿ ನಡೆಯುವ ಕ್ಷುಲ್ಲಕ ವಿಚಾರಗಳಬಗ್ಗೆ ಇಲ್ಲಿಯ ಶಿಕ್ಷಕನ ಲಕ್ಷ್ಯ ಹೋಗದು. ಅವನ ಜಗತ್ತು ಒಂದು ಮೊಗ್ಗೆಯಂತೆ. ಮುಸಲಧಾರೆಯಾಗಿ ಮಳೆಸುರಿಯಲಿ; ಪ್ರಖರ ಬಿಸಿಲು ಬೀಳಲಿ; ಮೊಗ್ಗೆಯ ಅಂತರಂಗಕ್ಕೆ ಅದರಿಂದೇನೂ ಹಾನಿ ತಟ್ಟದು.

ಇದನ್ನೂ ಮೀರಿದ ಕಾವ್ಯಜೀವನ ಇನ್ನೆಲ್ಲಿ ದೊರೆತೀತು? ಅಲ್ಲದೆ ಇದು ನಿರುಪಯೋಗಿ ಕಾವ್ಯವಲ್ಲ; ವಿದ್ಯಾರ್ಥಿಯು ತಪ್ಪಿದರೂ ತಿರುಗಿ ಅದನ್ನೇ ಹೇಳಿಕೊಡುವಾಗ ನಮಗಾಗುವ ಆನಂದವೆಷ್ಟೆಂದು ಹೇಳಲಿ? ನಮ್ಮ ಪ್ರತಿಯೊಂದು ಶಬ್ದವು ಅನೇಕಜೀವಿಗಳಿಗೆ ಉನ್ನತಿಯ ದುರ್ಗಮ

ಪರ್ವತವನ್ನೇರಲು ಧೈರ್ಯಕೊಡುತ್ತಿದೆಯೆಂಬ ಕಲ್ಪನೆಯಿಂದ ನನ್ನ ಶ್ರಮವೆಲ್ಲ ವಾಯವಾಗುತ್ತಿದೆ. ಜಗತ್ತಿಗೆ ತಂಪನ್ನು ನೀಡುವ ಗಾಳಿಗೆ ಅವರ ಸಂಚಾರದಿಂದ ಬೇಸರ ಬರದಿರುವಂತೆ ನಿಜವಾದ ಶಿಕ್ಷಕನಿಗೆ ಶಿಕ್ಷಣ ಕೊಡುವದರಿಂದ ಎಂದೂ ಬೇಸರಬರುವದಿಲ್ಲ. ಕುರುಡರನ್ನು ಕೈಹಿಡಿದು ನಡೆಸುವದು, ರೋಗಿಯ ಆರೈಕೆಮಾಡುವುದು, ಹಸಿದವನಿಗೆ ಹೊಟ್ಟೆ ತುಂಬ ಅನ್ನ ಹಾಕುವುದು-ಇವೇಮೊದಲಾದ ಪರೋಪಕಾರದ ಕೆಲಸಗಳಲ್ಲಿ ಶಿಕ್ಷಣವೂ ಒಂದಾಗಿರಬಹುದಲ್ಲವೇ?

ಬಡವಿದ್ಯಾರ್ಥಿಗಳು ಮುಂದೆ ಉಂಡುಟ್ಟು ಸುಖದಿಂದಿರಬಹುದೆಂದು ಕಲಿಸುತ್ತೇನೆ. ಶ್ರೀಮಂತ ವಿದ್ಯಾರ್ಥಿಗಳ ಮನಸ್ಸಿನ ಮೇಲೆ ಸಂಸ್ಕಾರವಾದರೆ ದೇಶದ ಮತ್ತು ಸಮಾಜದ ಕಲ್ಯಾಣವಾದೀತಲ್ಲ ಎಂದು ಯೋಚಿಸುತ್ತೇನೆ. ಎಲ್ಲ ಶಿಕ್ಷಕರೂ ಇದೇ ರೀತಿ ಶ್ರಮವಹಿಸಿ ಕಲಿಸಿದಲ್ಲಿ ಭಾವೀ ಹಿಂದುಸ್ಥಾನದ ಅಜ್ಞಾನ ದಾರಿದ್ರ್ಯಗಳು ಔಷಧಕ್ಕೂ ಸಿಗಲಿಕ್ಕಿಲ್ಲ. ದೇವರು ಬೇಕಾದಷ್ಟು ಭೂಮಿ ಕೊಟ್ಟಿದ್ದಾನೆ. ಕೆಲಸ ಮಾಡುವ ಒಕ್ಕಲಿಗರು ನಮಗೆ ಬೇಕಾಗಿದ್ದಾರೆ. ವಸ್ತ್ರ ನೇಯುವಾಗ ಇಲ್ಲವೆ ಹೂಬಳ್ಳಿಗಳನ್ನು ಬೆಳೆಸುವಾಗ ಲಕ್ಷ್ಯಪೂರೈಸುವಂತೆ ದೇಶದ ಮಕ್ಕಳ ಕಡೆಗೂ ಲಕ್ಷ್ಯಪೂರೈಸಿದರೆ ಎವೆ ತೆರೆದಿಕ್ಕುವಷ್ಟು ಹೊತ್ತಿನಲ್ಲಿ ನಮ್ಮ ನಾಡಿನ ಸುಧಾರಣೆಯಾದೀತು. ನನ್ನ ಸಾಲೆಯಲ್ಲಿ ೧೦೦ಕ್ಕೆ ೭೦ರಷ್ಟು ಹಿಂದುಳಿದ ವರ್ಗದವರಿದ್ದಾರೆ; ೨೦೦-೨೫೦ ಬಾಲಜೀವಿಗಳ ಆಯುಷ್ಯಕ್ಕೆ ಸಂಸ್ಕಾರ ಕೊಡುವ ಕಾರ್ಯ ನನ್ನಿಂದಾಗುತ್ತಿದೆಯೆಂಬ ಕಲ್ಪನೆಯಿಂದ ಉಂಟಾದ ಆನಂದ, ನಾನು ಎಂ ಎ. ಪರೀಕ್ಷೆಯಲ್ಲಿ ಮೊದಲ ವರ್ಗದಲ್ಲಿ ಬಂದು ಪಾಸಾದಾಗಲೂ ಉಂಟಾಗಿರಲಿಲ್ಲ.

ಅಧ್ಯಾಪನದಿಂದ ಸಿಗುವ ಆನಂದದ ವಿಷಯದಲ್ಲಿ ಎಷ್ಟು ಬರೆದರೂ ಸಾಲದು. ಅದು ಬ್ರಹ್ಮಾನಂದ-ಬೇಕಾದವರು ತಾವೇ ಅನುಭವಿಸಬೇಕು. ನನ್ನ ಸಾಲೆಯ ಮೆಟ್ರಿಕ್ ಪರಿಣಾಮ ಮಾತ್ರ ಸಮಾಧಾನಕರವಾಗಲಿಲ್ಲ. ಹೆಡ್‌ಮಾಸ್ತರರಿಗೆ ಹಣಕೂಡಿಸಲು ವೇಳೆಯ ವ್ಯಯವಾಗು

ತ್ತಿರುವುದೇ ಕಾರಣವಾಗಿರಬಹುದು. ಆದರೆ ನಾನೂ ಮಧುಕರ ದೇಸಾಯಿಯವರೂ (ಇವರ ಕವನಗಳನ್ನು ಪತ್ರಿಕೆಗಳಲ್ಲಿ ಓದಿರಬಹುದು.) ಸೇರಿದ್ದರಿಂದ ಈ ವರ್ಷ ಹಾಗಾಗಲಿಕ್ಕಿಲ್ಲ. ಸಾಂಗಲಿಯಿಂದ ಬರುವಾಗ ಬಂಡಿಯಲ್ಲಿ ಜೊತೆಗೆ ಬಂದ ಭಂಡಾರಿ ಜಾತಿಯ ಯಮುನಾಬಾಯಿಯೆಂಬವಳ ತಮ್ಮ ಜಗನ್ನಾಥ ಪರೀಕ್ಷೆಗೆ ಕೂತಿದ್ದ. ಆದರೆ ನಾಪಾಸಾದ. ಪಾಸಾಗಿದ್ದರೆ ಎಲ್ಲಿಯಾದರೂ ಚಿಕ್ಕ ನೌಕರಿ ಹಿಡಿದು ಮನೆಯವರ ಉಪಜೀವನ ಸಾಗಿಸುತ್ತಿದ್ದ.

ಅಮ್ಮನ ಆರೋಗ್ಯ ಚೆನ್ನಾಗಿದೆ. ನಿನ್ನನ್ನು ಅವಳು ಫೋಟೋದಲ್ಲಿ ಮಾತ್ರ ನೋಡಿರುವಳಾದರೂ ನಿನ್ನ ಪತ್ರ ಬಂದಿದೆಯೋ ಹೇಗೆಂದು ವಿಚಾರಿಸುತ್ತಾಳೆ. ಮಳೆಗಾಲ ಸಮೀಪಿಸಿದ್ದರಿಂದ ಕಳೆದ ವರ್ಷದಂತೆ ಪುನಃ ವಾತದಿಂದ ಸಂದುಹಿಡಿದು ಬೀಳಬಹುದೆಂಬ ಭಯವು ಬಾಧಿಸುತ್ತಿದೆ. ಸಾಂಗಲಿಯಲ್ಲಿ ನಾನು ಕೂಡಿಸಿಟ್ಟ ಹಣದಿಂದ ಆಭರಣ ಮಾಡಿಸಿದ್ದಾಳೆ. ಅದು ಯಾರಿಗಾಗಿರಬಹುದೆಂದು ನೀನು ತಿಳಿದಿರಬಹುದು. ತಾಯಿಯೆಂದರೆ "ಮಗನನ್ನು ತೊಟ್ಟಿಲೊಳಗೆ ಹಾಕುವದಕ್ಕಿಂತ ಮುಂಚೆಯೇ ಸೊಸೆಯ ಆಭರಣಕ್ಕಾಗಿ ಚಿಂತಿಸುವವಳೆ"ಂದು ನನಗನಿಸುತ್ತಿದೆ.

ನಿನಗೆ ಬರೆಯಬೇಕಾದ ಇನ್ನೊಂದು ಸಂಗತಿ ಉಳಿದೇ ಬಿಟ್ಟಿತ್ತು. ಅದನ್ನು ಬರೆಯಬೇಕೋ ಬೇಡವೋ ಎಂದು ಅನೇಕ ದಿನಗಳಿಂದ ಯೋಚಿಸುತ್ತಲಿದ್ದೆ. ಆದರೆ ಧ್ರುವಪ್ರದೇಶದಲ್ಲಿ ಆರು ತಿಂಗಳ ರಾತ್ರಿಯ ನಂತರ ಸೂರ್ಯೋದಯವಾಗುವಂತೆ ಜೀವದ ಗೆಳೆಯರಲ್ಲಿಯೂ ಒಂದಲ್ಲ ಒಂದು ದಿನ ರಹಸ್ಯ ಪ್ರಕಟವಾಗತಕ್ಕದ್ದೇ! ಕಳೆದ ಎರಡು ತಿಂಗಳಲ್ಲಿ ನನಗೆ ಇಬ್ಬರು ಹುಡುಗಿಯರ ಪರಿಚಯವಾಗಿದೆ. ಈ ವಾಕ್ಯ ಓದಿದೊಡನೆ ನೀನಾವ ವಿಚಾರದಿಂದ ತಲೆಯಲ್ಲಾಡಿಸಬಹುದೆಂಬ ಚಿತ್ರ ಈಗಲೇ ಕಣ್ಣಮುಂದೆ ಬರತೊಡಗಿದೆ. ಸರದಾರಗೃಹದಲ್ಲಿ ಕೇವಲ ಎರಡೇ ದಿನ ನೋಡಿದ ಮಾತ್ರಕ್ಕೆ ಆ ಹುಡುಗಿಯ ಪ್ರೇಮದಲ್ಲಿ ಗುಂಗಾಗಿಬಿಟ್ಟೆ

ಷ್ಟಿ. ಆದ್ದರಿಂದ ನನಗಿಬ್ಬರು ಹುಡುಗಿಯರ ಪರಿಚಯವಾಗಿದೆಯೆಂಬುದನ್ನು ಓದಿದೊಡನೆಯೇ 'ಕಳ್ಳನನ್ನು ಕಂಡು ಒದರುವ ಮನೆಮಾಲೀಕ'ನಂತೆ ನೀನು "ಪ್ರೇಮ, ಪ್ರೇಮ" ಎಂದು ಗರ್ಜನೆ ಮಾಡಿಬಿಡಬಹುದು. ಆದರೆ ನಿಜವಾಗಿಯೂ ಪ್ರೇಮ-ಗೀಮ ಒಂದೂ ಇಲ್ಲ. ಬರೀ ಪರಿಚಯ ಮಾತ್ರವಾಗಿದೆ. ಸಾಂಗಲಿಯಲ್ಲಿರುವಾಗ ಯಾವುದೇ ಒಂದು ಹುಡುಗಿಯೊಡನೆ ನಾಲ್ಕು ಮಾತಾಡುವದೆಂದರೆ ಸಂಕೋಚದಿಂದ ಜೀವದ ಸುತ್ತು ಬಂದಂತಾಗುತ್ತಿತ್ತು. ಆದರೆ ಈ ಹುಡುಗಿಯರೊಡನೆ ನಾನು ಬೇಕಾದಷ್ಟು ಮಾತನಾಡಿದ್ದೇನೆ. ಹವೆಯಲ್ಲಿಯ ಬಾಷ್ಪವು ಪೃಥ್ವಿಯ ಮೇಲೆ ಇಳಿದೊಡನೆಯೇ ಮಂಜಿನರೂಪ ಧರಿಸುವಂತೆ ವ್ಯವಹಾರದಲ್ಲಿ ಬಿದ್ದಮೇಲೆ ಮನುಷ್ಯನ ಸ್ವಭಾವದಲ್ಲಿಯೂ ತುಸು ಮಾರ್ಪಾಟಾಗುತ್ತಿದೆಯೆಂದು ಮಾತ್ರ ಇದರಿಂದ ಸಿದ್ಧವಾಗುತ್ತಿದೆ; ಹೊರತು ಇನ್ನೇನಿಲ್ಲ. ಆದರೆ ನಿನ್ನಂತಹ ರಸಿಕನಿಗೆ ನನ್ನ ಬರವಣಿಗೆ ನಿಜವೆನಿಸಲಾರದು. ಆದ್ದರಿಂದ ಇನ್ನೂ ಸ್ವಲ್ಪ ಸ್ಪಷ್ಟವಾಗಿಯೇ ಬರೆಯುತ್ತೇನೆ. ಒಬ್ಬಳು I. C. S ಇಲ್ಲವೆ ಬೆರಿಸ್ಟರನಿಗೇ ಕೊಡಬೇಕೆಂದು ತಂದೆಯಿಂದ ನಿರ್ಧರಿಸಲ್ಪಟ್ಟವಳು. ಆದರಿಂದ ನನಗೆ ಸಿಗುವುದು ಸಾಧ್ಯವಿಲ್ಲ. ಇನ್ನೊಬ್ಬಳು-ಇನ್ನೊಬ್ಬಳು-ಇನ್ನೊಬ್ಬಳಿಗೆ ಇತ್ತಿತ್ತಲಾಗಿ ನಮ್ಮ ಮನೆಯೇ ಬಂದಾಗಿ ಬಿಟ್ಟಿದೆ.

ಬರೆಯುವಾಗ ತಪ್ಪಿ ಬಿದ್ದ ಹಾಗೂ ಅನಾವಶ್ಯಕವಿದ್ದ "ಇನ್ನೊಬ್ಬಳು" ಎಂಬುದನ್ನು ಹೊಡೆಯಲು ಲೆಕ್ಕಣಿಕೆ ಹಿಡಿದಿದ್ದ. ಅಷ್ಟರಲ್ಲಿ ಯಾರೋ ಬಂದ ಸಪ್ಪು ಕೇಳಿಸಿದ್ದರಿಂದ ಅವನು ಕಿಡಕಿಯ ಕಡೆ ನೋಡಿದನು. ಭಯಭೀತಮುದ್ರೆಯಿಂದ ಕೈಯಲ್ಲಿ ದೀಪ ಹಿಡಿದು ಸುಧೆಯು ನಿಂತಿದ್ದಳು. ಸುಧಾಕರನು ಪತ್ರವನ್ನು ಅಲ್ಲಿಯೇ ಒಗೆದು ಹೊರಬಂದನು.

# ಪ್ರಕರಣ ೧೭

ಸುಧೆಯು ದೀಪ ಹಿಡಿದಿದ್ದಳು. ಸುಧಾಕರನು "ಏನಾಯಿತೆಂ"ದು ಕೇಳಿದನು.

"ಅತ್ತಿಗೆಗೆ ಹೊಟ್ಟೆ ನೋಯುಹತ್ತಿದೆ."

ಮಾಲಾವಲಿ ಶಾಸ್ತ್ರಿಗಳಿಂದ ಏಕಾದಷ್ಣಿ ಮಾಡಿಸಿ ದೇವರಿಗೆ ಸಶೀಲಿ ಹಚ್ಚಿಸಿದರೂ ಸಾಧ್ಯವಾಗಲಿಲ್ಲವೆಂಬ ವಿಚಾರ ಸುಧಾಕರನಿಗೆ ಬಂದಿತು. ಆದರೆ ವ್ಯಂಗ ವಿಚಾರಗಳಲ್ಲಿ ವೇಳೆ ಕಳೆಯುವಂತಿರಲಿಲ್ಲ. ಕೂಡಲೇ ತಾಯಿಯನ್ನು ಎಬ್ಬಿಸಿದ. ಮಾಲಾವಲಿಯಲ್ಲಿ ಸುಧೆಯು ತಮ್ಮ ಮನೆಯಲ್ಲಿ ಮಲಗಿದ್ದಕ್ಕೆ ಅತ್ತಿಗೆಯು ಮಾಡಿದ ಅಕಾಂಡತಾಂಡವ- ಜಯಗಾಂವಕ್ಕೆ ಬಂದ ಮೇಲೆ ಅವಳಿಗೆ ತನ್ನ ಮನೆಗೆ ಬಾರದಂತೆ ಮಾಡಿದುದು; ಇವೆಲ್ಲ ಜಾನಕಿಯಮ್ಮನಿಗೆ ನೆನಪಿರಲಿಲ್ಲವೆಂದಲ್ಲ. ಆದರೆ ಸಂಕಟಸಮಯದಲ್ಲಿ ತಮ್ಮ ಮಾನಾಪಮಾನವನ್ನು ಮರೆಯುವದು ಸಜ್ಜನರ ಲಕ್ಷಣವೇ ಸರಿ. ದಂಡೆಯು ಮಣ್ಣು ತನ್ನ ನೀರನ್ನು ಕದಡಿ ಹೊಲಸು ಮಾಡಿಬಿಟ್ಟರೂ ನದಿಯು ಅದರ ಮೇಲಿನ ಗಿಡಬಳ್ಳಿಗಳನ್ನು ಬದುಕಿಸುವ ಕಾರ್ಯವನ್ನೆಂದಿಗೂ ಬಿಡುವದಿಲ್ಲ. ಜಾನಕಿಯಮ್ಮನವರು ಬಾಗಿಲೆಳೆದುಕೊಂಡು ದಾದಾಸಾಹೇಬರ ಮನೆಗೆ ಹೊರಟುಹೋದರು. ಮನೆಯು ಒಂದೇ ಕೂಗಳತೆಯಲ್ಲಿತ್ತು.

"ಡಾಕ್ಟರರ ಬಳಿಗೆ ಆಳನ್ನು ಕಳಿಸಿರುವಿರಾ?"

"ಸದ್ಯ ಆಳು ಗೀಳು ಯಾರೂ ಇಲ್ಲ. ಸಾಲೆ ಸುರುವಾದ ಮೇಲೆ ಸಾಲೆ-ಶಿಪಾಯಿಯೇ ಇಲ್ಲಿ ಕೆಲಸಮಾಡುತ್ತಾನೆ."

"ಹಾಗಾದರೆ ನಾನೇ ಡಾಕ್ಟರರ ಬಳಿ ಹೋಗುವೆ."

ಸುಧಾಕರನು ಡಾಕ್ಟರರ ಮನೆಗೆ ಹೋಗುವೆನೆಂದರೂ ಆತನಿಗೆ ಡಾಕ್ಟರರ ಮನೆಯ ಸರಿಯಾದ ಪರಿಚಯವಿರಲಿಲ್ಲ. ಜಯಗಾಂವಕ್ಕೆ

ಬಂದಂದಿನಿಂದ ಆತನಿಗೆ ಮೇಲಿನ ವರ್ಗದ ವಿದ್ಯಾರ್ಥಿಗಳ ನಗುಮೊಗ, ಸದೈವವೂ ನರ್ತಿಸುತ್ತಿರುವ ಸಮುದ್ರದ ತೆರೆ, ದಿನ್ನೆಯ ಮೇಲಿಂದ ಸಂಧ್ಯಾಕಾಲದಲ್ಲಿ ಪಶ್ಚಿಮಾಂಗನೆಯು ಹೂಡುವ ಜಾದುವಿನಾಟ–ಇವುಗಳ ಹೊರತು ಇನ್ನಾರ ಪರಿಚಯವೂ ಇರಲಿಲ್ಲ. ಡಾಕ್ಟರರ ದವಾಖಾನೆಯ ಬೋರ್ಡನ್ನು ಪೇಟೆಯಲ್ಲೆಲ್ಲಿಯೋ ಕಂಡಿದ್ದ. ಆದರೆ ಈ ಅಪರರಾತ್ರಿಯಲ್ಲಿ ಅವನ ಮನೆ ಹುಡುಕಲು ಹೊರಡುವದೆಂದರೆ ಹಿಂದುಸ್ಥಾನವನ್ನು ಶೋಧಿಸ ಹೊರಟ ಕೋಲಂಬಸನ ಸಾಲಿನಲ್ಲಿ ಸೇರುವ ಹವ್ಯಾಸಹಿಡಿದಂತೆ.

"ವಾರುಣಿಯ ಮನೆಯ ಪರಿಚಯವಿದೆಯಲ್ಲವೇ?" ಎಂದು ಸುಧೆಯು ಕೇಳಿದಳು.

"ಹುಂ"

ಜಯಗಾಂವಕ್ಕೆ ಬಂದಮೇಲೆ ಎಲ್ಲಿಯೋ ಒಮ್ಮೆ ರಾವಸಾಹೇಬರ ಮನೆಗೆ ಹೋಗಿದ್ದ. ಆದರೆ ಪ್ರವಾಹದಿಂದ ನದಿಯ ಪಾತ್ರರಚನೆಯಾಗುವಂತೆ ಬಳಕೆಯಿಂದ ಪ್ರೀತಿಯುತ್ಪನ್ನವಾದೀತೆಂಬ ಶಂಕೆಯಿಂದ ಆತ ತಿರುಗಿ ಒಮ್ಮೆಯೂ ಅತ್ತ ಸುಳಿದಿರಲಿಲ್ಲ. ಮಾತನಾಡುವಪ್ರಸಂಗವೇ ಬಾರದಿದ್ದಂಥವರ ಹೆಸರುಕೇಳುತ್ತ ಕೂಡ್ರುವದೆಂದರೆ ವ್ಯರ್ಥವೇಳೆ ಹಾಳು. ಅದರಂತೆ ಸಂಸಾರದ ಪ್ರವಾಸದಲ್ಲಿ ಯಾವ ಊರಿಗೆ ಹೋಗತಕ್ಕದ್ದಿರುವದಿಲ್ಲವೋ– ಆ ದಾರಿಯಿಂದ ಸ್ವಲ್ಪಮುಂದೆ ಹೋಗುವದೂ ನಿಷ್ಪ್ರಯೋಜಕವೆಂದು ಆತ ಅರಿತಿದ್ದ. ಆದರೆ ವಾರುಣಿಯ ಮನೆಗೆ ಹೋಗುವ ಮಾತು ಬಂದೊಡನೆ ಅವಳ ಸುಂದರಮೂರ್ತಿಯು ಅವನ ಕಣ್ಣಮುಂದೆ ನಿಂತಿತು.

"ಅವಳ ಮನೆಯ ಹತ್ತಿರವೇ ಡಾಕ್ಟರರ ಮನೆಯಿದೆಯೋ?"

"ಇಲ್ಲ. ವಾರುಣಿಯ ಚಿಕ್ಕಮ್ಮ ಸೂಲಗಿತ್ತಿಯ ಕೆಲಸ ಕಲಿತಿರುವಳಂತೆ. ಅವರನ್ನು ಕರೆದರೂ ನಡೆದೀತು."

ದಾದಾಸಾಹೇಬರ ಮನೆಯಿಂದ ಹೊರಟೊಡನೆ ಸುಧಾಕರನು ಸುಧೆಯ ಕಡೆಯಿಂದ ದೀಪವನ್ನು ಹಿಡಿದುಕೊಂಡ. ಲಾಂದ್ರವನ್ನು ನೆಲದ

ಮೇಲಿಟ್ಟು ಬಾಗಿಲನ್ನೆಳೆಯಬೇಕೆಂದು ಸುಧೆಯ ವಿಚಾರವಿತ್ತು. ಆದರೆ ಸುಧಾಕರನು ಕೈಮುಂದೆ ಮಾಡಿದ್ದರಿಂದ ಅವಳ ಕೈಯ್ಯು ಮುಂದೆ ಸರಿಯಿತು. ದೀಪತೆಗೆದುಕೊಳ್ಳುವಾಗ ಬೆರಳು ಸೋಂಕಿತು. ವರ್ಷಾಧಾರೆಯು ಸುರಿದು ಹೋದಮೇಲೆ ಪಕ್ಷಿಗಳ ಸ್ಪರ್ಶವಾಗಲು, ಲತೆಯು ಕೋಮಲ ರೆಂಬೆಗಳು ಕಂಪಿತವಾಗಿ ಅದರ ಮೇಲಿನ ನೀರ ಹನಿಯು ನೆಲದ ಮೇಲೆ ಉದುರುವಂತೆ, ಈ ಕ್ಷಣಿಕ ಸ್ಪರ್ಶದಿಂದ ಕೈಯ್ಯು ಕಂಪಿಸಿ ಹೃದಯದಲ್ಲಿ ಹೊಸತೊಂದು ಭಾವನೆ ಮೆಲ್ಲಗೆ ಸೇರಿದಂತೆ ಸುಧೆಗೆ ಭಾಸವಾಯಿತು. ಬಾಗಿಲು ಮುಂದೆ ಮಾಡುವ ಮೊದಲು ಅವಳೊಮ್ಮೆ ತಿರುಗಿ ನೋಡಿದಳು. ಸುಧಾಕರನ ಕೈಯ್ಯೊಳಗಿನ ದೀಪದ ಬೆಳಕು ಮಿಂಚುಹುಳದಂತೆ ಚಿಕ್ಕದಾಗಿ ಕಾಣಹತ್ತಿತ್ತು.

ಈ ಸ್ಪರ್ಶದಿಂದಲೋ ಅಥವಾ ಅತ್ತಿಗೆಯ ಪ್ರತಿಬಂಧಕಾಜ್ಞೆಯಿಂದ ಸುಧೆಯ ದರ್ಶನ ದುರ್ಲಭವಾದದ್ದರಿಂದಲೋ ಸುಧಾಕರನ ಮನಸ್ಸಿನಲ್ಲಿ ಸುಧೆಯ ವಿಚಾರವೇ ತುಂಬಿತ್ತು. ಅತ್ತಿಗೆಯ ಹೊಟ್ಟೆ ನೋಯುತ್ತಿದ್ದುದರಿಂದ ಸೂಲಗಿತ್ತಿಯನ್ನು ಕರೆಯಹೊರಟಾಗ ಇಂಥ ವಿಚಾರಮಾಡುವುದು ಅನುಚಿತವೆಂದು ಮನಸ್ಸು ಒಮ್ಮೆ ಹೇಳುವದು; ಆದರೆ ಕ್ಷಣಾರ್ಧದಲ್ಲಿಯೇ ಆ ಮನಸ್ಸಿನ ಪರಾಭವವಾಗುವದು. "ಸುಧೆಯ ರೂಪು, ಅವಳ ಸ್ವಭಾವ, ಅವಳ ಬುದ್ಧಿ-ಇವೆಲ್ಲ ಭೂತದ ಕಲ್ಪನೆಯಿಂದ ಪಾಳುಬಿದ್ದ ಸುಂದರ ಮಂದಿರದಂತೆ ಇದ್ದೂ ಇಲ್ಲದಂತಾಯಿತಲ್ಲವೇ? ಯಾವುದಾದರೊಂದು ದಾರಿತೋರೋಣವೆಂದರೆ ನಮ್ಮ ಮನೆಗೆ ಬರಲಿಕ್ಕೂ ಪ್ರತಿಬಂಧ; ವಿಧವೆಗೆ ಜಗತ್ತಿನಲ್ಲಿ ಯಾವ ಹಕ್ಕೂ ಇಲ್ಲ. ತೊತ್ತಿನಂತೆ ಕೆಲಸ ಮಾಡುವದಾದರೆ ಎಲ್ಲರಿಗೂ ಬೇಕು ಸುಧೆಯಂತಹ ಹುಡುಗಿಯನ್ನು ಇಂತಹ ಕೊಳೆಯಲ್ಲಿ ಕೊಳೆಯಗೊಡುವದೆಂದರೆ ದೊಡ್ಡ ಪಾಪವಲ್ಲವೇ? ಜಗತ್ತಿನಲ್ಲಿ ಬಿಲ್ಲಿದುಡ್ಡಿಗೂ ಬೇಡವಾಗಿರುವ ಬಡಜನರು ತುಂಬಿರುವಾಗ ದೇವಸ್ಥಾನದ ಕಲ್ಲಿನ ಮೆಟ್ಟಿಲು ರೂಪಾಯಿಗಳಿಂದ ಮುಚ್ಚಲ್ಪಟ್ಟಿದೆ. ವಿಧವೆಯ ಜೀವನವೆಂದರೆ ದೇವದ್ವಾರಕ್ಕೆ ಅಂಟಿಸಿದ ಹರಳಿನಂತೆ. ಅದಕ್ಕೆ ಕೃತ್ರಿಮ ಪಾವಿತ್ರ್ಯವಿದೆಯೇ ಹೊರತು

ವ್ಯಾವಹಾರಿಕ ಪ್ರಯೋಜನವಿಲ್ಲ ಅಂತಹ ಪಾವಿತ್ರ್ಯದಿಂದೇನು ಪ್ರಯೋಜನ? "

ರಾವಸಾಹೇಬರ ಮನೆಗೂ ದಾವಾಸಾಹೇಬರ ಮನೆಗೂ ಒಂದು ಮೈಲು ಅಂತರವಿತ್ತು. ರಾವಸಾಹೇಬರ ಮನೆಯು ಹತ್ತಿರವಾದಂತೆಲ್ಲ ವಾರುಣಿಯ ವಿಚಾರ ಬರಹತ್ತಿತು. "ವಾರುಣಿಯು ಈಗ ಏನು ಮಾಡುತ್ತಿರಬಹುದು? ನನ್ನನ್ನು ಕಂಡು ಅವಳಿಗೆಷ್ಟು ಆಶ್ಚರ್ಯವಾದೀತು? ಓಹೋ, ವಾರುಣಿಯ ಸೌಂದರ್ಯ! ದೇವರು ಇಂತಹ ಮೋಹಕಸ್ವರೂಪವನ್ನು ಸ್ತ್ರೀಯರಿಗೇಕೆ ಕೊಟ್ಟಿರಬಹುದು? ಸದಾನಂದ ಸ್ವಾಮಿಯವರ ಅಭಿಪ್ರಾಯದಂತೆ ಪುರುಷನನ್ನು ಧ್ಯೇಯಭ್ರಷ್ಟನನ್ನಾಗಿ ಮಾಡುವದಕ್ಕೆಂದೇ ದೇವರು ಸ್ತ್ರೀಯರನ್ನು ನಿರ್ಮಿಸಿರಲಿಕ್ಕಿಲ್ಲವಷ್ಟೇ? ಇವ್ಹಳು ಆದಮನಿಗೆ ಜ್ಞಾನವೃಕ್ಷದ ಫಲವನ್ನು ತಿನ್ನಹಚ್ಚಿದ್ದರಿಂದ ಆತನು ನಂದನವನಕ್ಕೆ ಎರವಾದ. ಅದರಂತೆ ಸ್ತ್ರೀಯೂ ಪುರುಷನಿಗೆ ವೈಭವ ವೃಕ್ಷದ ಕೈಗೆ ನಿಲುಕದ ಫಲವನ್ನು ತೆಗೆಯಹಚ್ಚಿ ಆತನಿಂದ ಪರೋಪಕಾರವಾಗದಂತೆ ಮಾಡುತ್ತಿರಬಹುದು. ಸ್ತ್ರೀಯು ಪಾಶವೆಂದರೆ ಧ್ಯೇಯವಾದಿಗೆ ಹಿಂದಕ್ಕೆಳೆಯುವ ಕಡಿವಾಣ."

ಆದರೆ.... ಇದೊಂದೇ ಬದಿಯಿಂದ ವಿಚಾರ ಮಾಡಿದರೆ ಸ್ತ್ರೀಯರಿಗೆ ಅನ್ಯಾಯ ಮಾಡಿದಂತಾಗದೇ? ಆಮ್ರಫಲಕ್ಕೆ ಸುಂದರ ಬಣ್ಣದಂತೆ ಮಧುರ ರಸವನ್ನೂ ದೇವರು ಕೊಟ್ಟಿರುತ್ತಾನೆ. ಸ್ತ್ರೀಯರಲ್ಲಿಯೂ ಲಾವಣ್ಯದೊಡನೆ ಭಕ್ತಿಯೂ ಕಂಡುಬರುತ್ತಿದೆ. ಪುರುಷನು ಹೆಚ್ಚೆಂದರೆ ಉತ್ಕಟಪ್ರೇಮವನ್ನು ವ್ಯಕ್ತಗೊಳಿಸಬಲ್ಲ. ಆದರೆ ಭಕ್ತಿಮಾಡುವುದು ಸ್ತ್ರೀಯ ಜನ್ಮಸಿದ್ಧ ಹಕ್ಕು. ಸ್ತ್ರೀಯು ಕಟಾಕ್ಷಜಾಲದಲ್ಲಿ ಪುರುಷನನ್ನು ಬಂಧಿಸಿ, ಅದಕ್ಕೆ ಪ್ರೇಮದ ಜೋಡಣೆಯನ್ನಿತ್ತು ಅವನ ಗತಿಯನ್ನು ಇಮ್ಮಡಿಸಬಲ್ಲಳು. ಅವಳ ಕಪೋಲದ ಅರುಣ ಪ್ರಭೆಗಿಂತ ಹೃದಯದ ಸೌಜನ್ಯ; ನೇತ್ರದ ಕಾಂತಿಗಿಂತ ತ್ಯಾಗದ ಕೈ; ಅರೆದೆರೆದ ಮೊಗ್ಗೆಯಂತೆ ತೋರುವ ಅಧರಕ್ಕಿಂತ ಮುಗ್ಧಹೃದಯ; ಕೋಮಲ ಬಾಹುಪಾಶಕ್ಕಿಂತ ಮೃದುಭಾವನೆಗಳ ಬೆಲೆ ನೂರುಪಟ್ಟಿಗೆ ಮೀರಿರುವದಿಲ್ಲವೇ ? ದ್ರಾಕ್ಷೆಯಿಂದ ಮದ್ಯತಯಾರಿಸುತ್ತಾರೆಂದ ಮಾತ್ರಕ್ಕೆ ಅದರಲ್ಲಿ ಅಮೃತ

ರಸವಿಲ್ಲವೆಂದೆನ್ನಲಾಗದು. ಒಬ್ಬನನ್ನು ಸುಡಬಲ್ಲ ವಿದ್ಯುತ್ತು ವಾತದಿಂದ ನಡೆಯುವವನಲ್ಲಿ ಚಾಲನ ಚೈತನ್ಯವನ್ನುಂಟುಮಾಡ ಬಲ್ಲುದು. ನದಿಯ ನೆಗಸಿನಿಂದ ಊರಿಗೆ ಊರೇ ಬಳಿದುಹೋಗುತ್ತ ದೆಂದ ಮಾತ್ರಕ್ಕೆ ನದಿಯು ಜಗತ್ತಿಗೊಂದು ವಿಪತ್ತೆಂದು ಸಾರ ಬಹುದೇ? ಸ್ತ್ರೀಯರಲ್ಲಿ ಮೋಹಿನಿಯಿದೆ. ಆದರೆ ಆ ಮೋಹಿನಿಯಷ್ಟೇ ದಿವ್ಯಭಕ್ತಿಯೂ ಇದೆ. ಜಗತ್ತು ಆಕೆಯ ಮೋಹಕಶಕ್ತಿಗೆ ಮರು ಳಾಗಿ ಸುತ್ತಲೂ ಕುಣಿಯಹತ್ತುತ್ತದೆ. ಈ ಕುಣಿತದ ಮೂಲಕ ಸ್ತ್ರೀಯಳ ಕಣ್ಣಿಗೂ ಮದವೇರಿ ತನ್ನ ಸತ್ವವನ್ನು ಮರೆತುಬಿಡು ತ್ತಾಳೆ. ಧ್ಯೇಯ ಪ್ರಚೋದಕ ಶಿಕ್ಷಣವಿಲ್ಲದ ಮೂಲಕ ಸ್ತ್ರೀಗೆ ತನ್ನ ಹೃದಯದಲ್ಲಿಯ ಉಚ್ಚ ಭಾವನೆಗಳ ತಿಳುವಳಿಕೆಯೂ ಸಹಜವಾಗಿ ಗೊತ್ತಾಗುವದಿಲ್ಲ. ಆದರೆ ಆ ತಿಳುವಳಿಕೆ ಇಲ್ಲವೆಂದು ಸ್ತ್ರೀಯನ್ನು ದೂಷಿಸುವದು ತಪ್ಪಲ್ಲವೇ?

ಅನತಿದೂರದಲ್ಲಿ ಮಾರ್ಗದ ಬದಿಯಲ್ಲಿ ಒಬ್ಬಿಬ್ಬರು ಏನೋ ಮಾಡುತ್ತಿದ್ದಂತೆ ಕಂಡುಬಂದದ್ದರಿಂದ ಸುಧಾಕರನು ಅತ್ತ ಧಾವಿಸಿದ. ಅಮಲೇರಿ ಗಂಗಾಧರನು ಹೊಂಡದಲ್ಲಿ ಬಿದ್ದಿದ್ದ. ಅವನನ್ನು ಎತ್ತು ವದಕ್ಕಾಗಿ ಜಗನ್ನಾಥ, ಯಮು ಪ್ರಯತ್ನಿಸುತ್ತಿದ್ದರು. ಆದರೆ ಗಂಗಾ ಧರನು ಗರಗರನೆ ಕಣ್ಣು ತಿರುಗಿಸುತ್ತ ಸಿಕ್ಕಂತೆ ಒದರುತ್ತಿದ್ದ. ಸುಧಾಕರನು ಅವನನ್ನು ಎಬ್ಬಿಸಲು ನೆರವಾದುದರಿಂದ ಅವನಿಗೂ ಬಯ್ಗಳ ಉಡುಗರೆ ದೊರೆಯಿತು. ಅದನ್ನೆಲ್ಲ ಗಮನಿಸುತ್ತ ನಿಲ್ಲಲು ಸುಧಾಕರನಿಗೆ ಸಮಯವಿರಲಿಲ್ಲ. ಆತನು ಲಗುಬಗೆಯಿಂದ ರಾವ ಸಾಹೇಬರ ಮನೆಯನ್ನು ಸಮೀಪಿಸಿದ. ರಾವಸಾಹೇಬರ ಮನೆಯ ಕಿಡಕಿಯೊಂದರಿಂದ ದೀಪದ ಕಿರಣ ಕಾಣಿಸುತ್ತಿತ್ತು. ನಿದ್ದೆಬಾರ ದ್ದರಿಂದ ರಾವಸಾಹೇಬರೇ ಯಾವದಾದರೊಂದು ಪುಸ್ತಕವನ್ನೋದು ತ್ತಿರಬಹುದೆಂದು ಕಿಡಕಿಯ ಬಳಿಯಲ್ಲಿ, ನಿಂತು 'ರಾವಸಾಹೇಬ' ಎಂದು ಕರೆದ. ಆದರೆ ಕಿಡಕಿಯ ಬಾಗಿಲನ್ನು ತೆರೆದವರು ರಾವ ಸಾಹೇಬರಿರದೆ ವಾರುಣಿಯಾಗಿದ್ದಳು.

"ನಿಮಗೆ ನೂರು ವರ್ಷ ಆಯುಸ್ಸು. ಈ ಕಾದಂಬರಿಯನ್ನೋ ದುತ್ತ ಹೋದಂತೆ ನಿಮ್ಮ ನೆನಪಾಗಿತ್ತು."

"ನೂರರಲ್ಲಿ ಇಪ್ಪತ್ತೈದು ಕಳೆಯಿತು. ಇರಲಿ; ಈಗ ತುಸು ಬಾಗಿಲನ್ನಾದರೂ ತೆರೆಯಿರಿ."

ಸುಧಾಕರನು ಬಂದ ಕಾರಣವನ್ನು ತಿಳಿಸಲು, ವಾರುಣಿಯು ಚಿಕ್ಕಮ್ಮನನ್ನು ಎಬ್ಬಿಸಲು ಹೋದಳು. ಸುಧಾಕರನು ಆಕೆ ತೆರೆದಿಟ್ಟ ಕಾದಂಬರಿಯನ್ನು ಎತ್ತಿಕೊಂಡ. ಅದು ಹೀನ ಭಾವನೆಗಳಿಗೆ ಉತ್ತೇಜನವನ್ನು ಕೊಡುವ ಕಾದಂಬರಿಯಾಗಿದ್ದಿತು. ಅಲ್ಲದೆ ಅದರಲ್ಲಿ ಅನೇಕ ಶೃಂಗಾರಿಕ ಚಿತ್ರಗಳೂ ಇದ್ದವು. ವಾರುಣಿಯಂತಹ ಹದಿನೆಂಟು ವರುಷದ ಅಪ್ರಬುದ್ಧ ಕುಮಾರಿಕೆಯ ಕೈಯ್ಯಲ್ಲಿ ಇಂತಹ ಪುಸ್ತಕವಿರುವದನ್ನು ಕಂಡು ಆವನಿಗೆ ಅತಿಶಯ ವಿಷಾದವೆನಿಸಿತು ಆತ ಸಿಟ್ಟಿನಿಂದ ಅದನ್ನು ದೂರ ಎಸೆದು ಕೋಣೆಯಲ್ಲಿ ಅತ್ತಿತ್ತ ಅಡ್ಡಾಡಹತ್ತಿದ. ಜಾಳಿಗೆಯಂತಹ ವಸ್ತ್ರ, ಕಾಗದದ ಹೂ, ಮೇಜಿನ ಮೇಲಿನ ಸಂಗಮವರೀಕಲ್ಲಿನ ಮೂರ್ತಿ ವಾರುಣಿಯ ಸೌಂದರ್ಯ ಪ್ರೀತಿಯ ಪ್ರತೀಕವಾಗಿ ನಿಂತಿದ್ದವು. ಅಷ್ಟರಲ್ಲಿ ರಾವಸಾಹೇಬ ವಾರುಣಿಯರು ಕೋಣೆಯಲ್ಲಿ ಕಾಲಿಟ್ಟರು.

"ಏನು ಸ್ವಾಮಿ, ಚಿತ್ರ ನೋಡ್ತಾ ಇದ್ದೀರಾ? ಇಲ್ಲಿ ನಿಮಗೆ ಟಿಳಕ--ಬಿಳಕರ ಚಿತ್ರ ಸಿಗಲಿಕ್ಕಿಲ್ಲ!"

ಸುಧಾಕರನಿಗೆ ರಾವಸಾಹೇಬರ ವಾಚಾಳಿತನ ಗೊತ್ತು.

"ಚಿಕ್ಕಮ್ಮ ಎಲ್ಲಿದ್ದಾರೆ?" ಎಂದು ವಾರುಣಿಯನ್ನು ಕೇಳಿದ.

"ಈಗ ಬರಬಹುದು. ನೋಡಿ, ನಮ್ಮ ಓಲ್ಡ್ ಫೋಕ್ಸ ಸಾಹೇಬರ ಹೇಳಿಕೆಯಿಂದಲೇ ಅವರು ಸೂಲಗಿತ್ತಿಯಾದರು. ನೋಡಿ; ನಮಗೇನು ಇದೊಂದು ದಂಧೆಯಲ್ಲದಿದ್ದರೂ ಪಡಕೊಂಡ ಜ್ಞಾನ ಹಾಳಾಗುವದಿಲ್ಲವೆಂದು ಮಾತ್ರ ಕಲಿಸಿದ್ದೇವೆ."

ಚಿಕ್ಕಮ್ಮನವರು ಬಾಗಿಲಲ್ಲಿ ಕಾಣಿಸಿಕೊಂಡರು. ಅವರ ರೂಪು ವಿಲಾಸ ಹರೆಯದ ಕೊನೆಯಲ್ಲಿರುವ ವಿಧವೆಗೆ ಒಪ್ಪುವಂತಿರಲಿಲ್ಲ.

ದಾದಾಸಾಹೇಬರ ಮನೆ ಮುಟ್ಟಿದಾಗ ಅವರ ಹೆಂಡತಿಗೆ ಜಾನಕಿಯಮ್ಮನವರ ಶುಶ್ರೂಷೆಯಿಂದ ಹೊಟ್ಟೆನೋವು ಕಡಿಮೆಯಾಗಿತ್ತು. ವಾರುಣಿಯು ಚಿಕ್ಕಮ್ಮ ಅಲ್ಲಿಯೇ ಮಲಗಿದರು. ಆದರೂ ತಿರುಗಿ ತನ್ನ ಅಗತ್ಯ ಬೀಳಬಹುದೆಂದೆನಿಸಿ ಸುಧಾಕರನು ಮಲಗಲು ಒಡಂಬಟ್ಟನು. ಬೇಗ ನಿದ್ದೆ ಬರದಿರಲೆಂದು ಯೋಚಿಸಿ ಅಲ್ಲಿಯೇ ಬಿದ್ದ ಪುಸ್ತಕವನ್ನೆತ್ತಿಕೊಂಡ. ಅದರ ಹೆಸರು "ವೀರ ಮಾತೆಯರು." ಅವರಲ್ಲಿ ಜಗತ್ತಿಗೆ ಭೂಷಣರಾದ ಅನೇಕ ಘನವಂತ ಪುರುಷರ ತಾಯಂದಿರ ಚರಿತ್ರೆಗಳಿದ್ದವು. ವಾರುಣಿ ಸುಧೆಯರ ಒಲವಿನ ಚಿತ್ರ ಕಣ್ಣಮುಂದೆ ನಿಂತಿತು.

× × × × ×

ಮಾರ್ಗಹೀನ ಅರಣ್ಯದಂತೆ ಭಾಸಿಸುವ ಸ್ವಪ್ನಜಾಲದಿಂದ ಮುಕ್ತನಾಗುವದಕ್ಕೆ ಸುಧಾಕರನು ಯತ್ನಿಸಹತ್ತಿದ. ಪೂರ್ಣ ನಿದ್ದೆಯಾಗಿರಲಿಲ್ಲ; ಆದರೂ ಬೆಳಗಾದ ಮೇಲೆ ಹಾಸಿಗೆಯಲ್ಲಿ ಹೊರಳಾಡುವ ಚಟ ಆತನಿಗಿರಲಿಲ್ಲ; ಕಣ್ಣುತೆರೆದಾಗ ಸುಧೆಯೇ ಕಣ್ಣಿಗೆ ಬಿದ್ದಳು.

"ಚಹಾ ಆಗಿದೆ. ಚಿಕ್ಕಮ್ಮ ಮನೆಗೆ ಹೋಗಲು ಆತುರರಾಗಿದ್ದಾರೆ" ಎಂದಳು. ಸುಧಾಕರನು ಸುಧೆಯಿಂದ ಅತ್ತಿಗೆಯ ಪ್ರಕೃತಿಯನ್ನು ತಿಳಿದು, ಚಿಕ್ಕಮ್ಮನವರನ್ನು ಕಳುಹಿಸಿಕೊಡಲು ತಯಾರಾಗಿ ನಿಂತನು. ರಾತ್ರಿಯೆಲ್ಲ ಅತ್ತಿಗೆಯ ಬಳಿಯಲ್ಲಿಯೇ ಕುಳಿತು ಕಳೆದಳೆಂಬುದನ್ನು ತಾಯಿಯಿಂದ ತಿಳಿದ ಮೇಲಂತೂ ಸುಧೆಯ ಕಾರ್ಯದಕ್ಷತೆಯ ಬಗ್ಗೆ ಆತನಿಗೆ ಆಶ್ಚರ್ಯವೆನಿಸಿತು. ರಾವಸಾಹೇಬರ ಮನೆಗೆ ಮರಳುವಾಗ ಚಿಕ್ಕಮ್ಮನವರನ್ನು ಸೂಕ್ಷ್ಮದೃಷ್ಟಿಯಿಂದ ನಿರೀಕ್ಷಿಸಹತ್ತಿದನು. ಪ್ರೌಢವಯಸ್ಸು. ವೈಧವ್ಯಕ್ಕೆ ಶೋಭಿಸದಂತಹ ಶೃಂಗಾರ ಅವಳ ಕೇಶರಚನೆಯಲ್ಲಿ—ಉಡುಪಿನಲ್ಲಿ—ಆಭರಣದಲ್ಲಿ—ಇಷ್ಟೇ ಅಲ್ಲದೆ ನಡೆಯುವ, ನಗುವ, ಇನ್ನೊಬ್ಬರ ಕಡೆನೋಡುವ ರೀತಿ

ಯಲ್ಲಿ ಸಹ ಇದೆಯೆಂಬುದು ಅವನಿಗೆ ಅನಿಸಹತ್ತಿತು. ವಾರುಣಿಯು ಎಂತಹ ದುರ್ದೈವಿ! ಮನೆಯಲ್ಲಿ ಅವಳೆದುರಿಗೆ ಚಿಕ್ಕಮ್ಮನ ಹೊರತು ಇನ್ನಾವ ಆದರ್ಶವೂ ಇಲ್ಲದಿದ್ದದ್ದು ಶೋಚನೀಯವಲ್ಲವೇ? ಸಂಸ್ಕಾರ ದಂತೆ ಆಚಾರ. ಹಳಿ ಒಯ್ದಲ್ಲಿ ಬಂಡಿಹೋಗಬೇಕಾಗುವಂತೆ ಹಿರಿಯು ರ ನಡೆಯನ್ನು ಕಿರಿಯರು ಅನುಸರಿಸಬೇಕಾಗುತ್ತಿದೆ. ವಾರುಣಿಯು ವಾಚನ, ವೇಷಭೂಷಣಗಳಲ್ಲಿ ಕಂಡುಬರುವ ಹೀನತನದ ಮೂಲ ಅವಳ ಚಿಕ್ಕಮ್ಮ ಹಾಗೂ ತಂದೆಯವರ ನಡತೆಯಲ್ಲಿ ಇದೆ. ತಮ್ಮ ಕೆಲಸಕ್ಕಾಗಿ ಕರೆದುಕೊಂಡು ಬಂದಾಗ ಅವರೊಡನೆ ಮಾತನಾಡದಿರು ವುದು ಒಳಿತಲ್ಲವೆಂದೆನಿಸಿ ಸುಧಾಕರನು ಮಾತಿಗೆ ಮೊದಲಿಟ್ಟ.

"ನೀವು ಸೂಲಗಿತ್ತಿಯರ ಕೆಲಸವೇಕೆ ಮಾಡುವದಿಲ್ಲ? ನಾಲ್ಕು ಜನರಿಗೆ ಉಪಯೋಗಕ್ಕೆ ಬಿದ್ದಂತಾಗುತ್ತಿತ್ತು."

"ವೇಳೆಯಾದರೂ ಸಿಗಬೇಕಲ್ಲವೇ? ವಾರುಣಿಗೆ ಚಿಕ್ಕಂದಿನಲ್ಲಿ ಯೇ ತಾಯಿ ತೀರಿಕೊಂಡಳು. ಅಂದಿನಿಂದ ನಾನೇ ಅವಳ ತಾಯಿ ಯಾದೆ. ಇಷ್ಟು ಹಣಕ್ಕೋಸುಗ ದುಡಿಯಬೇಕಾದ ಅವಶ್ಯಕತೆ ನನಗಿಲ್ಲ. ಆದರೆ ನನ್ನಿಂದ ಏನೂ ಧರ್ಮದ ಕೆಲಸವಾಗುವದಿಲ್ಲವಲ್ಲ ಎಂದು ದುಃಖವೆನಿಸುತ್ತಿದೆ. ಆ ಗೋಲ್ಡ್ ಫೋಕ್ಸನೋ, ಓಲ್ಡ್ ಫೋಕ್ಸನೋ— ಅವರಿಂದ ಇವರಂತೂ ಸುಧಾರಕರಾಗಿಬಿಟ್ಟರು. ಯಾವಾಗಲೂ ಮನೆ ಯಲ್ಲಿ ಒಂದು ನೈವೇದ್ಯ ಇಲ್ಲ: ಒಂದು ವೈಶ್ವದೇವ ಇಲ್ಲ. 'ಶ್ರಾದ್ಧಕ್ಕೆ ಇಬ್ಬರು ಬ್ರಾಹ್ಮಣರಿಗೆ ಹೇಳಿ' ಎಂದು ವಾರುಣಿಯ ತಾಯಿ ಹಟಹಿಡಿ ದರೆ "ಇಲ್ಲಿ ಹಾಕಿದ ಅನ್ನ ಸ್ವರ್ಗಕ್ಕೆ ಹೇಗೆ ಮುಟ್ಟುತ್ತದೆ? ಎಂದು ಮರುಸವಾಲು ಹಾಕುತ್ತಿದ್ದರು."

ಮನೆ ಬಂದಿತು. ಚಿಕ್ಕಮ್ಮನವರ ಮಾತು ಬಂದಾಯಿತು.

"ನೀವು ಬಂದದ್ದು ಬಹಳ ಒಳಿತಾಯಿತು. ಚಹದ ವಿರಹದಿಂದ ನಾನು ವ್ಯಾಕುಲನಾಗಿ ಬಿಟ್ಟಿದ್ದೆ. ಸುಧಾಕರ, ಕುಳಿತುಕೊಳ್ಳಿ. ವಾರೂ, ಸುಧಾಕರ ಬಂದಿದ್ದಾರೆ. ನೋಡಿ." ಎಂದು ರಾವಸಾಹೇಬರು ಒಂದೇ ಉಸುರಿನಲ್ಲಿ ಹೇಳಿದರು. ವಾರುಣಿಯು ಕೋಣೆಯಿಂದ ಹೊರಬಿದ್ದಳು.

ಅವಳ ಚದರಿಬಿದ್ದ ಕೂದಲು, ಆಲಸ್ಯಯುಕ್ತ ಮುದ್ರೆ, ಮುದ್ದೆ ಮುದ್ದೆಯಾಗಿ ಬಿದ್ದ ಪತ್ತಲದ ಸೆರಗು-ಇವುಗಳ ಮೇಲಿಂದ ಅವಳು ಈಗಷ್ಟೇ ಹಾಸಿಗೆಯಿಂದ ಎದ್ದಿರಬೇಕೆಂದು ಕಾಣುತ್ತಿತ್ತು. ತನ್ನ ಅವ್ಯವಸ್ಥಿತತನದ ಬಗ್ಗೆ ತನಗೇ ನಾಚಿಕೆಯೆನಿಸಿ ಒಳಗೆ ಹೋಗಿ ಬಿಟ್ಟು ಕೆಲ ಹೊತ್ತಿನಲ್ಲಿಯೇ ಪತ್ತಲ ಬದಲಿಸಿ, ಮುಖ ಒರಿಸಿ, ಪೌಡರ ಬೀರಿ ಬಂದಿದ್ದಳು. ಮುಂಜಾನೆ ನೋಡಿದ ಸುಧೆಯ ರೂಪ ನಸುಕಿನಲ್ಲಿ ಅರಳುವ ಪಾರಿಜಾತದಂತೆ ಸಹಜಸುಂದರವಾಗಿದ್ದರೆ ಈಗಿನ ವಾರುಣಿಯ ಸ್ವರೂಪ ಕಾಗದದ ಗುಲಾಬಿಯಂತೆ ಕೃತ್ರಿಮ ಎಂದು ಅನಿಸಿತು.

“ ಏನು ಸುಧಾಕರ, ನಮ್ಮ ವಾರುಣಿಗೆ I.C.S. ಮಂದಿ ತಾವಾಗಿಯೇ ಬರಬಹುದೋ ಇಲ್ಲವೋ? ನೋಡಿ, ಈಗ ಮೊದಲಿನಂತೆ ಸ್ವಯಂವರದ ರೂಢಿ ಇದ್ದಿದ್ದರೆ ಇವಳ ಸ್ವಯಂವರದ ಹಂದರದೊಳಗೆ I.C.S. ದವರನ್ನು ಬಿಟ್ಟು ಇನ್ನಾರನ್ನೂ ಒಳಗೆ ಬಿಡುತ್ತಿರಲಿಲ್ಲ. ಇರಲಿ, ನಿಮಗೆ ಒಂದು ವಿಷಯ ಕೇಳಬೇಕೆಂದು ಮಾಡಿದ್ದೆ. ನಗಬೇಡಿ. ಅನಾಯಾಸವಾಗಿ ನೀವು ಜಯಗಾಂವಕ್ಕೆ ಬಂದೇ ಇದ್ದೀರಿ. ನಮ್ಮ ವಾರುಣಿಗೆ ದಿನಾ ಒಂದೆರಡು ತಾಸು ಕಲಿಸಿ. ಅವಳ I C.S. ಗಂಡನ ವಶೀಲಿಯಿಂದ ನಿಮಗೊಂದು ಒಳ್ಳೇ ನೌಕರಿ ಸಿಗಬಹುದು. ಈ ಕುಗ್ರಾಮದಲ್ಲಿ ಕಡೆಯತನಕ ೪೦-೫೦ ರೂಪಾಯಿ ಮಾಸ್ತರಿಕೆ ಮಾಡೋದರಿಂದ ಏನು ಲಾಭ?”

ಸುಧಾಕರನಂತಹ ಆದರ್ಶವಾದಿಗೆ ಶಿಕ್ಷಕರ ವ್ಯಂಗವಿಡಂಬನೆ ಸಹಿಸುವದು ಸಾಧ್ಯವಿರಲಿಲ್ಲ. ಆದರೂ ತನ್ನ ಸಿಟ್ಟನ್ನು ನುಂಗಿಕೊಂಡ.

“ ನನಗೆ ಪುರಸೊತ್ತಿಲ್ಲ.”

“ ಸಾಲೆಬಿಟ್ಟ ಮೇಲೆ ಏನು ಮಾಡುತ್ತೀರಿ?”

“ ಕೆಲಸಮಾಡುವವರಿಗೆ ಕೆಲಸಕ್ಕೇನು ಕೊರತೆ? ಬಾಲವಿಧವೆಯರ ಶಿಕ್ಷಣ, ಮದ್ಯಪಾನಪ್ರತಿಬಂಧ- ಮೊದಲಾದ ಎಷ್ಟೋ ಕೆಲಸ ಇಲ್ಲಿ ಮಾಡಬರುವಂತಿದೆ.”

"ಅದೆಲ್ಲ ನಿಜ. ನೀವೊಬ್ಬರೇ ಎಷ್ಟೆಂತ ಮಾಡಬಹುದು? ಹೆಚ್ಚೆಂದರೆ ಒಬ್ಬ ಬಾಲವಿಧವೆಗೆ ಕಲಿಸಬಹದು: ಒಬ್ಬನ ಮುಂದೆ "ಅಯ್ಯ, ಹೆಂಡ ಕುಡಿಯಬೇಡಯ್ಯಾ" ಎಂದು ಅಂಗಲಾಚಿ ಬೇಡಿಕೊಳ್ಳಬಹುದು. ಆದರೆ ಹೀಗೆ ಬೊಗಸೆಯಿಂದ ನೀರುತಂದರೆ ಹೌದು ತುಂಬದು. ನನ್ನ ಮಾತಿನಂತೆ ವಾರುಣಿಗೆ ಕಲಿಸಲು ಒಪ್ಪಿದರೆ ನಿಮ್ಮ ಎಷ್ಟು ಕೆಲಸ ಸಾಧ್ಯವಾದೀತೆಂದು ನೋಡಿ. ಆಕೆಯು I.C.S. ಗಂಡನ ಮುಂದೆ ಒಂದು ಮಾತು ಹೇಳಿದರೆ ಸಾಕು; ಅವನು ಕಲೆಕ್ಟರನಿದ್ದ ಜಿಲ್ಹೆಯಲ್ಲಿ ಬಾಲವಿಧವೆಯರ ಶಿಕ್ಷಣ ಸಾಲೆ ಆರಂಭವಾಗಬಹುದು; ಮದ್ಯಪಾನ ಪ್ರತಿಬಂಧವೂ ಆರಂಭವಾಗುವದು."

ರಾವಸಾಹೇಬರ ಈ ಶೇಖ ಮಹಮ್ಮದೀ ಮನೋರಾಜ್ಯಕ್ಕೆ ಮೌನವೇ ಉತ್ತಮ ಉತ್ತರವೆಂದೆನಿಸಿ ಸುಧಾಕರನು ಸುಮ್ಮನಾದ. ಚಿಕ್ಕಮ್ಮನವರು ತಂದ ಚಹವನ್ನು ವಾರುಣಿಯು ತಂದೆಗೆ, ಸುಧಾಕರನಿಗೆ ಕೊಟ್ಟಳು. ಅವಳ ಕೈಯ್ಯಿಂದ ಕಪ್ಪು ತೆಗೆದುಕೊಳ್ಳುವಾಗ ಅವಳ ಕೋಮಲವಾದ ಗೌರವರ್ಣದ ಕೈ, ಅದರ ಮೇಲೆ ಸರಿದಾಡುವ ಬಂಗಾರದ ಬಳೆ ಕಣ್ಣಿಗೆ ಬಿತ್ತು. ಚಹ ಕುಡಿಯುತ್ತ ಕುಡಿಯುತ್ತ ವಾರುಣಿಯು ಕಡೆಗೆ ನೋಡಹತ್ತಿದ. ಮಳೆಗಾಲದಲ್ಲಿ ದೂರದಿಂದ ಅತಿ ಕಪ್ಪಾಗಿ ಕಾಣುವ ಸಮುದ್ರದಂತೆ ಭಾಸಿಸುವ ಅವಳ ಕೇಶಕಲಾಪ, ಕತ್ತಲೆಯಲ್ಲಿ ಚಕಚಕಿಸುವ ಚಿಕ್ಕೆಗಳಂತೆ ಎವೆಗಳ ಆವರಣದೊಳಗಿಂದ ತನ್ನ ತೇಜವನ್ನು ತೋರಿಸುವ ಅವಳ ಚಂಚಲ ನೇತ್ರ-ಇವುಗಳಲ್ಲಿ ಒಂದು ಬಗೆಯ ಜಾದು ತುಂಬಿದೆಯೆಂದು ಆತನಿಗೆ ಅನಿಸಿತು. "ವಾರುಣಿಯನ್ನು ಕಲಿಸುವ ಸಂಧಿ ತಾನಾಗಿಯೇ ಬಂದಿದೆ. ಪರಿಚಯದಿಂದ ಪ್ರೇಮ ಬೆಳೆಯಬಹುದು. ಸಂಸ್ಕಾರದೋಷದಿಂದ ಬಂದ ಚಿಕ್ಕಪುಟ್ಟ ದೋಷಗಳನ್ನು ಸರಿಪಡಿಸಿಕೊಳ್ಳಬಹುದು" ಎಂಬಿವೇ ವಿಚಾರಗಳು ತಲೆಯಲ್ಲಿ ಸುಳಿಯಹತ್ತಿದವು.

"ಹಾಗಾದರೆ, ಇವಳಿಗಿನ್ನು ಕಲಿಸಲಿಕ್ಕೆ ಬರುವಿರಲ್ಲವೇ?"

"ಹೂಂ" ಎಂಬ ಶಬ್ದ ನಾಲಿಗೆಯ ತುದಿಗೆ ಬಂದಿತ್ತು. ಅಷ್ಟರಲ್ಲಿ ದಾರಿಯ ಮೇಲೆ ಹೋಗುತ್ತಿರುವ ಯಮೂ ಅವನ ದೃಷ್ಟಿಗೆ ಬಿದ್ದಳು. ತಲೆಯ ಮೇಲೆ ಹಂಚು ತುಂಬಿದ ಬುಟ್ಟಿಯಿತ್ತು. ಏಳು ತಿಂಗಳ ಬಸುರಿಯಾದ್ದುದರಿಂದ ಭಾರದಿಂದ ಬಳಲಿ ಸಾವಕಾಶ ಹೆಜ್ಜೆ ಹಾಕುತ್ತಿದ್ದಳು. ವಾರುಣಿಯನ್ನು ಕಲಿಸುವದಕ್ಕೆ ದಿನಾಲು ತಾಸೆರಡು ತಾಸು ಕಳೆದರೆ ಯಮುವಿನಂತಹರ ಸೇವೆ ಘಟಿಸದೆಂದು "ಕ್ಷಮಿಸಿ, ' ವೇಳೆ ಇದ್ದರೆ ವಾರುವಿಗೆ ಕಲಿಸುತ್ತಿದ್ದ" ಎಂದ. ಆತನ ಮುಂದೆ ಯಮುವಿನ ಕರುಣಾಜನಕ ಚಿತ್ರದ ಹೊರತು ಇನ್ನಾರೂ ಕಾಣಿಸುತ್ತಿದ್ದಿಲ್ಲ.